ಗುರುವಾರ, ಅಕ್ಟೋಬರ್ 7, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 279 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ: ರಾಜಕಾರಣಿಗಳ ಪಕ್ಷಾಂತರ ಪ್ರಹಸನ

ರಾಜ್ಯದ ಹಲವೆಡೆ ದಿನವಿಡೀ ಮಳೆ 4

ರೈಲ್ವೆ ನೌಕರರಿಗೆ ಬೋನಸ್ 10

ಸೆನ್ಸೆಕ್ಸ್	ನಿಫ್ಟಿ	₹/$
59,189	17,646	74.98

4 ಲಕ್ಷ ಕಾರ್ಮಿಕರಿಗೆ ಸಿಗದ ಸೌಲಭ್ಯ • ಕೋರ್ಟ್ ಆದೇಶಕ್ಕೂ ಬಗ್ಗದ ಸರ್ಕಾರ

ಗಾರ್ಮೆಂಟ್ಸ್: ತುಟ್ಟಿಭತ್ಯೆಗೂ ಕುತ್ತು

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಕನಿಷ್ಠವೇತನಕ್ಕೆ ದುಡಿಯುತ್ತಿರುವ ಗಾರ್ಮೆಂಟ್ಸ್ ಕಾರ್ಖಾನೆಗಳ ಕಾರ್ಮಿಕರಿಗೆ ಹೆಚ್ಚಳವಾಗಬೇಕಿದ್ದ ತುಟ್ಟಿಭತ್ಯೆಯನ್ನು ಕೋವಿಡ್ ನುಂಗಿ ಹಾಕಿದೆ. ಒಂದೂವರೆ ವರ್ಷದಿಂದ ಕಾಯುತ್ತಿರುವ ಕಾರ್ಮಿಕರಿಗೆ ತುಟ್ಟಿಭತ್ಯೆ ಹೆಚ್ಚಳ ಎಂಬುದು ಮರೀಚಿಕೆಯಾಗಿಯೇ ಉಳಿದಿದೆ.

2020–21ರ ಗ್ರಾಹಕ ಸೂಚ್ಯಂಕ ದರ (ಸಿಪಿಐ) ಪರಿಷ್ಕರಣೆ ಪ್ರಕಾರ, ಗಾರ್ಮೆಂಟ್ಸ್ ಕಾರ್ಖಾನೆ ಕಾರ್ಮಿಕರ ತುಟ್ಟಿಭತ್ಯೆ(ಡಿ.ಎ) 2020ರ ಏಪ್ರಿಲ್‌ನಿಂದಲೇ ದಿನಕ್ಕೆ ₹16.06ರಂತೆ ಏರಿಕೆಯಾಗಬೇಕಿತ್ತು. ಕೋವಿಡ್ ಲಾಕ್‌ಡೌನ್ ಕಾರಣ ನೀಡಿ ತುಟ್ಟಿಭತ್ಯೆ ಏರಿಕೆ ಮುಂದೂಡುವಂತೆ ಕಾರ್ಖಾನೆಗಳ ಮಾಲೀಕರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಅದರಂತೆ, 2020ರ ಜುಲೈ 7ರಂದು ಆದೇಶ ಹೊರಡಿಸಿದ ಸರ್ಕಾರ, 2021ರ ಮಾ.31ರವರೆಗೆ ತುಟ್ಟಿಭತ್ಯೆ ಏರಿಕೆ ಮುಂದೂಡಿತ್ತು.

ಇದನ್ನು ಪ್ರಶ್ನಿಸಿ ಕಾರ್ಮಿಕ ಸಂಘಟನೆಗಳು ಹೈಕೋರ್ಟ್ ಮೆಟ್ಟಿಲೇರಿದ್ದವು. ರಿಟ್ ಅರ್ಜಿ ಪರಿಗಣಿಸಿದ ನ್ಯಾಯಾಲಯ, ಸರ್ಕಾರದ ಆದೇಶಕ್ಕೆ 2020ರ ಸೆ.11ರಂದು ತಡೆಯಾಜ್ಞೆ ನೀಡಿತು. ಆದೇಶ ವಾಪಸ್ ಪಡೆದು ತುಟ್ಟಿಭತ್ಯೆ ಹೆಚ್ಚಳದ ಬಗ್ಗೆ ಕೂಡಲೇ ನಿರ್ಧಾರ ಕೈಗೊಳ್ಳಬೇಕು ಎಂದು ತಿಳಿಸಿತ್ತು.

ಪ್ರಜಾವಾಣಿ ವಿಶೇಷ

‘ಆದರೂ, ಈವರೆಗೆ ಹೆಚ್ಚುವರಿ ತುಟ್ಟಿಭತ್ಯೆ ಪಾವತಿಯಾಗಿಲ್ಲ. ಈ ಭತ್ಯೆಯು ಕಾರ್ಮಿಕರ ಕನಿಷ್ಠ ವೇತನದ ಭಾಗವಾಗಿದ್ದು, ಅದನ್ನು ಪಾವತಿಸದಿರುವುದು ಕನಿಷ್ಠ ವೇತನ ಕಾಯ್ದೆಯ ಉಲ್ಲಂಘನೆ’ ಎಂದು ಗಾರ್ಮೆಂಟ್ಸ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಆರೋಪಿಸಿದೆ.

‘ಕನಿಷ್ಠ ವೇತನ ಕಾಯ್ದೆಯಡಿಯಲ್ಲಿ ಬರುವ ಬಹುತೇಕ ಕಾರ್ಮಿಕರು ಕನಿಷ್ಠ ವೇತನಕ್ಕಿಂತ ಹೆಚ್ಚಿನ ವೇತನ ಪಡೆಯುತ್ತಿದ್ದಾರೆ. ಹೀಗಾಗಿ, ತುಟ್ಟಿಭತ್ಯೆ ಹೆಚ್ಚಳ ಆದೇಶ ಮುಂದೂಡಿ ಹೊರಡಿಸಿರುವ ಆದೇಶ ಅವರ ಮೇಲೆ ಅಷ್ಟಾಗಿ ಪರಿಣಾಮ ಬೀರುವುದಿಲ್ಲ.

> ಗಾರ್ಮೆಂಟ್ಸ್ ಕಾರ್ಖಾನೆ ಕಾರ್ಮಿಕರ ತುಟ್ಟಿ ಭತ್ಯೆ ಹೆಚ್ಚಳದ ಬಗ್ಗೆ ಇನ್ನೂ ನಿರ್ಧಾರ ಕೈಗೊಂಡಿಲ್ಲ. ಈ ಬಗ್ಗೆ ಪರಿಶೀಲನೆ ನಡೆಸಲಾಗುವುದು
> **ಶಿವರಾಂ ಹೆಬ್ಬಾರ್,** ಕಾರ್ಮಿಕ ಸಚಿವ

ಆದರೆ, ಗಾರ್ಮೆಂಟ್ಸ್ ಉದ್ಯಮದ ಕಾರ್ಮಿಕರಿಗೆ ಕನಿಷ್ಠ ವೇತನವಷ್ಟೇ ಪಾವತಿಯಾಗುತ್ತಿದೆ. ತುಟ್ಟಿಭತ್ಯೆ ಮುಂದೂಡಿದ್ದರಿಂದ ಕಾರ್ಮಿಕರಿಗೆ ಅನ್ಯಾಯವಾಗಿದೆ. ಈ ಬಗ್ಗೆ ಹೈಕೋರ್ಟ್ ಪದೇ ಪದೇ ಹೇಳುತ್ತಿದ್ದರೂ, ಸರ್ಕಾರ ಜಾಣಗುರುಡು ಪ್ರದರ್ಶಿಸುತ್ತಿದೆ’ ಎಂದು ಯೂನಿಯನ್‌ನ ಸಲಹೆಗಾರ ಕೆ.ಆರ್. ಜಯರಾಂ ಎಂದು ಹೇಳಿದರು.

‘ಕನಿಷ್ಠ ವೇತನದಲ್ಲಿ ದಿನದೂಡುತ್ತಿರುವ ಗಾರ್ಮೆಂಟ್ಸ್ ಕಾರ್ಖಾನೆ ಕಾರ್ಮಿಕರಿಗೆ ತುಟ್ಟಿಭತ್ಯೆ ದೊಡ್ಡ ಮೊತ್ತವಾಗಿದೆ. ತಿಂಗಳಿಗೆ ₹417.56 ಸಿಗಲಿದ್ದು, ಅದರಂತೆ ಪ್ರತಿ ಕಾರ್ಮಿಕರಿಗೆ ₹7,098 ಹಿಂಬಾಕಿ ಉಳಿದಿದೆ. 4 ಲಕ್ಷ ಕಾರ್ಮಿಕರಿಗೆ ₹283 ಕೋಟಿಗೂ ಅಧಿಕ ಹಣವನ್ನು ಕಾರ್ಖಾನೆಗಳು ಉಳಿಸಿಕೊಂಡಿವೆ’ ಎಂದು ವಿವರಿಸಿದರು.

‘ಅದನ್ನು ವಾಪಸ್ ಕೊಡಿಸಬೇಕಾದ ಸರ್ಕಾರ ನ್ಯಾಯಾಲಯದ ಆದೇಶವನ್ನೂ ಪಾಲಿಸದೆ ಮೌನ ವಹಿಸಿದೆ. ತುಟ್ಟಿಭತ್ಯೆ ಮೊತ್ತ ಮುಂದೂಡಿದ್ದ ಆದೇಶವನ್ನು ಕೂಡಲೇ ವಾಪಸ್ ಪಡೆಯಬೇಕು. ಹಿಂಬಾಕಿ ಪಾವತಿಸಲು ಆದೇಶಿಸಬೇಕು’ ಎಂದು ಅವರು ಒತ್ತಾಯಿಸಿದರು.

ಸರ್ಕಾರ ನಿಗದಿ ಮಾಡಿರುವ ಕನಿಷ್ಠ ವೇತನ



ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೇಂದ್ರ ಸರ್ಕಾರದ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ

‘ರೈತರ ಮೇಲೆ ವ್ಯವಸ್ಥಿತ ದಾಳಿ’

ನವದೆಹಲಿ (ಪಿಟಿಐ): ದೇಶದಲ್ಲಿ ಈಗ ಪ್ರಜಾಪ್ರಭುತ್ವ ಇಲ್ಲ, ನಿರಂಕುಶಾಧಿಪತ್ಯ ಇದೆ. ರೈತರ ಮೇಲೆ ವ್ಯವಸ್ಥಿತ ದಾಳಿ ನಡೆಯುತ್ತಿದೆ. ಲಖಿಂಪುರ–ಖೇರಿಯಲ್ಲಿ ನಡೆದ ಹಿಂಸಾಚಾರದಲ್ಲಿ ಮೃತಪಟ್ಟ ರೈತರ ಕುಟುಂಬವನ್ನು ಭೇಟಿ ಮಾಡಲು ರಾಜಕಾರಣಿಗಳಿಗೆ ಅವಕಾಶ ನಿರಾಕರಿಸಲಾಗುತ್ತಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಮತ್ತು ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ಜತೆಗೆ ರಾಹುಲ್ ಅವರು ಮಾಧ್ಯಮಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು.

6ನೇ ಪುಟ ನೋಡಿ

‘ಸುಪ್ರೀಂ’ನಲ್ಲಿ ವಿಚಾರಣೆ ಇಂದು

ಲಖಿಂಪುರ–ಖೇರಿ ಹಿಂಸಾಚಾರ ಪ್ರಕರಣದ ವಿಚಾರಣೆಯನ್ನು ಗುರುವಾರ ನಡೆಸಲು ಸುಪ್ರೀಂ ಕೋರ್ಟ್ ನಿರ್ಧರಿಸಿದೆ.

2 ರಾಜ್ಯಗಳಿಂದ ತಲಾ ₹50 ಲಕ್ಷ ನೆರವು

ಉತ್ತರ ಪ್ರದೇಶದ ಲಖಿಂಪುರ–ಖೇರಿಯಲ್ಲಿ ಭಾನುವಾರ ನಡೆದ ಹಿಂಸಾಚಾರದಲ್ಲಿ ಮೃತಪಟ್ಟ ನಾಲ್ವರು ರೈತರು ಮತ್ತು ಒಬ್ಬ ಪತ್ರಕರ್ತನ ಕುಟುಂಬಗಳಿಗೆ ತಲಾ ₹50 ಲಕ್ಷ ನೆರವು ನೀಡುವುದಾಗಿ ಕಾಂಗ್ರೆಸ್ ಆಳ್ವಿಕೆಯ ಛತ್ತೀಸಗಡ ಮತ್ತು ಪಂಜಾಬ್ ಸರ್ಕಾರಗಳೆರಡೂ ಬುಧವಾರ ಘೋಷಿಸಿವೆ.

ರಾಹುಲ್, ಪ್ರಿಯಾಂಕಾ ಸಾಂತ್ವನ

ಲಖನೌ (ಪಿಟಿಐ): ಲಖಿಂಪುರ–ಖೇರಿಯಲ್ಲಿ ಭಾನುವಾರ ಎಸ್‌ಯುವಿ ಹರಿದು ಮೃತಪಟ್ಟ ರೈತರ ಕುಟುಂಬದ ಸದಸ್ಯರನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಭೇಟಿಯಾಗಿ ಸಾಂತ್ವನ ಹೇಳಿದರು. 6

ಮನೆ ಕುಸಿದು 7 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಹಿರೇಬಾಗೇವಾಡಿ: ಬೆಳಗಾವಿ ತಾಲ್ಲೂಕಿನ ಬಡಾಲ ಅಂಕಲಗಿಯಲ್ಲಿ ಬುಧವಾರ ಸಂಜೆ ಮಳೆಗೆ ಮನೆ ಗೋಡೆ ಕುಸಿದು ಇಬ್ಬರು ಬಾಲಕಿಯರು ಸೇರಿದಂತೆ 7 ಮಂದಿ ಮೃತಪಟ್ಟಿದ್ದಾರೆ.

ಜೋರು ಮಳೆಯಿಂದಾಗಿ ಗೋಡೆ ಕುಸಿದಿದೆ. ಅವಶೇಷದ ಕೆಳಗೆ ಸಿಲುಕಿದ್ದವರ ಪೈಕಿ ಐವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇಬ್ಬರು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯದಲ್ಲಿ ಸಾವನ್ನಪ್ಪಿದ್ದಾರೆ. ಮೂವರ ಮೃತದೇಹಗಳನ್ನು ಹೊರತೆಗೆದು ಆಸ್ಪತ್ರೆಗೆ ಸಾಗಿಸಲಾಗಿದೆ.

ಅರ್ಜುನ ಹನುಮಂತ ಖನಗಾಂವಿ (48), ಪತ್ನಿ ಸತ್ಯವ್ವ ಖನಗಾಂವಿ (45), ಪುತ್ರಿ ಲಕ್ಷ್ಮಿ ಖನಗಾಂವಿ (17), ಪೂಜಾ ಅರ್ಜುನ ಖನಗಾಂವಿ (8), ಗಂಗವ್ವ ಭೀಮಪ್ಪ ಖನಗಾಂವಿ (50), ಸವಿತಾ ಭೀಮಪ್ಪ ಖನಗಾಂವಿ (28) ಮತ್ತು ಕಾಶವ್ವ ವಿಠ್ಠಲ ಕೊಳಪ್ಪನವರ (8) ಮೃತರು.

ಹಳೆಯ ಮನೆಯ ಚಾವಣಿ ತೆಗೆದು ನವೀಕರಿಸುತ್ತಿದ್ದರು. ಮನೆಯ ಪಕ್ಕದಲ್ಲಿ ತಗಡಿನ ಶೆಡ್ ನಿರ್ಮಿಸಿ ವಾಸವಾಗಿದ್ದರು. ನಿರಂತರ ಮಳೆಗೆ ಶಿಥಿಲಗೊಂಡಿದ್ದ ಗೋಡೆ ಕುಸಿದು ಈ ಅವಘಡ ಸಂಭವಿಸಿದೆ. ಮನೆಯ ಯಜಮಾನ ಭೀಮಪ್ಪ ಹಾಗೂ ಅವರ ಪುತ್ರ ಬದುಕುಳಿದಿದ್ದಾರೆ.

ಸ್ಥಳಕ್ಕೆ ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಭೇಟಿ ನೀಡಿದರು. ಮೃತರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರವನ್ನು ಮುಖ್ಯಮಂತ್ರಿಗಳು ಘೋಷಿಸಿದ್ದಾರೆ.

ಬೆಂಗಳೂರು: ಹಸುಗೂಸು ಮಾರಾಟದ ವ್ಯಾಪಕ ಜಾಲ

₹80 ಸಾವಿರಕ್ಕೆ ಖರೀದಿ– ₹6ಲಕ್ಷಕ್ಕೆ ಮಾರಾಟ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳಾಗದ ದಂಪತಿಗಳಿಗೆ ಬಾಡಿಗೆ ತಾಯಿ ಮೂಲಕ ಮಗು ನೀಡುವುದಾಗಿ ನಂಬಿಸಿ, ಬಳಿಕ ಯಾರದ್ದೋ ಮಗುವನ್ನು ಕೊಟ್ಟು ಲಕ್ಷಾಂತರ ಹಣ ಪಡೆಯುತ್ತಿದ್ದ ಜಾಲವನ್ನು ಬೇಧಿಸಿರುವ ಬೆಂಗಳೂರು ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ ನೇತೃತ್ವದ ವಿಶೇಷ ತಂಡ 13 ಮಕ್ಕಳನ್ನು ರಕ್ಷಿಸಿದೆ.

ಈ ಜಾಲದಲ್ಲಿ ಸಕ್ರಿಯರಾಗಿದ್ದ ಬೆಂಗಳೂರಿನ ವಿದ್ಯಾರಣ್ಯಪುರದ ದೇವಿ ಷಣ್ಮುಗಮ್ಮ (26), ಕತ್ರಿಗುಪ್ಪೆಯ ರಂಗಪ್ಪ ಲೇಔಟ್ ನಿವಾಸಿ ಮಹೇಶ್‌ಕುಮಾರ್ (50), ಮಹಾರಾಷ್ಟ್ರದ ರಂಜನಾ ದೇವಿದಾಸ ಖಂಡಗಳೆ (32), ತಮಿಳುನಾಡಿನ ಜನಾರ್ದನ್ (33) ಹಾಗೂ ಜಾಲಹಳ್ಳಿಯ ಮಲ್ಲಸಂದ್ರ ನಿವಾಸಿ ಧನಲಕ್ಷ್ಮಿ (30) ಅವರನ್ನು ಬಂಧಿಸಲಾಗಿದೆ. ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಗೆ (ಸಿಡಬ್ಲ್ಯುಸಿ) ಒಪ್ಪಿಸಲಾಗಿದೆ.

4ನೇ ಪುಟ ನೋಡಿ

ಮಾರುವೇಷದ ಕಾರ್ಯಾಚರಣೆ

ಆರೋಪಿಗಳ ಬಂಧನಕ್ಕಾಗಿ ಪೊಲೀಸರು ಮಾರುವೇಷದ ಕಾರ್ಯಾಚರಣೆ ನಡೆಸಿದ್ದರು.

‘ತಮಗೆ ಮಗು ಬೇಕು. ಅದಕ್ಕೆ ಎಷ್ಟೇ ಹಣ ಖರ್ಚಾದರೂ ಕೊಡಲು ಸಿದ್ಧರಿದ್ದೇವೆ ಎಂದು ಪೊಲೀಸ್ ಸಿಬ್ಬಂದಿ ಆರೋಪಿ ದೇವಿ ಷಣ್ಮುಗಮ್ಮಳನ್ನು ಸಂಪರ್ಕಿಸಿದ್ದರು. ₹5 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ ದೇವಿ, ಮುಂಬೈನಿಂದ ರೈಲಿನ ಮೂಲಕ ಹಸುಗೂಸು ತರಿಸಿದ್ದಳು. ರೈಲು ನಿಲ್ದಾಣದಲ್ಲೇ ಆ ಮಗುವನ್ನು ಪೊಲೀಸರಿಗೆ ಒಪ್ಪಿಸಿ ಹಣ ಪಡೆಯಲು ಮುಂದಾಗಿದ್ದಳು. ಮಫ್ತಿಯಲ್ಲಿದ್ದ ಸಿಬ್ಬಂದಿ ಕೂಡಲೇ ಆಕೆಯನ್ನು ಬಂಧಿಸಿದ್ದರು.

ನಿಷೇಧಾಜ್ಞೆ ನಡುವೆ ದಸರೆಗೆ ಚಾಲನೆ ಇಂದು

ಮೈಸೂರು: ಕೋವಿಡ್ ಕಾಲಘಟ್ಟದ ಎರಡನೇ ದಸರಾದಲ್ಲಿ ಜನಸಂಭ್ರಮ ಇಲ್ಲ. ಚಾಮುಂಡಿ ಬೆಟ್ಟದಲ್ಲಿ ನಿಷೇಧಾಜ್ಞೆ ನಡುವೆಯೇ ಸರಳ, ಸಾಂಪ್ರದಾಯಿಕ ಉತ್ಸವಕ್ಕೆ ಗುರುವಾರ ಚಾಲನೆ ದೊರಕಲಿದೆ. 3B

ಎಫ್‌ಐಎಚ್ ಪ್ರಶಸ್ತಿ: ಭಾರತ ಪಾರಮ್ಯ

ಲಾಸೇನ್ (ಪಿಟಿಐ): ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ನ ವಾರ್ಷಿಕ ಪ್ರಶಸ್ತಿ ಗಳಿಕೆಯಲ್ಲಿ ಹಾಕಿ ಭಾರತ ಪಾರಮ್ಯ ಮೆರೆದಿದೆ. ಹರ್ಮನ್‌ಪ್ರೀತ್ ಸಿಂಗ್ ಮತ್ತು ಗುರ್ಜೀತ್ ಕೌರ್ ಕ್ರಮವಾಗಿ ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ವರ್ಷದ ಉತ್ತಮ ಹಾಕಿಪಟು ಎನಿಸಿಕೊಂಡಿದ್ದಾರೆ. 14

ಎಲ್‌ಪಿಜಿ ದರ ₹15 ಹೆಚ್ಚಳ

ನವದೆಹಲಿ (ಪಿಟಿಐ): ಸಬ್ಸಿಡಿ ಇರುವ ಮತ್ತು ಸಬ್ಸಿಡಿ ಇಲ್ಲದ ಅಡುಗೆ ಅನಿಲ (ಎಲ್‌ಪಿಜಿ) ದರವನ್ನು 14.2 ಕೆ.ಜಿ.ಯ ಸಿಲಿಂಡರ್‌ಗೆ ₹ 15ರಷ್ಟು ಹೆಚ್ಚಿಸಲಾಗಿದೆ. ಇದರಿಂದಾಗಿ ಬೆಂಗಳೂರಿನಲ್ಲಿ 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆ ₹ 902ಕ್ಕೆ ಏರಿಕೆ ಆಗಿದೆ. 10

72198 21111 | BAJAJ FINANCE LTD - AF | Paytm Cashback up to ₹2 500 | FEDERAL BANK

*ನಿಯಮ ಹಾಗೂ ಷರತ್ತುಗಳು ಅನ್ವಯ. ಆಫರ್ ಆಯ್ದ ಮಾಡೆಲ್ಸ್ ಮೇಲೆ ಆಯ್ದ ಕ್ಷೇತ್ರಗಳಲ್ಲಿ ಲಭ್ಯ. #ಡೌನ್‌ಪೇಮೆಂಟ್ ಪಲ್ಸರ್ 150 ಸಿಂಗಲ್ ಡಿಸ್ಕ್ ವೇರಿಯಂಟ್‌ಗಾಗಿ ಲಭ್ಯ. ಡಿಸಿ ಚಾರ್ಜ್‌ಗಳು ಮತ್ತು ಪ್ರೊಸೆಸಿಂಗ್ ಫೀಸ್ ಅನ್ವಯಿಸುವ ಅನುಸಾರ ಆತಿರಿಕ್ತ ಹೇರಲಾಗುತ್ತದೆ. ಫೈನಾನ್ಸ್ ಫೈನಾನ್ಸ್‌ರ ಏಕೈಕ ನಿಷ್ಕರ್ಷೆಯ ಮೇರೆಗೆ ಇರುತ್ತದೆ. ಯಾವುದೇ ಮುನ್ಸೂಚನೆ ನೀಡದೆ ಯಾವುದೇ ಅಥವಾ ಎಲ್ಲಾ ಆಫರ್‌ಗಳನ್ನು ರದ್ದುಪಡಿಸುವ ಅಧಿಕಾರವನ್ನು ಬಜಾಜ್ ಆಟೊ ಕಾದಿರಿಸಿಕೊಂಡಿದೆ. ತೋರಿಸಲಾಗಿರುವ ಸ್ಟಂಟ್ಸ್, ಎಕ್ಸ್‌ಪರ್ಟ್‌ಗಳಿಂದ ಪ್ರೊಫೆಶನಲ್‌ಗಳ ಮೇಲ್ವಿಚಾರಣೆಯಲ್ಲಿ ಜನಸಾಮಾನ್ಯರು ಅಥವಾ ಸಾಮಾನ್ಯ ರಸ್ತೆಗಳಿಂದ ಪ್ರತ್ಯೇಕಿಸಲಾದಲ್ಲಿ, ನಿಯಂತ್ರಿದ ಹಾಗೂ ನಿರ್ಬಂಧಿತ ಪರಿಸರದಲ್ಲಿ ಮಾಡಲಾಗಿವೆ. ದಯವಿಟ್ಟು ಈ ಸ್ಟಂಟ್‌ಗಳನ್ನು ಅನುಕರಿಸುವ ಪ್ರಯಾಸ ಮಾಡದಿರಿ ಮತ್ತು ಪ್ರತಿ ಬಾರಿ ಟ್ರಾಫಿಕ್ ಸುರಕ್ಷಾ ನಿಯಮಗಳನ್ನು ಪಾಲಿಸಿರಿ.

Authorised Dealers for Bajaj Auto Ltd.: Bangalore • Bommanahalli AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 7441690413• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli Mysore Rd** RV BAJAJ: 7259186162 • **Chandra Layout Moodalapalya** RV BAJAJ: 7353763301 • **Kengeri** RV BAJAJ: 7353763305 • **Giri Nagar** RV BAJAJ: 6361211128• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Rajajinagar** POPULAR BAJAJ : 6366554001 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Mekhri Circle** KALYANI BAJAJ: 8884413595 • **Yelahanka** KALYANI BAJAJ: 9449849618 • **Mathikere** KALYANI BAJAJ: 8884430126 • **Chickbellapur** KALYANI BAJAJ: 8884413594 • **Devenhalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9902934455 • **Laggere** ANANT BAJAJ: 7022984402 • **Hubli** CHANNAMMA BAJAJ: 9620614106 • **Arvind Nagar branch** 8884771881 **Gadag** CHANNAMMA BAJAJ: 9620747153 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGAJAMPI BAJAJ: 988690116, JAGASHREE BAJAJ: 7349773962. • **Chikodi** JAGAJAMPI BAJAJ: 9449736406 • **Gokak** JAGAJAMPI BAJAJ: 7022425616 • **Bellary AADI BAJAJ: 9606050246• Raichur SHREE BALAJI AUTOMOBILES: 9964626515• Koppal I A BAJAJ: 8123712938• Hospet AADI BAJAJ:9731361414** • **Hagaribommanahalli AADI BAJAJ: 9900363010• SIRUGUPPA AADI BAJAJ: 9110217558** • **Bijapur BIJJARGI BAJAJ (BLDE Road)**: 6362877793 •(Bus Stand Road) 8884000970 • **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 7349247162 • **Hiriyur** BTV BAJAJ: Ph: 7349247168 • **Challakere** BTV BAJAJ 8296199371 • **Davangere** JAIN BAJAJ: Ph: 9343636805 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8722182492 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** SHREE KAMAKSHI BAJAJ: 9845784351 • **Malur** SHREE KAMAKSHI BAJAJ: 9665524409 • **KGF** SHREE KAMAKSHI BAJAJ: 9900235758 • **Mulbagalu** SHREE KAMAKSHI BAJAJ: 8892616586 • **BANGARAPET** SHREE KAMAKSHI BAJAJ: 8970688361 • **Tumkur** AKSHAYA BAJAJ: 7259040253• **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7338662681 • **BH Road:** 7338662687 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9739549252 • **Mandya** POPULAR BAJAJ: 7760967900 • **Chamarajanagara** PATEL BAJAJ: 8722067560 • **Hunsur** STAR BAJAJ: 9916833072 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 7259678777.

ರಾಷ್ಟ್ರೀಯ ಹೆದ್ದಾರಿ ದರ್ಜೆಯಲ್ಲೇ ನಾಲ್ಕು ಪಥದ ರಸ್ತೆ ನಿರ್ಮಾಣಕ್ಕೆ ಟೆಂಡರ್

ಅಂಜನಾಪುರ: ಹೊಸ ತಂತ್ರಜ್ಞಾನ ಕೈಬಿಟ್ಟ ಬಿಡಿಎ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಅಂಜನಾಪುರ ಮುಖ್ಯರಸ್ತೆಯನ್ನು ಸಿಮೆಂಟ್ ಸ್ಟೆಬಿಲೈಸೇಷನ್ ತಂತ್ರಜ್ಞಾನ ಬಳಸಿ ಅಭಿವೃದ್ಧಿಪಡಿಸುವ ಪ್ರಸ್ತಾವ ಕೈಬಿಟ್ಟಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ), ರಾಷ್ಟ್ರೀಯ ಹೆದ್ದಾರಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ನಿರ್ಧರಿಸಿದೆ.

ಕನಕಪುರ ರಸ್ತೆಯ ದೊಡ್ಡಕಲ್ಲಸಂದ್ರದಿಂದ ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆ ಸಂಪರ್ಕಿಸುವ ರಸ್ತೆ ಇದಾಗಿದ್ದು, ಸಂಪೂರ್ಣ ಹದಗೆಟ್ಟು ವಾಹನ ಸಂಚಾರಕ್ಕೆ ಯೋಗ್ಯವಿಲ್ಲದಂತಾಗಿತ್ತು. ಸ್ಥಳೀಯರು ಹೋರಾಟ ನಡೆಸಿದ ಬಳಿಕ ಈಗ ವಾಹನ ಸಂಚಾರಕ್ಕೆ ಸುಗಮಗೊಳಿಸಲಾಗಿದೆ.

ಶಾಶ್ವತವಾಗಿ ರಸ್ತೆ ಅಭಿವೃದ್ಧಿಪಡಿಸಲು ಟೆಂಡರ್ ಪ್ರಕ್ರಿಯೆಯನ್ನೂ ಬಿಡಿಎ ಆರಂಭಿಸಿದೆ. ಈ ಹಿಂದಿನ ಯೋಜನೆಯಂತೆ ಸಿಮೆಂಟ್ ಸ್ಟೆಬಿಲೈಸೇಷನ್ ಎಂಬ ಹೊಸ ತಂತ್ರಜ್ಞಾನ ಬಳಸಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿತ್ತು. ಹಳೇ ರಸ್ತೆಯಲ್ಲಿನ ಜಲ್ಲಿ ತೆಗೆದು ಮತ್ತೆ ಹೊಸದಾಗಿ ಜಲ್ಲಿ ಹಾಕುವ ಬದಲಿಗೆ ಅಲ್ಲಿರುವ ಡಾಂಬರ್ ಮತ್ತು ಜಲ್ಲಿಯನ್ನೇ ಒಂದು ಅಡಿಯಷ್ಟು ಆಳದವರಿಗೆ ಯಂತ್ರಗಳ ಮೂಲಕ ಪುಡಿ ಮಾಡುವುದು. ಆ ಪುಡಿಗೆ ಸಿಮೆಂಟ್ ಬಳಸಿ ಗಟ್ಟಿಗೊಳಿಸಿ, ಅದರ ಮೇಲೆ ಡಾಂಬರ್ ಹಾಕಲು ಯೋಜನೆ ರೂಪಿಸಲಾಗಿತ್ತು.

6.8 ಕಿಲೋ ಮೀಟರ್ ರಸ್ತೆಯನ್ನು ₹25 ಕೋಟಿ ವೆಚ್ಚಾಗಲಿದೆ ಎಂದು ಅಂದಾಜಿಸಲಾಗಿತ್ತು. ಆದರೆ, ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ ಅವರು ಈ ಹೊಸ ಪ್ರಯೋಗಕ್ಕೆ ಆಕ್ಷೇಪ ವ್ಯಕ್ತಪಡಿಸಿ ರಾಷ್ಟ್ರೀಯ ಹೆದ್ದಾರಿ ಮಾದರಿಯಲ್ಲಿ ರಸ್ತೆ ಅಭಿವೃದ್ಧಿಪಡಿಸಬೇಕು ಎಂದು ಸಲಹೆ ನೀಡಿದ್ದರು. ಹೀಗಾಗಿ, ಬಿಡಿಎ ಈ ಯೋಜನೆಯನ್ನು ಬದಲಿಸಿ ಟೆಂಡರ್ ನೋಟಿಫಿಕೇಷನ್ ಪ್ರಕಟಿಸಿದೆ.

ಅಂಜನಾಪುರ ಮುಖ್ಯರಸ್ತೆಯನ್ನು ವಾಹನ ಸಂಚಾರ ಸುಗಮವಾಗುವಂತೆ ಮಾಡಿ ಧೂಳು ಹರಡದಂತೆ ನೀರು ಹಾಕುತ್ತಿರುವುದು

15 ದಿನಗಳಲ್ಲಿ ಕಾಮಗಾರಿ

‘ರಾಷ್ಟ್ರೀಯ ಹೆದ್ದಾರಿ ಮಾದರಿಯಲ್ಲೇ ರಸ್ತೆ ಅಭಿವೃದ್ಧಿಪಡಿಸಲು ಬಿಡಿಎ ಟೆಂಡರ್ ಪ್ರಕ್ರಿಯೆ ಆರಂಭಿಸಿದೆ. 15 ದಿನಗಳಲ್ಲಿ ಕಾಮಗಾರಿ ಆರಂಭವಾಗಲಿದೆ ಎಂದು ಶಾಸಕ ಎಂ. ಕೃಷ್ಣಪ್ಪ ತಿಳಿಸಿದರು.

‘ವಾಹನ ದಟ್ಟಣೆ ಹೆಚ್ಚಿರುವ ಕಾರಣ ಗುಣಮಟ್ಟದ ರಸ್ತೆ ನಿರ್ಮಾಣ ಆಗಬೇಕು. ಈ ರಸ್ತೆಯಲ್ಲಿ ಪ್ರಯೋಗ ಮಾಡಲು ಆಗುವುದಿಲ್ಲ. ಹೈಟೆನ್ಷನ್ ವಿದ್ಯುತ್ ಮಾರ್ಗ ಹಾದು ಹೋಗಿದ್ದು, ಅದರ ಕೆಳಗಿನ ಜಾಗವನ್ನು ಉದ್ಯಾನವಾಗಿ ಮಾರ್ಪಡಿಸಲಾಗುವುದು. ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಅನುದಾನ ಅಗತ್ಯವಾದರೆ ಒದಗಿಸಲಾಗುವುದು ಎಂದು ಬಿಡಿಎ ಅಧ್ಯಕ್ಷರು ಭರವಸೆ ನೀಡಿದ್ದಾರೆ’ ಎಂದರು.

ಪ್ರಜಾವಾಣಿ ವಿಶೇಷ

‘ಎರಡು ರಾಷ್ಟ್ರೀಯ ಹೆದ್ದಾರಿ ಸಂಪರ್ಕಿರುವ ಪ್ರಮುಖ ರಸ್ತೆ ಇದಾಗಿದೆ. ಪ್ರತಿದಿನ ಭಾರಿ ವಾಹನಗಳು ಈ ರಸ್ತೆಯಲ್ಲಿ ಸಂಚರಿಸುತ್ತವೆ. ಹೊಸ ತಂತ್ರಜ್ಞಾನ ಬಳಸಿ ಗುಣಮಟ್ಟದ ರಸ್ತೆ ಅಭಿವೃದ್ಧಿಪಡಿಸಿದ್ದರೆ ಹೆಚ್ಚು ದಿನ ಬಾಳಿಕೆ ಬರುತ್ತಿತ್ತು. ಅದನ್ನು ಮಾಡದೆ ಹಳೇ ಮಾದರಿಯಲ್ಲೇ ರಸ್ತೆ ಅಭಿವೃದ್ಧಿಪಡಿಸಿದರೆ ಬಾಳಿಕೆ ಬರುವುದಿಲ್ಲ’ ಎಂಬುದು ಸ್ಥಳೀಯರ ಅನುಮಾನ.

‘ಮಾದರಿಯಾಗಿ ರಸ್ತೆ ಅಭಿವೃದ್ಧಿಯಾಗಲಿದೆ ಎಂಬ ಕಾರಣಕ್ಕೆ ಇಷ್ಟು ದಿನ ಕಾದಿದ್ದೆವು. ಹಳೇ ಮಾದರಿಯಲ್ಲೇ ರಸ್ತೆ ನಿರ್ಮಿಸುವುದಾದರೆ ಜನರನ್ನು ಇಷ್ಟು ದಿನ ಕಾಯಿಸುವ ಅಗತ್ಯ ಇರಲಿಲ್ಲ’ ಎಂದು ನಾರಾಯಣನಗರದ ನಿವಾಸಿ ಪವನ್ ವಸಿಷ್ಠ ಹೇಳುತ್ತಾರೆ.

‘ಹೊಸ ತಂತ್ರಜ್ಞಾನದ ಅಳವಡಿಸದಿದ್ದರೂ, ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ. ಭಾರಿ ವಾಹನಗಳ ಸಂಚಾರವೇ ಈ ರಸ್ತೆಯಲ್ಲಿ ಹೆಚ್ಚಾಗಿರುವ ಕಾರಣ ರಾಷ್ಟ್ರೀಯ ಹೆದ್ದಾರಿ ದರ್ಜೆಯಲ್ಲೇ ಅಭಿವೃದ್ಧಿಯಾಗಲಿದೆ’ ಎಂದು ಬಿಡಿಎ ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ ಸ್ಪಷ್ಟಪಡಿಸಿದರು.

‘ಕಡಬಗೆರೆ ಕ್ರಾಸ್‌ನಿಂದ ಮಾದನಾಯಕನಹಳ್ಳಿ ತನಕದ 12 ಕಿಲೋ ಮೀಟರ್ ರಸ್ತೆ ಅಭಿವೃದ್ಧಿಪಡಿಸಬೇಕಿದೆ. ಈ ರಸ್ತೆಯಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗುವುದು’ ಎಂದು ಹೇಳಿದರು.

> ಸಿಮೆಂಟ್ ಸ್ಟೆಬಿಲೈಸೇಷನ್ ತಂತ್ರಜ್ಞಾನ ಹೊಸದಲ್ಲ. ಬೆಂಗಳೂರಿಗಷ್ಟೇ ಹೊಸ ಮಾದರಿ. ಅಂಜನಾಪುರ ರಸ್ತೆಯಲ್ಲಿ ಈ ತಂತ್ರಜ್ಞಾನ ಅಳವಡಿಸಿದರೆ 10 ವರ್ಷ ಬಾಳಿಕೆ ಬರಲಿದೆ
>
> **ವರುಣ್ ವಾಸುಕಿ,** ಅಂಜನಾಪುರ

ಸುದ್ದಿ 2 ನಿಮಿಷ

ಕೇಂದ್ರದಿಂದ ಪಶು ಚಿಕಿತ್ಸೆಗೆ 275 ವಾಹನ: ಸಚಿವ ಪ್ರಭು ಚವ್ಹಾಣ

ಬೆಂಗಳೂರು: ಕೇಂದ್ರ ಸರ್ಕಾರ ರಾಜ್ಯ ಪಶುಸಂಗೋಪನಾ ಇಲಾಖೆಗೆ 275 ಸಂಚಾರಿ ಪಶು ಚಿಕಿತ್ಸಾ ವಾಹನಗಳನ್ನು ಮಂಜೂರು ಮಾಡಿದೆ ಎಂದು ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ ತಿಳಿಸಿದ್ದಾರೆ.

ಇದರಿಂದ ರಾಜ್ಯದ ರೈತರ ಮನೆ ಬಾಗಿಲಿಗೇ ಸಂಚಾರಿ ಪಶು ಚಿಕಿತ್ಸಾ ವಾಹನಗಳ ಮೂಲಕ ಪಶುಸಂಜೀವಿನಿ ಯೋಜನೆಯ ಸೌಲಭ್ಯಗಳನ್ನು ತಲುಪಿಸಲು ಅನುಕೂಲವಾಗುತ್ತದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಶುಸಂಜೀವಿನಿ ಯೋಜನೆಯನ್ನು ಎಲ್ಲ ತಾಲ್ಲೂಕುಗಳಿಗೂ ವಿಸ್ತರಣೆ ಮಾಡಬೇಕು ಎಂದು ಪಕ್ಷಾತೀತವಾಗಿ ಜನಪ್ರತಿನಿಧಿಗಳು ಮನವಿ ಮಾಡಿದ್ದರು. ಈ ಸಂಬಂಧ ಕೇಂದ್ರ ಪಶುಸಂಗೋಪನಾ ಸಚಿವರ ಜತೆ ಚರ್ಚೆ ನಡೆಸಲಾಯಿತು. ರಾಷ್ಟ್ರೀಯ ರೋಗ ನಿಯಂತ್ರಣ ಕಾರ್ಯಕ್ರಮದಡಿ ರಾಜ್ಯಕ್ಕೆ 275 ಪಶು ಚಿಕಿತ್ಸಾ ವಾಹನಗಳನ್ನು ಮಂಜೂರು ಮಾಡಲಾಗಿದೆ ಎಂದರು.

ವಾಹನ ಖರೀದಿಸಲು ಕೇಂದ್ರದಿಂದ ಒಟ್ಟು ₹44 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಪ್ರತಿ ವಾಹನಕ್ಕೆ ₹16 ಲಕ್ಷ ವೆಚ್ಚ ವಾಗಲಿದೆ. ವಾಹನ ವಾರ್ಷಿಕ ನಿರ್ವಹಣೆ ಪಿಪಿಪಿ ಮಾದರಿಯಲ್ಲಿ ನಡೆಯಲಿದೆ ಎಂದು ಚವ್ಹಾಣ್ ತಿಳಿಸಿದರು.

50 ಲಕ್ಷ ಡೋಸ್ ಲಸಿಕೆ: ರಾಜ್ಯದಲ್ಲಿ ಜಾನುವಾರುಗಳ ಕಾಲುಬಾಯಿ ರೋಗ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ರಾಜ್ಯಕ್ಕೆ 50 ಲಕ್ಷ ಡೋಸ್ ಲಸಿಕೆ ನೀಡಿದೆ. ಕಾಲುಬಾಯಿ ರೋಗ ಕಂಡು ಬಂದ ಪ್ರದೇಶದಲ್ಲಿ ಆದ್ಯತೆ ಮೇಲೆ ಲಸಿಕೆ ವಿತರಣೆ ಮಾಡಲಾಗುವುದು ಎಂದು ಹೇಳಿದರು.

ಕೇಬಲ್ ಅಳವಡಿಕೆ ವಿಳಂಬ ನಾಗರಿಕರ ಆಕ್ರೋಶ

ಬೆಂಗಳೂರು: ಭೂಗತ ವಿದ್ಯುತ್ ಕೇಬಲ್ ಅಳವಡಿಸುವ ಕಾರ್ಯ ವಿಳಂಬವಾಗುತ್ತಿರುವುದಕ್ಕೆ ಹೆಣ್ಣೂರಿನ ಚಿಕ್ಕಣ್ಣ ಬಡಾವಣೆಯ ಮುಖ್ಯ ರಸ್ತೆಯ ನಿವಾಸಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಳೆದ ನಾಲ್ಕು ತಿಂಗಳಿಂದ ಕೇಬಲ್ ಅಳವಡಿಸುವ ಕಾಮಗಾರಿ ನಡೆಯುತ್ತಿದೆ. ಕೇಬಲ್‌ಗಳನ್ನು ಮನಬಂದಂತೆ ಇರಿಸಲಾಗಿದೆ. ಕೆಲವರ ಮನೆಗಳ ಗೇಟ್‌ಗಳ ಮುಂದೆಯೂ ಹಾಕಲಾಗಿದೆ. ಇದರಿಂದ, ನಾಗರಿಕರು ತೀವ್ರ ತೊಂದರೆ ಅನುಭವಿಸಬೇಕಾಗಿದೆ ಎಂದು ಎಂದು ದೂರಿದ್ದಾರೆ.

‘ಎಲ್ ಆ್ಯಂಡ್ ಟಿ ಕಂಪನಿ ಈ ಕಾಮಗಾರಿಯ ಗುತ್ತಿಗೆ ಪಡೆದಿದೆ. ಕಾಮಗಾರಿ ವಿಳಂಬವಾಗುತ್ತಿದ್ದರೂ ಅಧಿಕಾರಿಗಳು ಗಮನಹರಿಸಿಲ್ಲ. ಮನೆಗಳ ಮುಂದೆ ಕೇಬಲ್ ಇರಿಸಿ ನಿರ್ಬಂಧ ವಿಧಿಸುವ ಯತ್ನ ಮಾಡಲಾಗಿದೆ. ವಾಹನಗಳನ್ನು ಮನೆಯಿಂದ ಹೊರಗೆ ತೆಗೆಯಲು ಸಾಧ್ಯವಾಗುತ್ತಿಲ್ಲ. ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದರೂ ತ್ವರಿತಗತಿಯಲ್ಲಿ ಕಾಮಗಾರಿ ಮುಗಿಸುತ್ತಿಲ್ಲ’ ಎಂದು ಹೆಣ್ಣೂರು ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಎನ್. ಮುನಿರಾಜು ದೂರಿದ್ದಾರೆ.

ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಸವಿತಾ ಸಮಾಜದ ವಿದ್ಯಾರ್ಥಿಗಳಿಗೆ ಪಾರಂಪರಿಕ ಕಲೆಗಳಾದ ಡೋಲು, ನಾದಸ್ವರ ಮತ್ತು ಸಂಗೀತ ಕಲೆಗಳಲ್ಲಿ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಊಟ, ವಸತಿ, ಶಿಕ್ಷಣ ಮತ್ತು ತರಬೇತಿ ಭತ್ಯೆಯೊಂದಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯ ಕೇಂದ್ರದಲ್ಲಿ ತರಬೇತಿ ನೀಡಲಾಗುವುದು.

ಆಸಕ್ತರು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಯಿಂದ ಅರ್ಜಿಗಳನ್ನು ಪಡೆಯಬಹುದು. ಅರ್ಜಿ ಸಲ್ಲಿಸಲು ಅ.16 ಕೊನೆಯ ದಿನ.

ಹೆಚ್ಚಿನ ಮಾಹಿತಿಗೆ ಇಲಾಖೆ ವೆಬ್‌ಸೈಟ್ www. backwardclasses.kar.nic.in ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕಳೆದ ವರ್ಷದ ನಿಬಂಧನೆಗಳಷ್ಟೇ ಈ ವರ್ಷವೂ ಜಾರಿ– ಬಿಬಿಎಂಪಿ ಮುಖ್ಯ ಆಯುಕ್ತ ಸ್ಪಷ್ಟನೆ

ದುರ್ಗಾಪೂಜೆ– ಆಚರಣೆಗೆ ಷರತ್ತು: ಸಂಸದರ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ದುರ್ಗಾ ಪೂಜೆಯನ್ನು ಸಾರ್ವಜನಿಕವಾಗಿ ಆಚರಿಸುವುದಕ್ಕೂ ಬಿಬಿಎಂಪಿ ಕೋವಿಡ್ ಹರಡುವಿಕೆ ನಿಯಂತ್ರಿಸುವ ಉದ್ದೇಶದಿಂದ ಕೆಲವೊಂದು ನಿರ್ಬಂಧಗಳನ್ನು ವಿಧಿಸಿದೆ. ಮೂರ್ತಿಯ ಎತ್ತರ 4 ಅಡಿಗಳನ್ನು ಮೀರಬಾರದು. ಮೂರ್ತಿ ಪ್ರತಿಷ್ಠಾಪಿಸಿದ ಸ್ಥಳದಲ್ಲಿ ಪ್ರಾರ್ಥನೆ ವೇಳೆ ಏಕಕಾಲದಲ್ಲಿ 50ಕ್ಕಿಂತ ಹೆಚ್ಚು ಮಂದಿ ಸೇರಬಾರದು. ವಿಸರ್ಜನಾ ಮೆರವಣಿಗೆಯ ಸಂದರ್ಭದಲ್ಲಿ ಡ್ರಂ, ಡೋಲುಗಳನ್ನು ಬಳಸಬಾರದು ಎಂದು ಷರತ್ತುಗಳನ್ನು ವಿಧಿಸಲಾಗಿದೆ.

ದುರ್ಗಾಪೂಜೆಯನ್ನು ಸಾರ್ವಜನಿಕವಾಗಿ ಆಚರಣೆಯ ನಿಬಂಧನೆಗಳ ಕುರಿತು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಮಂಗಳವಾರ ಆದೇಶ ಹೊರಡಿಸಿದ್ದಾರೆ. ಇದರಲ್ಲಿರುವ ಕೆಲವೊಂದು ನಿರ್ಬಂಧಗಳಿಗೆ ಆಕ್ಷೇಪ ವ್ಯಕ್ತಪಡಿಸಿ ಸಂಸದ ತೇಜಸ್ವೀ ಸೂರ್ಯ ಅವರು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಬುಧವಾರ ಪತ್ರ ಬರೆದಿದ್ದಾರೆ. ಬಿಬಿಎಂಪಿಯು ಹಿಂದೂಗಳ ಹಬ್ಬಗಳಿಗೆ ಮಾತ್ರ ನಿರ್ಬಂಧ ಹೇರಿ, ಅನ್ಯಧರ್ಮಗಳ ಹಬ್ಬಗಳ ಸಂದರ್ಭದಲ್ಲಿ ಕಣ್ಣುಮುಚ್ಚಿಕೊಂಡಿರುವುದು ಬೇಸರದ ಸಂಗತಿ. ಈ ರೀತಿ ತಾರತಮ್ಯದಿಂದ ಕೂಡಿದ ನಿರ್ಬಂಧಗಳನ್ನು ವಿಧಿಸುವುದು ಖಂಡನೀಯ ಹಾಗೂ ಅಸಾಂವಿಧಾನಿಕ ಎಂದು ಅವರು ಟೀಕಿಸಿದ್ದಾರೆ.

‘ಮೂರ್ತಿಯ ಎತ್ತರ ಎಷ್ಟಿರಬೇಕು ಎಂಬುದನ್ನು ಸೂಚಿಸಿ ಬಿಬಿಎಂಪಿ ಹೊರಡಿಸಿರುವ ಆದೇಶದ ಹಿಂದೆ ಯಾವುದೇ ತರ್ಕವಿಲ್ಲ. ಮೂರ್ತಿಯ ಎತ್ತರಕ್ಕೂ ಕೋವಿಡ್ ಹರಡುವಿಕೆಗೂ ಏನು ಸಂಬಂಧ ಎಂಬುದು ಅರ್ಥವಾಗುತ್ತಿಲ್ಲ. ಇದೊಂದು ಅನುಚಿತ ಹಾಗೂ ನಿರಂಕುಶ ನಿರ್ಧಾರದಂತೆ ತೋರುತ್ತಿದೆ’ ಎಂದು ತೇಜಸ್ವೀ ಸೂರ್ಯ ಅಭಿಪ್ರಾಯಪಟ್ಟಿದ್ದಾರೆ.

‘ಪೂಜೆಯನ್ನು ಹೇಗೆ ಮಾಡಬೇಕು ಎಂಬ ಬಗ್ಗೆ ಸೂಚನೆ ನೀಡುವುದಕ್ಕೆ ಸ್ಥಳೀಯ ಆಡಳಿತಕ್ಕೆ ಯಾವುದೇ ಅಧಿಕಾರ ಇಲ್ಲ. ಪೂಜಾ ಪದ್ಧತಿ ಬಗ್ಗೆ ಭಕ್ತರೇ ನಿರ್ಧಾರ ಕೈಗೊಳ್ಳಬೇಕು. ಡೋಲು ಮತ್ತು ಡ್ರಮ್ ಬಾರಿಸುವುದಕ್ಕೆ ನಿರ್ಬಂಧ ವಿಧಿಸಿದರೆ ಸಡಗರವನ್ನೇ ಕಿತ್ತುಕೊಂಡಂತೆ. ಈ ಯಾವುದೇ ನಿಯಮಗಳಿಗೂ ಕೋವಿಡ್ ಹರಡುವಿಕೆಗೂ ಪರಸ್ಪರ ಸಂಬಂಧವಿಲ್ಲ. ಜನ ಸೇರುವಿಕೆ ಮತ್ತು ಡೋಲು, ಡ್ರಂ ಭಾರಿಸುವುದಕ್ಕೆ ನಿರ್ಬಂಧ ಹೇರುವುದು ಅರ್ಥವಿಲ್ಲದ ನಡೆ. ಈ ಬಗ್ಗೆ ಮರುಪರಿಶೀಲನೆ ಮಾಡಬೇಕು’ ಎಂದು ಒತ್ತಾಯಿಸಿದ್ದಾರೆ.

ಸಂಸದರ ಪತ್ರದ ಬಗ್ಗೆ ಪ್ರತಿಕ್ರಿಯಿಸಿದ ಗೌರವ್ ಗುಪ್ತ, ‘ನಾವು ಹೊಸತಾಗಿ ಯಾವುದೇ ನಿರ್ಬಂಧಗಳನ್ನು ಹೇರಿಲ್ಲ. ಕಳೆದ ವರ್ಷ ದುರ್ಗಾ ಪೂಜೆಯ ಸಂದರ್ಭದಲ್ಲಿ ಕೋವಿಡ್ ನಿಯಂತ್ರಣದ ಸಲುವಾಗಿ ಹೇರಿದ್ದ ನಿರ್ಬಂಧಗಳನ್ನಷ್ಟೇ ಈ ಬಾರಿಯೂ ಜಾರಿಗೊಳಿಸುತ್ತಿದ್ದೇವೆ. ಇದನ್ನು ಸಂಸದರಿಗೂ ತಿಳಿಸಿದ್ದೇನೆ’ ಎಂದರು.

‘ಸಾರ್ವಜನಿಕವಾಗಿ ದುರ್ಗಾ ಪೂಜೆ ಆಚರಿಸುವ ಸಮಿತಿಗಳು ಈ ನಿರ್ಬಂಧಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಬಿಬಿಎಂಪಿಗೆ ಯಾವುದೇ ಪತ್ರ ಬರೆದಿಲ್ಲ. ಯಾವುದಾದರೂ ನಿಬಂಧನೆ ಸಡಿಲಿಕೆ ಅಗತ್ಯವಿದ್ದರೆ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ’ ಎಂದು ತಿಳಿಸಿದರು.

ಸಾರ್ವಜನಿಕ ದುರ್ಗಾಪೂಜೆ: ಏನೆಲ್ಲ ನಿಬಂಧನೆ

- ವಲಯದ ಜಂಟಿ ಆಯುಕ್ತರಿಂದ ಅನುಮತಿ ಪಡೆದು ವಾರ್ಡ್‌ನಲ್ಲಿ ಒಂದೇ ಕಡೆ ಸಾರ್ವಜನಿಕವಾಗಿ ದುರ್ಗಾ ಪೂಜೆ ಆಚರಿಸಬೇಕು
- ಮೂರ್ತಿಯನ್ನು ಸೋಂಕು ನಿವಾರಕದಿಂದ ಶುದ್ಧೀಕರಿಸಬೇಕು
- ಮೂಲತಃ ಆಚರಿಸುವ ವಿಧಿವಿಧಾನಗಳಿಗಷ್ಟೇ ಅನುಮತಿ
- ಪರಸ್ಪರ ಅಂತರ ಕಾಪಾಡಬೇಕು
- ಕೋವಿಡ್ ನಿಯಂತ್ರಣ ಕ್ರಮಗಳನ್ನು ಅನುಸರಿಸಬೇಕು
- ಸಿಹಿತಿಂಡಿ, ಹಣ್ಣು, ಹೂವುಗಳನ್ನು ಹಂಚುವಂತಿಲ್ಲ
- ಧಾರ್ಮಿಕ ಸಮಾರಂಭಕ್ಕೆ 100ಕ್ಕಿಂತ ಹೆಚ್ಚು ಮಂದಿಯನ್ನು ಆಹ್ವಾನಿಸುವಂತಿಲ್ಲ
- ಮೂರ್ತಿ ವಿಸರ್ಜನೆ ವೇಳೆ 10ಕ್ಕಿಂತ ಹೆಚ್ಚು ಮಂದಿ ಸೇರುವಂತಿಲ್ಲ, ಮೆರವಣಿಗೆಯಲ್ಲಿ ಪರಸ್ಪರ ಅಂತರ ಕಾಪಾಡಬೇಕು
- ಸಿಂಧೂರ್ ಕೇಳ (ಓಕಳಿ) ಸಂದರ್ಭದಲ್ಲೂ 10ಕ್ಕಿಂತ ಹೆಚ್ಚು ಜನ ಗುಂಪುಗೂಡುವಂತಿಲ್ಲ.

ಮಾನಸಿಕ ಆರೋಗ್ಯ ದಿನ:ನಾಳೆ ಆನ್‌ಲೈನ್ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಮಾನಸಿಕ ಆರೋಗ್ಯ ದಿನದ ಅಂಗವಾಗಿ ನಗರದ ಸಿಎಂಆರ್ ವಿಶ್ವವಿದ್ಯಾಲಯವು ಇದೇ 8ರಂದು ವಿವಿಧ ಕಾರ್ಯಕ್ರಮಗಳನ್ನು ಆನ್‌ಲೈನ್ ಮೂಲಕ ಹಮ್ಮಿಕೊಂಡಿದೆ.

‘ಅನ್‌ಮ್ಯೂಟ್ ಆ್ಯಂಡ್ ಎಕೋ’ ವಿಷಯದ ಕುರಿತು ಚರ್ಚೆ ನಡೆಯಲಿದೆ. ಅ.8ರಂದು ಮಧ್ಯಾಹ್ನ 2.30ರಿಂದ ಕಾರ್ಯಕ್ರಮ ಆರಂಭಗೊಳ್ಳಲಿದೆ.

‘ಇಂದಿನ ಅನಿಶ್ಚಿತ ಸನ್ನಿವೇಶಗಳಲ್ಲಿ ಮಾನಸಿಕ ಆರೋಗ್ಯ’ ಕುರಿತಂತೆ ಕಾವ್ಯ, ಬರವಣಿಗೆ ಅಥವಾ ಇತರ ವಿಧಾನಗಳಲ್ಲಿ ಪ್ರಸ್ತುತಪಡಿಸಲು ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಸ್ಪರ್ಧೆಗಳಿಗೆ 6 ನಿಮಿಷಗಳ ಕಾಲಾವಕಾಶ ಸಿಗಲಿದೆ.

ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಛಿಸುವವರು https://forms. gle/ vWWuRWF4gLv57JG28 ಮೂಲಕ ಹೆಸರು ನೋಂದಣಿ ಮಾಡಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಭಾರತೀಯ ಸ್ಟೇಟ್ ಬ್ಯಾಂಕ್

ಒತ್ತಡಗ್ರಸ್ತ ಆಸ್ತಿಗಳ ನಿರ್ವಹಣಾ ಶಾಖೆ (ಎಸ್ಎಎಂಬಿ–II), ಹೈದರಾಬಾದ್

ಅಧಿಕೃತ ಅಧಿಕಾರಿಗಳ ವಿವರ :
ಹೆಸರು : ಶ್ರೀ ಬಿ. ವಿ. ರಂಗಧಾಮ್,
ಸಹಾಯಕ ಮಹಾ ಪ್ರಬಂಧಕರು
E-mail ID: sbi.18359@sbi.co.in
ಮೊಬೈಲ್ : 9010443800/9010618880

ಶಾಖೆಯ ವಿಳಾಸ : ಡಿ. ನಂ. 3-4-1013/ಎ
1ನೇ ಮಹಡಿ, CAC, TSRTC ಬಸ್ ನಿಲ್ದಾಣ
ಕಾಚಿಗುಡ, ಹೈದರಾಬಾದ್,
ಫೋನ್ : 040-23147100 ರಿಂದ 23147107
E-mail ID: sbi.18359@sbi.co.in

ಅಪೆಂಡಿಕ್ಸ್ - IV ಎ

[ನಿಯಮ 8(6)ರ ನಿಬಂಧನೆಯ ಅನ್ವಯ]

ಸ್ಥಿರಾಸ್ತಿಯ ಮಾರಾಟಕ್ಕಾಗಿ ಮಾರಾಟ ಸೂಚನೆ

ಸೆಕ್ಯುರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮುಗಳು 2002ರ ನಿಯಮ 8(6)ರ ನಿಬಂಧನೆಗಳನ್ನು ಒದಿಕೊಂಡಂತೆ ಇದರ ಅನ್ವಯ ಸ್ಥಿರಾಸ್ತಿಯ ಇ-ಹರಾಜು ಮಾರಾಟ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ/ಅಡಮಾನುದಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ರಾದ ಭಾರತೀಯ ಸ್ಟೇಟ್ ಬ್ಯಾಂಕ್, ಇವರಿಗೆ ಅಡಮಾನ/ ಚಾರ್ಜ್ ಮಾಡಿರುವ ಈ ಕೆಳಗೆ ವಿವರಿಸಿರುವ ಆಸ್ತಿಗಳನ್ನು ಬ್ಯಾಂಕಿನ ಅಧಿಕೃತ ಅಧಿಕಾರಿಯವರು ರಚನಾತ್ಮಕವಾಗಿ ಸ್ವಾಧೀನ್ಯಕ್ಕೆ ಪಡೆದುಕೊಂಡಿದ್ದು ಅದನ್ನು ‘ಎಲ್ಲಿ ಹೇಗಿದೆಯೊ ಹಾಗೆ’ ಮತ್ತು ‘ಎಲ್ಲಿ ಏನಿದೆಯೋ ಹಾಗೆ’ ಮತ್ತು ‘ಅಲ್ಲಿ ಏನಿದೆಯೋ ಹಾಗೆ ’ ಆಧಾರದ ಮೇಲೆ ಭಾರತೀಯ ಸ್ಟೇಟ್ ಬ್ಯಾಂಕ್, ಇವರಿಗೆ ಸಾಲಗಾರರು/ಅಡಮಾನುದಾರರಾದ **ಮೆ|| ಕೋಸ್ಟಲ್ ಪ್ರಾಜೆಕ್ಟ್ಸ್ ಲಿಮಿಟೆಡ್,** ಪ್ರತಿನಿಧಿಸುವವರು ಇದರ ವ್ಯವಸ್ಥಾಪಕ ನಿರ್ದೇಶಕರಾದ **ಶ್ರೀ ಎಸ್. ಸುರೇಂದ್ರ** S/o ಎಸ್. ಪಾಪಯ್ಯ, ನೋಂದಾಯಿತ ಕಚೇರಿ: 237, 2ನೇ ಮಹಡಿ, ಬಾಪೂಜಿ ನಗರ, ಭುಬನೇಶ್ವರ್– 751 009 ಮತ್ತೊಂದು ವಿಳಾಸ: **ಮೆ|| ಕೋಸ್ಟಲ್ ಪ್ರಾಜೆಕ್ಟ್ಸ್ ಲಿಮಿಟೆಡ್,** ಪ್ರತಿನಿಧಿಸುವವರು ಇದರ ವ್ಯವಸ್ಥಾಪಕ ನಿರ್ದೇಶಕರಾದ **ಶ್ರೀ ಎಸ್. ಸುರೇಂದ್ರ** S/o ಎಸ್. ಪಾಪಯ್ಯ, ಪ್ಲಾಟ್ ನಂ. 304–ಒ, ಫಿಲಂ ನಗರ, ಜೂಬ್ಲಿ ಹಿಲ್ಸ್, ಹೈದರಾಬಾದ್ – 500 033, ಮತ್ತು **ಜಾಮೀನುದಾರರಾದ**, 1) **ಶ್ರೀ ಎಸ್. ಸುರೇಂದ್ರ,** S/o ಎಸ್. ಪಾಪಯ್ಯ, 2) **ಶ್ರೀ ಜಿ. ಹರಿಹರ ರಾವ್,** 3) **ಶ್ರೀ ಕೆ. ವಿ. ಜಯಪ್ರಕಾಶ್** S/o ಶ್ರೀ ಕೆ. ವಿಶ್ವನಾಥ ಶೆಟ್ಟಿ, 4) **ಮೆ. ಗ್ರಾಂಡ್ಯೂರ್ ಪವರ್ ಪ್ರಾಜೆಕ್ಟ್ಸ್ ಪ್ರೈ. ಲಿ., 5) ರೆಬ್ಬಿ ಹೈಡ್ರೊ ಪವರ್ ಪ್ರೈ. ಲಿ., 6) ಬಡಾವೂ ಹೈಡ್ರೊ ಪವರ್ ಪ್ರೈ. ಲಿ., 7) ಕೋಸ್ಟಲ್ ಟ್ರಾನ್ಸ್‌ನೇಷನಲ್ ವೆಂಚರ್ಸ್(ಸಿವೈ) ಲಿಮಿಟೆಡ್, 8) ನೇಪಾಳ್‌ಜಲಬಿದ್ಯುತ್‌ಪ್ರವರ್ಧನ್ ತಥಾ ಬಿಕಾಸ್ ಲಿಮಿಟೆಡ್, 9) ಮೆ|| ಸಾರಾ ಹೈಡ್ರೊ ಪವರ್ ಪ್ರೈ. ಲಿ.,** ಇವರಿಂದ ಬರಬೇಕಾದ ಬಾಕಿ ಮೊತ್ತ **ರೂ.2402,36,19,384/-** (ರೂಪಾಯಿ ಎರಡು ಸಾವಿರದ ನಾಲ್ಕು ನೂರ ಎರಡು ಕೋಟಿ ಮೂವತ್ತಾರು ಲಕ್ಷದ ಹತ್ತೊಂಬತ್ತು ಸಾವಿರದ ಮುನ್ನೂರ ಎಂಬತ್ತ ನಾಲ್ಕು ಮಾತ್ರ) ದಿನಾಂಕ 30.09.2021 ರಂತೆ ಮತ್ತು ದಿನಾಂಕ .01.10.2021ರಿಂದ ಒಪ್ಪಂದದ ದರದಲ್ಲಿ ಬಡ್ಡಿ+ಸಾಂದರ್ಭಿಕ ಖರ್ಚು, ವೆಚ್ಚ ಇತ್ಯಾದಿಗಳ ವಸೂಲಿಗಾಗಿ ದಿನಾಂಕ **11.11.2021** ರಂದು ಮಾರಾಟ ಮಾಡಲಾಗುವುದು.

ಸೂಚನೆ : ಶ್ರೀ ಕೆ.ವಿ. ಜಯಪ್ರಕಾಶ್ ಇವರ ಬಾಕಿಯನ್ನು ರೂ.164.06 ಕೋಟಿ + ದಿನಾಂಕ 26.06.2014ರಿಂದ ಬಡ್ಡಿ ಮತ್ತು ಖರ್ಚು ಹಾಗೂ ಇತರ ವೆಚ್ಚಗಳಿಗೆ ಮಿತಿಗೊಳಿಸಲಾಗಿದೆ.

ಆಸ್ತಿಗಳ ವಿವರ

Property ID No. : SBIN200005380534

ಲಾಟ್ ನಂ. 1 : ವಾರ್ಡ್ ನಂ. 12, ಯಲಹಂಕ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತಾತ್ಮಕ ಕಾನೂನು ವ್ಯಾಪ್ತಿ) ,ಸರ್ವೆ ನಂ. 153ರಲ್ಲಿರುವ 5 ಎಕರೆ 10ಗುಂಟೆ ಅಳತೆಯ ಜಮೀನು ಶ್ರೀ ಕೆ .ವಿ. ಜಯಪ್ರಕಾಶ್‌ರವರ ಹೆಸರಿಗೆ ಕ್ರಯ ಪತ್ರ ದಿನಾಂಕ 12.05.2005 ದಾಖಲೆ ನಂ. 3168/2005–06ರಂತೆ ನೋಂದಣಿಯಾಗಿದ್ದು ಈ ಆಸ್ತಿಯ ಚಕ್ಕುಬಂದಿ: ಉತ್ತರಕ್ಕೆ: ಸರ್ವೆ ನಂ. 152/5ರಲ್ಲಿರುವ ಜಮೀನು, ದಕ್ಷಿಣಕ್ಕೆ : ಸರ್ವೆ ನಂ. 153ರಲ್ಲಿರುವ ಉಳಿದ ಜಮೀನು, ಪೂರ್ವಕ್ಕೆ: ಸರ್ವೆ ನಂ. 152/7ರಲ್ಲಿರುವ ಜಮೀನು, ಪಶ್ಚಿಮಕ್ಕೆ : ಅಲ್ಲಾಳಸಂದ್ರ ರಸ್ತೆ (ಓಣಿ).

ಲಾಟ್ ನಂ. 2 ವಾರ್ಡ್ ನಂ. 12, ಯಲಹಂಕ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತಾತ್ಮಕ ಕಾನೂನು ವ್ಯಾಪ್ತಿ) ,ಸರ್ವೆ ನಂ. 152/1ಬಿ, 152/2ಎ, 152/2ಬಿ, 152/3ಎ, 152/3ಬಿ, 152/4ಎ, 152/4ಬಿ, 152/5ಎ, 152/5ಬಿ, 152/6ಎ, 152/6ಬಿ, 152/7ಎ, 152/7ಬಿ, 152/10ಎ ಮತ್ತು 152/10ಬಿ ರಲ್ಲಿರುವ ಒಟ್ಟು 8ಎಕರೆ 28 ಗುಂಟೆ ಅಳತೆಯ ಜಮೀನು ಶ್ರೀ ಕೆ .ವಿ. ಜಯಪ್ರಕಾಶ್‌ರವರ ಹೆಸರಿಗೆ ಕ್ರಯ ಪತ್ರ ದಿನಾಂಕ 29.12.2005 ದಾಖಲೆ ನಂ. 9356/2005–06ರಂತೆ ನೋಂದಣಿಯಾಗಿದ್ದು ಈ ಆಸ್ತಿಯ ಚಕ್ಕುಬಂದಿ: ಉತ್ತರಕ್ಕೆ: ಪೊಲೀಸ್ ಕ್ವಾರ್ಟರ್ಸ್ ಮತ್ತು ಸರ್ವೆ ನಂ. 152/1ಎ, ದಕ್ಷಿಣಕ್ಕೆ ಸರ್ವೆ ನಂ. 153 ಮತ್ತು ಅಲ್ಲಾಳಸಂದ್ರ ಗಡಿ, ಪೂರ್ವಕ್ಕೆ: ಸರ್ವೆ ನಂ. 152/8 ಮತ್ತು 152/9 ಪಶ್ಚಿಮಕ್ಕೆ: ಅಲ್ಲಾಳಸಂದ್ರ ಓಣಿ ಮತ್ತು ಎಲ್‌ಬಿಎಸ್ ನಗರ ಸರ್ವೆ ನಂ. 153.

ಕ್ರ. ಸಂ.	ಮಾರಾಟಕ್ಕಿರುವ ಆಸ್ತಿ	ಆಸ್ತಿಯ ಇ-ಹರಾಜಿನ ದಿನಾಂಕ ಮತ್ತು ಸಮಯ	ಮೀಸಲು ಬೆಲೆ (ಈ ಮೊತ್ತಕ್ಕಿಂತ ಕಡಿಮೆ ಬೆಲೆಗೆ ಆಸ್ತಿಯನ್ನು ಮಾರಾಟ ಮಾಡಲಾಗುವುದಿಲ್ಲ (ರೂ.ಗಳಲ್ಲಿ)	ಮುಂಗಡ ಠೇವಣಿ (ಇಎಂಡಿ) (ರೂ.ಗಳಲ್ಲಿ)	ಬಿಡ್ ಗುಣಾಂಕ (ರೂ.ಗಳಲ್ಲಿ)
1	ಲಾಟ್ ನಂ. 1 ಮತ್ತು 2 ಒಟ್ಟಿಗೆ	11.11.2021 ಬೆಳಿಗ್ಗೆ11.00 ರಿಂದ ಮಧ್ಯಾಹ್ನ 12.00 ಗಂಟೆ	150,00,00,000/-	15,00,00,000/-	50,00,000/-

ಬಿಡ್ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 09.11.2021 ಸಂಜೆ 5.00 ಗಂಟೆವರೆಗೆ

ಆಸ್ತಿಗಳನ್ನು ವೀಕ್ಷಿಸಲು ಕೊನೆಯ ದಿನಾಂಕ ಮತ್ತು ಸಮಯ : ಮುಂಚಿತವಾಗಿ ಸಮಯವನ್ನು ನಿಗದಿಪಡಿಸಿಕೊಂಡು ದಿನಾಂಕ 07.11.2021ರವರೆಗೆ ಯಾವುದೇ ದಿನದಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ

ಇಎಂಡಿ ಪಾವತಿ: ಆಸಕ್ತ ಖರೀದಿದಾರರು ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು INDIAN BANKS AUCTION PROPERTIES INFORMATION (IBAPI) PORTAL (https:/ www. mstcecommerce.com/auctionhome/ibapi/index.jsp) ನ https://ibapi. ನಲ್ಲಿ ನೊಂದಾಯಿಸಿಕೊಳ್ಳಬೇಕು. ಬಿಡ್ಡರ್‌ಗಳ ನೊಂದಣಿಗೆ ಕನಿಷ್ಟ ಮೂರು ಕೆಲಸದ ದಿನಗಳು ಬೇಕಾಗುವುದರಿಂದ ಬಿಡ್ಡರ್‌ಗಳು ಹರಾಜು ಮಾರಾಟದ ಮೊದಲು ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ಸಂಭಾವ್ಯ ಬಿಡ್ಡರ್‌ಗಳು ಇಎಂಡಿ ಮೊತ್ತವನ್ನು IBAPI ಪೋರ್ಟಲ್‌ನ IBAPI wallet ಗೆ ಅವರ ಬ್ಯಾಂಕ್ ಖಾತೆಯ ಮೂಲಕ ಪಾವತಿಸಬೇಕು.

ಆಸ್ತಿಯ ವೀಕ್ಷಣೆಗೆ ಮತ್ತು ಇತರ ಸ್ಪಷ್ಟೀಕರಣಕ್ಕೆ ಆಸಕ್ತ ಖರೀದಿದಾರರು ಅಧಿಕೃತ ಅಧಿಕಾರಿಯವರನ್ನು ಫೋನ್ ಮುಖಾಂತರ ಸಂಪರ್ಕಿಸಬಹುದು ಅಥವಾ ಬ್ಯಾಂಕಿನ ಅನುಮೋದಿತ ಸೇವಾ ಪೂರೈಕೆದಾರರಾದ **ಮೆ. ಗುಡ್‌ವಿಲ್ ಅಸೋಸಿಯೇಟ್ಸ್, ಸೆಲ್ ನಂ. 9949901281 ಅಥವಾ 9886728350 ಇವರನ್ನು ಸಂಪರ್ಕಿಸಬಹುದು.**

ಸೂಚನೆ : ಈ ನೋಟೀಸು ಸದರಿ ಸಾಲದ ಸಾಲಗಾರರಿಗೆ / ಜಾಮೀನುದಾರರಿಗೆ ಒಂದು ವೇಳೆ ಇ-ಹರಾಜು ಮಾರಾಟದ ದಿನಾಂಕದ ಮೊದಲು ನೀಡಬೇಕಾಗಿರುವ ಬಾಕಿ ಮೊತ್ತವನ್ನು ಪೂರ್ತಿಯಾಗಿ ಪಾವತಿಸದಿದ್ದಲ್ಲಿ ಮೇಲೆ ಸೂಚಿಸಿರುವ ಆಸ್ತಿಯನ್ನು ಮೇಲ್ಕಂಡ ದಿನಾಂಕದಂದು ಇ-ಹರಾಜು ಮಾರಾಟ ಮಾಡುವ ನೋಟೀಸು ಸಹ ಆಗಿರುತ್ತದೆ.

ಹರಾಜು ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ ಸೆಕ್ಯೂರ್ಡ್ ಕ್ರೆಡಿಟರ್ ಆದ ಭಾರತೀಯ ಸ್ಟೇಟ್ ಬ್ಯಾಂಕ್ ರವರ ವೆಬ್‌ಸೈಟ್‌ನಲ್ಲಿ ನೀಡಿರುವ ಲಿಂಕ್‌ಗಳಲ್ಲಿ (a) “http://www.sbi.co.in” (b) https://ibapi.in ನಲ್ಲಿ ವೀಕ್ಷಿಸಬಹುದು

ದಿನಾಂಕ : 06.10.2021
ಸ್ಥಳ : ಹೈದರಾಬಾದ್

ಸಹಿ/-
ಎಜಿಎಂ ಮತ್ತು ಅಧಿಕೃತ ಅಧಿಕಾರಿ

ರಾಷ್ಟ್ರಪತಿಗೆ ಸ್ವಾಗತ

ಮೂರು ದಿನಗಳ ಭೇಟಿಗೆ ರಾಜ್ಯಕ್ಕೆ ಬುಧವಾರ ಆಗಮಿಸಿದ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ವಾಗತಿಸಿದರು.

‘ಗೊಂಡ’ರಿಗೆ ಜಾತಿ ಸಿಂಧುತ್ವ ನೀಡದಿದ್ದರೆ ಹೋರಾಟ: ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೊಂಡ ಸಮುದಾಯದವರಿಗೆ ಪರಿಶಿಷ್ಟ ಪಂಗಡದ ಜಾತಿ ಸಿಂಧುತ್ವ ಪ್ರಮಾಣ ಪತ್ರ ನೀಡದೆ ಸರ್ಕಾರ ದುರುದ್ದೇಶದಿಂದ ಸತಾಯಿಸುತ್ತಿದೆ. ಇದರ ವಿರುದ್ಧ ಹೋರಾಟ ಹಮ್ಮಿಕೊಳ್ಳಲಾಗುವುದು’ ಎಂದು ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್. ಶಿವಣ್ಣ ತಿಳಿಸಿದ್ದಾರೆ.

‘ಬೀದರ್, ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಗೊಂಡ ಸಮುದಾಯದವರಿಗೆ ಪರಿಶಿಷ್ಟ ಪಂಗಡದ ಪ್ರಮಾಣ ಪತ್ರವನ್ನು ಹಿಂದಿನಿಂದಲೂ ನೀಡಲಾಗುತ್ತಿದೆ. ಈಗ ಈ ಸಮುದಾಯವನ್ನು ಮೀಸಲಾತಿಯಿಂದಲೇ ವಂಚಿಸುವ ಕುತಂತ್ರವನ್ನು ರಾಜ್ಯ ಸರ್ಕಾರ ಮಾಡುತ್ತಿದೆ’ ಎಂದು ಹೇಳಿದ್ದಾರೆ.

‘ಗೊಂಡ ಸಮುದಾಯದಕ್ಕೆ ಪರಿಶಿಷ್ಟ ಪಂಗಡ ಪ್ರಮಾಣಪತ್ರ ನೀಡಬೇಕು. ಇಲ್ಲದಿದ್ದರೆ ಮುಂದಿನ 20 ದಿನಗಳಲ್ಲಿ ದೊಡ್ಡ ಮಟ್ಟದ ಹೋರಾಟ ನಡೆಸಲಾಗುವುದು’ ಎಂದು ಎಚ್ಚರಿಸಿದ್ದಾರೆ.

ಜಾತಿ ಸಿಂಧುತ್ವ ಪ್ರಮಾಣ ಪತ್ರ ಸಿಗದಿದ್ದರಿಂದ ‘ಗೊಂಡ’ ಸಮುದಾಯದ ಅಭ್ಯರ್ಥಿಗಳು ಅತಂತ್ರರಾಗಿರುವ ಬಗ್ಗೆ ‘ಪ್ರಜಾವಾಣಿ’ ಬುಧವಾರ ವರದಿ ಪ್ರಕಟಿಸಿತ್ತು.

ಆದ್ಯತೆ ಮೇರೆಗೆ ವಿತರಣೆ

‘ಸರ್ಕಾರಿ ನೌಕರಿಗೆ ಆಯ್ಕೆಯಾಗಿ ಸಿಂಧುತ್ವ ಪ್ರಮಾಣ ಪತ್ರಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳಿಗೆ ಆದ್ಯತೆ ಮೇರೆಗೆ ಪ್ರಮಾಣ ಪತ್ರ ವಿತರಣೆ ಮಾಡಬೇಕು’ ಎಂದು ರಾಜ್ಯ ಅಲೆಮಾರಿ ಬುಡಕಟ್ಟು ಮಹಾಸಭಾದ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಎ.ಆರ್.ಗೋವಿಂದಸ್ವಾಮಿ ಒತ್ತಾಯಿಸಿದ್ದಾರೆ.

ಭಿಕ್ಷೆ ಬೇಡುವ ಅಲೆಮಾರಿ, ಬುಡಕಟ್ಟು ತಬ್ಬಲಿಗಳಂತಿರುವ ಸಮುದಾಯಗಳು ಜಾತಿ ಪ್ರಮಾಣ ಪತ್ರ, ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ, ವಿದ್ಯಾರ್ಥಿ ವೇತನಕ್ಕೆ, ಜಾತಿ ಸಿಂಧುತ್ವಕ್ಕೆ ಪರಿತಪಿಸುವುದರಲ್ಲಿ ತಪ್ಪಿಲ್ಲ ಎಂದಿದ್ದಾರೆ.

ನಗರದಲ್ಲಿ ಇಂದು

ಸಂಪ್ರೋಕ್ಷಣೆ ಮತ್ತು ಮಹಾಕಲಶಾಭಿಷೇಕ ಮಹೋತ್ಸವ: ಪ್ರಾರ್ಥನೆ, ಪುಣ್ಯಾಹ, ಗಾಯತ್ರಿ ಜಪ, ಹೋಮ, ಸಾನ್ನಿಧ್ಯ–ವಿದ್ಯಾಶ್ರೀಶ ತೀರ್ಥರು, ಆಯೋಜನೆ, ಸ್ಥಳ–ಪ್ರಸನ್ನ ಆಂಜನೇಯ ಮತ್ತು ಕಲ್ಯಾಣ ಸೀತಾರಾಮ ದೇವಸ್ಥಾನ, ಕತ್ರಿಗುಪ್ಪೆ, ಬೆಳಿಗ್ಗೆ 6ರಿಂದ

‘ವೈಲ್ಡ್ ವಂಡರ್–2021’ ವನ್ಯಜೀವಿ ಜಾಗೃತಿಗಾಗಿ ಅಂಚೆಚೀಟಿ ಪ್ರದರ್ಶನ: ಉದ್ಘಾಟನೆ–ಅರಣ್ಯ ಸಚಿವ ಉಮೇಶ್ ಕತ್ತಿ, ಸ್ಥಳ–8ನೇ ಮಹಡಿ, ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರ, ಬೆಳಿಗ್ಗೆ 10.30

ಸೆಂಟ್ರಲ್ ಮಾನಿಟರಿಂಗ್ ಟಿವಿ ಟು ಮಾನಿಟರ್ ಐಸಿಯು, ಪೋಸ್ಟ್ ಆಪರೇಟಿವ್ ಮತ್ತು ತುರ್ತು ವಾರ್ಡ್‌ಗಳ ಉದ್ಘಾಟನೆ: ಭಾಗವಹಿಸುವವರು–ಡಾ.ರಾಮಕೃಷ್ಣಪ್ಪ, ಡಾ.ಪೂರ್ಣಿಮಾ, ಡಾ.ಉಷಾ, ಸ್ಥಳ–ಜಯನಗರ ಸಾರ್ವಜನಿಕ ಆಸ್ಪತ್ರೆ, ತಿಲಕನಗರ, ಬೆಳಿಗ್ಗೆ 11.30

‘ಕೋವಿಗೊಂದು ಕನ್ನಡಕ’ ನಾಟಕ ಪ್ರದರ್ಶನ: ಆಯೋಜನೆ–ಬೆಂಗಳೂರು ಥಿಯೇಟರ್ ಕಲೆಕ್ಟಿವ್, ಸ್ಥಳ–ರಂಗಶಂಕರ, ಸಂಜೆ 7

ಮಕ್ಕಳ ಸಂಚಾರ ಉದ್ಯಾನ–ಗೃಹ ಸಚಿವ ಆರಗ ಜ್ಞಾನೇಂದ್ರ ಅವರೊಂದಿಗೆ ಮಕ್ಕಳ ಸಂವಾದ: ಆಯೋಜನೆ–ಬೆಂಗಳೂರು ಸಂಚಾರ ಪೊಲೀಸ್, ಸ್ಥಳ–ಎಸ್‌ಬಿಐ ವೃತ್ತ, ಸೇಂಟ್ ಮಾರ್ಕ್ಸ್ ರಸ್ತೆ, ಮಧ್ಯಾಹ್ನ 12

ಬಾಷ್ ಸಂಸ್ಥೆ ನವೀಕರಿಸಿರುವ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ (ಯುಪಿಎಚ್‌ಸಿ) ಉದ್ಘಾಟನೆ: ಅತಿಥಿಗಳು–ಆರ್‌ಬಿಐ ಅಧ್ಯಕ್ಷ ದತ್ತಾತ್ರಿ ಸಲಗಾಮೆ, ಪಾಲಿಕೆ ಮುಖ್ಯ ಆಯುಕ್ತ ಗೌರವ್ ಗುಪ್ತ, ವಿಶೇಷ ಆಯುಕ್ತ ಡಿ.ರಂದೀಪ್, ಸಂಗಮಿತ್ರ, ಸ್ಥಳ–ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಕೋರಮಂಗಲ, ಮಧ್ಯಾಹ್ನ 2

ಮಲ್ಲೇಶ್ವರ ದಸರಾ ಉತ್ಸವಕ್ಕೆ ಚಾಲನೆ: ಭಾಗವಹಿಸುವವರು–ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಸಂಸದರಾದ ಪಿ.ಸಿ.ಮೋಹನ್ ಹಾಗೂ ಡಿ.ವಿ.ಸದಾನಂದ ಗೌಡ, ಆಯೋಜನೆ–ಮಲ್ಲೇಶ್ವರ ಆರ್ಯವೈಶ್ಯ ಸಂಘ, ಸ್ಥಳ–ಕನ್ಯಕಾಪರಮೇಶ್ವರಿ ದೇವಸ್ಥಾನ, ಮಲ್ಲೇಶ್ವರ, ಸಂಜೆ 6

ಪವಿತ್ರ ವಸ್ತ್ರ ಅಭಿಯಾನ–ಕರಕುಶಲ ಮತ್ತು ಕೈಮಗ್ಗದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ: ಸ್ಥಳ–ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10ರಿಂದ ರಾತ್ರಿ 8ರವರೆಗೆ

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು ಮಂಗಳವಾರ ಬೆಂಗಳೂರಿನಲ್ಲಿ ಆಯೋಜಿಸಿದ್ದ ಉತ್ತಮ ವಾಣಿಜ್ಯ ಯೋಜನೆ ಸಿದ್ಧಪಡಿಸುವ ‘ಮಂಥನ್–2021’ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ಹುಬ್ಬಳ್ಳಿಯ ಕೆಎಲ್‌ಇ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವಿದ್ಯಾರ್ಥಿಗಳು ಮೊದಲ ಬಹುಮಾನ ತಮ್ಮದಾಗಿಸಿಕೊಂಡರು. ಎಫ್‌ಕೆಸಿಸಿಐ ಅಧ್ಯಕ್ಷ ಪೆರಿಕಲ್ ಎಂ. ಸುಂದರ್, ಕಾನೂನು ಸಚಿವ ಜೆ.ಸಿ ಮಾಧುಸ್ವಾಮಿ, ಸಂಗೀತ ನಿರ್ದೇಶಕ ಗುರುಕಿರಣ್, ಎಫ್‌ಕೆಸಿಸಿಐ ನಿಯೋಜಿತ ಅಧ್ಯಕ್ಷ ಐ.ಎಸ್. ಪ್ರಸಾದ್, ನಿಯೋಜಿತ ಉಪಾಧ್ಯಕ್ಷ ಬಿ.ವಿ. ಗೋಪಾಲ ರೆಡ್ಡಿ, ಮಂಥನ್–2021ರ ಅಧ್ಯಕ್ಷ ಕೆ.ಪಿ. ನಾಗೇಶ್ ಇದ್ದರು.

ಸಂಕ್ಷಿಪ್ತ ಸುದ್ದಿ

ಆರೋಗ್ಯ ತಪಾಸಣಾ ಶಿಬಿರ ಇಂದು

ಕೆಂಗೇರಿ: ಕೆಂಗೇರಿ ಉಪನಗರದ ಗಣೇಶ ಆಟದ ಮೈದಾನದಲ್ಲಿ ಆರೋಗ್ಯ ತಪಾಸಣಾ ಶಿಬಿರ ಇದೇ 7ರಂದು ಬೆಳಿಗ್ಗೆ 9ರಿಂದ ನಡೆಯಲಿದೆ.

ಸ್ವಾಭಿಮಾನಿ ಮಹಿಳಾ ಟ್ರಸ್ಟ್, ಸುಪ್ರ ಆಸ್ಪತ್ರೆ, ರೋಟರಿ, ವೀರಶೈವ ಮಹಾಸಭಾ ಹಾಗೂ ಬಿಜೆಪಿ ನಗರ ಮಂಡಳದ ಸಹಯೋಗದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಣ್ಣಿನ ಸಮಸ್ಯೆ ಹೊಂದಿರುವ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಉಚಿತವಾಗಿ ಕನ್ನಡಕ ವಿತರಣೆ ಮಾಡಲಾಗುವುದು ಎಂದು ಸ್ವಾಭಿಮಾನಿ ಮಹಿಳಾ ಟ್ರಸ್ಟ್ ಅಧ್ಯಕ್ಷೆ ಡಾ.ಅನುಪಮಾ ಪಂಚಾಕ್ಷರಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಸರ್ಕಾರಿ ಮಾದರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಟಾಟಾ ಟೆಕ್ನಾಲಜೀಸ್ ಸಹಭಾಗಿತ್ವದಲ್ಲಿ ಆರಂಭಿಸಿರುವ ನೂತನ ವೃತ್ತಿ ತರಬೇತಿ ಕೋರ್ಸ್‌ಗಳ ಪ್ರವೇಶಾತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಡ್ವಾನ್ಸ್‌ಡ್ ಮ್ಯಾನುಫ್ಯಾಕ್ಚರಿಂಗ್, ಬ್ಯಾಟರಿ ಎಲೆಕ್ಟ್ರಿಕ್ ವೆಹಿಕಲ್, ಇಂಡಸ್ಟ್ರಿಯಲ್ ರೊಬೊಟಿಕ್ಸ್, ಡಿಜಿಟಲ್ ಮ್ಯಾನುಫ್ಯಾಕ್ಚರಿಂಗ್ ಸೇರಿದಂತೆ ವಿವಿಧ ತರಬೇತಿಗಳನ್ನು ನೀಡಲಾಗುವುದು.

ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ಅಭ್ಯರ್ಥಿಗಳು ಇದೇ 21ರೊಳಗೆ ಅರ್ಜಿ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

ವಿಳಾಸ: ಸರ್ಕಾರಿ ಮಾದರಿ ಕೈಗಾರಿಕಾ ತರಬೇತಿ ಸಂಸ್ಥೆ, ಡೈರಿ ವೃತ್ತ, ಹೊಸೂರು ರಸ್ತೆ.

ತೀರ್ಥೋದ್ಭವ: ಭಕ್ತರಿಗೆ ಅವಕಾಶ

ಮಡಿಕೇರಿ: ಭಕ್ತರ ಒತ್ತಾಯಕ್ಕೆ ಮಣಿದ ಸರ್ಕಾರವು, ಕೋವಿಡ್ ಮಾರ್ಗಸೂಚಿ ಪಾಲಿಸಿಕೊಂಡು, ಅ.17ರಂದು ನಡೆಯುವ ಕಾವೇರಿ ತೀರ್ಥೋದ್ಭವದ ದರ್ಶನಕ್ಕೆ ಅವಕಾಶ ಕಲ್ಪಿಸಿದೆ.

9ರಂದು ‘ಎಸ್‌ಪಿಬಿ’ ಸಂಗೀತ ಕಾರ್ಯಕ್ರಮ

ಬೆಂಗಳೂರು: ಚೆನ್ನೈನ ಮೌನರಾಗಂ ಸಂಸ್ಥೆಯು ಗಾಯಕ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ಸ್ಮರಣಾರ್ಥ ‘ಸೆಲೆಬ್ರೇಟಿಂಗ್ ಎಸ್‌ಪಿಬಿಯಿಸಂ’ ಎಂಬ ವಿಶೇಷ ಸಂಗೀತ ಕಾರ್ಯಕ್ರಮವನ್ನು ಅ.9ರಂದು ಸಂಜೆ 6 ಗಂಟೆಗೆ ಬಸವನಗುಡಿಯ ಗಾಯನ ಸಮಾಜ ಸಭಾಂಗಣದಲ್ಲಿ ಆಯೋಜಿಸಿದೆ.

‘ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರಿಗೆ ಗೌರವ ಸೂಚಿಸುವ ಸಲುವಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ಪುತ್ರ ಎಸ್.ಪಿ.ಚರಣ್, ಗಾಯಕಿ ಪ್ರಿಯಾಂಕಾ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ. ಬುಕ್ ಮೈ ಶೋನಲ್ಲಿ ಕಾರ್ಯಕ್ರಮದ ಟಿಕೆಟ್‌ಗಳು ಲಭ್ಯ’ ಎಂದು ಪ್ರಕಟಣೆ ತಿಳಿಸಿದೆ.

ಕ್ಷಿಪಣಿಗಳ ಬಿಡಿ ಭಾಗ ತಯಾರಿಕೆಯ ಉದ್ಯಮಗಳ ಕನಸುಗಳು ಗರಿಗೆದರಿವೆ

ಬ್ರಹ್ಮೋಸ್‌ನತ್ತ ವಿದೇಶಿಯರ ಚಿತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವದೇಶಿ ನಿರ್ಮಿತ ಸೂಪರ್ ಸಾನಿಕ್ ಕ್ರೂಸ್ ಕ್ಷಿಪಣಿ 'ಬ್ರಹ್ಮೋಸ್' ಮತ್ತು ಸಬ್ ಸಾನಿಕ್ ಕ್ಷಿಪಣಿ 'ನಿರ್ಭಯ್' ಬಗ್ಗೆ ವಿಶ್ವದ ಹಲವು ದೇಶಗಳ ಆಸಕ್ತಿ ಹೆಚ್ಚುತ್ತಿರುವ ಬೆನ್ನಲ್ಲೇ, ಬೆಂಗಳೂರಿನ ಕ್ಷಿಪಣಿಗಳ ಬಿಡಿ ಭಾಗ ತಯಾರಿಕೆಯ ಉದ್ಯಮಗಳ ಕನಸುಗಳು ಗರಿಗೆದರಿವೆ.

ರಷ್ಯಾದ ಸಹಭಾಗಿತ್ವದಲ್ಲಿ ತಯಾರಿಸಿದ ಬ್ರಹ್ಮೋಸ್ ಕ್ಷಿಪಣಿಗೆ ಬ್ರೆಜಿಲ್, ಚಿಲಿ, ಫಿಲಿಫಿನ್ಸ್, ಥೈಲ್ಯಾಂಡ್, ಈಜಿಪ್ಟ್, ಸಿಂಗಪುರ, ದಕ್ಷಿಣ ಕೊರಿಯಾ, ಅಲ್ಜೀರಿಯಾ, ಗ್ರೀಸ್, ದಕ್ಷಿಣ ಆಫ್ರಿಕಾ, ಮಲೇಷ್ಯಾ ಮತ್ತು ಬಲ್ಗೇರಿಯಾ ಆಸಕ್ತಿ ತೋರಿವೆ. ಇನ್ನು ಕೆಲವೇ ತಿಂಗಳಲ್ಲಿ ಕೆಲವು ದೇಶಗಳ ಜತೆ ಬ್ರಹ್ಮೋಸ್ ಏರೋ ಸ್ಪೇಸ್ ಒಪ್ಪಂದಕ್ಕೆ ಬರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಬ್ರಹ್ಮೋಸ್ ಕ್ಷಿಪಣಿ ಶಬ್ದಕ್ಕಿಂತ ಮೂರು ಪಟ್ಟು ವೇಗದಲ್ಲಿ ಚಲಿಸುತ್ತದೆ.

ಬ್ರಹ್ಮೋಸ್

ಅಂದರೆ ಪ್ರತಿ ಗಂಟೆಗೆ ಸುಮಾರು 3,450 ಕಿ.ಮೀ ವೇಗದಲ್ಲಿ ಸಾಗಿ ಗುರಿಯನ್ನು ನಾಶಪಡಿಸುವ ಸಾಮರ್ಥ್ಯ ಹೊಂದಿದೆ. ಜಗತ್ತಿನ ಅತ್ಯಂತ ವೇಗದ ಕ್ಷಿಪಣಿ ಎಂಬ ಹೆಗ್ಗಳಿಕೆಯನ್ನೂ ಪಡೆದಿದೆ. ಈ ಕಾರಣಕ್ಕಾಗಿ ಹಲವು ದೇಶಗಳು ಆಸಕ್ತಿ ತಳೆದಿವೆ.

ಕೋವಿಡ್‌ನಿಂದ ರಕ್ಷಣಾ ಉಪಕರಣಗಳು ಮತ್ತು ಬಿಡಿಭಾಗಗಳ ತಯಾರಿಕಾ ಘಟಕಗಳು ಹಿನ್ನಡೆ ಅನುಭವಿಸಿರುವ ಬೆನ್ನಲ್ಲೇ ಹೊಸ ಬೆಳವಣಿಗೆ ಈ ವಲಯದಲ್ಲಿ ಹರ್ಷವನ್ನು ಮೂಡಿಸಿದೆ. ಇವುಗಳನ್ನು ನೆಚ್ಚಿಕೊಂಡಿರುವ ಸಣ್ಣ– ಪುಟ್ಟ ಉದ್ಯಮಗಳು ಪುಟಿದೇಳುವ ಸಾಧ್ಯತೆ ಇದೆ ಎನ್ನುತ್ತಾರೆ ತಜ್ಞರು.

'ನಿರ್ಭಯ್' ಮತ್ತೊಂದು ಸೇರ್ಪಡೆ: ಸಮೀಪದ ದೂರವನ್ನು ಅತಿವೇಗದಲ್ಲಿ ಕ್ರಮಿಸಿ ಗುರಿಯನ್ನು ನಾಶ ಪಡಿಸಬಲ್ಲ ಸಬ್‌ಸಾನಿಕ್ ಕ್ರೂಸ್ ಕ್ಷಿಪಣಿ 'ನಿರ್ಭಯ್' ಕೂಡಾ ಜಾಗತಿಕವಾಗಿ ಗಮನ ಸೆಳೆದಿದೆ. ಕಮಾಂಡ್, ಕಂಟ್ರೋಲ್ ಕಟ್ಟಡಗಳು, ಹೆಡ್‌ಕ್ವಾರ್ಟರ್ಸ್‌ಗಳು, ಶತ್ರುದೇಶದ ರಕ್ಷಣಾ ಪಡೆಗಳು, ಭಯೋತ್ಪಾದಕ ಶಿಬಿರಗಳನ್ನು ನಾಶಪಡಿಸಬಲ್ಲದು.

ಈ ಕ್ಷಿಪಣಿ ಗರಿಷ್ಠ 15 ಕಿ.ಮೀ ಎತ್ತರಕ್ಕೆ ಏರಬಲ್ಲದು ಮತ್ತು ನೆಲಮಟ್ಟದಿಂದ ಕೇವಲ 4 ಮೀಟರ್‌ಗಳಷ್ಟು ಎತ್ತರದಲ್ಲೂ ಹಾರಬಲ್ಲದು. ಸುಮಾರು 200 ರಿಂದ 300 ಕೆ.ಜಿ ತೂಕದ ಸಿಡಿತಲೆ ಸಾಗಿಸುವ ಸಾಮರ್ಥ್ಯ ಹೊಂದಿದೆ. ಅದನ್ನು 400 ಕಿ.ಮೀ ವಿಸ್ತರಿಸುವ ಪ್ರಯತ್ನ ಸಾಗಿದೆ. ಇವು ಪರಮಾಣು ಸಿಡಿತಲೆಗಳನ್ನೂ ಸಾಗಿಸಬಲ್ಲವು. ಇದರ ವಿಶೇಷ ಎಂದರೆ, ರಾಕೆಟ್‌ನಂತೆ ಚಿಮ್ಮಬಲ್ಲದು, ವಿಮಾನದಂತೆ ಬದಲಾಗಿ, ಗುರಿಯತ್ತ ಚಲಿಸುತ್ತದೆ.

ಸ್ಥಳೀಯ ಉದ್ಯಮಗಳಿಗೆ ಅನುಕೂಲ

ಅಗ್ನಿ, ಪೃಥ್ವಿ, ಧನುಷ್ ಸೇರಿದಂತೆ ವಿವಿಧ ರೀತಿಯ ಕ್ಷಿಪಣಿಗಳಿಗೆ ಬಿಡಿಭಾಗಗಳು ಬಹುತೇಕ ಬೆಂಗಳೂರಿನಲ್ಲೇ ತಯಾರಾಗುತ್ತವೆ. ಆ ಕ್ಷಿಪಣಿಗಳನ್ನು ಭಾರತದ ಸೇನೆ ತನ್ನ ಬತ್ತಳಿಕೆಗೆ ಸೇರಿಸಿಕೊಂಡಿದೆ. ಆದರೆ, ಬ್ರಹ್ಮೋಸ್‌ಗೆ ಜಾಗತಿಕ ಬೇಡಿಕೆ ಬಂದಿರುವುದರಿಂದ ಬಿಡಿ ಭಾಗಗಳು ಮತ್ತು ಇತರ ಉಪಕರಣಗಳ ತಯಾರಿಕರಿಗೆ ಹೆಚ್ಚಿನ ಕೆಲಸ ಸಿಗಲಿದೆ ಎನ್ನುತ್ತಾರೆ ಎಂಜಿನಿಯರಿಂಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಗಿರೀಶ್ ಲಿಂಗಣ್ಣ.

ಲಿಂಗಣ್ಣ

ರೋಗ ನಿರ್ಣಯಕ್ಕೆ ತೀವ್ರತರ ಆರೈಕೆ ಉತ್ಕೃಷ್ಟತಾ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪೋಲೊ ಆಸ್ಪತ್ರೆಯು ತೀವ್ರತರ ಆರೈಕೆಯ ಉತ್ಕೃಷ್ಟತಾ ಕೇಂದ್ರವನ್ನು ಪ್ರಾರಂಭಿಸಿದ್ದು, 'ರೋಗಗಳನ್ನು ನಿರ್ಣಯಿಸಿ, ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸಲು ಈ ಕೇಂದ್ರ ಸಹಕಾರಿ' ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಆನ್‌ಲೈನ್ ವೇದಿಕೆಯಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಆಸ್ಪತ್ರೆಗಳ ಸಮೂಹದ ಉಪಾಧ್ಯಕ್ಷೆ ಪ್ರೀತಾ ರೆಡ್ಡಿ, 'ಕೋವಿಡ್ ಕಾಣಿಸಿಕೊಂಡ ಬಳಿಕ ವೈದ್ಯಕೀಯ ಕ್ಷೇತ್ರದಲ್ಲಿನ ಸವಾಲುಗಳು ಅನಾವರಣಗೊಂಡಿವೆ. ದಕ್ಷಿಣ ಕೊರಿಯಾ, ಸಿಂಗಪುರದಂತಹ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಆಸ್ಪತ್ರೆಗಳಲ್ಲಿ 10ರಿಂದ 11 ಹಾಸಿಗೆಗಳು ಇದ್ದರೆ, ನಮ್ಮ ದೇಶದಲ್ಲಿ ಈ ಸಂಖ್ಯೆ 2.3ರಷ್ಟು ಮಾತ್ರ ಇದೆ. ತೀವ್ರತರ ಆರೈಕೆಗೆ ಆದ್ಯತೆ ನೀಡಿ, ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಬೇಕು' ಎಂದು ತಿಳಿಸಿದರು.

ಆಸ್ಪತ್ರೆಗಳ ಸಮೂಹದ ವ್ಯವಸ್ಥಾಪಕ ನಿರ್ದೇಶಕಿ ಸುನೀತಾ ರೆಡ್ಡಿ, 'ತರಬೇತಿ ಪಡೆದ ಸಿಬ್ಬಂದಿ ಮತ್ತು ಸಲಕರಣೆಗಳ ಕೊರತೆಯಿಂದ ದೇಶದಲ್ಲಿ ನಿರ್ಣಾಯಕ ಆರೈಕೆಯು ಹೆಚ್ಚಿನ ಸವಾಲುಗಳನ್ನು ಎದುರಿಸುತ್ತಿದೆ' ಎಂದು ಹೇಳಿದರು.

ಎಲೆ ಚುಕ್ಕೆ ರೋಗ: ಔಷಧಿಗೆ ಸಹಾಯಧನ

ಬೆಂಗಳೂರು: ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅಡಿಕೆ ಬೆಳೆಯನ್ನು ಬಾಧಿಸುತ್ತಿರುವ ಎಲೆ ಚುಕ್ಕೆ ರೋಗ ನಿಯಂತ್ರಣ ಯೋಜನೆಯಡಿ ಔಷಧ ಖರೀದಿಗೆ ತೋಟಗಾರಿಕಾ ಇಲಾಖೆ ಸಹಾಯಧನ ಪ್ರಕಟಿಸಿದೆ.

ಎಲೆ ಚುಕ್ಕೆ ರೋಗ ಅಡಿಕೆ ತೋಟವನ್ನೇ ಹಾಳುಗೆಡುವಿ, ರೈತರನ್ನು ಸಂಕಷ್ಟಕ್ಕೆ ದೂಡಿರುವ ಬಗ್ಗೆ 'ಪ್ರಜಾವಾಣಿ' ವಿಶೇಷ ವರದಿ ಪ್ರಕಟಿಸಿ, ಗಮನ ಸೆಳೆದಿತ್ತು. ಈ ಬೆನ್ನಲ್ಲೇ, ಸರ್ಕಾರ ಸಹಾಯಧನ ಪ್ರಕಟಿಸಿದೆ.

ಈ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವರ್ಗದ ರೈತರಿಗೆ ಘಟಕದ ವೆಚ್ಚದ ಶೇ 90 ಮತ್ತು ಸಾಮಾನ್ಯ ವರ್ಗದ ರೈತರಿಗೆ ಘಟಕದ ವೆಚ್ಚದ ಶೇ 75 ರಂತೆ ಸಹಾಯಧನ ನೀಡಲಾಗುವುದು ಎಂದು ಜಂಟಿ ನಿರ್ದೇಶಕರು ಆದೇಶದಲ್ಲಿ ತಿಳಿಸಿದ್ದಾರೆ.

ಈ ರೋಗವು 6,800 ಹೆಕ್ಟೇರ್ ಪ್ರದೇಶದಲ್ಲಿರುವ ಅಡಿಕೆ ತೋಟಗಳನ್ನು ಬಾಧಿಸುತ್ತಿದ್ದು, ರೋಗದ ಹತೋಟಿಗೆ ₹2.75 ಕೋಟಿ ಪ್ರಸ್ತಾವನೆ ಸಿದ್ಧಪಡಿಸಿ ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಅಡಿಕೆ ತೋಟಗಳನ್ನು ಬಾಧಿಸುತ್ತಿರುವ ಎಲೆ ಚುಕ್ಕೆ ರೋಗವನ್ನು ನಿಯಂತ್ರಿಸಲು ಸರ್ಕಾರ ಔಷಧಿ ಖರೀದಿಗೆ ಸಹಾಯಧನ ಘೋಷಿಸಿರುವುದನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ಸ್ವಾಗತಿಸಿದ್ದಾರೆ.

ನಿಧನ ವಾರ್ತೆ

'ರಾವಣ' ಪಾತ್ರಧಾರಿ ಅರವಿಂದ ತ್ರಿವೇದಿ

ಮುಂಬೈ: ರಮಾನಂದ ಸಾಗರ್ ಅವರ ಜನಪ್ರಿಯ 'ರಾಮಾಯಣ' ಧಾರಾವಾಹಿಯಲ್ಲಿ ರಾವಣ ಪಾತ್ರ ನಿರ್ವಹಿಸಿದ್ದ ನಟ ಅರವಿಂದ ತ್ರಿವೇದಿ (82) ಮಂಗಳವಾರ ರಾತ್ರಿ ನಿಧನರಾದರು.

ಮುಂಬೈನ ಕಾಂದಿವಲಿಯ ನಿವಾಸಿಯಾಗಿದ್ದ ಅವರು ವಯೋಸಹಜ ಸಮಸ್ಯೆಗಳಿಂದ ಬಳಲುತ್ತಿದ್ದರು. ಮುಂಬೈನ ದಹನುಕರವಾಡಿಯಲ್ಲಿ ಬುಧವಾರ ಅಂತ್ಯಸಂಸ್ಕಾರ ನೆರವೇರಿತು.

ಗುಜರಾತಿ ಮತ್ತು ಹಿಂದಿ ಭಾಷೆ ಸೇರಿ ಸುಮಾರು 300 ಸಿನಿಮಾಗಳಲ್ಲಿ ಅವರು ನಟಿಸಿದ್ದಾರೆ.

'ರಾಮಾಯಣ' ಧಾರಾವಾಹಿ ಮಾತ್ರವಲ್ಲದೇ, 'ವಿಕ್ರಮ್ ಔರ್ ಬೇತಾಳ್' ಮತ್ತು 'ವಿಶ್ವಾಮಿತ್ರ' ಧಾರಾವಾಹಿಯಲ್ಲೂ ಅವರು ನಟಿಸಿದ್ದರು.

ತ್ರಿವೇದಿ ಅವರು ದಾದಾಜಿಯಾಗಿ ನಟಿಸಿದ್ದ ಗುಜರಾತಿ ಭಾಷೆಯ 'ದೇಶ್ ರೇ ಜೋಯಾ ದಾದಾ ಪರದೇಶ್ ಜೋಯಾ' ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ದಾಖಲೆ ಸೃಷ್ಟಿಸಿತ್ತು. ಅವರು ನೇತ್ರದಾನದ ಕುರಿತು ಗುಜರಾತಿಯಲ್ಲಿ ಒಂದು ಟೆಲಿಫಿಲಂ ನಿರ್ದೇಶಿಸಿದ್ದರು.

ಅರವಿಂದ ತ್ರಿವೇದಿ ಅವರು 1991ರಿಂದ 1996ರ ವರೆಗೂ ಸಂಸತ್ ಸದಸ್ಯರಾಗಿದ್ದರು.

ಗುಜರಾತ್‌ನ ಸಾಬರ್‌ಕಾಂತಾ ಜಿಲ್ಲೆಯಿಂದ ಅವರು ಆಯ್ಕೆಯಾಗಿದ್ದರು.

ವಿಜಯ್ ಆನಂದ್ ಅವರ ನಂತರ 2002ರಿಂದ 2003ರವರೆಗೂ ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿಯ (ಸಿಬಿಎಫ್‌ಸಿ) ಮುಖ್ಯಸ್ಥರಾಗಿದ್ದರು.

ಖ್ಯಾತ ವ್ಯಂಗ್ಯಚಿತ್ರಕಾರ ಯೇಸುದಾಸನ್

ಕೊಚ್ಚಿ (ಪಿಟಿಐ): ಕೋವಿಡ್ ನಂತರದ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ ಕೇರಳದ ಖ್ಯಾತ ವ್ಯಂಗ್ಯಚಿತ್ರಕಾರ ಸಿ.ಜೆ.ಯೇಸುದಾಸನ್(83) ಅವರು ಬುಧವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು ಎಂದು ಎರ್ನಾಕುಲಂ ಪ್ರೆಸ್ ಕ್ಲಬ್ ಅಧಿಕಾರಿಗಳು ತಿಳಿಸಿದ್ದಾರೆ.

ತಮ್ಮ ರಾಜಕೀಯ ವ್ಯಂಗ್ಯ ಚಿತ್ರಗಳಿಂದ ಜನಪ್ರಿಯರಾಗಿದ್ದ ಯೇಸುದಾಸನ್ ಅವರು, ಕೋವಿಡ್ ನಂತರ ಉಂಟಾದ ಆರೋಗ್ಯ ಸಮಸ್ಯೆಗಳಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದರು.

ಚಿಕಿತ್ಸೆಗೆ ಸ್ಪಂದಿಸದೇ ಮುಂಜಾನೆ 3.45 ಕ್ಕೆ ಅವರು ಮೃತಪಟ್ಟರು. ಅವರಿಗೆ ಪತ್ನಿ ಮತ್ತು ಮೂವರು ಮಕ್ಕಳು ಇದ್ದಾರೆ.

ಅಲಪ್ಪುಳ ಜಿಲ್ಲೆಯ ಭರ್ಣಿಕ್ಕಾವುನಲ್ಲಿ 1938ರಲ್ಲಿ ಜನಿಸಿದ ಯೇಸುದಾಸನ್, ದೀರ್ಘಕಾಲ 'ಮಲಯಾಳಂ ಮನೋರಮಾ' ಪತ್ರಿಕೆಯಲ್ಲಿ ವ್ಯಂಗ್ಯಚಿತ್ರಕಾರರಾಗಿ ಕೆಲಸ ಮಾಡಿದ್ದರು.

"TreeHouse", a leading brand of Pre-primary schools invites you to be our
FRANCHISEE PARTNER.
Let's create our **Growth & Success Story.**

The TreeHouse Playgroup & Nursery 'From roots to wings' Nanhe Kadam, Badi Udaan.™

Entrepreneurship - A Lifetime Flavour

A once in a life time opportunity knocks at your door. The renowned playgroup & nursery institute, "TreeHouse", is now looking to open franchisee centres at select locations in **India**. Available at amazingly attractive one time fees. The "TreeHouse" brand leverage will ensure quality curriculum and delivery thereof.

Benefits of owning a TreeHouse Franchisee:
- A tried and tested successful business.
- Being associated with a reputed educational institute.
- Hand holding provided for success.
- Excellent curriculum and Teacher Training.

Who can apply:
If you have the drive to run your own business all you need is around 1000 sq.ft. (approx 100 sq.mtr.) with play area on ground floor for your centre.

07777051309 treehousechain@gmail.com

Reliance Growth is Life

Reliance Jewels
BE THE MOMENT

SETAT21BA

ಬನಾರಸ್‌ನ ದಿವ್ಯತೆಯಿಂದ
ಸ್ಫೂರ್ತಿ ಪಡೆದ ಕಾಸ್ಯಮ್
ಆಭರಣ ಸಂಗ್ರಹಣೆ

ಹಬ್ಬದ ಸ್ಪೆಶಲ್ ಆಫರ್

30% ವರೆಗೆ ಕಡಿತ* ಚಿನ್ನದ ಆಭರಣಗಳ ತಯಾರಿಕೆಯ ಚಾರ್ಜುಗಳ ಮೇಲೆ ಮತ್ತು ವಜ್ರದ ಆಭರಣಗಳ ಬಿಲ್ಲಿನ ಮೌಲ್ಯದ ಮೇಲೆ

ಅಕ್ಟೋಬರ್ 01 ರಿಂದ ನವೆಂಬರ್ 07ರ ವರೆಗೆ | *ಶರತ್ತುಗಳು ಅನ್ವಯಿಸುತ್ತವೆ

KAASYAM
DIVE INTO DIVINITY

ಸಂಗ್ರಹಣೆಯನ್ನು ಶೋಧಿಸಿ ನೋಡಲು ಸ್ಕ್ಯಾನ್ ಮಾಡಿರಿ ಮತ್ತು ವರ್ಚುಯಲ್ ಆಗಿ ಬಳಸಿ ನೋಡಿರಿ.

ಈಗ ಇಲ್ಲಿಯೂ ಲಭ್ಯ: www.reliancejewels.com

ಬೆಂಗಳೂರು: ಬನಶಂಕರಿ, ನಂ. 296, ರಾಮ್ ಟವರ್, 100 ಅಡಿ ರಿಂಗ್ ರೋಡ್, 3ನೇ ಸ್ಟೇಜ್, 4ನೇ ಫೇಸ್. ಫೋನ್ : 080-26793505/26793506 | **ಜಯನಗರ,** ನಂ. 18/35, 4ನೇ ಬ್ಲಾಕ್, 11ನೇ ಮೇನ್. ಫೋನ್: 080-41681803/08 | **ಕೋರಮಂಗಲ,** ನಂ. 612, 80 ಅಡಿ ರಸ್ತೆ, 4ನೇ ಬ್ಲಾಕ್, ಫೋನ್: 080-41244550 | **ಮಲ್ಲೇಶ್ವರಮ್,** ಮೊದಲ ಮಹಡಿ, ಮಂತ್ರಿ ಸ್ಕ್ವೇರ್ ಮಾಲ್, ಸಂಪಿಗೆ ರಸ್ತೆ. ಫೋನ್ : 080-22667110 | **ಮಾರತಹಳ್ಳಿ,** ಚಾಯ್ ಪಾಯಿಂಟ್ ಪಕ್ಕ, ಔಟರ್ ರಿಂಗ್ ರೋಡ್. ಫೋನ್: 080-42072752

ಕಾರ್ಪೊರೇಟ್/ಸಾಂಸ್ಥಿಕ ವಿಚಾರಣೆಗಳಿಗೆ, ಸಂಪರ್ಕಿಸಿರಿ: 9844245664 | ನಮ್ಮನ್ನು ಇಲ್ಲಿ ಫಾಲೋ ಮಾಡಿರಿ:

ಎಲ್ಲಾ ಮಳಿಗೆಗಳೂ ಸರ್ಕಾರದ ಮಾರ್ಗಸೂಚಿಗಳ ಪ್ರಕಾರವೇ ಕಾರ್ಯಾಚರಣೆ ನಡೆಸುತ್ತಿವೆ

ನಟಿ ಸಂಜನಾ ಗಲಾಟೆ: ಕ್ಯಾಬ್ ಚಾಲಕನಿಂದ ದೂರು

ಬೆಂಗಳೂರು: 'ನಟಿ ಸಂಜನಾ ಗಲ್ರಾನಿ ಅವರನ್ನು ಅಪಹರಿಸಿಲ್ಲ. ಅವರ ಜೊತೆ ಅಸಭ್ಯವಾಗಿಯೂ ವರ್ತಿಸಿಲ್ಲ. ಎ.ಸಿ ಹಾಕುವ ವಿಚಾರಕ್ಕೆ ಅವರೇ ಜಗಳ ತೆಗೆದಿದ್ದರು. ನನ್ನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು' ಎಂದು ಓಲಾ ಕ್ಯಾಬ್ ಚಾಲಕ ಸುಸೈಮಣಿ ಆರೋಪಿಸಿದ್ದಾರೆ. ಈ ಸಂಬಂಧ ರಾಜರಾಜೇಶ್ವರಿ ನಗರ ಠಾಣೆಯಲ್ಲಿ ಬುಧವಾರ ದೂರು ದಾಖಲಿಸಿದ್ದಾರೆ.

'ಕೋವಿಡ್‌ನಿಂದಾಗಿ ಒಂದೂವರೆ ವರ್ಷದಿಂದ ಕ್ಯಾಬ್‌ನಲ್ಲಿ ಎ.ಸಿ ಹಾಕಿರಲಿಲ್ಲ. ಕ್ಯಾಬ್ ಹತ್ತಿದ ಕೂಡಲೇ ಸಂಜನಾ ಅವರು ಎ.ಸಿ ಹಾಕುವಂತೆ ದಬಾಯಿಸಿದರು. ಹೀಗಾಗಿ ಎ.ಸಿ ಆನ್ ಮಾಡಿ ಒಂದು ಪಾಯಿಂಟ್‌ಗೆ ಇಟ್ಟಿದ್ದೆ. ಬಳಿಕ ಅವರೇ ಎ.ಸಿ ಹೆಚ್ಚಿಸಿದರು. ಕ್ಯಾಬ್ ಹತ್ತಿದಾಗ ಮುಖಗವಸು ಧರಿಸಿರಲಿಲ್ಲ. ಮೊದಲು ಮುಖಗವಸು ಧರಿಸಿ, ಬಳಿಕ ಎ.ಸಿ ಹಾಕುತ್ತೇನೆ ಎಂದು ಹೇಳಿದೆ. ಆ ವಿಚಾರವಾಗಿ ಮತ್ತೆ ವಾಗ್ವಾದ ನಡೆಸಿದರು. 100 ಮೀಟರ್ ದೂರ ಹೋದ ಬಳಿಕ ಮುಖಗವಸು ಧರಿಸಿದರು' ಎಂದು ಚಾಲಕ ದೂರಿದ್ದಾರೆ.

'ಆರ್.ಆರ್.ನಗರ ತಲುಪಿದ ಕೂಡಲೇ ಬೇರೆ ಮಾರ್ಗದಲ್ಲಿ ಸಾಗುವಂತೆ ಸೂಚಿಸಿದರು. ಆ್ಯಪ್‌ನಲ್ಲಿ ನಿಗದಿಪಡಿಸಿದ ಮಾರ್ಗದಲ್ಲೇ ಹೋಗಬೇಕೆಂದು ನಮಗೆ ಹೇಳಿದ್ದಾರೆ. ಬೇಕಾದರೆ ನೀವೇ ಆ್ಯಪ್‌ನಲ್ಲಿ ಬದಲಾವಣೆ ಮಾಡಿ ಎಂದು ತಿಳಿಸಿದೆ. ಅದಕ್ಕೆ ನನ್ನ ಮೇಲೆ ರೇಗಾಡಿದರು. ಪೊಲೀಸ್ ಠಾಣೆಗೆ ಹೋಗಿ ಅಪಹರಣ ಮಾಡಲು ಯತ್ನಿಸಿದ್ದಾಗಿ ದೂರು ನೀಡುತ್ತೇನೆ ಎಂದು ಹೆದರಿಸಿದರು. ಈ ವಿಚಾರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಬರೆದು ನನ್ನ ಗೌರವಕ್ಕೆ ಚ್ಯುತಿ ಉಂಟುಮಾಡಿದ್ದಾರೆ' ಎಂದೂ ತಿಳಿಸಿದ್ದಾರೆ.

'ರಾಜರಾಜೇಶ್ವರಿ ನಗರದಲ್ಲಿ ಚಿತ್ರೀಕರಣವಿತ್ತು. ಇಂದಿರಾನಗರದಿಂದ ಅಲ್ಲಿಗೆ ಹೋಗಲು ಕ್ಯಾಬ್ ಕಾಯ್ದಿರಿಸಿದ್ದೆ. ನಾನು ಸೂಚಿಸಿದ ಸ್ಥಳಕ್ಕೆ ಕರೆದುಕೊಂಡು ಹೋಗುವ ಬದಲು ಆತ ಕೆಂಗೇರಿಯತ್ತ ಹೊರಟಿದ್ದ. ಹೀಗಾಗಿ ಭಯವಾಯಿತು. ನಾನು ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ. ಚಾಲಕನೇ ನನ್ನ ಜೊತೆ ಅಸಭ್ಯವಾಗಿ ವರ್ತಿಸಿದರು' ಎಂದು ಸಂಜನಾ ಹೇಳಿದ್ದಾರೆ.

ರಾಷ್ಟ್ರೀಯ ಭದ್ರತೆಗೆ ಅಪಾಯ– ಹೈಕೋರ್ಟ್ ಆತಂಕ

ಆಧಾರ್ ಅಕ್ರಮ: ತನಿಖೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಧಾರ್ ಗುರುತಿನ ಚೀಟಿ ನೋಂದಣಿ ಪ್ರಕ್ರಿಯೆಯಲ್ಲಿ ನಡೆಯುವ ಅಕ್ರಮಗಳು ರಾಷ್ಟ್ರೀಯ ಭದ್ರತೆಗೆ ಒದಗುವ ಅಪಾಯ' ಎಂದು ಆತಂಕ ವ್ಯಕ್ತಪಡಿಸಿರುವ ಹೈಕೋರ್ಟ್, 'ಇಂತಹ ಕೃತ್ಯಗಳ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಚ್ಚಿನ ಜಾಗ್ರತೆ ವಹಿಸಬೇಕು' ಎಂದು ಎಚ್ಚರಿಸಿದೆ.

ಆಧಾರ್ ಕಿಟ್‌ಗಳನ್ನು ಅಕ್ರಮವಾಗಿ ಮಾರಾಟ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಜೆ.ಪಿ. ನಗರದ ಮೆಸರ್ಸ್ 'ಎಡುರೇಸ್' ಕಂಪನಿ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಕುರಿತ ಸಮಗ್ರ ತನಿಖೆಗೆ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಅಸ್ತು ಎಂದಿದೆ. ಈ ಸಂಬಂಧ 2017ರಲ್ಲಿ ತನಿಖೆಗೆ ನೀಡಲಾಗಿದ್ದ ಮಧ್ಯಂತರ ತಡೆ ತೆರವುಗೊಳಿಸಿದೆ.

'ಕಿಟ್‌ಗಳಿಗೆ ₹ 40 ಸಾವಿರದಿಂದ ₹ 2 ಲಕ್ಷದವರೆಗೆ ಪಡೆಯಲಾಗಿದೆ ಮತ್ತು

ಪ್ರತಿ ಆಧಾರ್ ಕಾರ್ಡ್‌ಗೆ ₹100ರಿಂದ ₹ 200 ಪಡೆಯಲಾಗಿದೆ ಎಂಬ ಆರೋಪವಿದೆ. ಆಧಾರ್ ಪ್ರಾಧಿಕಾರದ ಅಧಿಕಾರಿಗಳೇ ಈ ಬಗ್ಗೆ ಪರಿಶೀಲನೆ ನಡೆಸಿ, ದೂರು ದಾಖಲಿಸಿದ್ದಾರೆ. ಆದ್ದರಿಂದ, ಅರ್ಜಿದಾರರು ಈ ಪ್ರಕರಣದಲ್ಲಿ ನಿರಪರಾಧಿ ಎಂದು ಸಾಬೀತುಪಡಿಸಲು ವಿಚಾರಣಾ ನ್ಯಾಯಾಲಯದ ವಿಚಾರಣೆ ಎದುರಿಸಲೇಬೇಕಿದೆ' ಎಂದು ಆದೇಶಿಸಿದೆ.

ಕೇಂದ್ರ ಸರ್ಕಾರ ಪರ ವಾದ ಮಂಡಿಸಿದ್ದ ಸಹಾಯಕ ಸಾಲಿಸಿಟರ್ ಜನರಲ್ ಶಾಂತಿಭೂಷಣ್ ಮತ್ತು ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಜಿ.ನಮಿತಾ ಕಲ್ಲೇಶ್, ಈ ಪ್ರಕರಣದಲ್ಲಿ ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರದ (ಯುಐಡಿಎಐ) ಅಧಿಕಾರಿಗಳು 'ನಮ್ಮ ಕೇಂದ್ರ'ಕ್ಕೆ ನಾಗರಿಕರ ಸೋಗಿನಲ್ಲಿ ಭೇಟಿ ನೀಡಿ, ಪರಿಶೀಲಿಸಿದಾಗ ಅಲ್ಲಿ ಅಕ್ರಮ ಚಟುವಟಿಕೆ ನಡೆಯುತ್ತಿದ್ದುದು ಬೆಳಕಿಗೆ ಬಂದಿದೆ ಎಂಬ ಅಂಶವನ್ನು ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಟ್ಟಿದ್ದರು.

'ಈ ಪ್ರಕರಣದಲ್ಲಿ ನೆರೆ ರಾಷ್ಟ್ರಗಳ ಪ್ರಜೆಗಳಿಗೂ ಮನಬಂದಂತೆ ಆಧಾರ್ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಆದ್ದರಿಂದ, ಅರ್ಜಿದಾರರ ವಿರುದ್ಧದ ಆರೋಪಗಳ ಕುರಿತು ಸಮಗ್ರ ವಿಚಾರಣೆ ನಡೆಯಬೇಕಿದ್ದು, ಎಫ್‌ಐಆರ್ ರದ್ದುಪಡಿಸದೆ ತನಿಖೆ ನಡೆಯಲು ಆದೇಶಿಸಬೇಕು' ಎಂದು ಕೋರಿದ್ದರು.

ಪ್ರಕರಣವೇನು?: ಯುಐಡಿಎಐ ಜೊತೆ ಮುಂಬೈ ಮೂಲದ ಯುಟಿಲಿಟಿ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್ ಕರ್ನಾಟಕದಲ್ಲಿ ಅಧಾರ್ ನೋಂದಣಿ ಪ್ರಕ್ರಿಯೆ ಕೈಗೊಳ್ಳಲು ಅನುಮತಿ ಪಡೆದಿತ್ತು.

ಅಂತೆಯೇ ಯುಟಿಲಿಟಿ ಸಂಸ್ಥೆಯು, ಸಿಬ್ಬಂದಿಯನ್ನು ಪಡೆಯುವ ನಿಟ್ಟಿನಲ್ಲಿ ಎಡುರೇಸ್ ಕಂಪನಿಗೆ 2015ರ ಏಪ್ರಿಲ್ 15ರಂದು ಉಪ ಗುತ್ತಿಗೆ ನೀಡಿತ್ತು. ಇದರ ಅನುಸಾರ ಎಡುರೇಸ್ ಜೆ.ಪಿ. ನಗರದಲ್ಲಿ 'ನಮ್ಮ ಕೇಂದ್ರ' ಹೆಸರಿನಲ್ಲಿ ಕೇಂದ್ರವೊಂದನ್ನು ಆರಂಭಿಸಿ ಅಲ್ಲಿ ಅಕ್ರಮವಾಗಿ ಆಧಾರ್ ಕಿಟ್‌ಗಳನ್ನು ಹೊರ ರಾಜ್ಯಗಳಿಗೆ ಮಾರಾಟ ಮಾಡಲಾಗುತ್ತಿದೆ ಎಂಬ ಆರೋಪ ಕೇಳಿ ಬಂದಿತ್ತು.

ಈ ಬಗ್ಗೆ ಪರಿಶೀಲನೆ ನಡೆಸಿದ್ದ ಯುಐಡಿಎಐ ಅಧಿಕಾರಿಗಳು 2017ರ ಏಪ್ರಿಲ್ 6ರಂದು ಸ್ಥಳೀಯ ಪೊಲೀಸರಿಗೆ ದೂರು ನೀಡಿದ್ದರು.

ಎಡುರೇಸ್ ಕಂಪನಿ ಸಿಇಒ ಆರ್.ಪಿ.ನರೇಶ್ ಕುಮಾರ್ ಹಾಗೂ ಮುಂಬೈನ 'ಯುಟಿಲಿಟಿ' ಸಂಸ್ಥೆಯ ಪ್ರತಿನಿಧಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 465 (ಫೋರ್ಜರಿ), 468 (ವಂಚನೆ ಉದ್ದೇಶದಿಂದ ಫೋರ್ಜರಿ), 471 (ವಂಚನೆಗಾಗಿ ದಾಖಲೆಗಳ ಬಳಕೆ), 420 (ವಂಚನೆ), 120–ಬಿ (ಅಪರಾಧಿಕ ಒಳಸಂಚು) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಸುದ್ದಿ 2 ನಿಮಿಷ

ಪಿಂಚಣಿ ಸಮಸ್ಯೆ ಪರಿಹಾರ ಮುಖ್ಯಮಂತ್ರಿಗೆ ಹೊರಟ್ಟಿ ಪತ್ರ

ಬೆಂಗಳೂರು: 2006ರ ಏಪ್ರಿಲ್ 1ರ ನಂತರ ಸರ್ಕಾರಿ ಸೇವೆಗೆ ಸೇರಿರುವ ಎರಡು ಲಕ್ಷಕ್ಕೂ ಅಧಿಕ ನೌಕರರನ್ನು ನೂತನ ಪಿಂಚಣಿ ಯೋಜನೆ ಬದಲಿಗೆ ನಿಶ್ಚಿತ ಪಿಂಚಣಿ ಯೋಜನೆಯಡಿ ತರಲು ಕ್ರಮ ಕೈಗೊಳ್ಳುವಂತೆ ಕೋರಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ

ಬರೆದಿದ್ದಾರೆ.

'ನಿಶ್ಚಿತ ಪಿಂಚಣಿ ಯೋಜನೆಯನ್ನೇ ಜಾರಿಗೊಳಿಸಬೇಕೆಂದು ಆಗ್ರಹಿಸಿ ಹಲವು ಹೋರಾಟಗಳು ನಡೆದಿದ್ದವು. ಈ ಸಂಬಂಧ ಸಲ್ಲಿಸಿರುವ ಮನವಿ ಪರಿಶೀಲಿಸಿ ಪಿಂಚಣಿ ವ್ಯವಸ್ಥೆಯಲ್ಲಿ ಬದಲಾವಣೆ ಅಥವಾ ಮಾರ್ಪಾಡು ಮಾಡುವ ಕುರಿತು ಶಿಫಾರಸು ನೀಡಲು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಅಧಿಕಾರಿಗಳ ಸಮಿತಿ ನೇಮಿಸಿ 2018ರ ಡಿಸೆಂಬರ್ 11ರಂದು ಆದೇಶ ಹೊರಡಿಸಲಾಗಿತ್ತು. ಈ ಸಮಿತಿಯಿಂದ ಮೂರು ತಿಂಗಳೊಳಗೆ ವರದಿ ಪಡೆದು, ನಿಶ್ಚಿತ ಪಿಂಚಣಿ ಯೋಜನೆ ಜಾರಿಗೆ 2022–23ರ ಬಜೆಟ್‌ನಲ್ಲಿ ಘೋಷಣೆ ಮಾಡಬೇಕು' ಎಂದು ಪತ್ರದಲ್ಲಿ ಕೋರಿದ್ದಾರೆ.

'ಬಾಲಬ್ರೂಯಿಯಲ್ಲಿ ಕಾನ್‌ಸ್ಟಿಟ್ಯೂಷನ್ ಕ್ಲಬ್ ಬೇಡ'

ಬೆಂಗಳೂರು: ಪಾರಂಪರಿಕ ಕಟ್ಟಡ ಬಾಲಬ್ರೂಯಿ ಅತಿಥಿ ಗೃಹವನ್ನು ಕಾನ್‌ಸ್ಟಿಟ್ಯೂಷನ್ ಕ್ಲಬ್ ಆಗಿ ಪರಿವರ್ತಿಸುವ ಸರ್ಕಾರದ ನಿರ್ಧಾರಕ್ಕೆ ಪರಿಸರವಾದಿಗಳು ವಿರೋಧ ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ಪರಿಸರ ಟ್ರಸ್ಟ್ ಅಧ್ಯಕ್ಷ ಯಲ್ಲಪ್ಪ ರೆಡ್ಡಿ, ಭಾರತೀಯ ಸಸ್ಯಶಾಸ್ತ್ರ ಸರ್ವೆ ಸಂಸ್ಥೆಯ ಮಾಜಿ ನಿರ್ದೇಶಕ ಎಂ. ಸಂಜಪ್ಪ, ಕೃಷಿ ವಿಶ್ವವಿದ್ಯಾಲಯದ ಮಾಜಿ ಡೀನ್ ಪ್ರೊ. ಬಾಲಕೃಷ್ಣ ಗೌಡ, ಐಐಎ ಮಾಜಿ ಅಧ್ಯಕ್ಷ ಪ್ರೊ. ಜೈಸಿಂಹ ಅವರು ಈ ಬಗ್ಗೆ ಶಾಸಕರಿಗೆ ಪತ್ರ ಬರೆದಿದ್ದಾರೆ.

ಕ್ಲಬ್‌ಗಾಗಿ ಹೆಚ್ಚುವರಿ ಮೂಲಸೌಕರ್ಯಗಳನ್ನು ಕಲ್ಪಿಸಲು ಮರಗಳನ್ನು ಕತ್ತರಿಸುವುದು ಅನಿವಾರ್ಯವಾಗುತ್ತದೆ ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಹಲವು ಅಪರೂಪದ ಸಸಿಗಳನ್ನು ಆಯ್ಕೆ ಮಾಡಿ ಬಾಲಬ್ರೂಯಿ ಅತಿಥಿ ಗೃಹದ ಆವರಣದಲ್ಲಿ ನೆಟ್ಟಿದ್ದರು. ಇದರಿಂದಾಗಿ, ಇಂದು ಹಲವು ಅಪರೂಪದ ಮತ್ತು ಏಳು ದಶಕಕ್ಕೂ ಹೆಚ್ಚು ಹಳೆಯ ಮರಗಳು ಈ ಕಟ್ಟಡದ ಆವರಣದಲ್ಲಿವೆ. ಹೀಗಾಗಿ, ಈ ಪ್ರದೇಶವನ್ನು ಸಂರಕ್ಷಿಸುವ ಪ್ರಯತ್ನ ಮಾಡಬೇಕು. ಕಾನ್‌ಸ್ಟಿಟ್ಯೂಷನ್ ಕ್ಲಬ್‌ಗೆ ವಿಧಾನಸೌಧದ ಬಳಿ ಪರ್ಯಾಯ ಸ್ಥಳವನ್ನು ಪರಿಶೀಲಿಸಲಿ ಎಂದು ಅವರು ಕೋರಿದ್ದಾರೆ.

ತರ್ಪಣ ಮಹಾಲಯ ಅಮಾವಾಸ್ಯೆ ಪ್ರಯುಕ್ತ ಬಳೆಪೇಟೆ ವೃತ್ತದಲ್ಲಿರುವ ಕಾಶಿವಿಶ್ವೇಶ್ವರ ಸ್ವಾಮಿ ದೇವಾಲಯದ ಆವರಣದಲ್ಲಿ ಪಿತೃಗಳಿಗೆ ತರ್ಪಣ ನೀಡಿದರು – ಪ್ರಜಾವಾಣಿ ಚಿತ್ರ

ಆನ್‌ಲೈನ್ ಜೂಜು ನಿಷೇಧ ಜಾರಿ

ಬೆಂಗಳೂರು: ಆನ್‌ಲೈನ್ ಜೂಜು ನಿಷೇಧಿಸುವುದಕ್ಕೆ ಪೂರಕವಾಗಿ ಕರ್ನಾಟಕ ಪೊಲೀಸ್ ಕಾಯ್ದೆಗೆ ತಂದಿರುವ ತಿದ್ದುಪಡಿಗಳಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಸೋಮವಾರ ಅಂಕಿತ ಹಾಕಿದ್ದಾರೆ. ಮಂಗಳವಾರದಿಂದಲೇ ತಿದ್ದುಪಡಿ ಕಾಯ್ದೆ ಜಾರಿಗೆ ಬಂದಿದೆ.

ಹಣವನ್ನು ಪಣವಾಗಿರಿಸಿ ಆನ್‌ಲೈನ್ ಮೂಲಕ ಆಡುವ ಎಲ್ಲ ಬಗೆಯ ಜೂಜುಗಳ ವಿರುದ್ಧ ಕ್ರಮ ಜರುಗಿಸಲು ಪೊಲೀಸರಿಗೆ ಅಧಿಕಾರ ನೀಡಲು ಮತ್ತು ಜೂಜು ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯ ಪ್ರಮಾಣ ಹೆಚ್ಚಿಸಲು ಕರ್ನಾಟಕ ಪೊಲೀಸ್ ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಗೆ ವಿಧಾನ ಮಂಡಲದ ಕಳೆದ ಅಧಿವೇಶನದಲ್ಲಿ ಅಂಗೀಕಾರ ಪಡೆಯಲಾಗಿತ್ತು.

ವಿಧಾನಸಭೆ ಮತ್ತು ವಿಧಾನ ಪರಿಷತ್‌ನ ಒಪ್ಪಿಗೆ ಪಡೆದಿದ್ದ ಮಸೂದೆಯನ್ನು ರಾಜ್ಯಪಾಲರ ಒಪ್ಪಿಗೆಗಾಗಿ ಕಳುಹಿಸಲಾಗಿತ್ತು. ರಾಜ್ಯಪಾಲರು ಸೋಮವಾರ ತಿದ್ದುಪಡಿ ಮಸೂದೆಗೆ ಅಂಗೀಕಾರ ಹಾಕಿದ್ದಾರೆ. ರಾಜ್ಯಪತ್ರದಲ್ಲಿ ಮಂಗಳವಾರ ಈ ವಿಷಯವನ್ನು ಅಧಿಕೃತವಾಗಿ ಪ್ರಕಟಿಸಲಾಗಿದೆ.

ನ್ಯಾಯಾಲಯದಲ್ಲಿ ಪ್ರಶ್ನೆ: ಆನ್‌ಲೈನ್ ಜೂಜು ನಿಷೇಧದ ಹೆಸರಿನಲ್ಲಿ ಕೌಶಲ ಆಧಾರಿತ ಆನ್‌ಲೈನ್ ಗೇಮ್‌ಗಳನ್ನೂ ನಿಷೇಧಿಸಲಾಗಿದೆ. ತಮಿಳುನಾಡು ಸರ್ಕಾರ ರೂಪಿಸಿದ್ದ ಇಂತಹ ಕಾಯ್ದೆಯನ್ನು ಮದ್ರಾಸ್ ಹೈಕೋರ್ಟ್ ರದ್ದುಗೊಳಿಸಿದೆ. ಕರ್ನಾಟಕದ ಕಾಯ್ದೆಯನ್ನೂ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು ಎಂದು ಆಲ್ ಇಂಡಿಯಾ ಗೇಮಿಂಗ್ ಫೆಡರೇಷನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರೋಲ್ಯಾಂಡ್ ಲ್ಯಾಂಡರ್ಸ್ ತಿಳಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಅವರು, 'ಕಾನೂನಿನ ಪ್ರಕಾರ ಆನ್‌ಲೈನ್ ಗೇಮ್‌ಗಳನ್ನು ನಿರ್ಬಂಧಿಸುವಂತೆ ನಮ್ಮ ಸದಸ್ಯ ಕಂಪನಿಗಳಿಗೆ ಸೂಚಿಸಿದ್ದೇವೆ. ನಿಷೇಧದಿಂದ ಕೌಶಲ ಆಧಾರಿತ ಗೇಮಿಂಗ್ ವಹಿವಾಟಿಗೆ ಧಕ್ಕೆಯಾಗಿದೆ. ಆದರೆ, ವಿದೇಶಗಳಿಂದ ಜೂಜು ನಡೆಸುವವರು ಇಲ್ಲಿ ರಾರಾಜಿಸುತ್ತಿದ್ದಾರೆ' ಎಂದಿದ್ದಾರೆ.

'ಕೌಶಲ ಆಧಾರಿತ ಆನ್‌ಲೈನ್ ಗೇಮ್‌ಗಳನ್ನೂ ನಿಷೇಧಿಸಿರುವುದು ದುರದೃಷ್ಟಕರ ಬೆಳವಣಿಗೆ. ನವೋದ್ಯಮಗಳ ನೆಚ್ಚಿನ ತಾಣವಾದ ಕರ್ನಾಟಕದಲ್ಲಿ ಗೇಮಿಂಗ್ ಆಧಾರಿತ ಹಲವು ಉದ್ದಿಮೆಗಳು ಸ್ಥಾಪನೆಯಾಗಿವೆ. ಈಗ ಕರ್ನಾಟಕ ಪೊಲೀಸ್ ಕಾಯ್ದೆಯ ತಿದ್ದುಪಡಿ ಜಾರಿಯಾಗಿರುವುದರಿಂದ ಈ ಉದ್ಯಮದಲ್ಲಿ ತೊಡಗಿರುವ ಎಲ್ಲರಿಗೂ ತೊಂದರೆಯಾಗಿದೆ' ಎಂದು ದಿ ಆನ್‌ಲೈನ್ ರಮ್ಮಿ ಫೆಡರೇಷನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಮೀರ್ ಬಾರ್ಡೆ ಹೇಳಿದ್ದಾರೆ.

ಬೀದಿ ನಾಯಿ ವಿಚಾರವಾಗಿ ಎರಡು ಕುಟುಂಬಗಳ ನಡುವೆ ಗಲಾಟೆ

ನಾಯಿಗೆ ಕಲ್ಲೇಟು; ಪೊಲೀಸ್ ಠಾಣೆಗೆ ದೂರು

ಬೆಂಗಳೂರು: ಬೀದಿ ನಾಯಿ ವಿಚಾರವಾಗಿ ಎರಡು ಕುಟುಂಬಗಳ ನಡುವೆ ಗಲಾಟೆ ನಡೆದಿದ್ದು, ಈ ಸಂಬಂಧ ಮಹಿಳೆಯೊಬ್ಬರು ನೆರೆಮನೆಯವರ ವಿರುದ್ಧ ಮಲ್ಲೇಶ್ವರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

'ನಾವು ಬೀದಿ ನಾಯಿಯೊಂದನ್ನು ವರ್ಷದಿಂದ ಸಾಕುತ್ತಿದ್ದೇವೆ. ಅದು ಮನೆಯಲ್ಲೆಲ್ಲಾ ಓಡಾಡಿಕೊಂಡಿತ್ತು. ಒಮ್ಮೊಮ್ಮೆ ಹೊರಗೂ ಹೋಗಿ ಬರುತ್ತದೆ. ಅದಕ್ಕೆ ನೆರೆಹೊರೆಯವರು ತುಂಬಾ ತೊಂದರೆ ನೀಡುತ್ತಿದ್ದಾರೆ. ಕಲ್ಲಿನಿಂದ ಹೊಡೆದು ಗಾಯಗೊಳಿಸಿದ್ದಾರೆ. ಅದನ್ನು ಸಾಕಿದ್ದಕ್ಕಾಗಿ ಒಂದೂವರೆ ತಿಂಗಳಿಂದ ನಮಗೂ ಕಿರುಕುಳ ನೀಡುತ್ತಿದ್ದಾರೆ' ಎಂದು ಮಲ್ಲೇಶ್ವರ 6ನೇ ತಿರುವಿನ ನಿವಾಸಿ ಅನುರಾಧಾ ತಿಳಿಸಿದ್ದಾರೆ. 'ಮೂಕ ಪ್ರಾಣಿಯನ್ನು ಹಿಂಸಿಸಲಾಗಿದೆ. ಅದನ್ನು ನಮ್ಮ ಮನೆಗೆ ಬರಲು ಬಿಡುತ್ತಿಲ್ಲ. ಗುಂಪು ಕಟ್ಟಿಕೊಂಡು ಬಂದು ನಾಯಿಯನ್ನು ಸಾಯಿಸುವುದಾಗಿ ಬೆದರಿಸಿದ್ದಾರೆ. ನನ್ನ ಪತಿ ಶ್ರೀನಿವಾಸ್ ಅವರನ್ನೂ ನಿಂದಿಸಿದ್ದಾರೆ. ಹೀಗಾಗಿ ದೂರು ನೀಡಿದ್ದೇವೆ' ಎಂದು ಹೇಳಿದ್ದಾರೆ.

ಕೋವಿಡ್: 29.79 ಲಕ್ಷಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರ 523 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದ್ದು, ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.79 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 1.31 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.39 ರಷ್ಟು ವರದಿಯಾಗಿದೆ. 9 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 15 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಚಿಕ್ಕಬಳ್ಳಾಪುರ, ಹಾವೇರಿ, ಕಲಬುರ್ಗಿ, ವಿಜಯಪುರ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ಮೈಸೂರಿನಲ್ಲಿ 62 ಹಾಗೂ ದಕ್ಷಿಣ ಕನ್ನಡದಲ್ಲಿ 43ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 205 ಹಾಗೂ ಹಾಸನದಲ್ಲಿ 50 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 9 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.



ನಾಲ್ಕು ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಮೈಸೂರಿನಲ್ಲಿ 5, ಬೆಂಗಳೂರಿನಲ್ಲಿ ಇಬ್ಬರು, ದಕ್ಷಿಣ ಕನ್ನಡ ಹಾಗೂ ತುಮಕೂರಿನಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ.

ಮರಣ ಪ್ರಮಾಣ ದರವು ಶೇ 0.39 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,854ಕ್ಕೆ ತಲುಪಿದೆ.



ಚಾಕುವಿನಿಂದ ಇರಿದು ತಾಯಿ, ಮಗುವಿನ ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಚಾಕುವಿನಿಂದ ಕತ್ತು ಕೊಯ್ದು ತಾಯಿ ಹಾಗೂ ಮಗುವನ್ನು ಕೊಲೆ ಮಾಡಿರುವ ಘಟನೆ ಬೇಗೂರು ಠಾಣೆ ವ್ಯಾಪ್ತಿಯ ಚೌಡೇಶ್ವರಿ ಲೇಔಟ್‌ನಲ್ಲಿ ಬುಧವಾರ ನಡೆದಿದೆ.

ಚಂದ್ರಕಲಾ (40) ಹಾಗೂ ರಾತನ್ಯ (4) ಕೊಲೆಯಾದವರು.

'ಪತಿ ಬೆಳಿಗ್ಗೆ ಕೆಲಸಕ್ಕೆ ಹೋದ ಬಳಿಕ ದುಷ್ಕರ್ಮಿ ಮನೆಗೆ ನುಗ್ಗಿ ಕೊಲೆ ಮಾಡಿರಬಹುದು. ಸಂಬಂಧಿಕರು ಸಂಜೆ ಮನೆಗೆ ಬಂದು ನೋಡಿದಾಗ ಹಾಲ್‌ನಲ್ಲಿ ತಾಯಿ ಹಾಗೂ ಕೊಠಡಿಯಲ್ಲಿ ಹೆಣ್ಣು ಮಗುವಿನ ಮೃತದೇಹ ಪತ್ತೆಯಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಚಂದ್ರಕಲಾ ಅವರ ಪತಿ ಚೆನ್ನವೀರ ಸ್ವಾಮಿ ಅವರು ಗಾರ್ಮೆಂಟ್ಸ್ ನೌಕರ. ಚಿತ್ರದುರ್ಗದ ಬಂಗಾರಕ್ಕನಹಳ್ಳಿಯವರಾದ ಇವರು ಪತ್ನಿ ಮತ್ತು ಮಗುವಿನ ಜೊತೆ ನಾಲ್ಕು ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿದ್ದರು. ಮೃತ ಚಂದ್ರಕಲಾ ಆಯುರ್ವೇದ ವಸ್ತುಗಳ ಆನ್‌ಲೈನ್ ಮಾರ್ಕೆಟಿಂಗ್ ಕೆಲಸ ಮಾಡುತ್ತಿದ್ದರು. ದಂಪತಿಗೆ ಇಬ್ಬರು ಮಕ್ಕಳು. ಗಂಡು ಮಗುವನ್ನು ಹಾಸ್ಟೆಲ್‌ನಲ್ಲಿ ಓದಿಸುತ್ತಿದ್ದರು' ಎಂದು ಹೇಳಿದ್ದಾರೆ.

'ಚೆನ್ನವೀರ ಸ್ವಾಮಿ ಅವರು ಬೆಳಿಗ್ಗೆ 9.30ರ ಸುಮಾರಿಗೆ ಮನೆಯಿಂದ ಗಾರ್ಮೆಂಟ್ಸ್‌ಗೆ ತೆರಳಿದ್ದರು. 10.30ರ ಸುಮಾರಿಗೆ ಮನೆ ಪ್ರವೇಶಿಸಿರುವ ಅಪರಿಚಿತ ವ್ಯಕ್ತಿಯೊಬ್ಬ ಮಧ್ಯಾಹ್ನ 2 ಗಂಟೆಗೆ ಮನೆಯಿಂದ ಹೊರಬಂದಿದ್ದಾನೆ. ಆತನೇ ಕೊಲೆ ಮಾಡಿರುವ ಸಾಧ್ಯತೆ ಇದೆ. ಆತ ಮನೆಯಲ್ಲಿದ್ದ ಚಿನ್ನಾಭರಣಗಳನ್ನೂ ದೋಚಿಕೊಂಡು ಹೋಗಿದ್ದಾನೆ. ಬಡಾವಣೆಯಲ್ಲಿರುವ ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದ್ದು, ಶೀಘ್ರವೇ ಆತನನ್ನು ಬಂಧಿಸಲಾಗುತ್ತದೆ' ಎಂದೂ ಮಾಹಿತಿ ನೀಡಿದ್ದಾರೆ.

'ಚಂದ್ರಕಲಾ ಅವರ ಸಹೋದರಿ ಮೃತದೇಹಗಳನ್ನು ನೋಡಿ ಮೊದಲು ಪತಿಗೆ ವಿಷಯ ತಿಳಿಸಿದ್ದರು. ಬಳಿಕ ಪೊಲೀಸರಿಗೆ ಮಾಹಿತಿ ನೀಡಿದ್ದರು. ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳದಲ್ಲಿ ಸಿಕ್ಕಿರುವ ಕುರುಹುಗಳ ಆಧಾರದಲ್ಲಿ ತನಿಖೆ ನಡೆಸಲಾಗುತ್ತಿದೆ. ಆರೋಪಿಯ ಪತ್ತೆಗೆ ನಾಲ್ಕು ಪ್ರತ್ಯೇಕ ತಂಡಗಳನ್ನು ರಚಿಸಲಾಗಿದೆ' ಎಂದು ಹೆಚ್ಚುವರಿ ಪೊಲೀಸ್ ಕಮಿಷನರ್ ಎಸ್. ಮುರುಗನ್ ತಿಳಿಸಿದ್ದಾರೆ.

ನಿಧನ ವಾರ್ತೆ

ಸಾಹಿತಿ ಷಣ್ಮುಖಯ್ಯ ಅಕ್ಕೂರುಮಠ

ಬೆಂಗಳೂರು: ಬಸವನಗುಡಿ ನಿವಾಸಿ, ಸಾಹಿತಿ ಷಣ್ಮುಖಯ್ಯ ಅಕ್ಕೂರುಮಠ (82) ಈಚೆಗೆ ನಿಧನರಾದರು.

ಕನ್ನಡ ಸಾಹಿತ್ಯ ಪರಿಷತ್ತು, ಶರಣ ಸಾಹಿತ್ಯ ಪರಿಷತ್ತು, ಬಿಎಂಶ್ರೀ ಪ್ರತಿಷ್ಠಾನದ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದರು. ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕು ಬೂದಿಹಾಳ ಗ್ರಾಮದವರು. 14 ಕೃತಿಗಳನ್ನು ರಚಿಸಿದ್ದಾರೆ. ನಾಲ್ಕು ಕೃತಿಗಳನ್ನು ಸಂಪಾದಿಸಿದ್ದಾರೆ. ಮೂರು ಕೃತಿಗಳನ್ನು ಅನುವಾದಿಸಿದ್ದಾರೆ. ಅವರಿಗೆ ಪತ್ನಿ, ಪುತ್ರ, ಕೆಎಎಸ್ ಹಿರಿಯ ಶ್ರೇಣಿಯ ಅಧಿಕಾರಿ ಶೈಲಜಾ ಪ್ರಿಯದರ್ಶಿನಿ ಸೇರಿ ಇಬ್ಬರು ಪುತ್ರಿಯರು ಇದ್ದಾರೆ.

ಬಿಲ್ಲವ ಅಸೋಸಿಯೇಷನ್ ವತಿಯಿಂದ ಸಮಾಜಮುಖಿ ಕಾರ್ಯಕ್ರಮ

ನಾರಾಯಣ ಗುರು 167ನೇ ಜಯಂತಿ ಆಚರಣೆ

ಬೊಮ್ಮನಹಳ್ಳಿ: 'ಬೆಂಗಳೂರು ಬಿಲ್ಲವ ಅಸೋಸಿಯೇಷನ್ ದಶಕಗಳಿಂದ ನಡೆಸುತ್ತಿರುವ ಸಮಾಜಮುಖಿ ಕಾರ್ಯಗಳು ಮಾದರಿಯಾಗಿವೆ. ಸಮಾಜದ ಕಟ್ಟಕಡೆಯ ಜನರಿಗೆ ಸಹಾಯಹಸ್ತ ಚಾಚುತ್ತಿರುವುದು ಶ್ಲಾಘನೀಯ ಕಾರ್ಯ' ಎಂದು ಇಂಧನ ಹಾಗೂ ಕನ್ನಡ– ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಅಭಿಪ್ರಾಯಪಟ್ಟರು.

ಬೆಂಗಳೂರು ಬಿಲ್ಲವ ಅಸೋಸಿಯೇಷನ್ ವತಿಯಿಂದ ಬನ್ನೇರುಘಟ್ಟ ರಸ್ತೆಯ ಅರಕೆರೆಯಲ್ಲಿ ಹಮ್ಮಿಕೊಂಡಿದ್ದ ಬ್ರಹ್ಮರ್ಷಿ ನಾರಾಯಣ ಗುರುಗಳ 167ನೇ ಜಯಂತ್ಯುತ್ಸವದಲ್ಲಿ ಮಾತನಾಡಿದರು.

ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ನಾರಾಯಣಗುರು ಶಾಲೆ ಪ್ರಾರಂಭಿಸಲು ಬೇಕಾದ ಒಂದು ಎಕರೆ ಜಾಗವನ್ನು ವಸತಿ ಸಚಿವರು ಮತ್ತು ಹೌಸಿಂಗ್ ಬೋರ್ಡ್ ಅಧಿಕಾರಿಗಳೊಂದಿಗೆ ಚರ್ಚಿಸಿ ಮಂಜೂರು ಮಾಡಿಸುವುದಾಗಿ ಸಚಿವರು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಿಲ್ಲವ ಸಮುದಾಯದ ಜನರು

ಕಾರ್ಯಕ್ರಮ ಉದ್ಘಾಟಿಸಿದ ಸೋಲೂರಿನ ಶ್ರೀನಾರಾಯಣಗುರು ಮಠದ ನಿಯೋಜಿತ ಪೀಠಾಧಿಪತಿ ವಿಖ್ಯಾತಾನಂದ ಸ್ವಾಮೀಜಿ, 'ಬ್ರಹ್ಮಶ್ರೀ ನಾರಾಯಣ ಗುರುಗಳು ಮನುಕುಲದ ಉದ್ಧಾರವನ್ನು ಬಯಸಿದ್ದರು. ಅವರು ತೋರಿದ ದಾರಿಯಲ್ಲೇ ನಾವೆಲ್ಲರೂ ಸಾಗೋಣ' ಎಂದರು.

ಬಿಲ್ಲವ ಅಸೋಸಿಯೇಷನ್ ಅಧ್ಯಕ್ಷ ಎಂ.ವೇದಕುಮಾರ್, 'ಬಡ ವಿದ್ಯಾರ್ಥಿಗಳಿಗೆ ವಿವಿಧ ರೀತಿ ಶೈಕ್ಷಣಿಕ ನೆರವು ನೀಡಲಾಗುತ್ತಿದೆ' ಎಂದರು.

ರಾಜ್ಯ ಸರ್ಕಾರದ ಮುಖ್ಯ ಸಚೇತಕ ಎಂ. ಸತೀಶ್‌ರೆಡ್ಡಿ ಅಧ್ಯಕ್ಷತೆ ವಹಿಸಿದ್ದರು. ಪಾಲಿಕೆ ಮಾಜಿ ಸದಸ್ಯೆ ಭಾಗ್ಯಲಕ್ಷ್ಮಿ ಮುರಳಿ, ಕಾಂಗ್ರೆಸ್ ಮುಖಂಡ ವಿನಯಕುಮಾರ್ ಸೊರಕೆ, ಕರ್ನಾಟಕ ಪ್ರದೇಶ ಆರ್ಯ ಈಡಿಗ ಸಂಘದ ಅಧ್ಯಕ್ಷ ಡಾ.ಎಂ.ತಿಮ್ಮೇಗೌಡ, ಜೆ.ಪಿ. ನಾರಾಯಣ ಸ್ವಾಮಿ ಪ್ರತಿಷ್ಠಾನದ ಅಧ್ಯಕ್ಷ ಜೆ.ಪಿ.ಸುಧಾಕರ್, ಶ್ರೀ ಬ್ರಹ್ಮಶ್ರೀ ನಾರಾಯಣಗುರು ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷ ಗೋವಿಂದ ಬಾಬು ಪೂಜಾರಿ ಇದ್ದರು. ಕಿಯೋನಿಕ್ಸ್ ಅಧ್ಯಕ್ಷ ಹರಿಕೃಷ್ಣ ಬಂಟ್ವಾಳ, ಮೂಡ ಅಧ್ಯಕ್ಷ ರವಿಶಂಕರ್ ಮಿಜಾರ್ ಅವರನ್ನು ಸನ್ಮಾನಿಸಲಾಯಿತು. ಸಮಾಜದ 132 ಬಡ ವಿದ್ಯಾರ್ಥಿಗಳಿಗೆ ಧನ ಸಹಾಯದ ಚೆಕ್ ವಿತರಿಸಲಾಯಿತು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
My clients have entered into an agreement and intends to purchase the below mentioned Schedule Property from its owners **Mr. K.C.Chandra Mouli** and **Mrs. Sujatha Mouli**, residing at No.546, 9th Cross, 7th Main Road, Sadashivanagar, Bangalore 560080. Any person/s having any claims, right, title and interest or possession mortgage, lien etc., have got any objections or opposing the above referred transaction whatsoever may lodge their objections or claims with supporting documentary evidence/proof to the undersigned within **14 days** from the date of this notice/publication, failing which it may be presumed that there are no objections or claims to complete the sale transaction in favor of my clients.
SCHEDULE PROPERTY:
All that piece and parcel of immovable property being BDA site bearing No.425, New BBMP Khata No.695/2455/425, formed by the Bangalore Development Authority, situated at Hennur-Bellari Road Extension, 1st Stage, 5th Block, B.B.M.P. Ward No.24, measuring East to West: 40-0 Feet and North to South: 30-0 Feet and totally measuring 1200 Square feet and bounded on the: EAST BY: Site No.416; WEST BY: Road; NORTH BY: Site No.424; SOUTH BY: Site No.426.
P.C.NARASIMHAIAH, Advocate, No.117, B.S.A (Tannery) Road, Frazer Town, Bangalore- 560005. PH 9448764853
Date : 07.10.2021 | Place : Bangalore

BUSINESS
Business to Business
Financial Services
AISHWARYA GROUP (Bangalore), Invest Min50k to 5L in Trading Businesses. Monthly 10% Secured Fixed Returns. Investors, Referral Welcome. Regular Income.- 7892818780.

Business Offers
Finance
NRI'S INVESTMENT AndFinance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

EDUCATIONAL
Admission
ALAGAPPA UNIVERSITY DDE (ONLINE ADMISSION) by Daranisri Academy, Courses Offered: All UG/ PG/ MBA/ MCA/ PG Diploma. 9842721540, 04344-220910, 04344-221540

JOB OPPORTUNITIES
Multiple Vacancy
REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/ 7676760399

Classifieds
Book Your Classifieds Ads
Online Log in to dhclassifieds.com
For More Details Call
9880856233 | 9886213331
Email: Santhoshkumar@deccanherald.co.in

CONNECT
ಬೆಂಗಳೂರಿನಲ್ಲಿ ಮಾರಾಟ
ಕಾಂಚೀಪುರಂ ಎ.ಜಿ. ಬಾಬು ಸಾಹ್
ರೇಷ್ಮೆ ಸೀರೆ ವ್ಯಾಪಾರಿಗಳು
ದಸರಾ ಹಬ್ಬದ ಮಾರಾಟ
ಹೇಮಚಂದ್ರ ಸಾಗರ ಕಲ್ಯಾಣ ಮಂದಿರ್
ನಂ. 264, ಮರಿಯಪ್ಪ ರಸ್ತೆ, 2ನೇ ವಿಭಾಗ
ಜಯನಗರ, ಅಶೋಕ ಪಿಲ್ಲರ್ ಹತ್ತಿರ
ಬೆಂಗಳೂರು–560011, ಮೊ. : 7904413982
ದಿನಾಂಕ: 8,9,10,11,12,13 & 14 ಅಕ್ಟೋಬರ್ 2021
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ, ಹಿಂತಿರುಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
ಒಂದು ಬಾರಿಗೆ 50 ಜನರಿಗೆ ಮಾತ್ರ ಪ್ರವೇಶ
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ
ನಮ್ಮ ಚಾನೆಲ್ ಅನ್ನು ಸಬ್‌ಸ್ಕ್ರೈಬ್ ಮಾಡಿ
ಎ.ಜಿ. ಬಾಬು ಸಾಹ್ YouTube
ಹೊಸ ಮಾರಾಟ ಮತ್ತು ಮಾಹಿತಿಗಾಗಿ
ಬೆಲ್ ಐಕಾನ್ ಅನ್ನು ಒತ್ತಲು ಮರೆಯದಿರಿ
ರಿಯಾಯಿತಿ ಸೀರೆಗಳು ಸಹ ಲಭ್ಯವಿದೆ

Teachers/ Professors
ZEENA ENGLISH SCHOOL
51,11th Cross, Agrahara Layout, Jakkur Post, Yelahanka, Bengaluru-560 064
REQUIRES
1. Qualified, trained & experienced TEACHERS for English, Social Science, Hindi and Physical Education for High School.
2. HEAD MISTRESS / HEAD MASTER with 5 years teaching experience in High School.
Candidates may email their resume within 7 days to
zeenaenglishschool2016@gmail.com
Contact: 98864 68885

Marketing & Sales
LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Wanted
REPORTERS/ SUB Editors / Marketing Manager / Pagemaker required for Bangalore branch of leading Hindi daily Subh Labh newspaper. Reporters should be well versed in Hindi, English and Kannada. Marketing Manager should be experienced in ad Space Selling and Capable to gather corporate advertisement for the publication. Salary as per industries standards. Contacts : 9391042917, 8897667733. Email: cak9854@gmailcom, amaanatnews@gmail.com

PERSONAL
Change of Name
14874020A HAV/CLK JITENDER KUMAR 2ATC Father Name record's RAMHER SINGH instead of RAM MEHAR notary K.V. Mani, Bangalore

WE, VIJAY Maloo, and Mrs. Gunjan Maloo, residing at Purva Skydale, T-3, 1206, Haralur Road, Silver county Road Kudlu, Bangalore 560068, we have changed my son's name from DIGANT MALOO to DIVYAM MALOO, vide Affidavit dated 23-09-2021, Notary B.M. Chandrashekar

I, B.S. Venkatesh @ B.S.Venkatesh Udupa @ Venkatesh Udupa .B.S S/o Srinivasa Udupa B.V aged about 54 years residing at No. 3519, 3rd Cross, 9th Main, Kaverinagara, BSK II Stage, Bangalore- 070 all the above names belongs to one and the same person i. e myself only vide affidavit dated 05.10.2021 before notary K.M. Basavaraju, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

‘ಕೆರೆ, ರಾಜಕಾಲುವೆ ಒತ್ತುವರಿ ಸಮೀಕ್ಷೆ ಬಳಿಕ ಪುನರ್ವಸತಿ’

ಪ್ರಜಾವಾಣಿ ವಾರ್ತೆ


ಬಸವರಾಜ ಬೊಮ್ಮಾಯಿ

ಮೈಸೂರು: ‘ಬೆಂಗಳೂರಿನಲ್ಲಿ ಮಳೆ ಬಂದಾಗ ಪದೇಪದೇ ಸಮಸ್ಯೆ ಉಂಟಾಗುತ್ತಿದ್ದು ಎಲ್ಲೆಲ್ಲಿ ರಾಜಕಾಲುವೆ, ಕೆರೆ ಒತ್ತುವರಿಯಾ-ಗಿದೆ ಎಂಬುದರ ಸಮೀಕ್ಷೆ ನಡೆಸಿ ಆ ಜಾಗದಲ್ಲಿರುವ ನಿವಾಸಿಗಳಿಗೆ ಪುನರ್ವಸತಿ ಕಲ್ಪಿಸಲು ಸೂಚಿಸಿರುವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಮಳೆ ಬಂದಾಗ ತಗ್ಗು ಪ್ರದೇಶಗಳು ಜಲಾವೃತವಾಗುತ್ತವೆ. ಕೆರೆಯ ಆವರಣದಲ್ಲಿರುವ ಬಡಾವಣೆಗಳಿಗೆ, ರಾಜಕಾಲುವೆ ಅಕ್ಕಪಕ್ಕದಲ್ಲಿರುವ ಮನೆಗಳಿಗೆ ನೀರು ನುಗ್ಗುತ್ತಿದೆ. ಎಲ್ಲಿ ಹೆಚ್ಚು ಸಮಸ್ಯೆ ಇದೆ ಎಂಬುದನ್ನು ಗುರುತಿಸುತ್ತಿದ್ದು, ಶಾಶ್ವತ ಪರಿಹಾರ ಕಂಡುಕೊಳ್ಳಲಾಗುವುದು’ ಎಂದರು.

‘ರಸ್ತೆಗಳಲ್ಲಿ ಗುಂಡಿ ಮುಚ್ಚುವ ಕಾಮಗಾರಿ ಸಂಬಂಧ ಕಾರ್ಯಪಡೆ ರಚಿಸಲಾಗಿದೆ. ಒಂದೇ ರಸ್ತೆಯಲ್ಲಿ ಎಷ್ಟು ಬಾರಿ ಕಾಮಗಾರಿ ನಡೆದಿದೆ, ಯಾರು ಆ ಕಾಮಗಾರಿ ನಡೆಸಿದ್ದು ಹಾಗೂ ಅದರ ಗುಣಮಟ್ಟ ಪರಿಶೀಲಿಸಿ ವರದಿ ನೀಡಲು ಸೂಚಿಸಿದ್ದೇನೆ. ಕಳಪೆಯಾಗಿದ್ದರೆ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಮಳೆ ನಿಂತ ಮೇಲೆ ವೈಜ್ಞಾನಿಕವಾಗಿ ಗುಂಡಿ ಮುಚ್ಚುವ ಕಾರ್ಯ ಪೂರ್ಣಗೊಳಿಸಲಾಗುವುದು’ ಎಂದು ಹೇಳಿದರು.

‘ಅಶೋಕ ಬಂದ ಮೇಲೆ ನಮ್ಮದೇನಿದೆ?’

ಮೈಸೂರು ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿಗೆ ಮೊದಲೇ ಸುದ್ದಿಗಾರರೊಂದಿಗೆ ಮಳೆ, ರಸ್ತೆ ಗುಂಡಿ ವಿಚಾರವಾಗಿ ಮಾತನಾಡಲು ಕಂದಾಯ ಸಚಿವ ಆರ್.ಅಶೋಕ ಮುಂದಾದರು. ಆಗ ಅಲ್ಲಿಗೆ ಬಂದ ಬಸವರಾಜ ಬೊಮ್ಮಾಯಿ, ‘ಅಶೋಕ ಬಂದಮೇಲೆ ನಮ್ಮದೇನಿದೆ?’ ಎಂದು ಕಾಲೆಳೆದರು. ತಕ್ಷಣವೇ ಸಚಿವರು ಹೊರಡಲು ಅನುವಾದರು. ಆಗ, ಮುಖ್ಯಮಂತ್ರಿ, ‘ಅಶೋಕ ಬನ್ನಿ ಬನ್ನಿ’ ಎಂದು ಕರೆದರು.

‘10 ಲಕ್ಷಕ್ಕೂ ಅಧಿಕ ಶಿಕ್ಷಕರ ಕೊರತೆ’

ನವದೆಹಲಿ (ಪಿಟಿಐ): ಈಶಾನ್ಯ ರಾಜ್ಯಗಳು ಹಾಗೂ ದೇಶದ ‘ಮಹತ್ವಾಕಾಂಕ್ಷಿ ಜಿಲ್ಲೆ’ಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಗೆ ಹೋಲಿಸಿದಾಗ 10 ಲಕ್ಷಕ್ಕೂ ಅಧಿಕ ಬೋಧಕರ ಕೊರತೆ ಇದೆ ಎಂದು ಯುನೆಸ್ಕೊ ಸಿದ್ಧಪಡಿಸಿರುವ ವರದಿಯಲ್ಲಿ ವಿವರಿಸಲಾಗಿದೆ.

ಬಾಲ್ಯ ಶಿಕ್ಷಣ, ವಿಶೇಷ ಶಿಕ್ಷಣ, ದೈಹಿಕ ಶಿಕ್ಷಣ, ಸಂಗೀತ, ಕಲೆ, ಪಠ್ಯೇತರ ಹಾಗೂ ವೃತ್ತಿಪರ ಶಿಕ್ಷಣಕ್ಕೆ ಸಂಬಂಧಿಸಿದ ಶಿಕ್ಷಕರ ಕೊರತೆ ಇನ್ನಷ್ಟು ಹೆಚ್ಚಲಿದೆ ಎಂದು ಯುನೆಸ್ಕೊ ಹೇಳಿದೆ.

ಕೋವಿಡ್ ಪಿಡುಗು ಹಾಗೂ ಲಾಕ್‌ಡೌನ್ ಹಿನ್ನೆಲೆಯಲ್ಲಿ ದೇಶದಲ್ಲಿ ಶಾಲೆಗಳು ಸುದೀರ್ಘ ಕಾಲ ಮುಚ್ಚಿದ್ದವು. ಈ ಅವಧಿಯಲ್ಲಿ ಸ್ಮಾರ್ಟ್‌ಫೋನ್ ಹಾಗೂ ಇಂಟರ್‌ನೆಟ್‌ನಂತಹ ಸೌಲಭ್ಯಗಳಿಂದಲೂ ಮಕ್ಕಳು ವಂಚಿತರಾಗಿದ್ದರು. ಈ ಅಂಶಗಳು ಭಾರತದಲ್ಲಿನ ‘ಶೈಕ್ಷಣಿಕ ಕಂದಕ’ ಮತ್ತಷ್ಟು ಹೆಚ್ಚಲು ಕಾರಣವಾಗಿವೆ ಎಂದು ಯುನೆಸ್ಕೊ ಹೇಳಿದೆ. ದೇಶದ ಶೇ 70ರಷ್ಟು ಮಕ್ಕಳ ಬಳಿ ಸ್ಮಾರ್ಟ್‌ಫೋನ್ ಇರಲಿಲ್ಲ. ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಸಮರ್ಪಕ ಇಂಟರ್‌ನೆಟ್ ಅಥವಾ ಅಂಥ ಸೌಲಭ್ಯಗಳೇ ಇರಲಿಲ್ಲ. ಶೈಕ್ಷಣಿಕ ವ್ಯವಸ್ಥೆಯಲ್ಲಿನ ಈ ನ್ಯೂನತೆಗಳಿಂದಾಗಿ ಮಕ್ಕಳ ಭವಿಷ್ಯ ಮಸಕಾಗುವ ಅಪಾಯ ಎದುರಾಗಿದೆ ಎಂದೂ ಹೇಳಿದೆ.

ಶಿಕ್ಷಣ ಕ್ಷೇತ್ರದ ಮೇಲೆ ಕೋವಿಡ್‌ನಿಂದಾದ ಪರಿಣಾಮಗಳು ಕುರಿತ ‘2021 ಸ್ಟೇಟ್ ಆಫ್ ದಿ ಎಜುಕೇಷನ್ ರಿಪೋರ್ಟ್ ಫಾರ್ ಇಂಡಿಯಾ: ನೋ ಟೀಚರ್, ನೋ ಕ್ಲಾಸ್’ ಎಂಬ ವರದಿಯನ್ನು ಯುನೆಸ್ಕೊ ಬಿಡುಗಡೆ ಮಾಡಿದೆ.

‘ಶಾಲೆಗಳು ಮುಚ್ಚಿದ್ದರಿಂದ 24.8 ಕೋಟಿಗೂ ಅಧಿಕ ವಿದ್ಯಾರ್ಥಿಗಳಿಗೆ ತೊಂದರೆಯಾಯಿತು. ‘ಮಕ್ಕಳು, ಶಿಕ್ಷಕರು ಮತ್ತೆ ಶಾಲೆಗೆ ಬಂದು, ಕಲಿಕೆ–ಬೋಧನಾ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡುವುದು ಇಂದಿನ ತುರ್ತು’ ಎಂದು ವರದಿಯಲ್ಲಿ ಪ್ರತಿಪಾದಿಸಲಾಗಿದೆ.

ಕೋವಿಡ್ ಪರಿಣಾಮಗಳು

- ಶೇ 40ರಷ್ಟು ಪಾಲಕರಿಗೆ ಇಂಟರ್‌ನೆಟ್ ವೆಚ್ಚ ಭರಿಸಲು ಆಗುತ್ತಿಲ್ಲ
- ವೇತನ ಕಡಿತ, ಉದ್ಯೋಗ ನಷ್ಟದಿಂದ ಖಾಸಗಿ ಶಾಲೆಗಳ ಶಿಕ್ಷಕರಿಗೆ ಸಂಕಷ್ಟ
- ದುಡಿಮೆ ಇಲ್ಲದ ಕಾರಣ ಶಾಲಾ ಶುಲ್ಕ ಭರಿಸಲು ಪಾಲಕರ ಪರದಾಟ
- ಮಕ್ಕಳಲ್ಲಿ ಅಪೌಷ್ಟಿಕತೆ ಹೆಚ್ಚಳ
- ಬಾಲ್ಯವಿವಾಹದ ಆತಂಕದಲ್ಲಿ ಬಾಲಕಿಯರು

ಕೆ.ಆರ್‌.ಮಾರುಕಟ್ಟೆಯ ಬಳಿ ರಸ್ತೆ ಮೇಲೆ ನಿಂತಿದ್ದ ಮಳೆ ನೀರಿನಲ್ಲೇ ಆಟೋರಿಕ್ಷಾಗಳು ಬುಧವಾರ ಚಲಿಸಿದವು (ಎಡ ಚಿತ್ರ), ಮಂತ್ರಿ ಮಾಲ್ ಬಳಿ ರಸ್ತೆ ಮೇಲೆ ನಿಂತ ನೀರಿನಲ್ಲೇ ವಾಹನಗಳು ಸಾಗಿದವು (ಮಧ್ಯದ ಚಿತ್ರ), ಜ್ಞಾನಭಾರತಿ ಮೆಟ್ರೊ ನಿಲ್ದಾಣದ ಬಳಿ ಎತ್ತರಿಸಿದ ಮೆಟ್ರೊ ಮಾರ್ಗದ ಪಿಲ್ಲರ್ (491) ಬಳಿ ಮಳೆಯಿಂದ ಮಣ್ಣು ಕೊಚ್ಚಿ ಹೋಗಿರುವುದು – ಪ್ರಜಾವಾಣಿ ಚಿತ್ರಗಳು

ಮಳೆ ಹಾನಿ: 900ಕ್ಕೂ ಅಧಿಕ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ಸುರಿದಿದ್ದ ಭಾರಿ ಮಳೆಯಿಂದಾಗಿ ಉಂಟಾದ ಪ್ರವಾಹದ ವೇಳೆ ಮನೆಯಲ್ಲಿದ್ದ ಧವಸ ಧಾನ್ಯ, ವಿದ್ಯುನ್ಮಾನ ಉಪಕರಣಗಳು ಮತ್ತಿತರ ಸ್ವತ್ತುಗಳು ಹಾನಿಯಾಗಿರುವ 900ಕ್ಕೂ ಅಧಿಕ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ನೀಡಲು ಬಿಬಿಎಂಪಿ ಸಿದ್ಧತೆ ನಡೆಸಿದೆ.

ಮಳೆಯಿಂದಾಗಿ ಪಶ್ಚಿಮ ವಲಯ ಹಾಗೂ ರಾಜರಾಜೇಶ್ವರಿ ನಗರ ವಲಯಗಳಲ್ಲಿ ಮಳೆಯಿಂದ ಅತಿ ಹೆಚ್ಚು ಹಾನಿ ಉಂಟಾಗಿತ್ತು. ಈ ಎರಡು ವಲಯಗಳಲ್ಲಿ 950ಕ್ಕೂ ಅಧಿಕ ಕುಟುಂಬಗಳ ಸ್ವತ್ತುಗಳಿಗೆ ಹಾನಿ ಉಂಟಾಗಿತ್ತು. ಯಾವ ಮನೆಯಲ್ಲಿ ಎಷ್ಟು ಸ್ವತ್ತುಗಳು ಹಾನಿಗೊಳಗಾಗಿವೆ ಎಂಬ ವಿವರಗಳನ್ನು ಬಿಬಿಎಂಪಿ ಅಧಿಕಾರಿಗಳು ಕಲೆಹಾಕಿದ್ದಾರೆ. ಸಂತ್ರಸ್ತ ಕುಟುಂಬದ ಬ್ಯಾಂಕ್ ಖಾತೆ ಹಾಗೂ ಕುಟುಂಬದ ಸದಸ್ಯರ ವಿವರಗಳನ್ನೂ ಪಡೆದು ಅಂತಿಮ ಪಟ್ಟಿಯನ್ನು ಸಿದ್ಧಪಡಿಸುತ್ತಿದ್ದಾರೆ.

‘ಪ್ರವಾಹ ಸಂತ್ರಸ್ತರ ಪಟ್ಟಿ ಸಿದ್ಧಪಡಿಸಲಾಗಿದೆ. ಆಯಾ ವಲಯ ಮಟ್ಟದಲ್ಲಿ ಜನಪ್ರತಿನಿಧಿಗಳು ಗುರುವಾರದಿಂದ ಪರಿಹಾರ ವಿತರಣೆ ಕಾರ್ಯವನ್ನು ಆರಂಭಿಸಲಿದ್ದಾರೆ. ಸರ್ಕಾರದ ಮಾರ್ಗಸೂಚಿಗಳನ್ವಯ ಪ್ರಕೃತಿ ವಿಕೋಪ ನಿಧಿಯಡಿ ಪರಿಹಾರ ವಿತರಿಸಲಾಗುತ್ತದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ‘ಪ್ರಜಾವಾಣಿ’ಗೆ ತಿಳಿಸಿದರು.

ಪಶ್ಚಿಮ ವಲಯದಲ್ಲಿ ಮಹಾಲಕ್ಷ್ಮೀ ಲೇಔಟ್ ಕ್ಷೇತ್ರದಲ್ಲಿ 491, ಗೋವಿಂದರಾಜಪುರ ಕ್ಷೇತ್ರದ ವ್ಯಾಪ್ತಿಯಲ್ಲಿ 158 ಹಾಗೂ ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ 60 ಕುಟುಂಬಗಳ ಸ್ವತ್ತುಗಳು ಮಳೆಯಿಂದ ಹಾನಿಗೊಳಗಾಗಿವೆ ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ.

‘ಮಹಾಲಕ್ಷ್ಮಿ ಲೇಔಟ್ ಕ್ಷೇತ್ರದಲ್ಲಿ ಮಹಾಲಕ್ಷ್ಮೀ ಬಡಾವಣೆ, ಕುರುಬರಹಳ್ಳಿ, ಕಮಲಾನಗರ, ವೃಷಭಾವತಿನಗರ, ನಂದಿನಿ ಬಡಾವಣೆ ಪ್ರದೇಶಗಳಲ್ಲಿ, ಗೋವಿಂದರಾಜನಗರ ಕ್ಷೇತ್ರದ ನಾಯಂಡಹಳ್ಳಿ ಹಾಗೂ ರಾಜಾಜಿನಗರ ಕಾಮಾಕ್ಷಿಪಾಳ್ಯ ಪ್ರದೇಶಗಳ ನಿವಾಸಿಗಳು ಮಳೆಯಿಂದ ಹಾನಿ ಅನುಭವಿಸಿದ್ದಾರೆ. ಸಂತ್ರಸ್ತ ಕುಟುಂಬಗಳ ವಿವರ ಕಲೆಹಾಕಿದ್ದೇವೆ. ಗುರುವಾರದೊಳಗೆ ಸಂತ್ರಸ್ತರ ಪಟ್ಟಿ ಅಂತಿಮಗೊಳ್ಳಲಿದೆ’ ಎಂದು ಪಶ್ಚಿಮ ವಲಯದ ಬಿಬಿಎಂಪಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ನಮ್ಮ ವಲಯದಲ್ಲಿ 254 ಕುಟುಂಬಗಳು ಮಳೆಯಿಂದ ನಷ್ಟ ಅನುಭವಿಸಿವೆ. ಕೊಟ್ಟಿಗೆಪಾಳ್ಯದಲ್ಲಿ 120ಕ್ಕೂ ಅಧಿಕ ಕುಟುಂಬಗಳು ತೊಂದರೆ ಅನುಭವಿಸಿವೆ. ನಾಗರಬಾವಿ, ಜ್ಞಾನಭಾರತಿ, ದೊಡ್ಡಬಿದಿರಕಲ್ಲು, ಹೇರೋಹಳ್ಳಿ ಪ್ರದೇಶಗಳಲ್ಲೂ ಸಂತ್ರಸ್ತ ಕುಟುಂಬಗಳ ಪಟ್ಟಿ ತಯಾರಿಸಿದ್ದೇವೆ’ ಎಂದು ಆರ್‌.ಆರ್.ನಗರ ವಲಯದ ಅಧಿಕಾರಿಯೊಬ್ಬರು ತಿಳಿಸಿದರು. ‘ಮಳೆಯಿಂದ ಸ್ವತ್ತುಗಳು ನಷ್ಟ ಉಂಟಾದಾದ ಸಂತ್ರಸ್ತ ಕುಟುಂಬಗಳಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ತುರ್ತಾಗಿ ಗರಿಷ್ಠ ₹ 10 ಸಾವಿರದವರೆಗೆ ಪರಿಹಾರ ನೀಡಲು ಅವಕಾಶ ಇದೆ’ ಎಂದರು.

ಮೆಟ್ರೊ ಪಿಲ್ಲರ್ ಬುಡ ದುರಸ್ತಿ

ಕೆಂಗೇರಿ ಹಾಗೂ ಜ್ಞಾನಭಾರತಿ ಪ್ರದೇಶದಲ್ಲಿ ಭಾನುವಾರ ಸುರಿದ ಮಳೆಗೆ ನಮ್ಮ ಮೆಟ್ರೊ ಹೊಸ ಮಾರ್ಗದ ಕಾಂಕ್ರೀಟ್ ಪಿಲ್ಲರ್ ಒಂದರ (ಸಂಖ್ಯೆ 489) ಬುಡದ ಮಣ್ಣು ಕೊಚ್ಚಿ ಹೋಗಿತ್ತು. ಇಲ್ಲಿ ಉಂಟಾಗಿದ್ದ ಹೊಂಡಗಳನ್ನು ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ದುರಸ್ತಿಗೊಳಿಸಿದೆ.

‘ಮಳೆಯಿಂದ ಮೆಟ್ರೊ ಮಾರ್ಗದ ಯಾವುದೇ ಪಿಲ್ಲರ್‌ಗೂ ಸಮಸ್ಯೆ ಆಗಿಲ್ಲ. ತಳದಲ್ಲಿ ಗಟ್ಟಿ ಶಿಲೆ ಸಿಗುವವರೆಗೆ ನೆಲವನ್ನು ಕೊರೆದು, ಸಾಕಷ್ಟು ಆಳದವರೆಗೆ ತಳಪಾಯ ಅಳವಡಿಸಿರುತ್ತೇವೆ. ಮೇಲ್ಮೈನ ಮಣ್ಣು ಕೊಚ್ಚಿ ಹೋದರೆ ತಳಪಾಯಕ್ಕೆ ಅಪಾಯವಿಲ್ಲ’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ವೃಷಭಾವತಿ ನಾಲೆಯ ಪಕ್ಕದಲ್ಲಿ ಸಾಗುವ ಮೆಟ್ರೊ ಮಾರ್ಗದ ಕಂಬವೊಂದರ ಬಳಿಯ ಮಣ್ಣು ಮಳೆ ನೀರು ಹರವಿನ ರಭಸಕ್ಕೆ ಕೊಚ್ಚಿಹೋಗಿತ್ತು. ಇದರಿಂದ ಮೆಟ್ರೊ ಪಿಲ್ಲರ್‌ಗಳಿಗೆ ಯಾವುದೇ ಅಪಾಯವಿಲ್ಲ’ ಎಂದು ಸ್ಪಷ್ಟಪಡಿಸಿದರು.

ಮತ್ತೆ ಬಿರುಸಿನ ಮಳೆ

ಭಾನುವಾರ ಜೋರಾಗಿದ್ದ ಮಳೆಯ ಅಬ್ಬರ ಸೋಮವಾರ ಮತ್ತು ಮಂಗಳವಾರ ಕಡಿಮೆಯಾಗಿತ್ತು. ಮಂಗಳವಾರ ರಾತ್ರಿಯಿಂದ ಬುಧವಾರ ಬೆಳಿಗ್ಗೆವರೆಗೂ ನಗರದಾದ್ಯಂತ ಬಿಡುವಿಲ್ಲದೆ ಮಳೆ ಸುರಿದಿದೆ. ಬುಧವಾರ ಬೆಳಿಗ್ಗೆ ಮತ್ತು ಮಧ್ಯಾಹ್ನವೂ ನಗರದ ವಿವಿಧ ಪ್ರದೇಶಗಳಲ್ಲಿ ಬಿಟ್ಟು ಬಿಟ್ಟು ಮಳೆಯಾಗಿದೆ.

‘ಮಂಗಳವಾರ ರಾತ್ರಿ ಬಳಿಕ ನಗರದಾದ್ಯಂತ ಜೋರಾಗಿ ಮಳೆಯಾಗಿದೆ. ಆದರೆ, ಮಳೆಯಿಂದ ಹಾನಿ ಉಂಟಾದ ಬಗ್ಗೆ ಸಹಾಯವಾಣಿಗೆ ಯಾವುದೇ ದೂರು ಬಂದಿಲ್ಲ. ಮರಗಳು ಧರೆಗೆ ಉರುಳಿ ಸಮಸ್ಯೆ ಆದ ಬಗ್ಗೆಯೂ ಯಾರೂ ಗಮನಕ್ಕೆ ತಂದಿಲ್ಲ’ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಮೈಸೂರು: ನಿಷೇಧಾಜ್ಞೆ ನಡುವೆ ದಸರೆಗೆ ಚಾಲನೆ ಇಂದು

• ಕೆ.ನರಸಿಂಹಮೂರ್ತಿ

ಮೈಸೂರು: ಕೋವಿಡ್ ಕಾಲಘಟ್ಟದ ಎರಡನೇ ದಸರಾದಲ್ಲಿ ಜನಸಂಭ್ರಮ ಇಲ್ಲ. ಚಾಮುಂಡಿ ಬೆಟ್ಟದಲ್ಲಿ ನಿಷೇಧಾಜ್ಞೆ ನಡುವೆಯೇ ಸರಳ, ಸಾಂಪ್ರದಾಯಿಕ ಉತ್ಸವಕ್ಕೆ ಗುರುವಾರ ಚಾಲನೆ ದೊರಕಲಿದೆ. ಆದರೆ, ಜನ ಬರುವಂತಿಲ್ಲ. ಹೀಗಾಗಿ, ಬಹಳ ಮಂದಿ ‘ನೆನಪಿನ ದಸರೆಯೇ ಚೆನ್ನ’ ಎನ್ನುತ್ತಿದ್ದಾರೆ.

ಈ ಬಾರಿ ಜಿಲ್ಲೆಯಲ್ಲಿ ಕೊರೊನಾ ಸೋಂಕಿನ ಪ್ರಮಾಣ ಶೇ 1ಕ್ಕಿಂತ ಕಡಿಮೆ ಇದೆ. ಆದರೂ, ರಾಜ್ಯ ಸರ್ಕಾರ ಅಳೆದೂ ತೂಗಿ ಹಲವು ನಿರ್ಬಂಧಗಳೊಂದಿಗೆ ಹೊರಡಿಸಿರುವ ಮಾರ್ಗಸೂಚಿಯಂತೆ ಉತ್ಸವ ನಡೆಯಲಿದೆ. ಹೀಗಾಗಿ, ಎಲ್ಲ ಕಾರ್ಯಕ್ರಮಗಳನ್ನೂ ವರ್ಚುವಲ್ ಪರದೆಯಲ್ಲಿ ನೋಡಿ ಆನಂದಿಸಬೇಕಾದ ಅನಿವಾರ್ಯ ಪರಿಸ್ಥಿತಿ. ಸಾಮಾನ್ಯರಿಗೆ ಉತ್ಸವ ಈ ಬಾರಿಯೂ ದೂರ ದರ್ಶನವಷ್ಟೇ.

> ಕೋವಿಡ್ ಸಂದರ್ಭದಲ್ಲೂ ದಸರೆ ನಡೆದಿದೆ. ಸಾರ್ವಜನಿಕರು ದೊಡ್ಡಪ್ರಮಾಣದಲ್ಲಿ ಬರಬೇಕೆಂಬುದು ಮನಸ್ಸಿನಲ್ಲಿದೆ. ಆ ದಿನಗಳೂ ಬರಲಿವೆ
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಚಾಮುಂಡೇಶ್ವರಿ ಉತ್ಸವಮೂರ್ತಿಯನ್ನು ಪ್ರತಿಷ್ಠಾಪಿಸುವ ಬೆಳ್ಳಿ ರಥವನ್ನು ಸ್ವಚ್ಛಗೊಳಿಸಲಾಯಿತು

ಅರಮನೆಯ ಜೊತೆಗೆ ನಗರದ ಪಾರಂಪರಿಕ ಕಟ್ಟಡಗಳು, ವೃತ್ತ, ರಸ್ತೆಗಳು ಸೇರಿ ಈ ಬಾರಿ 100 ಕಿ.ಮೀ ವಿಸ್ತೀರ್ಣದಲ್ಲಿ ಅಳವಡಿಸಿರುವ ದೀಪಾಲಂಕಾರದಲ್ಲಿ ಇಡೀ ನಗರ ಝಗಮಗಿಸುತ್ತಿದೆ. ಅದನ್ನು ಹೊರತುಪಡಿಸಿದರೆ, ವೈವಿಧ್ಯಮಯ ಕಾರ್ಯಕ್ರಮಗಳಿಲ್ಲದೆ ಆಚರಣೆಗೆ ಮಂಕು ಕವಿದಿದೆ. ಉತ್ಸವ ಉದ್ಘಾಟನೆಯಾಗುತ್ತಿರುವ ಹೊತ್ತಿನಲ್ಲೂ ರಸ್ತೆ ದುರಸ್ತಿ ಕೆಲಸ ನಡೆದೇ ಇದೆ.

ಅರಮನೆ, ಕಲಾಮಂದಿರ ಹಾಗೂ ನಂಜನಗೂಡಿನ ಶ್ರೀಕಂಠೇಶ್ವರ ಗುಡಿಯಲ್ಲಷ್ಟೇ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ರಾಜವಂಶಸ್ಥರ ಖಾಸಗಿ ದರ್ಬಾರ್ ವೀಕ್ಷಿಸಲು ಈ ಬಾರಿ ಸಂಬಂಧಿಕರು ಮತ್ತು ಮಾಧ್ಯಮದವರಿಗೂ ಅವಕಾಶವಿಲ್ಲ. ಜನಪ್ರಿಯವಾದ ರೈತ ದಸರಾ, ಯುವ ದಸರಾ, ವಜ್ರಮುಷ್ಟಿ ಕಾಳಗ, ಕ್ರೀಡಾಕೂಟ, ಕುಸ್ತಿ ಪಂದ್ಯಾವಳಿ, ಪಂಜಿನ ಕವಾಯತನ್ನು ಪಕ್ಕಕ್ಕೆ ಸರಿಸಲಾಗಿದೆ. ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲಿರುವ ಆನೆಗಳ ಸಂಖ್ಯೆ ಐದರಿಂದ ಎಂಟಕ್ಕೇರಿದೆ. ಅಭಿಮನ್ಯು ಆನೆ ಎರಡನೇ ಬಾರಿ ಅಂಬಾರಿ ಹೊರಲಿದೆ.

ಹಿಂದಿನ ವರ್ಷ, ಉತ್ಸವದಲ್ಲಿ ಆರು ಮಂದಿ ಕೊರೊನಾ ಸೇನಾನಿಗಳಿಗೆ ಗೌರವ ಸಮರ್ಪಿಸಲಾಗಿತ್ತು. ಈ ಬಾರಿ ಜನ ಸಮುದಾಯದ ಪ್ರತಿನಿಧಿಗಳನ್ನು ಒಳಗೊಳ್ಳುವಂಥ ಯಾವುದೇ ವಿಶೇಷ ಕಾರ್ಯಕ್ರಮ ಇಲ್ಲ. ಆಯ್ದ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಹಾಜರಿಯಲ್ಲಿ ಬಿಜೆಪಿ ನಾಯಕ ಎಸ್.ಎಂ.ಕೃಷ್ಣ ಅವರು ಗುರುವಾರ ಬೆಳಿಗ್ಗೆ 8.15ರಿಂದ 8.45ರೊಳಗೆ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸುವ ಮೂಲಕ ಸಾಂಕೇತಿಕ ಚಾಲನೆ ನೀಡಲಿದ್ದಾರೆ. ಸಂಜೆ ಅರಮನೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ನಡೆಯಲಿದೆ. 15ರಂದು ಅರಮನೆ ಆವರಣದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಚಾಮುಂಡೇಶ್ವರಿ ಉತ್ಸವಮೂರ್ತಿಗೆ ಪುಷ್ಪ ನಮನ ಸಲ್ಲಿಸಿ ಜಂಬೂಸವಾರಿಗೆ ಚಾಲನೆ ನೀಡುತ್ತಾರೆ.

ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸೋಸಲೆ ಆಯ್ಕೆ



ಹೊಸಪೇಟೆ (ವಿಜಯನಗರ): ಗದುಗಿನಲ್ಲಿ ನಡೆಯಲಿರುವ ಎಂಟನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಇಲ್ಲಿನ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಎಸ್. ಚಿನ್ನಸ್ವಾಮಿ ಸೋಸಲೆ ಆಯ್ಕೆಯಾಗಿದ್ದಾರೆ.

ದಲಿತ ಸಾಹಿತ್ಯ ಪರಿಷತ್ತಿನಿಂದ ಅಕ್ಟೋಬರ್ 10 ರಂದು ಗದುಗಿನಲ್ಲಿ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಚಿಂತಕ ಶಿವರುದ್ರ ಕಲ್ಲೋಳಿಕರ ಸಮ್ಮೇಳನಕ್ಕೆ ಚಾಲನೆ ನೀಡುವರು.

ಪ್ರಭಾಕರ ಭಂಡಾರಿಗೆ ಯಾಜಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಪ್ರಭಾಕರ ಭಂಡಾರಿ

ಬೆಂಗಳೂರು: ಕುಮಟ ವಾಲಗಳ್ಳಿಯ ಯಾಜಿ ಮಿತ್ರಮಂಡಳಿ ನೀಡುವ 'ಯಾಜಿ ಪ್ರಶಸ್ತಿ'ಗೆ ಬಡಗುತಿಟ್ಟಿನ ಪ್ರಖ್ಯಾತ ಮದ್ದಳೆವಾದಕ ಪ್ರಭಾಕರ ಭಂಡಾರಿ ಕರ್ಕಿ ಆಯ್ಕೆಯಾಗಿದ್ದಾರೆ.

ಹೊನ್ನಾವರದ ಗೋಳ್ಗೇನ್ ಹೋಮ್‌ಸ್ಟೇಯಲ್ಲಿ ಇದೇ 10ರಂದು ಪ್ರಶಸ್ತಿ ಪ್ರದಾನ ನಡೆಯಲಿದ್ದು, ಪ್ರಶಸ್ತಿಯು ₹25 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ಇದೇ ವೇಳೆ, 'ಶ್ರೀಕೃಷ್ಣ ಸಂಧಾನ' ತಾಳಮದ್ದಲೆ ಹಾಗೂ 'ಶ್ರೀಹರಿ ದರ್ಶನ' ಯಕ್ಷಗಾನ ಪ್ರದರ್ಶನ ನಡೆಯಲಿದೆ.

ಪ್ರಭಾಕರ ಭಂಡಾರಿ ಅವರು ಗುಂಡಬಾಳ, ಕೊಳಗಿಬೀಸ್, ಅಮೃತೇಶ್ವರ, ಇಡಗುಂಜಿ ಮೇಳ ಹಾಗೂ ಸಾಲಿಗ್ರಾಮ ಮೇಳದಲ್ಲಿ 30 ವರ್ಷಗಳ ಕಾಲ ಮದ್ದಳೆವಾದಕರಾಗಿ ಸೇವೆ ಸಲ್ಲಿಸಿದ್ದಾರೆ ಎಂದು ಮೇಳದ ಯಜಮಾನ ಕೃಷ್ಣಯಾಜಿ ಬಳ್ಕೂರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಪ್ರಧಾನ ಇಂಜಿನಿಯರ್‌ರವರ ಕಛೇರಿ
ಪಿ.ಆರ್.ಎ.ಎಂ.ಸಿ.
4ನೇ ಮಹಡಿ, ಪಿ.ಡಬ್ಲ್ಯೂ.ಡಿ. ಆನೆಕ್ಸ್ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು – 560 001.
ಸಂಖ್ಯೆ: ಪ್ರಇಂ/05/ಪಿಆರ್‌ಎಎಂಸಿ/ರಸು/2021–22/646 ದಿನಾಂಕ: 05.10.2021
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಯಾದಗಿರಿ ಜಿಲ್ಲೆಯ 07 ರಸ್ತೆ ಸುರಕ್ಷತಾ ಕಾಮಗಾರಿಗೆ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ. ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (www.eproc.karnataka.gov.in) ದಿನಾಂಕ : 07.10.2021ರಿಂದ ಪಡೆಯಬಹುದಾಗಿರುತ್ತದೆ. ಟೆಂಡರನ್ನು ದಿನಾಂಕ: 18.10.2021 ಸಂಜೆ 5:30 ರೊಳಗೆ ಇ–ಪ್ರೊಕ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಪ್ರಧಾನ ಇಂಜಿನಿಯರ್ ರವರ ಕಛೇರಿ, ಪಿ.ಆರ್.ಎ.ಎಂ.ಸಿ., ಬೆಂಗಳೂರು ಇಲ್ಲಿ ಪಡೆಯಬಹುದಾಗಿರುತ್ತದೆ. ಇ–ಮೇಲ್: cepramc@gmail.com
ಸಹಿ/–
ಕಾರ್ಯಪಾಲಕ ಇಂಜಿನಿಯರ್
ವಾಸಾಸಂಇ/ಬೆಂನ/ಜಿಎ/1799/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪುರಸಭಾ ಕಾರ್ಯಾಲಯ, ಚಿಕ್ಕಬಾಣಾವರ
ಬೆಂಗಳೂರು ಉತ್ತರ ತಾಲ್ಲೂಕು,
ಬೆಂಗಳೂರು ನಗರ ಜಿಲ್ಲೆ–560090.
ಸಂಖ್ಯೆ: TMCC/MF/Tender/01/2021-22 ದಿನಾಂಕ: 04.10.2021
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
(ಸ್ಟಾಂಡರ್ಡ್ ಡಾಕ್ಯುಮೆಂಟ್ KWರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)
ಚಿಕ್ಕಬಾಣಾವರ ಪುರಸಭಾ ವ್ಯಾಪ್ತಿಯ ಪುರಸಭಾ ಅನುದಾನದಡಿ, ಈ ಕೆಳಕಂಡ ಇಂಡೆಂಟ್ ನಂ. 1) DMA/2021-22/WS/WORK_INDENT121004, 2) DMA/2021-22/EL/WORK_INDENT121007, 3) DMA/2021-22/EL/WORK_INDENT121008, 4) DMA/2021-22/WS/WORK_INDENT121005, 5) DMA/2021-22/WS/WORK_INDENT121006. ಒಟ್ಟು ಮೊತ್ತ ರೂ.119.65 ಲಕ್ಷದ ಒಟ್ಟು 5 (ಐದು) ಕಾಮಗಾರಿಗಳಿಗೆ ಐಟಂವಾರು ಮತ್ತು ಇ–ಪ್ರೊಕ್ಯೂರ್‌ಮೆಂಟ್ ಏಕ ಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: www.eproc.karnataka.gov.in ಮೂಲಕ ಅರ್ಜಿ ಸಲ್ಲಿಸುವುದು.
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (As per E-Procurement ಘಂಟೆಯವರೆಗೆ). ಟೆಂಡರ್ ತೆರೆಯುವ ದಿನಾಂಕ: (As per E-Procurement).
ಸಹಿ/– ಆಡಳಿತಾಧಿಕಾರಿಗಳು ಹಾಗೂ ಉಪವಿಭಾಗಾಧಿಕಾರಿಗಳು, ಪುರಸಭೆ, ಚಿಕ್ಕಬಾಣಾವರ, ಬೆಂಗಳೂರು ಉತ್ತರ ಉಪ–ವಿಭಾಗ, ಬೆಂಗಳೂರು ನಗರ ಜಿಲ್ಲೆ.
ವಾ.ಸಾ.ಸಂ.ಇ/ಬೆಂ.ನಗರ/1790/ಆಕಾರ್/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ–4, ಭೂತರಾಮನಹಟ್ಟಿ, ಬೆಳಗಾವಿ–591156
(ನ್ಯಾಕ್ ಮಾನ್ಯತೆ B+ಗ್ರೇಡ್ –2021)
E-mail: rcuregistrar@gmail.com registrar@rcub.ac.in ಕುಲಸಚಿವರ ಕಾರ್ಯಾಲಯ Office of the Registrar Website:www.rcub.ac.in Phone No.0831-2565203/34
ಸಂಖ್ಯೆ: : ರಾಚವಿ/ಬೆಳಗಾವಿ/ಕುಸಕಾ/2021-22/2802 ದಿನಾಂಕ : 05-10-2021
–: ಅಲ್ಪಾವಧಿ ಟೆಂಡರ್ ಪ್ರಕಟಣೆ:–
(Manual Tender ಮೂಲಕ)
ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 9ನೇ ಘಟಿಕೋತ್ಸವಕ್ಕೆ ಊಟ–ಉಪಹಾರ, ಕುಡಿಯುವ ನೀರು (Supply of Breakfast, Lunch and Dinner, Drinking water etc) ಒದಗಿಸುವ ಸಂಸ್ಥೆಗಳಿಂದ Manual Tender ಮೂಲಕ ಟೆಂಡರನ್ನುಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ನೊಂದಾಯಿತ ಗುತ್ತಿಗೆದಾರರು/ಏಜೆನ್ಸಿದಾರರು ರೂ.1,125/–ಗಳ ಡಿ.ಡಿ.ಯನ್ನು "ಹಣಕಾಸು ಅಧಿಕಾರಿಗಳು, ರಾ.ಚ.ವಿ, ಬೆಳಗಾವಿ" ಇವರ ಹೆಸರಿಗೆ ಪಡೆದು ಅಥವಾ ಚಲನ್ ಭರಿಸುವ ಮುಖಾಂತರ, ಅರ್ಜಿಗಳನ್ನು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಿಂದ ಪಡೆದು, ದಾಖಲೆಗಳೊಂದಿಗೆ ಮೊಹರು ಬಂದ್ ಲಕೋಟೆಯಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್: www.rcub.ac.in ಅನ್ನು ನೋಡಬಹುದು.
ಸಹಿ/–
ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,ಬೆಳಗಾವಿ.

ಕರ್ನಾಟಕ ಸರ್ಕಾರ
ನಗರಸಭೆ ಕಾರ್ಯಾಲಯ, ಯಾದಗಿರಿ
ಜಿಲ್ಲೆ ಯಾದಗಿರಿ ಕರ್ನಾಟಕ ರಾಜ್ಯ
ದೂರವಾಣಿ: 08473–252312 E-mail : itstaff_ulb_yadgiri@yahoo.com
Website : www.yadgircity.mrc.gov.in
ಸಂ:ನಸಯಾ:ನೈರ್ಮಲ್ಯ ಶಾಖೆ:ಇ–ಟೆಂಡರ:2021–22 ದಿನಾಂಕ: 30.09.2021
:: ಇ–ಪ್ರಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಯಾದಗಿರಿ ಜಿಲ್ಲೆಯ ಯಾದಗಿರಿ ನಗರಸಭೆಯ ಪೌರಾಯುಕ್ತರು ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮ 2000ರಂತೆ ಇ–ಪ್ರಕ್ಯೂರಮೆಂಟ್ ಪದ್ಧತಿಯಲ್ಲಿ 2021–22ನೇ ಸಾಲಿನ ಎಸ್.ಎಫ್.ಸಿ ಅನುದಾನದಡಿಯಲ್ಲಿ ಈ ಕೆಳಗಿನ ಹೊರ ಗುತ್ತಿಗೆ ಆಧಾರದ ಮೇಲೆ ಮಾನವ ಶಕ್ತಿಯನ್ನು ಒದಗಿಸಲು ಇ–ಪ್ರಕ್ಯೂರಮೆಂಟ್ ಪೋರ್ಟನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಮಾನವ ಶಕ್ತಿ ಒದಗಿಸುವ ಏಜೇನ್ಸಿದಾರರ (Standard Tender Document (Man Power Services) ಗಳ ಅಡಿಯಲ್ಲಿ ಎರಡು ಲಕೋಟಗಳಲ್ಲಿ ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಇ–ಪ್ರಕ್ಯೂರಮೆಂಟನಲ್ಲಿ http://eproc.karnataka.gov.in ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನಲೈನ್ ಮೂಲಕ ಟೆಂಡರಗಳನ್ನು ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್‌ಸೈಟ್ www.yadgircity.mrc.gov.in. ರಲ್ಲಿ ನೋಡಬಹುದು ಹಾಗೂ ತಾಂತ್ರಿಕ ಅಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
1) ಟೆಂಡರಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ: 01–10–2021 ಬೆಳಿಗ್ಗೆ 10.00 ಗಂಟೆಗೆ, 2) ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02–11–2021 ರಂದು ಸಾಯಂಕಾಲ 5.30 ವರೆಗೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04–11–2021 ರಂದು ಬೆಳ್ಳಿಗ್ಗೆ 11.00 ಗಂಟೆಗೆ, 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 09–11–2021 ರಂದು ಬೆಳ್ಳಿಗ್ಗೆ 11.00 ಗಂಟೆಗೆ.
1) ಇಂಡೆಂಟ್ ನಂಬರ : CMC/YDG/HEL/01/ 2021-22, 2) ಕಾಮಗಾರಿಯ ವಿವರ : MANPOWER (DRIVERS AND SUPERVISORS/ OTHERS) FOR SWM ACTIVITIES AS PER DPR OF YADGIR CITY. (FOR THE YEAR 2021-22), 3) ಟೆಂಡರಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) : 60.10 Lakhs, 4) ಇಎಂಡಿ ಮೊತ್ತ (ರೂ ಗಳಲ್ಲಿ), 5) ಗುತ್ತಿಗೆದಾರರು EMD ಗೆ ಬದಲಾಗಿ EMD Declaration ನಮೂನೆಯನ್ನು ಭರ್ತಿ ಮಾಡಿ Online ನಲ್ಲಿ ಸಲ್ಲಿಸತಕ್ಕದ್ದು, 6) ಕಾಮಗಾರಿ ನಿರ್ವಹಿಸುವ ಕಾಲಾವಧಿ : 12 ತಿಂಗಳು.
ಸಹಿ/– ಪೌರಾಯುಕ್ತರು ನಗರಸಭೆ, ಯಾದಗಿರಿ. | ಸಹಿ/– ಉಪಾಧ್ಯಕ್ಷರು ನಗರಸಭೆ, ಯಾದಗಿರಿ. | ಸಹಿ/– ಅಧ್ಯಕ್ಷರು ನಗರಸಭೆ, ಯಾದಗಿರಿ.
ವಾ.ಸಾ.ಸಂ.ಇ/ಯಾದಗಿರಿ/229/ಎಂಸಿ&ಎ/2021–22

ಸಿಡಿಲಿಗೆ ಇಬ್ಬರ ಸಾವು

ಚಿತ್ತಾಪುರ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ದಿಗ್ಗಾಂವ ಗ್ರಾಮದಲ್ಲಿ ಸಿಡಿಲು ಬಡಿದು ಇಬ್ಬರು ಮೃತಪಟ್ಟಿದ್ದಾರೆ.

ಬಸವರಾಜ ಶರಣಪ್ಪ ಶಹಾಬಾದಿ (56) ಹಾಗೂ ಅರ್ಜುನ ಸಾಬಣ್ಣ ಕೊಳ್ಳೂರ (52) ಮೃತರು.

ಬಸವರಾಜ ಅವರ ಮೃತದೇಹ ಮಂಗಳವಾರ ರಾತ್ರಿ ಮತ್ತು ಅರ್ಜುನ ಮೃತದೇಹ ಬುಧವಾರ ಪತ್ತೆಯಾಗಿದೆ. 'ಇಬ್ಬರೂ ಕುರಿಗಳನ್ನೆಂದು ಕಾಡಿನೊಳಗೆ ಹೋಗಿದ್ದರು' ಎಂದು ಚಿತ್ತಾಪುರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಎಚ್.ಎ. ರಂಗನಾಥ್‌ಗೆ 'ಸುಂದರ ಲಾಲ್ ಹೋರಾ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಭಾರತೀಯ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ 2020ನೇ ಸಾಲಿನ 'ಸುಂದರ್ ಲಾಲ್ ಹೋರಾ' ಪ್ರಶಸ್ತಿಗೆ ಬೆಂಗಳೂರು ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ. ಎಚ್.ಎ. ರಂಗನಾಥ್ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ಪದಕ ಮತ್ತು ಪ್ರಮಾಣಪತ್ರವನ್ನು ಒಳಗೊಂಡಿದೆ. ಪ್ರೊ. ರಂಗನಾಥ್ ಅವರು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಯಾಗುವ ಮುನ್ನ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಣಿವಿಜ್ಞಾನದ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದರು.

ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತೆ ಮಂಡಳಿಯ (ಎನ್‌ಎಎಸಿ) ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ ಹೆಗ್ಗಳಿಕೆಗೂ ಅವರು ಪಾತ್ರರಾಗಿದ್ದಾರೆ. ಈಗ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಸಂದರ್ಶಕ ಪ್ರಾಧ್ಯಾಪಕರಾಗಿದ್ದಾರೆ. ವಂಶವಾಹಿ ಮತ್ತು ವಿಕಾಸದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರತಿಷ್ಠಿತ ನಿಯತಕಾಲಿಕೆಗಳಲ್ಲಿ ಪ್ರೊ. ರಂಗನಾಥ್ ಅವರ ಹಲವಾರು ಲೇಖನಗಳು ಪ್ರಕಟವಾಗಿವೆ. ಪ್ರೊ. ರಂಗನಾಥ್ ಅವರು ಕೈಗೊಂಡ ಸಂಶೋಧನಾ ಯೋಜನೆಗಳಿಗೆ ಐಎನ್‌ಎಸ್‌ಎ, ಯುಜಿಸಿ, ಡಿಬಿಟಿ, ಡಿಎಸ್‌ಟಿ, ಡಿಎಫ್‌ಜಿ ಮತ್ತಿತರ ಸಂಸ್ಥೆಗಳು ಅನುದಾನ ನೀಡಿವೆ.

ದಾವಣಗೆರೆ: ಹಳ್ಳದಲ್ಲಿ ಉರುಳಿ ಬಿದ್ದ ಲಾರಿ, ನೀರುಪಾಲಾದ ರಾಗಿ

ರಾಜ್ಯದ ಹಲವೆಡೆ ದಿನವಿಡೀ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ಬುಧವಾರ ಉತ್ತಮವಾಗಿ ಮಳೆ ಸುರಿದಿದೆ. ಹಳ್ಳ-ಕೊಳ್ಳಗಳು ಭರ್ತಿಯಾಗಿವೆ.

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಸಂತೇಬೆನ್ನೂರು ಹೋಬಳಿಯ ದೊಡ್ಡಘಟ್ಟ-ಚಿರಡೋಣಿ ನಡುವೆ ಸೂಳೆಕೆರೆ ಹಳ್ಳದ ರಭಸಕ್ಕೆ ಸೇತುವೆ ದಾಟುತ್ತಿದ್ದ ಪಡಿತರ ರಾಗಿ ತುಂಬಿದ್ದ ಲಾರಿ ಉರುಳಿಬಿದ್ದಿದೆ. ಚಾಲಕ ಅಪಾಯದಿಂದ ಪಾರಾಗಿದ್ದಾರೆ. ಪಡಿತರ ರಾಗಿಯು ನೀರುಪಾಲಾಗಿದೆ.

ದಾವಣಗೆರೆ ನಗರ ಮತ್ತು ಜಿಲ್ಲೆಯಲ್ಲಿ ಗುಡುಗು, ಸಿಡಿಲು ಸಹಿತ ದಿನವಿಡೀ ಉತ್ತಮ ಮಳೆಯಾಗಿದೆ. ಸಂತೇಬೆನ್ನೂರಿನ ಕೋಟೆ ರಸ್ತೆ ಭಾಗದಲ್ಲಿ ಮೂರು ಮನೆಗಳ ಗೋಡೆ ಕುಸಿದಿದೆ. ಮಲೇಬೆನ್ನೂರು ಹೋಬಳಿ ವ್ಯಾಪ್ತಿಯ ಗುಳದಹಳ್ಳಿ, ಸಂಕ್ಲೀಪುರ, ಆದಾಪುರ, ನಿಟ್ಟೂರು ಗ್ರಾಮದ ವ್ಯಾಪ್ತಿಯಲ್ಲಿ ನೂರಾರು ಎಕರೆ ಭತ್ತದ ಗದ್ದೆಗಳು ಜಲಾವೃತವಾಗಿವೆ.

ಶಿವಮೊಗ್ಗ ಜಿಲ್ಲೆಯಲ್ಲಿ ಮೂರು ದಿನಗಳಿಂದ ನಿರಂತರವಾಗಿ ಮಳೆ ಸುರಿಯುತ್ತಿದ್ದು, ಹಲವೆಡೆ ಅಪಾರ ಹಾನಿಯಾಗಿದೆ. ಶಿವಮೊಗ್ಗ ನಗರದಲ್ಲೂ ನಿರಂತರ ಮಳೆ ಸುರಿಯುತ್ತಿದ್ದು, ಹೊಸಮನೆ ಬಡಾವಣೆ ಸೇರಿ ತಗ್ಗು ಪ್ರದೇಶಗಳು ಮತ್ತೆ ಜಲಾವೃತವಾಗಿವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಗುಡುಗು ಸಹಿತ ಉತ್ತಮ ಮಳೆ ಸುರಿದಿದ್ದು, ವರುಣನ ನಿರೀಕ್ಷೆಯಲ್ಲಿದ್ದ ರೈತರಿಗೆ ಖುಷಿಯಾಗಿದೆ. ಈರುಳ್ಳಿ ಹಾಗೂ ಶೇಂಗಾ ಕಟಾವಿಗೆ ಮಾತ್ರ ತೊಂದರೆಯಾಗಿದೆ. ಕೆರೆ, ಹಳ್ಳ, ಬಾವಿ ಹಾಗೂ ಚೆಕ್‌ಡ್ಯಾಂಗಳಿಗೆ ನೀರು ಹರಿದುಬಂದಿತು. ಹೊಸದುರ್ಗ, ಹೊಳಲ್ಕೆರೆ ತಾಲ್ಲೂಕಿನ ಹಲವೆಡೆ ಹಳ್ಳಗಳು ತುಂಬಿ ಹರಿದವು. ಚಿತ್ರದುರ್ಗ ನಗರದ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ಒಂದನೇ ವಾರ್ಡ್‌ನ ಹಲವು ಮನೆಗಳು ಜಲಾವೃತವಾಗಿವೆ. ಭರಮಸಾಗರ ಸಮೀಪದ ಕಾಕಬಾಳು ಗ್ರಾಮದಲ್ಲಿ ಎರಡು ಮನೆಗಳು ಭಾಗಶಃ ಕುಸಿದಿವೆ.

ಧಾರಾಕಾರ ಮಳೆ: ಕಾಫಿನಾಡಿನ ವಿವಿಧೆಡೆ ಬುಧವಾರ ಧಾರಾಕಾರವಾಗಿ ಮಳೆ ಸುರಿದಿದೆ. ತರೀಕೆರೆ ತಾಲ್ಲೂಕಿನ ಸುಣ್ಣದಹಳ್ಳಿ, ನೇರಲಕೆರೆ ಭಾಗದಲ್ಲಿ ತೋಟ, ಜಮೀನುಗಳಲ್ಲಿ ನೀರು ಆವರಿಸಿದೆ. ಕಡೂರಿನ ಯು.ಬಿ ರಸ್ತೆಯ ಬ್ಯಾಟರಿ ಅಂಗಡಿ, ಇತರ ಮಳಿಗೆಗಳಿಗೆ ನೀರು ನುಗ್ಗಿದೆ.

ಚಿಕ್ಕಮಗಳೂರು, ಮೂಡಿಗೆರೆ, ಶೃಂಗೇರಿ, ಕೊಪ್ಪ, ಎನ್.ಆರ್.ಪುರ ಭಾಗದಲ್ಲಿ ಬಿರುಸಾಗಿ ಸುರಿದಿದೆ. ತುಂಗಾ, ಭದ್ರಾ ನದಿಗಳಲ್ಲಿ ಹರಿವಿನ ಪ್ರಮಾಣ ತುಸು ಹೆಚ್ಚಳವಾಗಿದೆ. ಗಿರಿಶ್ರೇಣಿ ಭಾಗದಲ್ಲಿ ಹಳ್ಳಗಳಲ್ಲಿ ಹರಿವು ಸ್ವಲ್ಪ ಜಾಸ್ತಿಯಾಗಿದೆ.

ಮಂಗಳೂರಿನಲ್ಲೂ ಸಾಧಾರಣ ಮಳೆಯಾಗಿದೆ.

ಹಲವೆಡೆ ಧಾರಾಕಾರ ಮಳೆ: ಮೈಸೂರು ಭಾಗದ ವಿವಿಧೆಡೆ ಮಂಗಳವಾರ ರಾತ್ರಿ ಹಾಗೂ ಬುಧವಾರ ಧಾರಾಕಾರ ಮಳೆಯಾಗಿದೆ. ದಸರೆಗೆ ದೀಪಾಲಂಕಾರದಿಂದ ಸಜ್ಜುಗೊಂಡಿರುವ ಮೈಸೂರು ನಗರ ಹಾಗೂ ಸುತ್ತಮುತ್ತ ಸಂಜೆ ಮಳೆ ಅಬ್ಬರಿಸಿತು.

ಹುಣಸೂರು ತಾಲ್ಲೂಕಿನ ಹನಗೋಡು ಹೋಬಳಿಯಲ್ಲಿ ಮಂಗಳವಾರ ರಾತ್ರಿ ಬಿದ್ದ ಬಿರುಗಾಳಿ ಸಹಿತ ಭಾರಿ ಮಳೆಗೆ ಬಾಳೆ, ಮುಸುಕಿನ ಜೋಳದ ಬೆಳೆ ಹಾನಿಯಾಗಿದೆ. ಮರಗಳು, ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಮಣ್ಣಿನ ರಸ್ತೆಗಳು ಕೊಚ್ಚಿ ಹೋಗಿವೆ. ಹಲವೆಡೆ ಮನೆಗಳಿಗೂ ಹಾನಿಯಾಗಿದೆ.

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನಲ್ಲಿ ಮಂಗಳವಾರ ರಾತ್ರಿ ಸುರಿದ ಭಾರಿ ಮಳೆಗೆ ಕಸಬಾ ಹೋಬಳಿ ಬೈಚನಹಳ್ಳಿಯಲ್ಲಿ ಮನೆ ಕುಸಿದು ಬಿದ್ದಿದೆ. ರಾಮನಾಥಪುರ ಹೋಬಳಿಯ ಕಾಳೇನಹಳ್ಳಿಯಲ್ಲಿ ರಸ್ತೆ ಸಂಪರ್ಕ ಬಂದ್ ಆಗಿದ್ದು, ಬಸವಾಪಟ್ಟಣದಲ್ಲಿ ಮನೆಗಳಿಗೆ ನೀರು ನುಗ್ಗಿದೆ. ಬಸವನಹಳ್ಳಿಕೊಪ್ಪಲಿನಲ್ಲಿ ಸಂಪರ್ಕ ರಸ್ತೆಯು ಕೊಚ್ಚಿ ಹೋಗಿದೆ.

ಬಸವಾಪಟ್ಟಣದಲ್ಲಿ 30 ಮನೆಗಳಿಗೆ, ಜಿಟ್ಟೇನಹಳ್ಳಿಯಲ್ಲಿ ಹಾರಂಗಿ ಎಡದಂಡೆ ನಾಲೆಯಲ್ಲಿ ನೀರಿನ ಹರಿವು ಹೆಚ್ಚಾಗಿ ಕಾಲುವೆ ಒಡೆದು 3 ಮನೆಗಳಿಗೆ ನೀರು ನುಗ್ಗಿದೆ. ಕೊಣನೂರು ಸಮೀಪದ ಶಿರಧನಹಳ್ಳಿಯಲ್ಲಿ ಬೃಹತ್ ಮರವೊಂದು ತಡರಾತ್ರಿ ರಸ್ತೆಗೆ ಉರುಳಿದ್ದು, ಐದು ವಿದ್ಯುತ್ ಕಂಬಗಳು ಮುರಿದಿವೆ. ಯಸಳೂರು, ಹೆತ್ತೂರು ಹೋಬಳಿಯಲ್ಲಿ ಭತ್ತ, ಕಾಫಿ, ಶುಂಠಿ ಬೆಳೆಗೆ ಅಪಾರ ಪ್ರಮಾಣದಲ್ಲಿ ಹಾನಿ ಉಂಟಾಗಿದೆ. ಕೊಡಗು ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆಯಾಗಿದೆ.

ರಭಸದ ಮಳೆ: ಬೆಳಗಾವಿ, ಕಾರವಾರ, ಹುಬ್ಬಳ್ಳಿ, ಧಾರವಾಡ, ಗದಗ, ಹೊಸಪೇಟೆಯಲ್ಲಿ ಮಳೆ ರಭಸದಿಂದ ಸುರಿಯಿತು. ಶಿರಸಿ ತಾಲ್ಲೂಕಿನ ಬದನಗೋಡ, ಅಂಡಗಿ ಭಗದಲ್ಲಿ ಮನೆಗಳಿಗೆ ನೀರು ನುಗ್ಗಿದೆ. ಭಟ್ಕಳ, ಕುಮಟಾ, ಅಂಕೋಲಾ, ಹೊನ್ನಾವರ ಸೇರಿದಂತೆ ಕರಾವಳಿಯಾದ್ಯಂತ ಮಳೆಯಾಗಿದೆ.

ತುಮಕೂರು ಹಾಗೂ ಚಿಕ್ಕಬಳ್ಳಾಪುರದಲ್ಲಿ ಉತ್ತಮ ಮಳೆಯಾಗಿದೆ.

ದೊಡ್ಡಘಟ್ಟಚಿರಡೋಣಿ ನಡುವೆ ಸೂಳೆಕೆರೆ ಹಳ್ಳದ ನೀರಿನ ರಭಸಕ್ಕೆ ಉರುಳಿದ ರಾಗಿ ತುಂಬಿದ್ದ ಲಾರಿ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	114.70	12,993	6,345
ಹಾರಂಗಿ	2,859	2,858.03	2,105	1,250
ಕಬಿನಿ	2284.00	2,280.35	7,500	3,500
ಹೇಮಾವತಿ	2,922	2,912.92	2,965	4,787
ಲಿಂಗನಮಕ್ಕಿ	1,819	1,816.5	8,121	-
ಸೂಪಾ (ಮೀ)	564	556.58	5,629	4,300
ಮಾಣಿ	594	587.64	1,407	-
ತುಂಗಭದ್ರಾ	1,633	1,632.99	23,642	23,162
ಮಲಪ್ರಭಾ	2079.5	2,078.80	1,444	1,444
ಘಟಪ್ರಭಾ	2175	2,175	2,213	2,213
ಭದ್ರಾ	186	185.5	15,669	4,813
ಆಲಮಟ್ಟಿ (ಮೀ)	519.6	519.60	14,226	14,266
ನಾರಾಯಣಪುರ (ಮೀ)	492.25	492.22	18,000	23,800

*ನೆಲಮಟ್ಟದಿಂದ

19 ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್' ಘೋಷಣೆ

ಬೆಂಗಳೂರು: 'ರಾಜ್ಯದಲ್ಲಿ ನೈರುತ್ಯ ಮುಂಗಾರು ಚುರುಕುಗೊಂಡಿರುವುದರಿಂದ ಕರಾವಳಿ ಹಾಗೂ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಅಕ್ಟೋಬರ್ 7ರಿಂದ 9ರವರೆಗೆ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿ ಜಿಲ್ಲೆಗಳಲ್ಲಿ ಇದೇ 11ರವರೆಗೆ ಹೆಚ್ಚು ಮಳೆ ಸುರಿಯುವ ಮುನ್ಸೂಚನೆ ಇರುವುದರಿಂದ 'ಯೆಲ್ಲೊ ಅಲರ್ಟ್' ಮುಂದುವರಿಸಲಾಗಿದೆ. ಉಳಿದ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಹೆಚ್ಚಾಗಿ ಇರಲಿದ್ದು, ಕೆಲವೆಡೆ ಸಾಧಾರಣ ಮಳೆ ಸುರಿಯಲಿದೆ.

ಎಲ್ಲೆಲ್ಲಿ ಅಲರ್ಟ್?: ಕರಾವಳಿಯ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಹಾಗೂ ಒಳನಾಡಿನ ತುಮಕೂರು, ಶಿವಮೊಗ್ಗ, ಕೋಲಾರ, ಕೊಡಗು, ಹಾಸನ, ಚಿತ್ರದುರ್ಗ, ದಾವಣಗೆರೆ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಯಾದಗಿರಿ, ರಾಯಚೂರು, ಕಲಬುರಗಿ, ಹಾವೇರಿ, ಬೀದರ್, ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಮಳೆ ಎಲ್ಲಿ, ಎಷ್ಟು?: ಉತ್ತರ ಕನ್ನಡ ಜಿಲ್ಲೆಯ ಜಗಲ್‌ಬೇಟ್ ಹಾಗೂ ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ತಲಾ 8 ಸೆಂ.ಮೀ ಗರಿಷ್ಠ ಮಳೆಯಾಗಿದೆ.

ಬೆಂಗಳೂರು: ಹಸುಗೂಸು ಮಾರಾಟದ ವ್ಯಾಪಕ ಜಾಲ

ಒಂದನೇ ಪುಟದಿಂದ...

ಈ ಜಾಲದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವುದು ಗೊತ್ತಾಗಿದೆ. ಅವರ ಪತ್ತೆ ಕಾರ್ಯ ಪ್ರಗತಿಯಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಐವಿಎಫ್ ಏಜೆಂಟ್‌ಗಳು: 'ಆರೋಪಿಗಳೆಲ್ಲಾ ಐವಿಎಫ್ ಕೇಂದ್ರಗಳಲ್ಲಿ (ಇನ್ ವಿಟ್ರೊ ಫರ್ಟಿಲೈಜೇಷನ್) ಏಜೆಂಟ್‌ಗಳಾಗಿ ಕೆಲಸ ಮಾಡುತ್ತಿದ್ದರು. ಅಲ್ಲಿ ಬಾಡಿಗೆ ತಾಯಿ ಮೂಲಕ ಮಗು ಪಡೆಯಲು ಬರುವವರ ಪೈಕಿ ಹಲವರಿಗೆ ₹30 ರಿಂದ ₹40 ಲಕ್ಷ ಹಣ ಪಾವತಿಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅಂತಹವರನ್ನು ಸಂಪರ್ಕಿಸುತ್ತಿದ್ದ ಆರೋಪಿಗಳು ಕಡಿಮೆ ಖರ್ಚಿನಲ್ಲಿ ಬಾಡಿಗೆ ತಾಯಿ ಮೂಲಕ ಮಗು ಕೊಡಿಸುವ ಆಮಿಷ ಒಡ್ಡುತ್ತಿದ್ದರು. ಅವರಿಂದ ವೀರ್ಯ ಸಂಗ್ರಹಿಸಿಕೊಂಡು, ಇತರೆ ಪರೀಕ್ಷೆಗಳನ್ನೂ ಮಾಡಿಸುತ್ತಿದ್ದರು. ಮಗು ಜನಿಸಿದ ಕೂಡಲೇ ಸುಪರ್ದಿಗೆ ನೀಡುವುದಾಗಿ ಹೇಳಿ ಹಣ ಪಡೆದುಕೊಳ್ಳುತ್ತಿದ್ದರು' ಎಂದು ಪೊಲೀಸರು ವಿವರಿಸಿದರು.

'ಹಣ ಪಡೆದ ಬಳಿಕ ಸರಿಯಾಗಿ ಒಂಬತ್ತನೇ ತಿಂಗಳಿಗೆ ಕಾರ್ಯಪ್ರವೃತ್ತರಾಗುತ್ತಿದ್ದ ಆರೋಪಿಗಳು ಆಗಷ್ಟೇ ಜನಿಸಿದ ಹಸುಗೂಸಿಗಾಗಿ ಹುಡುಕಾಟ ನಡೆಸುತ್ತಿದ್ದರು. ಮಗು ಸಾಕಲು ಶಕ್ತರಲ್ಲದವರು, ಕೊಳೆಗೇರಿಗಳಲ್ಲಿ ವಾಸಿಸುವ ಕುಟುಂಬಗಳನ್ನು ಪತ್ತೆ ಮಾಡಿ ಅವರಿಂದ ಕಡಿಮೆ ಬೆಲೆಗೆ ಹಸುಗೂಸು ಖರೀದಿಸುತ್ತಿದ್ದರು. ಅದನ್ನು ಸಂಬಂಧಪಟ್ಟ ದಂಪತಿಗೆ ಒಪ್ಪಿಸುತ್ತಿದ್ದರು. ಅದು ಬಾಡಿಗೆ ತಾಯಿಯಿಂದಲೇ ಜನಿಸಿರುವ ಮಗು ಎಂದು ನಂಬಿಸುತ್ತಿದ್ದರು. ಬೆಂಗಳೂರು ಹಾಗೂ ಇತರ ಜಿಲ್ಲೆಗಳಷ್ಟೇ ಅಲ್ಲದೆ ಚೆನ್ನೈ ಹಾಗೂ ಮಹಾರಾಷ್ಟ್ರಕ್ಕೂ ಶಿಶುಗಳನ್ನು ಪೂರೈಸಿರುವ ಶಂಕೆ ಇದೆ. ಕಳೆದ ಐದು ವರ್ಷಗಳಿಂದ ಈ ಜಾಲ ಸಕ್ರಿಯವಾಗಿದೆ' ಎಂದೂ ಅವರು ಹೇಳಿದರು.

'ತಾವು ಮಗು ದತ್ತು ನೀಡುತ್ತಿರುವುದಾಗಿ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಪತ್ರವನ್ನೂ ಬರೆಸಿದ್ದಾಗಿ ಆರೋಪಿ ದೇವಿ ಷಣ್ಮುಗಮ್ಮ ತಿಳಿಸಿದ್ದಾಳೆ. ಈ ಕುರಿತೂ ತನಿಖೆ ನಡೆಸಲಾಗುತ್ತಿದೆ' ಎಂದು ಹೇಳಿದರು.

ಮುಖ್ಯ ಆರೋಪಿ ಸಾವು: 'ಈ ಪ್ರಕರಣದ ಪ್ರಮುಖ ಆರೋಪಿ ರತ್ನ, ಬೆಂಗಳೂರಿನ ನಿವಾಸಿಯಾಗಿದ್ದು ಇತ್ತೀಚೆಗೆ ಕೋವಿಡ್‌ನಿಂದ ಮೃತಪಟ್ಟಿದ್ದಾಳೆ. ಆಕೆ ಜೀವಂತವಾಗಿದ್ದರೆ ಇನ್ನಷ್ಟು ಮಾಹಿತಿಗಳನ್ನು ಕಲೆಹಾಕಬಹುದಿತ್ತು. ರತ್ನ ಮತ್ತು ಮಹೇಶ್‌ಕುಮಾರ್ ಆತ್ಮೀಯರಾಗಿದ್ದರು ಎಂಬುದು ತನಿಖೆಯಿಂದ ತಿಳಿದುಬಂದಿದೆ' ಎಂದು ಪೊಲೀಸರು ತಿಳಿಸಿದರು.

ಶಿಶು ಕಳವು ಕೊಟ್ಟ ಮಾಹಿತಿ

'ಚಾಮರಾಜಪೇಟೆ ಆಸ್ಪತ್ರೆಯಿಂದ ಹಸುಗೂಸು ಕದ್ದು ಅದನ್ನು ಮಾರಾಟ ಮಾಡಿರುವ ಕುರಿತು ಬಸವನಗುಡಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಕುರಿತು ಠಾಣೆಯ ಇನ್‌ಸ್ಪೆಕ್ಟರ್ ಮೀನಾಕ್ಷಿ ಅವರನ್ನೊಳಗೊಂಡ ತಂಡ ತನಿಖೆ ನಡೆಸಿದಾಗ ಇದೇ ಬಗೆಯ ಇತರ ಮೂರು ಪ್ರಕರಣಗಳ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ತನಿಖೆ ವೇಳೆ ಆರೋಪಿ ಮಹೇಶ್ ಮನೆಯಲ್ಲಿ 28 'ತಾಯಿ ಕಾರ್ಡ್'ಗಳೂ ಸಿಕ್ಕಿದ್ದವು. ಅವುಗಳನ್ನು ಆತ ಕೆಂಗೇರಿ ಆಸ್ಪತ್ರೆಯಿಂದ ಪಡೆದುಕೊಂಡಿರುವುದೂ ಗೊತ್ತಾಗಿತ್ತು' ಎಂದು ಹರೀಶ್ ಪಾಂಡೆ ತಿಳಿಸಿದರು.

'ಇನ್ನೂ 18 ಮಕ್ಕಳನ್ನು ಮಾರಾಟ ಮಾಡಿರುವ ಶಂಕೆ ಇದೆ. ಅವರ ಪತ್ತೆ ಕಾರ್ಯ ಪ್ರಗತಿಯಲ್ಲಿದೆ. ಆರೋಪಿಗಳು ಮಕ್ಕಳ ಅಗತ್ಯವಿದ್ದವರಿಂದ ಅವರ ಆರ್ಥಿಕ ಸ್ಥಿತಿಗೆ ಅನುಗುಣವಾಗಿ ಹಣ ಪಡೆದಿದ್ದಾರೆ. ಆರೋಗ್ಯವಂತ ಮಗುವೊಂದಕ್ಕೆ ₹6 ಲಕ್ಷದವರೆಗೂ ಹಣ ಪಡೆದಿರುವುದು ತನಿಖೆಯಿಂದ ಗೊತ್ತಾಗಿದೆ. ಪೋಷಕರಿಂದ ₹80 ಸಾವಿರಕ್ಕೆ ಶಿಶು ಖರೀದಿಸುತ್ತಿದ್ದ ವಿಚಾರವನ್ನೂ ಬಾಯಿ ಬಿಟ್ಟಿದ್ದಾರೆ. ಮಗು ಆರೋಗ್ಯವಾಗಿದ್ದರೆ ಅದರ ಪಾಲಕರಿಗೆ ₹1 ಲಕ್ಷಕ್ಕೂ ಅಧಿಕ ಮೊತ್ತ ನೀಡುತ್ತಿದ್ದುದ್ದಾಗಿಯೂ ತಿಳಿಸಿದ್ದಾರೆ' ಎಂದೂ ಮಾಹಿತಿ ನೀಡಿದರು.

ಇದೇ 8ಕ್ಕೆ 'ಗ್ರೋಯಿಂಗ್ ಅಪ್ ಕಾರಂತ' ಕೃತಿ ಬಿಡುಗಡೆ

ಬೆಂಗಳೂರು: 'ಕಡಲ ತೀರದ ಭಾರ್ಗವ' ಎಂದೇ ಪರಿಚಿತರಾದ ಡಾ.ಕೆ. ಶಿವರಾಮ ಕಾರಂತ ಅವರ ಜೀವನ ಚರಿತ್ರೆ ಕುರಿತು ಅವರ ಮಕ್ಕಳು ಬರೆದಿರುವ 'ಗ್ರೋಯಿಂಗ್ ಅಪ್ ಕಾರಂತ' ಕೃತಿಗೆ ಸಂಬಂಧಿಸಿದಂತೆ ಅಕ್ಟೋಬರ್ 8ರಂದು ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ.

ಶಿವರಾಮ ಕಾರಂತ ಅವರ ಮಕ್ಕಳಾದ ಪರಿಸರ ತಜ್ಞ ಉಲ್ಲಾಸ ಕಾರಂತ, ಮಾಳವಿಕಾ ಕಪೂರ್ ಹಾಗೂ ಕ್ಷಮಾ ರಾವ್ ಅವರು ಈ ಕೃತಿ ರಚಿಸಿದ್ದಾರೆ. ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್‌ನಲ್ಲಿ (ಬಿಐಸಿ) ಅಕ್ಟೋಬರ್ 8ರಂದು ಸಂಜೆ 6ಕ್ಕೆ ಈ ಪುಸ್ತಕಕ್ಕೆ ಸಂಬಂಧಿಸಿದ ಕಾರ್ಯಕ್ರಮ ಆಯೋಜಿಸಲಾಗಿದ್ದು, ಪುಸ್ತಕ ಬಿಡುಗಡೆಯೂ ನಡೆಯಲಿದೆ. ಈ ಕಾರ್ಯಕ್ರಮವನ್ನು https://bangaloreinternationalcentre.org/event/growing-up-karanth/ ಮೂಲಕವೂ ವೀಕ್ಷಿಸಬಹುದಾಗಿದೆ. ಪುಸ್ತಕವು ಇದೇ ಸ್ಥಳದಲ್ಲೇ ಅಂದು ಮಾರಾಟಕ್ಕೆ ಲಭ್ಯವಿದೆ.



ಪುಸ್ತಕದ ಮುಖಪುಟ

'ನಾವು ಮೂವರು ನಮ್ಮ ತಂದೆ ಶಿವರಾಮ ಕಾರಂತ ಅವರ ವೈಯಕ್ತಿಕ ಜೀವನ ಚರಿತ್ರೆಯನ್ನು ಬರೆದಿದ್ದೇವೆ. ನಮ್ಮ ತಂದೆ ಮತ್ತು ತಾಯಿ ಲೀಲಾ ಕಾರಂತ ಅವರ ಜತೆಗಿನ ನಮ್ಮ ಅನುಭವಗಳನ್ನು ಅನಾವರಣಗೊಳಿಸಿದ್ದೇವೆ' ಎಂದು ಅವರು ತಿಳಿಸಿದ್ದಾರೆ.

ಈ ಪುಸ್ತಕವನ್ನು ವೆಸ್ಟ್‌ಲ್ಯಾಂಡ್ ಪ್ರಕಾಶನ (ಅಮೆಜಾನ್‌ನ ಭಾರತದ ಪ್ರಕಾಶನ ವಿಭಾಗ) ಪ್ರಕಟಿಸಿದೆ. ಶೀಘ್ರದಲ್ಲೇ ಈ ಪುಸ್ತಕವು ಆನ್‌ಲೈನ್ ಮೂಲಕ ಮತ್ತು ಪುಸ್ತಕದ ಅಂಗಡಿಗಳಲ್ಲಿ ಲಭ್ಯವಾಗಲಿದೆ.

ವಾಂತಿಭೇದಿ ಪ್ರಕರಣ ಎಂಜಿನಿಯರ್, ಪಿಡಿಒ ಅಮಾನತು

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಮಕರಬ್ಬಿಯಲ್ಲಿ ಕಲುಷಿತ ನೀರು ಸೇವಿಸಿ ಆರು ಜನ ಸಾವಿಗೀಡಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಎಂಜಿನಿಯರ್ ಮತ್ತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯನ್ನು (ಪಿಡಿಒ) ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್. ನಂದಿನಿ ಅಮಾನತುಗೊಳಿಸಿ ಬುಧವಾರ ಆದೇಶಿಸಿದ್ದಾರೆ. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಉಪ ವಿಭಾಗದ ಕಿರಿಯ ಎಂಜಿನಿಯರ್ ವಿಜಯ ನಾಯ್ಕ, ಮಕರಬ್ಬಿ ಗ್ರಾಮ ಪಂಮಚಾಯಿತಿ ಪಿಡಿಒ ಶರಣಪ್ಪ ಅಮಾನತುಗೊಂಡವರು.

ಕಲುಷಿತ ನೀರು ಸೇವಿಸಿ ಗ್ರಾಮದ 150ಕ್ಕೂ ಹೆಚ್ಚು ಜನರು ಅಸ್ವಸ್ಥಗೊಂಡಿದ್ದರು. ಚಿಕಿತ್ಸೆ ಫಲಕಾರಿಯಾಗದೇ 10 ದಿನಗಳ ಅಂತರದಲ್ಲಿ 6 ಜನರು ಸಾವಿಗೀಡಾಗಿದ್ದರು. ನೀರು, ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿಯ ನಿರ್ಲಕ್ಷ್ಯ ಕುರಿತು ಗ್ರಾಮಸ್ಥರು ದೂರಿದ್ದರು. ಆ ಹಿನ್ನೆಲೆಯಲ್ಲಿ ಅಮಾನತು ಮಾಡಲಾಗಿದೆ.

ನಿಧನ ವಾರ್ತೆ

ರೈತ ಹೋರಾಟಗಾರ ಮುಚಳಂಬಿ

ಬೆಳಗಾವಿ: ರೈತ ಹೋರಾಟಗಾರ, 'ಹಸಿರುಕ್ರಾಂತಿ' ಪತ್ರಿಕೆಯ ಸಂಸ್ಥಾಪಕ ಸಂಪಾದಕ ಕಲ್ಯಾಣರಾವ ಗುರುಬಸಪ್ಪ ಮುಚಳಂಬಿ (72) ಅನಾರೋಗ್ಯದಿಂದ ಬುಧವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಪುತ್ರಿ ಇದ್ದಾರೆ. ಅಂತ್ಯಕ್ರಿಯೆಯು ಅ.7ರಂದು ಬೆಳಿಗ್ಗೆ 10.30ಕ್ಕೆ ಇಲ್ಲಿನ ಸದಾಶಿವನಗರದ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಸವರಾಜ್, ಜನಾರ್ದನ ಭಟ್‌ಗೆ 'ಮಾಸ್ತಿ ಪುರಸ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಸ್ತಿ ಟ್ರಸ್ಟ್ ನೀಡುವ 2021ನೇ ಸಾಲಿನ 'ಮಾಸ್ತಿ ಕಥಾ ಪುರಸ್ಕಾರ'ಕ್ಕೆ ಬೆಂಗಳೂರಿನ ಡಾ. ಕುರುವ ಬಸವರಾಜ್ ಅವರ 'ಕೋಳಿ ಅಂಕ' ಹಾಗೂ 'ಮಾಸ್ತಿ ಕಾದಂಬರಿ ಪುರಸ್ಕಾರ'ಕ್ಕೆ ದಕ್ಷಿಣ ಕನ್ನಡದ ಡಾ.ಬಿ. ಜನಾರ್ದನ ಭಟ್ ಅವರ 'ಬೂಬರಾಜ ಸಾಮ್ರಾಜ್ಯ' ಕೃತಿ ಆಯ್ಕೆಯಾಗಿದೆ.

'ಕೋಳಿ ಅಂಕ' ಕೃತಿಯನ್ನು ಬೆಂಗಳೂರಿನ ಕಿ.ರಂ. ಪ್ರಕಾಶನ ಹಾಗೂ 'ಬೂಬರಾಜ ಸಾಮ್ರಾಜ್ಯ' ಕೃತಿಯನ್ನು ಅಂಕಿತ ಪುಸ್ತಕ ಪ್ರಕಟಿಸಿದೆ. ಈ ಪುರಸ್ಕಾರವು ಕೃತಿಯ ಲೇಖಕರಿಗೆ ₹ 25 ಸಾವಿರ ಹಾಗೂ ಪ್ರಕಾಶಕರಿಗೆ ₹ 10 ಸಾವಿರ ಒಳಗೊಂಡಿದೆ. 'ಮಾಸ್ತಿ ಕಥಾ ಪುರಸ್ಕಾರ'ಕ್ಕೆ 51 ಕಥಾ ಸಂಕಲನಗಳು, 'ಮಾಸ್ತಿ ಕಾದಂಬರಿ ಪುರಸ್ಕಾರ'ಕ್ಕೆ 56 ಕಾದಂಬರಿಗಳು ಬಂದಿದ್ದವು.

ಜನಾರ್ದನ ಭಟ್

ಕುರುವ ಬಸವರಾಜ್

ಈಶ್ವರಚಂದ್ರ, ಎಚ್. ದಂಡಪ್ಪ, ಎಂ.ಎಸ್. ಆಶಾದೇವಿ, ಜಿ.ಎನ್. ರಂಗನಾಥ ರಾವ್, ಎಸ್.ಆರ್. ವಿಜಯಶಂಕರ ಹಾಗೂ ಟ್ರಸ್ಟ್‌ನ ಅಧ್ಯಕ್ಷ ಮಾವಿನಕೆರೆ ರಂಗನಾಥನ್ ಅವರು ಸ್ಪರ್ಧೆಯ ತೀರ್ಪುಗಾರರಾಗಿದ್ದರು ಎಂದು ಪ್ರಕಟಣೆ ತಿಳಿಸಿದೆ.

'ಮೋದಿ ಯುಗ್ ಉತ್ಸವ್' ಕಾರ್ಯಕ್ರಮ

ಬಿಜೆಪಿ ಕಾರ್ಯಕ್ರಮದಲ್ಲಿ ಸಾ.ರಾ.ಮಹೇಶ್!

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಕೆ.ಆರ್.ವಿಧಾನ ಸಭಾ ಕ್ಷೇತ್ರದ ಬಿಜೆಪಿ ಘಟಕವು ವಿದ್ಯಾರಣ್ಯಾಪುರಂ ಉದ್ಯಾನದಲ್ಲಿ ಬುಧವಾರ ಏರ್ಪಡಿಸಿದ್ದ 'ಮೋದಿ ಯುಗ್ ಉತ್ಸವ್' ಕಾರ್ಯಕ್ರಮದಲ್ಲಿ ಜೆಡಿಎಸ್ ಶಾಸಕ ಸಾ.ರಾ.ಮಹೇಶ್ ಕೇಸರಿ ಶಾಲು ಹಾಕಿಕೊಂಡು ಭಾಗಿಯಾದರು.

ಮುಖ್ಯಮಂತ್ರಿ ಬೊಮ್ಮಾಯಿ, ನಗರಾಭಿವೃದ್ಧಿ ಇಲಾಖೆ ಸಚಿವ ಭೈರತಿ ಬಸವರಾಜು, ಸಹಕಾರ ಇಲಾಖೆ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಎಸ್.ಎ.ರಾಮದಾಸ್ ಅವರೊಂದಿಗೆ ಮಹೇಶ್ ವೇದಿಕೆ ಹಂಚಿಕೊಂಡರು.

ಕಾರ್ಯಕ್ರಮ ಆರಂಭವಾಗುತ್ತಿದ್ದಂತೆ ವೇದಿಕೆ ಏರಿದ ಮಹೇಶ್, ತಮಗೆ ಕುರ್ಚಿ ಇಲ್ಲದ್ದನ್ನು ಕಂಡು, ಬಿಜೆಪಿ ನಗರ ಘಟಕದ ಅಧ್ಯಕ್ಷ ಶ್ರೀವತ್ಸ ಅವರನ್ನು ಕುರ್ಚಿ ಬಿಟ್ಟೇಳುವಂತೆ ಕಣ್‌ಸನ್ನೆ ಮಾಡಿದರು. ಅವರು ಪಕ್ಕದ ಕುರ್ಚಿಗೆ ಹೋದ ಬಳಿಕ ಆ ಕುರ್ಚಿಯಲ್ಲಿ ಕುಳಿತರು. ಅದರಿಂದ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್.ವಿ.ರಾಜೀವ್ ಗಣ್ಯರ ಕೊನೆಯ ಸಾಲಿನಲ್ಲಿ ಕುಳಿತುಕೊಳ್ಳಬೇಕಾಯಿತು. ಸ್ವಾಗತ ಕೋರುವ ಸಂದರ್ಭದಲ್ಲಿ ಕೇಸರಿ ಶಾಲನ್ನು ಹಾಕಲು ಬಂದ ಕಾರ್ಯಕರ್ತರಿಂದ ತಾವೇ ಕೈಚಾಚಿ ಶಾಲನ್ನು ತೆಗೆದು ಹೆಗಲಿಗೆ ಹಾಕಿಕೊಂಡು ಅಚ್ಚರಿ ಮೂಡಿಸಿದರು. ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ ಜನ್ಮದಿನದ ಶುಭಾಶಯ ಕೋರುವ ಪತ್ರವನ್ನು ಬರೆದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ತೋರಿಸಿ ಅಂಚೆ ಡಬ್ಬಕ್ಕೆ ಹಾಕಿದರು.

ಆ ಕಡೆ ಇದ್ದರೂ ನಮ್ಮ ಕಡೆಯೇ ಇರುವ ಮಹೇಶ್– ಬೊಮ್ಮಾಯಿ: 'ನಮ್ಮ ಕಡೆ ಇರಬೇಕಾದವರು ಆ ಕಡೆ ಇದ್ದಾರೆ. ಆ ಕಡೆ ಇದ್ದರೂ ನಮ್ಮ ಕಡೆಯೇ ಇರುವವರು ಹಾಗೂ ಸದಾಕಾಲ ನಮಗೆ ಆಪತ್ಬಾಂಧವರು ಸಾ.ರಾ.ಮಹೇಶಣ್ಣ' ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

'ನಾನು ಅಧಿಕಾರಕ್ಕೆ ಬಂದ ತಕ್ಷಣ ಎಚ್.ಡಿ.ದೇವೇಗೌಡರನ್ನು ಸೌಹಾರ್ದಯುತವಾಗಿ ಭೇಟಿಯಾಗಿದ್ದೆ. ಈ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದಕ್ಕೆ ನಿಮ್ಮ ಬಳಿ ಅವರು ತಕರಾರು ತೆಗೆಯುವುದಿಲ್ಲ' ಎಂದು ಹಾಸ್ಯ ಚಟಾಕಿಯನ್ನೂ ಹಾರಿಸಿದರು.

ಮೈಸೂರಿನಲ್ಲಿ ಬುಧವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪಾಲ್ಗೊಂಡಿದ್ದ ಬಿಜೆಪಿ ಕಾರ್ಯಕ್ರಮದಲ್ಲಿ ಜೆಡಿಎಸ್ ಶಾಸಕ ಸಾ.ರಾ.ಮಹೇಶ್ (ಬಲದಿಂದ ಮೊದಲನೆಯವರು) ಭಾಗಿಯಾಗಿದ್ದರು. ಮೇಯರ್ ಸುನಂದಾ ಫಾಲನೇತ್ರ, ಶಾಸಕ ಎಲ್‌.ನಾಗೇಂದ್ರ, ಸಚಿವ ಎಸ್‌.ಟಿ.ಸೋಮಶೇಖರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕ ಎಸ್‌.ಎ.ರಾಮದಾಸ್, ಮುಡಾ ಅಧ್ಯಕ್ಷ ಎಚ್‌.ವಿ.ರಾಜೀವ್ ಇದ್ದಾರೆ.

'ಯೋಜನೆ ಜಾರಿ ಮಾದರಿಯಾಗಿದೆ'

'ಶಾಸಕ ಎಸ್.ಎ.ರಾಮದಾಸ್ ಅವರು ಕ್ಷೇತ್ರದಲ್ಲಿ ಯೋಜನೆಗಳನ್ನು ಜಾರಿಗೊಳಿಸಿರುವ ರೀತಿ ಮಾದರಿಯಾಗಿದ್ದು, ಅವರ 'ಮೋದಿ ಯುಗ್ ಉತ್ಸವ್' ಕಾರ್ಯಕ್ರಮದ ಪುಸ್ತಕವನ್ನು ಎಲ್ಲ ಜಿಲ್ಲಾಧಿಕಾರಿಗಳಿಗೂ ಕಳುಹಿಸಿಕೊಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

‘ಪ್ರಜಾವಾಣಿ’ವರದಿ ಉಲ್ಲೇಖಿಸಿ ಸಿ.ಟಿ. ರವಿಗೆ ತಿರುಗೇಟು ನೀಡಿದ ಎಚ್‌.ಡಿ. ಕುಮಾರಸ್ವಾಮಿ

‘ನೀಚ ರಾಜಕೀಯವನ್ನು ಆರ್‌ಎಸ್‌ಎಸ್ ಕಲಿಸಿತೆ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಮತ್ತು ಅದರ ನೇತೃತ್ವದ ಸರ್ಕಾರದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರ, ಕುಟುಂಬ ರಾಜಕಾರಣ, ಸ್ವಜನ ಪಕ್ಷಪಾತದ ಬಗ್ಗೆ ಆರ್‌ಎಸ್‌ಎಸ್ ಶಾಖೆಯಲ್ಲಿ ತರಬೇತಿ ನೀಡಲಾಯಿತೆ? ಆಪರೇಷನ್ ಕಮಲದಂತಹ ಅನೈತಿಕ, ನಿರ್ಲಜ್ಜ, ನೀಚ ರಾಜಕೀಯವನ್ನೂ ಅಲ್ಲಿಯೇ ಕಲಿಸಲಾಯಿತೆ ಎಂಬುದನ್ನು ಜನರಿಗೆ ಹೇಳಿ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರಿಗೆ ಸವಾಲು ಹಾಕಿದ್ದಾರೆ.

‘ಮನೆಯಲ್ಲಿ ಕುಳಿತು ಪುಸ್ತಕ ಓದಿದರೆ ಸಾಲದು. ಆರ್‌ಎಸ್‌ಎಸ್ ಕುರಿತು ಅರಿಯಲು ಸಂಘದ ಶಾಖೆಗೆ ಬನ್ನಿ’ ಎಂಬ ರವಿ ಹೇಳಿಕೆಗೆ ಬುಧವಾರ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಅವರು, ‘ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಕುಟುಂಬ ರಾಜಕಾರಣದ ಬಗ್ಗೆ ಮಾತನಾಡಿದ್ದೀರಿ. ನಿಮ್ಮ ಪಕ್ಷ ಮತ್ತು ಸರ್ಕಾರದಲ್ಲಿ ತಾಂಡವವಾಡುತ್ತಿರುವ ಈ ಸಮಸ್ಯೆಗಳ ಬಗ್ಗೆಯೂ ನೀವು ಹೇಳಬೇಕು’ ಎಂದಿದ್ದಾರೆ.

‘ಸಂಘದ ಶಾಖೆಗೆ ಬನ್ನಿ ಎಂದು ಆಹ್ವಾನ ನೀಡಿದ್ದೀರಿ. ನಿಮ್ಮ ಸಂಘದೊಳಗಿನ ವಾಸ್ತವಾಂಶಗಳನ್ನು ಪ್ರತ್ಯಕ್ಷವಾಗಿ ನೋಡಿದವರೇ ಬರೆದ ಪುಸ್ತಕ ಓದಿ ನನಗೆ ಅಲ್ಲಿನ ವ್ಯವಹಾರಗಳ ವಿರಾಟ್ ದರ್ಶನ ಆಗಿದೆ. ಇನ್ನು ಶಾಖೆಯನ್ನೇ ಸೇರಿಕೊಂಡರೆ ಇನ್ನೆಷ್ಟು ಸತ್ಯ ಸಂಗತಿಗಳು ಗೊತ್ತಾಗಬಹುದು? ನೀವೇ ಒಮ್ಮೆ ಊಹಿಸಿ’ ಎಂದು ಸರಣಿ ಟ್ವೀಟ್‌ನಲ್ಲಿ ಸವಾಲು ಹಾಕಿದ್ದಾರೆ.

‘ಬದುಕು ಕಸಿದ ಕೋವಿಡ್’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯ ಬುಧವಾರದ ಸಂಚಿಕೆಯಲ್ಲಿ ಪ್ರಕಟವಾದ ‘ಬದುಕು ಸಾಕೆನಿಸಿದೆ– ಭಗವಂತನಿಗೂ ಕರುಣೆ ಇಲ್ಲ’ ಎಂಬ ವಿಶೇಷ ವರದಿಯನ್ನು ಟ್ವೀಟ್‌ನಲ್ಲಿ ಉಲ್ಲೇಖಿಸಿರುವ ಕುಮಾರಸ್ವಾಮಿ, ‘ಶ್ರೀನಿವಾಸನಗರದ ಬಿ.ಆರ್. ವಾಸುದೇವ ಎಂಬ ಬೀದಿಬದಿ ವ್ಯಾಪಾರಿ ಹೇಳಿ ರುವ ಮಾತುಗಳನ್ನು ಒಮ್ಮೆ ಓದಿ. ಆಗಲಾದರೂ ನಿಮ್ಮ ಕಲ್ಲು ಹೃದಯ ಕರಗಬಹುದು’ ಎಂದು ಹೇಳಿದ್ದಾರೆ.

‘ಶಿವಮೊಗ್ಗದಲ್ಲಿ ₹ 2,000 ಪರಿಹಾರ ನೀಡಲು ₹ 100 ಲಂಚ ಕೇಳಿದ ವರದಿಗಳು ಬಂದಿವೆ. ಇದಾ ನಿಮ್ಮ ಸಮಾಜ ಸೇವೆ? ಛಿದ್ರವಾದ ಬದುಕುಗಳನ್ನು ಒಮ್ಮೆ ನೋಡಿ. ಜನರ ಬವಣೆಗಳ ಬಗ್ಗೆ ಆರ್‌ಎಸ್‌ಎಸ್ ಶಾಖೆಗಳಲ್ಲಿ ಏನನ್ನೂ ಹೇಳಿಕೊಡುವುದಿಲ್ಲವೆ’ ಎಂದು ಪ್ರಶ್ನಿಸಿದ್ದಾರೆ.

ಸೇವೆಯ ಸೋಗಿನಲ್ಲಿ ಸಂಸ್ಥೆಗಳು ರಾಜಕೀಯ ಮಾಡಬಾರದು. ಜನರ ಬವಣೆ ನಿವಾರಿಸಲು ದುಡಿಯಬೇಕೇ ಹೊರು ಬದುಕಿಗೇ ಬೆಂಕಿ ಇಡಬಾರದು. ಸಮಾಜದ ಶಾಂತಿ ಕಾಯಬೇಕು. ಅದಕ್ಕೆ ಕೊಳ್ಳಿ ಇಡಬಾರದು. ಆರ್‌ಎಸ್‌ಎಸ್ ಹುಟ್ಟಿದಾಗಿನಿಂದಲೂ ಏನೆಲ್ಲ ಮಾಡಿಕೊಂಡು ಬಂದಿದೆ ಎಂಬುದು ಜಗತ್ತಿಗೇ ಗೊತ್ತಿರುವ ಸಂಗತಿ ಎಂದಿದ್ದಾರೆ. ‘ಜನಪ್ರತಿನಿಧಿಗಳನ್ನು, ಸರ್ಕಾರಗಳನ್ನು, ಆಡಳಿತ ಯಂತ್ರಾಂಗವನ್ನು ಕಪಿಮುಷ್ಠಿಯಲ್ಲಿ ಇಟ್ಟುಕೊಳ್ಳುವ ಪರಿಪಾಠ ದೇಶಕ್ಕೆ ಒಳ್ಳೆಯದಲ್ಲ. ಅರ್ಥ ಮಾಡಿಕೊಳ್ಳಿ, ನಾನು ಸತ್ಯದ ಪರ’ ಎಂದು ರವಿ ಅವರನ್ನುದ್ದೇಶಿಸಿ ಹೇಳಿದ್ದಾರೆ.

ಬೆಲೆ ಏರಿಕೆ ಬಗ್ಗೆ ಮಾತನಾಡಲಿ



ಎಚ್‌.ಡಿ. ಕುಮಾರಸ್ವಾಮಿ

‘ಸೇವೆ ಎಂದು ಸೋಗಲಾಡಿತನ ತೋರಿಸುವ ಆರ್‌ಎಸ್‌ಎಸ್ ಬೆಲೆ ಏರಿಕೆ ಕುರಿತು ಮಾತನಾಡಬೇಕು. ಬಡವರ ಮತ್ತು ಶ್ರೀಮಂತರ ಭಾರತದ ಬಗ್ಗೆ ಹೇಳಬೇಕು. ಅದಕ್ಕೆ ಕಾರಣವಾದ ಏಳು ವರ್ಷಗಳ ಆಡಳಿತದ ವಿರುದ್ಧ ಧ್ವನಿ ಎತ್ತಬೇಕು. ಇಲ್ಲವಾದರೆ ನೀವು ಬಡವರ ಭಾರತದ ಆಕ್ರೋಶಕ್ಕೆ ತುತ್ತಾಗುತ್ತೀರಿ’ ಎಂದು ಎಚ್‌.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಎಲ್‌ಪಿಜಿ ಸಿಲಿಂಡರ್ ದರ ಹೆಚ್ಚಳಕ್ಕೆ ಟ್ವಿಟರ್‌ನಲ್ಲಿ ಪ್ರತ್ಯೇಕವಾಗಿ ಪ್ರತಿಕ್ರಿಯಿಸಿರುವ ಅವರು, ‘ಸಿಲಿಂಡರ್ ದರ ₹ 900ರ ಗಡಿಯಲ್ಲಿದೆ. ಅಚ್ಛೇ ದಿನದ ಭ್ರಮೆಯಲ್ಲಿ ಜನರ ಬದುಕು ಬೆಂಕಿಯಲ್ಲಿ ಬೇಯುತ್ತಿದೆ’ ಎಂದಿದ್ದಾರೆ.

ಶ್ರೀಮಂತ ಭಾರತದ ಸಾರಥ್ಯ ವಹಿಸಿರುವವರು ಒಂದಿಬ್ಬರು ಉದ್ಯಮಿಗಳ ಜೋಳಿಗೆ ತುಂಬಿ ಜನರ ಬಾಳಿಗೆ ಕೊಳ್ಳಿ ಇಡುತ್ತಿದ್ದಾರೆ. ಬೆಲೆ ಏರಿಕೆ ಮಾಫಿಯಾ ಹಿಂದೆ ಇರುವ ಶಕ್ತಿಗಳ ಕುರಿತು ಬಿಜೆಪಿ ನಾಯಕರು ಮಾತನಾಡಲಿ ಎಂದು ಆಗ್ರಹಿಸಿದ್ದಾರೆ.

ಸಿದ್ದರಾಮಯ್ಯ, ಎಚ್‌ಡಿಕೆ ವಿರುದ್ಧ ಕಾರಜೋಳ ಕಿಡಿ

ಗೋವಿಂದ ಕಾರಜೋಳ

ಬೆಳಗಾವಿ: ‘ಆರ್‌ಎಸ್‌ಎಸ್ ಬಗ್ಗೆ ಹಗುರವಾಗಿ ಮಾತನಾಡುವುದು ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಮತ್ತು ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ಶೋಭೆ ತರುವುದಿಲ್ಲ’ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿರುಗೇಟು ನೀಡಿದರು.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಪತ್ರಕರ್ತರೊಂದಿಗೆ ಬುಧವಾರ ಮಾತನಾಡಿದ ಅವರು, ‘ಯಾರನ್ನೋ ಖುಷಿಪಡಿಸಲು ಏನೇನೋ ಹೇಳಿಕೆ ಕೊಟ್ಟರೆ ಅದಕ್ಕೆ ಅರ್ಥ ಇರುವುದಿಲ್ಲ. ಸಿದ್ದರಾಮಯ್ಯ ಮತ್ತು ಕುಮಾರಸ್ವಾಮಿ ಪ್ರಮುಖ ನಾಯಕರು. ಅವರು ಎಲ್ಲರಿಗೂ ಆದರ್ಶ ವ್ಯಕ್ತಿಗಳಾಗಿರಬೇಕು. ಕೀಳು ಮಟ್ಟದ ಜನಪ್ರಿಯತೆಗಾಗಿ ಆರ್‌ಎಸ್‌ಎಸ್ ಸಂಸ್ಕೃತಿ ಬಗ್ಗೆ ಗೊತ್ತಿಲ್ಲದವರು ಏನೇನೋ ಹೇಳುತ್ತಾರೆ’ ಎಂದು ಅವರು ಟೀಕಿಸಿದರು.

‘ಆರ್‌ಎಸ್‌ಎಸ್‌ನವರು ದೇಶಭಕ್ತರು. ಬೇರೆ ರೀತಿ ಕಳಂಕ ಹಚ್ಚಲು ಪ್ರಯತ್ನಿಸಿದರೆ ಅದು ಸಫಲವಾಗುವುದಿಲ್ಲ. ದೇಶದಾದ್ಯಂತ ಯುವಜನರಲ್ಲಿ ರಾಷ್ಟ್ರಪ್ರೇಮ ಬೆಳೆಸುವ ಕಾರ್ಯದಲ್ಲಿ ಆರ್‌ಎಸ್‌ಎಸ್ ತೊಡಗಿದೆ. ಭಾರತೀಯ ಸಂಸ್ಕೃತಿಯಂತೆ ನಮ್ಮ ಯುವಕರು ಬದುಕಬೇಕು ಎಂಬ ಉದ್ದೇಶದಿಂದ ಸಾಕಷ್ಟು ಪ್ರಯತ್ನ ಮಾಡುತ್ತಿದೆ. ಕೇಶವಕೃಪದಲ್ಲಿ ಯಾವ್ಯಾವ ಜಾತಿಯವರು ಇದ್ದಾರೆ ಎನ್ನುವುದು ಯಾರಿಗೂ ಗೊತ್ತಿಲ್ಲ. ಅಲ್ಲಿ ಜಾತಿ, ಧರ್ಮ, ಮತ, ಪಂಥ, ಬಡವ-ಬಲ್ಲಿದ ಎಂಬ ಯಾವುದೇ ತಾರತಮ್ಯವಿಲ್ಲ. ದೇಶಕ್ಕಾಗಿ ಪ್ರಾಣ ಬಲಿ ಕೊಟ್ಟ ದೇಶಭಕ್ತರ ಸಂಸ್ಥೆಯದು’ ಎಂದು ಸಮರ್ಥಿಸಿಕೊಂಡರು.

ಎಚ್‌ಡಿಕೆ ಕುಟುಂಬ ರಾಜಕೀಯದ ಮಂಡೂಕ: ನಳಿನ್ ಕುಮಾರ್

ಪ್ರಜಾವಾಣಿ ವಾರ್ತೆ

ನಳಿನ್‌ಕುಮಾರ್ ಕಟೀಲ್

ಬಿ.ವೈ. ವಿಜಯೇಂದ್ರ

ಬೆಂಗಳೂರು: ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಟೀಕಿಸಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ನೀಡಿರುವ ಹೇಳಿಕೆಗೆ ಬಿಜೆಪಿಯ ನಾಯಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಕುಮಾರಸ್ವಾಮಿ ಕುಟುಂಬ ರಾಜಕೀಯದ ಮಂಡೂಕದಂತಿದ್ದಾರೆ. ಕುಟುಂಬ ಕೂಪದಿಂದ ಹೊರ ಬಂದು ಮಾತನಾಡುವುದು ಸೂಕ್ತ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿದ್ದಾರೆ.

‘ಭಾರತ ವಿಶ್ವಗುರು ಆಗಬೇಕು ಮಹತ್ವದ ಚಿಂತನೆಯನ್ನು ಇಟ್ಟುಕೊಂಡು ಆರ್‌ಎಸ್‌ಎಸ್ ಕಾರ್ಯನಿರ್ವಹಿಸುತ್ತಿದೆ. ಇದಕ್ಕಾಗಿ ಸ್ವಯಂ ಸೇವಕರು ಜೀವನವನ್ನು ಸಮರ್ಪಣೆ ಮಾಡಿದ್ದಾರೆ. ವಿಶ್ವದ ದೊಡ್ಡ ಸಂಘಟನೆಯಾಗಿದ್ದು, ಅಲ್ಲಿ ಯಾರೂ ಸ್ವಾರ್ಥಿಗಳಿಲ್ಲ. ಸಂಘದ ಬಗ್ಗೆ ಕುಮಾರಸ್ವಾಮಿ ಅವರದೇ ಪಕ್ಷದ ನಾಯಕ ಪಿ.ಜಿ.ಆರ್.ಸಿಂಧ್ಯಾ ಅವರನ್ನು ಕೇಳಿ ತಿಳಿದುಕೊಳ್ಳಲಿ’ ಎಂದು ನಳಿನ್ ಹೇಳಿದ್ದಾರೆ.

ಉಪಚುನಾವಣೆಗಾಗಿ ಟೀಕೆ: ರಾಜಕಾರಣಕ್ಕಾಗಿ ಕೆಲವರನ್ನು ತುಷ್ಟೀಕರಣ ಮಾಡಲು ಆರ್‌ಎಸ್‌ಎಸ್ ಅನ್ನು ದೂಷಿಸುವುದನ್ನು ಕೆಲವು ರಾಜಕಾರಣಿಗಳಿಗೆ ಚಾಳಿಯಾಗಿದೆ. ಉಪಚುನಾವಣೆ ಹತ್ತಿರ ಬಂದಿರುವುದರಿಂದ ಕುಮಾರಸ್ವಾಮಿಯವರಿಗೂ ಈ ಚಾಳಿ ಕಾಡುತ್ತಿರಬಹುದು. ಆರ್‌ಎಸ್‌ಎಸ್ ಕೋಟ್ಯಂತರ ಜನರಿಗೆ ದೇಶ ಸೇವೆ ಮತ್ತು ಆಪತ್ತಿನ ಸಂದರ್ಭದಲ್ಲಿ ಸಾರ್ವಜನಿಕ ಸೇವೆ ಹೇಗೆ ಕೈಗೊಳ್ಳಬೇಕು ಎಂಬ ಬಗ್ಗೆ ಪಾಠ ಹೇಳಿಕೊಟ್ಟಿದೆಯೇ ಹೊರತು ವಂಶಪಾರಂಪರ್ಯ ಅಥವಾ ಕುಟುಂಬ ರಾಜಕಾರಣ ಬೋಧಿಸಿಲ್ಲ ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಹೇಳಿದ್ದಾರೆ.

ಎಚ್‌ಡಿಕೆಗೆ ಹತಾಶೆ: ಆರ್‌ಎಸ್‌ಎಸ್ ಬಗ್ಗೆ ಕುಮಾರಸ್ವಾಮಿ ಅವರ ಅಭಿಪ್ರಾಯ ಸಂಘದ ಬಗ್ಗೆ ಅವರಿಗೆ ಇರುವ ಅಜ್ಞಾನ, ಭೀತಿ ಮತ್ತು ಅವರ ವೈಯಕ್ತಿಕ ಹತಾಶೆಯ ಅಭಿವ್ಯಕ್ತಿಯಾಗಿದೆ. ದೇಶ ಸೇವೆ, ಜನಸೇವೆ, ರಾಷ್ಟ್ರೀಯತೆಯ ಸಿದ್ಧಾಂತಗಳ ಮೂರ್ತ ರೂಪವೇ ಸಂಘ. ದೇಶದ ಮೂಲೆ ಮೂಲೆಗಳಲ್ಲಿ ಈ ವಿಚಾರಧಾರೆಗಳನ್ನು ಒಪ್ಪಿದ ಕೋಟ್ಯಂತರ ಜನರಿದ್ದಾರೆ ಎಂದು ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಟ್ವೀಟ್ ಮಾಡಿದ್ದಾರೆ.

ನಿಸ್ವಾರ್ಥ ಗುಣ ಅರಿಯಿರಿ: ಆರ್‌ಎಸ್‌ಎಸ್ ಸಿದ್ಧಾಂತ ಅಪ್ಪಿ ಜೀವಿಸುವವರು ವಿದ್ಯಾವಂತರು, ರಾಷ್ಟ್ರಪ್ರೇಮಿಗಳು, ಆತ್ಮಸಾಕ್ಷಾತ್ಕಾರದ ಆದ ಶ್ವೇತವರ್ಣ ಸನ್ಯಾಸಿಗಳು. ಅವರಿಗೆ ದೇಶವೇ ಮನೆ, ದೇಶವಾಸಿಗಳೇ ಬಂಧುಗಳು. ಅವರ ನಿಸ್ವಾರ್ಥ ಸಮಾಜವೇ ದೇವರ ಪೂಜೆ. ಆ ಸಂಘದ ಬಗ್ಗೆ ಮಾತನಾಡುವ ಮುನ್ನ ಅದರ ನಿಸ್ವಾರ್ಥ ಗುಣ ಅರಿಯಿರಿ ಎಂದು ಬಿಜೆಪಿ ನಾಯಕರೂ ಆಗಿರುವ ನಟ ಜಗ್ಗೇಶ್ ಹೇಳಿದ್ದಾರೆ.

‘ಶಿಕ್ಷಣದ ಕೇಸರೀಕರಣಕ್ಕೆ ಆರ್‌ಎಸ್‌ಎಸ್ ಯತ್ನ’

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: ಶಿಕ್ಷಣದ ಕೇಸರೀಕರಣಕ್ಕೆ ಯತ್ನಿಸುತ್ತಿರುವ ಆರ್‌ಎಸ್‌ಎಸ್, ಶಾಲಾ, ಕಾಲೇಜುಗಳ ಆಯಕಟ್ಟಿನ ಹುದ್ದೆಗಳಿಗೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಜತೆ ನಂಟು ಹೊಂದಿದ್ದವರನ್ನೇ ತಂದು ಕೂರಿಸುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಬುಧವಾರ ಅವರು, ‘ಆರ್‌ಎಸ್‌ಎಸ್‌ನವರು ಶಿಕ್ಷಣ ಸಂಸ್ಥೆ, ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುತ್ತಿದ್ದಾರೆ. ಸರ್ಕಾರಿ ಸ್ವಾಮ್ಯದ ಶಿಕ್ಷಣ ಸಂಸ್ಥೆಗಳೂ ಸೇರಿದಂತೆ ಶೈಕ್ಷಣಿಕ ಸಂಸ್ಥೆಗಳ ಉನ್ನತ ಹುದ್ದೆಗಳಲ್ಲಿ ತಮ್ಮ ಸಂಘಟನೆಯವರನ್ನೇ ನೇಮಿಸಲು ಪ್ರಯತ್ನಿಸುತ್ತಿದ್ದಾರೆ. ಪ್ರಾಧ್ಯಾಪಕರು, ಪ್ರಾಂಶುಪಾಲರ ನೇಮಕದಲ್ಲೂ ಈ ಕೆಲಸ ನಡೆಯುತ್ತಿದೆ’ ಎಂದು ದೂರಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಇಲ್ಲದಂತಾಗಿದೆ. ಸಚಿವರು, ಶಾಸಕರು ಮತ್ತು ಇತರ ಕೆಲವರು ಕೋವಿಡ್ ಆರಂಭದ ಸಮಯದಿಂದಲೂ ಶಾಂತಿ ಕದಡಲು ಪ್ರಯತ್ನಿಸುತ್ತಿದ್ದಾರೆ. ದೇಶದಲ್ಲಿ ಬಿಜೆಪಿ ಅಧಿಕಾರದಲ್ಲಿರುವ ಎಲ್ಲ ರಾಜ್ಯಗಳಲ್ಲೂ ಇದೇ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ಹೇಳಿದರು.

ಉತ್ತರ ಪ್ರದೇಶದಲ್ಲಿ ಪ್ರತಿಭಟನಾನಿರತ ರೈತರ ಮೇಲೆ ಕಾರು ಚಲಾಯಿಸಿ, ಹತ್ಯೆಮಾಡಿದ ಪ್ರಕರಣದಲ್ಲಿ ಸಾಕ್ಷ್ಯಗಳನ್ನು ತಿರುಚಲಾಗುತ್ತಿದೆ. ಹರ್ಯಾಣ ಮುಖ್ಯಮಂತ್ರಿ ಮನೋಹರ ಲಾಲ್ ಖಟ್ಟರ್ ಮತ್ತು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಹೇಳಿಕೆ ನೋಡಿದರೆ ಇದು ಗೊತ್ತಾಗುತ್ತದೆ. ಈ ಪ್ರಕರಣದಲ್ಲಿ ಸ್ಥಳೀಯ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಆರೆಸ್ಸೆಸ್ ಸಾಮಾಜಿಕ ನ್ಯಾಯದ ವಿರೋಧಿ

‘ಆರ್‌ಎಸ್‌ಎಸ್ ಸಾಮಾಜಿಕ ನ್ಯಾಯದ ವಿರೋಧಿ. ಮನುಸ್ಮೃತಿಯನ್ನು ಒಪ್ಪುವ ಈ ಸಂಘಟನೆ ಯಾವತ್ತೂ ಸಾಮಾಜಿಕ ನ್ಯಾಯದ ಪರವಾಗಿ ಮಾತನಾಡಿಲ್ಲ’ ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಆರ್‌ಎಸ್‌ಎಸ್ ಕುರಿತಂತೆ ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಆರ್‌ಎಸ್‌ಎಸ್ ಪುಸ್ತಕಗಳನ್ನು ಓದಿ ಆಗ ನಿಮಗೆ ಅರ್ಥವಾಗುತ್ತದೆ. ನಾನು 16ನೇ ವರ್ಷದಿಂದ ಆರ್‌ಎಸ್‌ಎಸ್ ವಿರುದ್ಧ ಹೋರಾಡುತ್ತಿದ್ದೇನೆ. ಮುಂದೆಯೂ ಹೋರಾಡುವೆ. ಈ ಕಾರಣಕ್ಕಾಗಿಯೇ ನಾನು ಚುನಾವಣೆಯಲ್ಲಿ ಸೋಲು ಅನುಭವಿಸಿದ್ದೇನೆ’ ಎಂದರು.

ಪ್ರಜಾವಾಣಿ

ಫೋನ್‌–ಇನ್ ಕಾರ್ಯಕ್ರಮ

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಸಾಧಕ ಬಾಧಕಗಳೇನು?

- ಶಿಕ್ಷಣ ನೀತಿಯ ಬಗ್ಗೆ ಸಂದೇಹಗಳಿವೆಯೇ?
- ನೂತನ ನೀತಿಯಿಂದ ವಿದ್ಯಾರ್ಥಿಗಳಿಗೆ ಆಗುವ ಅನುಕೂಲಗಳೇನು?
- ಎನ್‌ಇಪಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕವೇ–ಪೂರಕವೇ?
- ತರಾತುರಿಯಲ್ಲಿ ನೀತಿ ಜಾರಿ ಮಾಡಿದ್ದರ ಬಗ್ಗೆ ಆಕ್ಷೇಪ ಇದೆಯೇ?

ನಿಮ್ಮ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ

ಡಾ.ಸಿ.ಎನ್. ಅಶ್ವತ್ಥನಾರಾಯಣ
ಉನ್ನತ ಶಿಕ್ಷಣ ಸಚಿವ

ಶಿಕ್ಷಣ ನೀತಿ ಬಗ್ಗೆ ಮಾತ್ರ ಪ್ರಶ್ನೆ ಕೇಳಲು ಅವಕಾಶ

07.10.2021, ಗುರುವಾರ
ಸಮಯ: ಬೆಳಿಗ್ಗೆ 11ರಿಂದ ಮಧ್ಯಾಹ್ನ 12ರವರೆಗೆ
ದೂರವಾಣಿ ಸಂಖ್ಯೆ 08045557230

facebook LIVE facebook.com/prajavani.net

‘ಪಿಡಿಒಗಳಿಂದ ರಾಷ್ಟ್ರಪತಿವರೆಗೂ ಆರ್‌ಎಸ್‌ಎಸ್‌ನವರು ಇದ್ದಾರೆ’



ಸುನೀಲ್ ಕುಮಾರ್

ಉಡುಪಿ: ‘ಐಎಎಸ್, ಐಪಿಎಸ್ ಅಧಿಕಾರಿಗಳು ಮಾತ್ರವಲ್ಲ, ಪಿಡಿಒಗಳಿಂದ ಹಿಡಿದು ರಾಷ್ಟ್ರಪತಿಯವರೆಗೂ ಆರ್‌ಎಸ್‌ಎಸ್‌ನವರು ಇದ್ದಾರೆ’ ಎಂದು ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನೀಲ್ ಕುಮಾರ್ ಹೇಳಿದರು.

ಬುಧವಾರ ಮಣಿಪಾಲದ ಸಿದ್ಧಿವಿನಾಯಕ ದೇವಾಸ್ಥಾನದ ಬಳಿ ಸ್ವರ್ಣಾ ನದಿಗೆ ಬಾಗಿನ ಅರ್ಪಿಸಿ ಮಾತನಾಡಿದ ಸಚಿವರು, ಆರ್‌ಎಸ್‌ಎಸ್ ಹಿನ್ನೆಲೆಯ ನಾಲ್ಕು ಸಾವಿರ ಐಎಎಸ್, ಐಪಿಎಸ್ ಅಧಿಕಾರಿಗಳು ಇದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಈಚೆಗೆ ಹೇಳಿ ದ್ದಾರೆ. ಅವರಿಗೆ ಮಾಹಿತಿ ಕೊರತೆ ಇದೆ, ವಾಸ್ತವದಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಅಧಿಕಾರಿಗಳಿದ್ದಾರೆ. ಅವರೆಲ್ಲರೂ ರಾಷ್ಟ್ರ ಕಟ್ಟುವ ಕಾರ್ಯದಲ್ಲಿ ನಿರತರಾಗಿದ್ದಾರೆ ಎಂದು ತಿರುಗೇಟು ನೀಡಿದರು.

‘ಅಪ್ಪ ಮಕ್ಕಳು’ ಬೇರೆ ಬೇರೆ ಸಂದರ್ಭಗಳಲ್ಲಿ ಆರ್‌ಎಸ್‌ಎಸ್ ಬಗ್ಗೆ ಮಾತನಾಡಿದ್ದಾರೆ. ಖುಷಿ ಬಂದಂತೆ ಬಳಕೆ ಮಾಡಿಕೊಳ್ಳುವ ಸಂಸ್ಥೆ ಆರ್‌ಎಸ್‌ಎಸ್ ಅಲ್ಲ. ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ಕಟ್ಟುತ್ತಿರುವ ದೇಶದ ಏಕೈಕ ಸಂಸ್ಥೆ ಆರ್‌ಎಸ್‌ಎಸ್ ಎಂದು ಹೇಳಿದರು.

ರಾಜ್ಯದಲ್ಲಿ 5 ರಂಗಾಯಣಗಳಿದ್ದು, ಯಕ್ಷಗಾನ, ನಾಟಕ ಹಾಗೂ ನೃತ್ಯವನ್ನೊಳಗೊಂಡ 6ನೇ ‘ಯಕ್ಷ ರಂಗಾಯಣ’ವನ್ನು ಕಾರ್ಕಳದಲ್ಲಿ ಸ್ಥಾಪಿಸಲಾಗುವುದು. ಕೋಟಿ ಚನ್ನಯ್ಯ ಥೀಂ ಪಾರ್ಕ್‌ನ ಆವರಣದಲ್ಲಿ 2 ಎಕರೆಯಲ್ಲಿ ರಂಗಾಯಣ ಸ್ಥಾಪನೆಯಾಗಲಿದೆ’ ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (KSOU)

ಮುಕ್ತಗಂಗೋತ್ರಿ, ಮೈಸೂರು – 570006, ಕರ್ನಾಟಕ.

ಕಚೇರಿ ದೂರವಾಣಿ ಸಂಖ್ಯೆ: 0821-2500981, 2519941 / 43 / 48 / 52, ಸಹಾಯವಾಣಿ: 88003 35638.
ಇ–ಮೇಲ್: techsupport@ksouportal.com, ಅಂತರ್ಜಾಲ : www.ksoumysuru.ac.in

ಅಧಿಸೂಚನೆ ಸಂಖ್ಯೆ : ಕರಾಮುವಿ/ಪ್ರವಿ/ಎಡಿಎಂ–1/95/2021–22 ದಿನಾಂಕ: 04–10–2021

ನಿಮ್ಮ ಮನೆಯೇ ‘ನಿರಂತರ’ ಪಾಠ ಶಾಲೆ!
ಯು.ಜಿ.ಸಿ. ಅನುಮೋದಿತ ಶಿಕ್ಷಣಕ್ರಮಗಳ ಅಧ್ಯಯನ ಅವಕಾಶವನ್ನು ಕ.ರಾ.ಮು.ವಿ ಮೂಲಕ ಪಡೆಯಿರಿ

2021–22 ರ ಜುಲೈ (ನವೆಂಬರ್) ಆವೃತ್ತಿಗೆ ಪ್ರಥಮ ವರ್ಷದ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸ್ನಾತಕ (ಯುಜಿ) ಶಿಕ್ಷಣ ಕಾರ್ಯಕ್ರಮಗಳು

- ಬಿ.ಎ. • ಬಿ.ಕಾಂ.
- ಬಿ.ಲಿಬ್.ಐ.ಎಸ್‌ಸಿ.
- ಬಿ.ಬಿ.ಎ. (ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್)
- ಬಿ.ಎಸ್‌ಸಿ (ಸಂಯೋಜನೆಗಳು) (PCM • PMCs • BBZ • CBZ • BBM • BMFs • CBM • CZEs • BZEs) [P-Physics • C-Chemistry • M-Mathematics • Cs-Computer Science • B-Botany • M-Microbiology • B-Biochemistry • Z-Zoology • Es-Environmental Science • Fs-Food Science & Nutrition]
- ಬಿ.ಎಸ್‌ಸಿ – ಹೋಮ್ ಸೈನ್ಸ್
- ಬಿ.ಎಸ್‌ಸಿ – ಇನ್‌ಫರ್ಮೇಷನ್ ಟೆಕ್ನಾಲಜಿ (ಬಿ.ಎಸ್‌ಸಿ–ಐಟಿ)
- ಬಿ.ಸಿ.ಎ. – ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್

ಸ್ನಾತಕೋತ್ತರ (ಪಿಜಿ) ಶಿಕ್ಷಣ ಕಾರ್ಯಕ್ರಮಗಳು:

- ಎಂ.ಎ.
  • ಕನ್ನಡ • ಇಂಗ್ಲಿಷ್ • ಹಿಂದಿ • ತೆಲುಗು • ಉರ್ದು • ಸಂಸ್ಕೃತ • ಶಿಕ್ಷಣ • ಇತಿಹಾಸ • ರಾಜ್ಯಶಾಸ್ತ್ರ • ಅರ್ಥಶಾಸ್ತ್ರ • ಸಾರ್ವಜನಿಕ ಆಡಳಿತ • ಸಮಾಜಶಾಸ್ತ್ರ • ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ • ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ
- ಎಂ.ಬಿ.ಎ. (ಪ್ರವೇಶ ಪರೀಕ್ಷೆ ಇರುವುದಿಲ್ಲ)
  ಸ್ಪೆಷಲೈಜೇಷನ್: • ಫೈನಾನ್ಸ್ • ಮಾರ್ಕೆಟಿಂಗ್ • ಹೆಚ್‌ಆರ್‌ಎಂ. • ಆಪರೇಷನ್ಸ್ • ಟೂರಿಸಂ • ಕಾರ್ಪೊರೇಟ್ ಲಾ • ಇನ್‌ಫರ್ಮೇಷನ್ ಟೆಕ್ನಾಲಜಿ
- ಎಂ.ಕಾಂ.
  ಡ್ಯುಯೆಲ್ ಸ್ಪೆಷಲೈಜೇಷನ್: • ಅಕೌಂಟಿಂಗ್ ಮತ್ತು ಫೈನಾನ್ಸ್/ಹೆಚ್‌ಆರ್‌ಎಂ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಮತ್ತು ಹೆಚ್‌ಆರ್‌ಎಂ/ಫೈನಾನ್ಸ್
- ಎಂ.ಲಿಬ್.ಐ.ಎಸ್‌ಸಿ.
- ಎಂ.ಎಸ್‌ಸಿ.
  • ಭೌತಶಾಸ್ತ್ರ • ರಸಾಯನ ಶಾಸ್ತ್ರ • ಗಣಿತ • ಬಯೋಕೆಮಿಸ್ಟ್ರಿ • ಬಯೋಟೆಕ್ನಾಲಜಿ • ಕ್ಲಿನಿಕಲ್ ನ್ಯೂಟ್ರಿಷನ್ & ಡಯಟೆಟಿಕ್ಸ್ • ಕಂಪ್ಯೂಟರ್ ಸೈನ್ಸ್ • ಪರಿಸರ ವಿಜ್ಞಾನ • ಭೂಗೋಳ ಶಾಸ್ತ್ರ • ಮೈಕ್ರೋ ಬಯಾಲಜಿ • ಮನಃಶಾಸ್ತ್ರ • ಸಸ್ಯಶಾಸ್ತ್ರ • ಪ್ರಾಣಿಶಾಸ್ತ್ರ • ಫುಡ್ & ನ್ಯೂಟ್ರಿಷನ್ ಸೈನ್ಸ್ • ಮಾಹಿತಿ ತಂತ್ರಜ್ಞಾನ

ಪಿಜಿ ಸರ್ಟಿಫಿಕೇಟ್ ಕಾರ್ಯಕ್ರಮಗಳು–(ಪದವಿ ಆಧಾರಿತ) (ಒಂದು ವರ್ಷ)

• ಇಂಗ್ಲಿಷ್ • ಕಮ್ಯುನಿಕೇಟಿವ್ ಇಂಗ್ಲಿಷ್ • ಪತ್ರಿಕೋದ್ಯಮ & ಸಮೂಹ ಸಂವಹನ • ಕುವೆಂಪು ಸಾಹಿತ್ಯ • ಹಣಕಾಸು ನಿರ್ವಹಣೆ • ಮಾನವ ಸಂಪನ್ಮೂಲ ನಿರ್ವಹಣೆ • ಬಿಸಿನೆಸ್ ಲಾ • ಬಿಸಿನೆಸ್ ಅಡ್ಮಿನಿಸ್ಟ್ರೇಷನ್ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ • ಅಂಬೇಡ್ಕರ್ ಅಧ್ಯಯನಗಳು • ನ್ಯೂಟ್ರಿಷನ್ & ಡಯಟೆಟಿಕ್ಸ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್.

ಡಿಪ್ಲೊಮ ಶಿಕ್ಷಣ ಕಾರ್ಯಕ್ರಮಗಳು–(10+2 ಆಧಾರಿತ) (ಒಂದು ವರ್ಷ)

• ಕನ್ನಡ • ಪತ್ರಿಕೋದ್ಯಮ • ನ್ಯೂಟ್ರಿಷನ್ & ಹೆಲ್ತ್ ಎಜುಕೇಷನ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್

ಸರ್ಟಿಫಿಕೇಟ್ ಶಿಕ್ಷಣ ಕಾರ್ಯಕ್ರಮಗಳು (ಆರು ತಿಂಗಳು)

• ಕನ್ನಡ • ಪಂಚಾಯತ್ ರಾಜ್ • ನ್ಯೂಟ್ರಿಷನ್ & ಫುಡ್ • ಮಾಹಿತಿ ಸಂವಹನ ತಂತ್ರಜ್ಞಾನ (ಐಸಿಟಿ)

ಉನ್ನತ ಶಿಕ್ಷಣ ಎಲ್ಲರಿಗೂ, ಎಲ್ಲೆಡೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು, ಕರ್ನಾಟಕ ರಾಜ್ಯದಲ್ಲಿ, ಮುಕ್ತ ದೂರ ಶಿಕ್ಷಣ (ಒ.ಡಿ.ಎಲ್) ವಿಧಾನದಲ್ಲಿ ಉನ್ನತ ಶಿಕ್ಷಣವನ್ನು ಅಧಿಕೃತವಾಗಿ ನೀಡುವ ಏಕೈಕ ವಿಶ್ವವಿದ್ಯಾನಿಲಯವಾಗಿದೆ.
ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳೂ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ (ಯು.ಜಿ.ಸಿ), ನವದೆಹಲಿಯ ಮಾನ್ಯತೆ ಪಡೆದಿವೆ.
(ಅಧಿಸೂಚನೆ ಸಂಖ್ಯೆ: F.No.:1-6/2018 (DEB-1) ದಿನಾಂಕ: 14.08.2018 & 03.10.2018 ಮತ್ತು ಸಂಖ್ಯೆ: F.No.:1-5/2021 (DEB-1) ದಿನಾಂಕ: 26.08.2021)
ಎಂ.ಬಿ.ಎ. ಶೈಕ್ಷಣಿಕ ಕಾರ್ಯಕ್ರಮವು ಎಐಸಿಟಿಇ, ನವದೆಹಲಿಯಿಂದ ಅಂಗೀಕೃತಗೊಂಡಿದೆ
(ಅಧಿಸೂಚನೆ ಸಂಖ್ಯೆ: F.No.: South:West/ 2021–22/1:9508626111 ದಿನಾಂಕ: 15.07.2021)

ವಿಶ್ವವಿದ್ಯಾನಿಲಯವು ಕೆಳಕಂಡ ವಿಶೇಷತೆಗಳನ್ನು ಹೊಂದಿರುತ್ತದೆ :

- ವಿಶಾಲ ಅತ್ಯಾಧುನಿಕ ಹಾಗೂ ಹಸಿರುಮಯ ಕ್ಯಾಂಪಸ್
- ಆಧುನಿಕ ಐಸಿಟಿ ತಂತ್ರಜ್ಞಾನ ಬೆಂಬಲಿತ ಬೋಧನಾ ಸೌಲಭ್ಯಗಳು
- ಅನುಭವಿ ಹಾಗೂ ನುರಿತ ಬೋಧನಾ ಸಿಬ್ಬಂದಿ
- ಸುಸಜ್ಜಿತ ಪ್ರಯೋಗಾಲಯಗಳು
- ಸುಸಜ್ಜಿತ ಗ್ರಂಥಾಲಯ ಹಾಗೂ ಇಂಟರ್ನೆಟ್ ಸೌಲಭ್ಯಗಳು
- ಪ್ರಾದೇಶಿಕ ಕೇಂದ್ರಗಳು ಹಾಗೂ ಕಲಿಕಾರ್ಥಿ ಸಹಾಯ (ಲರ್ನರ್ ಸಪೋರ್ಟ್ ಸೆಂಟರ್) ಕೇಂದ್ರಗಳನ್ನೊಳಗೊಂಡ ಸೇವಾ ವ್ಯವಸ್ಥೆ
- ಗುಣಮಟ್ಟದ ಮುದ್ರಿತ ಹಾಗೂ ಡಿಜಿಟಲ್ ಮಾದರಿಯ ಸ್ವಯಂ ಕಲಿಕಾ ಸಾಮಗ್ರಿಗಳು (ಎಸ್.ಎಲ್.ಎಮ್)
- ವೃತ್ತಿ ಸಂಬಂಧಿತ ಸಲಹೆ ಹಾಗೂ ನೇಮಕಾತಿಯಲ್ಲಿ ನೆರವು

ಪ್ರವೇಶಾತಿ (ಎನ್‌ರೋಲ್ಮೆಂಟ್) ಮಾಹಿತಿ ಹಾಗೂ ವಿಧಾನ

1. ಅರ್ಹತೆಯ ಮಾನದಂಡ ಹಾಗೂ ಶುಲ್ಕದ ವಿವರಗಳನ್ನು ವಿವರಣಾ ಪುಸ್ತಕ (ಪ್ರಾಸ್ಪೆಕ್ಟಸ್) ದಲ್ಲಿ ನಮೂದಿಸಲಾಗಿದೆ. ಅಭ್ಯರ್ಥಿಗಳು ಸಂಬಂಧಿತ ಕಾರ್ಯಕ್ರಮಗಳ ಪ್ರಾಸ್ಪೆಕ್ಟಸ್‌ನ್ನು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು/ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಭ್ಯರ್ಥಿಗಳು, ಮೈಸೂರಿನಲ್ಲಿರುವ ಕರಾಮುವಿಯ ಕೇಂದ್ರ ಕಚೇರಿಯಲ್ಲಿ ನೇರವಾಗಿ / ಆನ್‌ಲೈನ್ ಮುಖಾಂತರ, ಅಥವಾ ತಮ್ಮ ಆಯ್ಕೆಯ ಸಮೀಪದ ಪ್ರಾದೇಶಿಕ ಕೇಂದ್ರದಲ್ಲಿ ಖುದ್ದಾಗಿ ಪ್ರವೇಶಾತಿಯನ್ನು ಪಡೆಯಬಹುದು. ಆನ್‌ಲೈನ್ ಪ್ರವೇಶ ಅರ್ಜಿ ಫಾರಂನ್ನು ಭರ್ತಿ ಮಾಡಲು KSOU Online Admission Portal ಗೆ ಭೇಟಿ ನೀಡಿ. ಪ್ರವೇಶಾತಿ ಹಾಗೂ ಇನ್ನಿತರ ಮಾಹಿತಿಗಾಗಿ ಅರ್ಜಿದಾರರು ಕರಾಮುವಿಯ ಅಧಿಕೃತ ವೆಬ್‌ಸೈಟ್: www.ksoumysuru.ac.in ನ್ನು ವೀಕ್ಷಿಸುವುದು ಅಥವಾ ತಮ್ಮ ಆಯ್ಕೆಯ ಕರಾಮುವಿಯ ಯಾವುದೇ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಭೇಟಿ ಮಾಡಬಹುದು. ಪ್ರವೇಶ ಸಮಾಲೋಚನೆಗೆ ಅರ್ಜಿದಾರರು ತಮ್ಮ ವ್ಯಾಪ್ತಿಯಲ್ಲಿ ಬರುವ ಕರಾಮುವಿಯ ಯಾವುದೇ ಪ್ರಾದೇಶಿಕ ಕೇಂದ್ರ/ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು. ಅಹವಾಲುಗಳು ಏನಾದರೂ ಇದ್ದಲ್ಲಿ techsupport@ksouportal.com ಗೆ ಮೇಲ್ ಮಾಡಬಹುದು.
- ಪ್ರವೇಶ ಶುಲ್ಕವನ್ನು ಆನ್‌ಲೈನ್ ವಿಧಾನದ ಮೂಲಕ ಮಾತ್ರ ಪಾವತಿಸತಕ್ಕದ್ದು.
- ಅಭ್ಯರ್ಥಿಗಳು ಗುರುತಿನ ಚೀಟಿಗಳು ಹಾಗೂ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಮೈಸೂರಿನಲ್ಲಿರುವ ಕರಾಮುವಿಯ ಆಡಳಿತ ಕಛೇರಿಯಿಂದ ಅಥವಾ ತಮ್ಮ ಆಯ್ಕೆಯ ಪ್ರಾದೇಶಿಕ ಕೇಂದ್ರದಿಂದ ಪಡೆಯಬಹುದು.
2. ಅರ್ಹ ಪಜಾ/ಪವ ಅಭ್ಯರ್ಥಿಗಳು: ಪ್ರವೇಶ ಪ್ರಕ್ರಿಯೆ ಶುಲ್ಕ, ಅಭಿವೃದ್ಧಿ (ಕೌಶಲ್ಯ) ಶುಲ್ಕ, ವಿಶ್ವವಿದ್ಯಾನಿಲಯದ 25ನೇ ವರ್ಷದ “ರಜತ ಮಹೋತ್ಸವ” ದ ವಿಶೇಷ ಶುಲ್ಕ, Alumni ಅಸೋಸಿಯೇಷನ್ ಶುಲ್ಕ ಇವುಗಳನ್ನು ಪಾವತಿಸಿ, ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆಯ ಷರತ್ತಿಗೊಳಪಟ್ಟು ‘ಶುಲ್ಕ ರಹಿತ ಪ್ರವೇಶ’ವನ್ನು ಪಡೆಯಬಹುದು. ಅಗತ್ಯ ದಾಖಲಾತಿಗಳನ್ನು ಸಮಾಜ ಕಲ್ಯಾಣ ಇಲಾಖೆಯ ಅಧಿಕೃತ ವೆಬ್‌ಸೈಟ್: https://ssp.postmatric.karnataka.gov.in ನ ಸಂಬಂಧಿತ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿದ್ದು, ಅಪ್‌ಲೋಡ್ ಮಾಡಿದ ದಾಖಲಾತಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸತಕ್ಕದ್ದು.
3. ಅಧಿಕೃತ ಕಲಿಕಾರ್ಥಿ ಸಹಾಯ ಕೇಂದ್ರಗಳ ವಿವರಗಳು ವಿವಿಯ ಅಂತರ್‌ಜಾಲದಲ್ಲಿ ಲಭ್ಯವಿದ್ದು ಸಮಾಲೋಚನೆಗೆ ಸಂಪರ್ಕಿಸಬಹುದಾಗಿದೆ.
- ಐಟಿಐ ವಿದ್ಯಾರ್ಹತೆ ಹೊಂದಿರುವವರಿಗೆ ಅಪ್ರೆಂಟಿಸ್‌ಶಿಪ್ ಹಾಗೂ ಸ್ಟೈಪೆಂಡ್ ಅವಕಾಶಗಳಿರುತ್ತವೆ.

ಕರಾಮುವಿ ಪ್ರಾದೇಶಿಕ ಕೇಂದ್ರಗಳು

1. **ಮೈಸೂರು (ಕೇಂದ್ರ ಕಚೇರಿ)** : ಪ್ರವೇಶಾತಿ ವಿಭಾಗ, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–570006, ದೂ(ಕ) 0821–2500981, ಮೊ: 97313 92627 / 98440 10407.
2. **ಬೆಂಗಳೂರು–1 ಪ್ರಾದೇಶಿಕ ಕೇಂದ್ರ** : ಆಸ್ಪಿನ್ ಕಾಲೇಜ್, ಶ್ರೀಗೌರಿ ಚೇಂಬರ್ಸ್, #61, 5ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018. ದೂರವಾಣಿ: (ಕ) 080–26603664, ಮೊಬೈಲ್ : 94486 68880.
3. **ಬೆಂಗಳೂರು–2 ಪ್ರಾದೇಶಿಕ ಕೇಂದ್ರ** : ಕರಾಮುವಿ ಮಹಿಳಾ ಪ್ರಾದೇಶಿಕ ಕೇಂದ್ರ, ಸರ್ಕಾರಿ ಬಾಲಕಿಯರ ಪಿ.ಯು.ಕಾಲೇಜ್, 4ನೇ ಮೇನ್, 13ನೇ ಕ್ರಾಸ್, ಬೆಸ್ಕಾಂ ಕಚೇರಿ ಹತ್ತಿರ, ಮಲ್ಲೇಶ್ವರಂ, ಬೆಂಗಳೂರು–03. ದೂ: 080–23448811, ಮೊ: 98445 06629.
4. **ಬೆಂಗಳೂರು–3 ಪ್ರಾದೇಶಿಕ ಕೇಂದ್ರ** : ಆದಿತ್ಯ ಶಿಕ್ಷಣ ಸಂಸ್ಥೆ, ನಂ.12, ಕೋಗಿಲು ಮುಖ್ಯ ರಸ್ತೆ, ಅನ್ನಪೂರ್ಣೇಶ್ವರಿ ದೇವಸ್ಥಾನದ ಹಿಂಭಾಗ, ಮಾರುತಿನಗರ, ಯಲಹಂಕ, ಬೆಂಗಳೂರು–560064, ಮೊ: 98805 26439 / 90195 26439.
5. **ಬೆಳಗಾಂ ಪ್ರಾದೇಶಿಕ ಕೇಂದ್ರ** : ಅಂಗಡಿ ಕಾಲೇಜ್ ಆಫ್ ಕಾಮರ್ಸ್ ಅಂಡ್ ಸೈನ್ಸ್, ಸವಗಾವ್ ರಸ್ತೆ, ಬೆಳಗಾವಿ–590009, ಮೊ: 81233 93047.
6. **ಬಳ್ಳಾರಿ ಪ್ರಾದೇಶಿಕ ಕೇಂದ್ರ** : ಪ್ರಾದೇಶಿಕ ವಿಜ್ಞಾನ ಕೇಂದ್ರದ ಹಿಂಭಾಗ, ಜಿಲ್ಲಾ ಕ್ರೀಡಾಂಗಣದ ಹತ್ತಿರ, ನಲ್ಲಚೆರವು ಪ್ರದೇಶ, ಬಳ್ಳಾರಿ–583102. ಮೊ: 90351 43912.
7. **ಚಾಮರಾಜನಗರ ಪ್ರಾದೇಶಿಕ ಕೇಂದ್ರ** : ಕೆ.ಹೆಚ್.ಬಿ. ಕಾಲೋನಿ, ರಾಮಸಮುದ್ರ ಲೇಔಟ್, ಇಮ್ಮಾನುಯೆಲ್ ಕ್ರಿಶ್ಚಿಯನ್ ಸ್ಕೂಲ್ ಹತ್ತಿರ, ಚಾಮರಾಜನಗರ–571313, ಮೊ: 96323 46618.
8. **ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರ** : ಸಾಯಿಮಂದಿರ ರಸ್ತೆ, ಮಧುವನ ಬಡಾವಣೆ, ಚಿಕ್ಕಮಗಳೂರು–577102, ಮೊ: 81978 18807.
9. **ದಾವಣಗೆರೆ ಪ್ರಾದೇಶಿಕ ಕೇಂದ್ರ** : ಜೆ. ಹೆಚ್. ಪಟೇಲ್ ಬಡಾವಣೆ, ಶಾಮನೂರು ಹಿಂಭಾಗ, ನಾಗನೂರು ರಸ್ತೆ, ದಾವಣಗೆರೆ–577004, ಮೊ: 99864 58055.
10. **ಧಾರವಾಡ ಪ್ರಾದೇಶಿಕ ಕೇಂದ್ರ** : ಕರ್ನಾಟಕ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್ ಕ್ಯಾಂಪಸ್, ಕೆ.ಸಿ.ಡಿ. ರಸ್ತೆ, ಎಲ್‌ಐಸಿ ಕಚೇರಿ ಎದುರು, ಧಾರವಾಡ–580008. ದೂ: 0836–2441199, ಮೊ: 78993 75158.
11. **ಹಾಸನ ಪ್ರಾದೇಶಿಕ ಕೇಂದ್ರ** : ಎಸ್. ಎಂ. ಕೃಷ್ಣ ನಗರ, ಅರಸೀಕೆರೆ ರಸ್ತೆ, ದೊಡ್ಡಪುರ ಅಂಚೆ, ಕೇಂದ್ರೀಯ ವಿದ್ಯಾಲಯದ ಹತ್ತಿರ, ಬಿ. ಟಿ. ಕೊಪ್ಪಲು, ಹಾಸನ–573018, ಮೊ: 89040 36090.
12. **ಕಲಬುರ್ಗಿ ಪ್ರಾದೇಶಿಕ ಕೇಂದ್ರ** : ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾನಿಲಯ ಆವರಣ, ಕಲ್ಬುರ್ಗಿ–585106 ದೂ: 08472–265868, ಮೊ: 99167 83555.
13. **ಕಾರವಾರ ಪ್ರಾದೇಶಿಕ ಕೇಂದ್ರ** : ಯು.ಎಸ್.ಕೆ.ವಿ ಹಳೆ ಕಟ್ಟಡ, ಮೊದಲನೇ ಮಹಡಿ, ಸವಿತ ಸರ್ಕಲ್ ಮುಖ್ಯ ರಸ್ತೆ, ಕಾರವಾರ–581301 ಮೊ: 96114 18726, 90353 95137.
14. **ಕೋಲಾರ ಪ್ರಾದೇಶಿಕ ಕೇಂದ್ರ** : ಎಸ್. ಪಿ. ಕಚೇರಿ ಹಿಂಭಾಗ, ಆರ್. ಎಲ್. ಜಾಲಪ್ಪ ಆಸ್ಪತ್ರೆ ಸಮೀಪ, ಕೋಲಾರ–563101, ಮೊ: 89702 23247.
15. **ಮಂಡ್ಯ ಪ್ರಾದೇಶಿಕ ಕೇಂದ್ರ** : # ಸಿ.ಎಸ್–11(ಎ), 'ಇ' ಬ್ಲಾಕ್, ವಿವೇಕಾನಂದ ನಗರ ಲೇಔಟ್, ಹೊಳಲು ಮೇಲುಕೋಟೆ ರಸ್ತೆ, ಮಂಡ್ಯ–571401. ಮೊ: 90085 40090.
16. **ಮಂಗಳೂರು ಪ್ರಾದೇಶಿಕ ಕೇಂದ್ರ** : ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘ, ಸಾಯಿಬಾಬಾ ಮಂದಿರದ ಸಮೀಪ, ಲೇಡಿಹಿಲ್, ಮಂಗಳೂರು–575006, ದೂ: 0824–2454697, ಮೊ: 99450 58950 / 99721 96692.
17. **ರಾಮನಗರ ಪ್ರಾದೇಶಿಕ ಕೇಂದ್ರ** : ಶಾಂತಿನಿಕೇತನ್ ಗ್ರೂಪ್ ಆಫ್ ಇನ್ಸ್‌ಟಿಟ್ಯೂಷನ್ಸ್, ಬಿ. ಎಂ. ರಸ್ತೆ, ವಿವೇಕಾನಂದ ನಗರ, ರಾಮನಗರ–562159, ದೂ: 080–27274443, ಮೊ: 99644 95936.
18. **ಶಿವಮೊಗ್ಗ ಪ್ರಾದೇಶಿಕ ಕೇಂದ್ರ** : ಅಲ್ಕೋಳ ಸರ್ಕಲ್, ಎಲ್.ಐ.ಸಿ. ಕಚೇರಿ ಹತ್ತಿರ, ಸಾಗರ ರಸ್ತೆ, ಶಿವಮೊಗ್ಗ–577201, ಮೊ:91644 67131.
19. **ತುಮಕೂರು ಪ್ರಾದೇಶಿಕ ಕೇಂದ್ರ** : ಸಿಎ–07, ಟೂಡಾ ಲೇಔಟ್, ರಾಜೀವ್‌ಗಾಂಧಿ ನಗರ, ಮೆಳೆಕೋಟೆ, ತುಮಕೂರು–572105, ಮೊ: 98441 26625.
20. ಉಡುಪಿ ಪ್ರಾದೇಶಿಕ ಕೇಂದ್ರ : ಜಿಲ್ಲಾ ಪಂಚಾಯತ್ ಕಚೇರಿ ಹಳೇ ಕಟ್ಟಡ, 2ನೇ ಮಹಡಿ, ಬನ್ನಂಜೆ, ಉಡುಪಿ–576101, ದೂ: 0820–2522247, ಮೊ: 99725 26647.
21. **ಬೀದರ್ ಪ್ರಾದೇಶಿಕ ಕೇಂದ್ರ** : ಸರ್ಕಾರಿ ಪ್ರ.ದ. ಕಾಲೇಜು, ನೌಬಾದ್, ಬೀದರ್, ಮೊ: 98454 91995.
22. **ಬಾಗಲಕೋಟೆ ಪ್ರಾದೇಶಿಕ ಕೇಂದ್ರ** : ಬಸವೇಶ್ವರ ಕಲಾ ಕಾಲೇಜು, ಬಿ.ವಿ.ಎಸ್. ಕ್ಯಾಂಪಸ್, ಬಾಗಲಕೋಟೆ, ದೂ: 08354–220440, ಮೊ: 73530 02301 / 97435 82257.

ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಯ ದಿನಾಂಕಗಳು:		
ಪ್ರಾರಂಭದ ದಿನಾಂಕ	:	07.10.2021
ದಂಡ ಶುಲ್ಕವಿಲ್ಲದೇ ಅಂತಿಮ ದಿನಾಂಕ	:	18.11.2021
ರೂ: 200/– ದಂಡ ಶುಲ್ಕದೊಡನೆ ಅಂತಿಮ ದಿನಾಂಕ	:	30.11.2021
ರೂ: 400/– ದಂಡ ಶುಲ್ಕದೊಡನೆ ಅಂತಿಮ ದಿನಾಂಕ	:	15.12.2021

ತರಗತಿ ಹಾಗೂ ಪರೀಕ್ಷೆಗಳನ್ನು ವಿವಿಧ ಕೇಂದ್ರಗಳಲ್ಲಿ ನಡೆಸಲಾಗುವುದು.

ಸಹಿ/–, ಕುಲಸಚಿವರು

ನವತ್ವದ ನವರಾತ್ರಿ

• ಎಸ್. ಸೂರ್ಯಪ್ರಕಾಶ ಪಂಡಿತ್

ಇಂದಿನಿಂದ ದಸರಾ ಮಹೋತ್ಸವ

ಮತ್ತೆ ನವರಾತ್ರಿ ಬಂದಿದೆ. ಇದು ಒಂಬತ್ತು ದಿನಗಳ ಹಬ್ಬವಾಗಿ 'ನವರಾತ್ರ' ಎಂದೆನಿಸಿಕೊಂಡಿದೆ, ದಿಟ. ಆದರೆ ಇದನ್ನು ಇನ್ನೊಂದು ವಿಧದಲ್ಲೂ ಅರ್ಥೈಸಿಕೊಳ್ಳಬಹುದು: ನಮ್ಮ ಜೀವನದಲ್ಲಿ ನವತ್ವವನ್ನು, ಎಂದರೆ ಹೊಸತನವನ್ನು ತುಂಬಬಲ್ಲ ಹಬ್ಬವಾದುದರಿಂದ 'ನವರಾತ್ರ'. ಇಲ್ಲಿ ರಾತ್ರಿಯೇ ಏಕೆ ಎಂದರೆ, ರಾತ್ರಿ ಎಂಬುದು ಕತ್ತಲೆಗೆ ಸಂಕೇತ, ಕಷ್ಟಕ್ಕೆ ಸಂಕೇತ. ಹೀಗಾಗಿ ನಮಗೆ ಒದಗಿರುವ ಕಷ್ಟಗಳಿಂದ ನಮ್ಮನ್ನು ಪಾರುಮಾಡಿ, ದಣಿದಿರುವ ಬದುಕಿಗೆ ಹೊಸತನವನ್ನು ತುಂಬಬಲ್ಲದ್ದು ನವರಾತ್ರ. ಈಗಂತೂ ಇಡುಯ ಜಗತ್ತಿಗೇ ನವತ್ವ ಬೇಕಿದೆ. ಕೋವಿಡ್‌ನ ಉಪಟಳದಿಂದ ಎಲ್ಲರೂ ದಣಿದಿದ್ದಾರೆ; ಎಲ್ಲರಿಗೂ ಹುರುಪು–ಉತ್ಸಾಹ–ಚೈತನ್ಯಗಳು ಬೇಕಿವೆ.

ನವರಾತ್ರಿಯನ್ನು ನಮ್ಮಲ್ಲಿ 'ದಸರಾ' ಎಂದೂ ಆಚರಿಸಲಾಗುತ್ತದೆಯಷ್ಟೆ. ಇದು 'ದಶಾಹ' ಎಂಬುದರ ರೂಪಾಂತರ; ಹತ್ತು ದಿನಗಳು ಎಂದು ಇದರರ್ಥ. 'ನವರಾತ್ರಿ'ಯ ಹತ್ತನೆಯ ದಿನವನ್ನು 'ವಿಜಯದಶಮಿ' ಎಂದು ಆಚರಿಸಲಾಗುತ್ತದೆ. ಹೀಗಾಗಿ ಒಟ್ಟು ಹತ್ತು ದಿನಗಳ ಹಬ್ಬವೇ 'ದಶಾಹ'; ಇದೇ 'ದಸರಾ' ಆಗಿರುವುದು. ಇದು ನಮ್ಮ ನಾಡಹಬ್ಬ.

ಪ್ರಕೃತಿಯಿಂದಲೇ ನಮ್ಮ ಎಲ್ಲ ಶಕ್ತಿಗಳ ಮೂಲಸ್ರೋತ. ಅವಳು ನಮಗೆ ಒಲಿದಾಗಲೇ ನಮ್ಮ ಬದುಕು ಹಗುರ, ಸುಖ, ಸಂತೋಷ, ಸುಂದರ; ಅವಳು ಮುನಿದಾಗ ಬದುಕು ಭಾರ, ನೋವು, ದುಃಖ, ಭಯಂಕರ.

ಅವಳನ್ನು ಒಲಿಸಿಕೊಳ್ಳುವುದು ಎಂದರೆ ಶಕ್ತಿಯ ಸ್ವರೂಪವನ್ನು ಚೆನ್ನಾಗಿ ಅರಿತುಕೊಂಡು, ಅದಕ್ಕೆ ತಕ್ಕಂತೆ ಜೀವನವನ್ನು ರೂಪಿಸಿಕೊಳ್ಳುವುದು. ಹೀಗಾಗಿಯೇ ನವರಾತ್ರಿಯ ಮೊದಲ ಮೂರು ದಿನಗಳನ್ನು ಲಕ್ಷ್ಮಿಯ ಪೂಜೆಗೂ, ಅನಂತರದ ಮೂರು ದಿನಗಳನ್ನು ಸರಸ್ವತಿಯ ಪೂಜೆಗೂ, ಕೊನೆಯ ಮೂರು ದಿನಗಳನ್ನು ದುರ್ಗೆಯ ಪೂಜೆಗೂ ವಿನಿಯೋಗಿಸಲಾಗುತ್ತದೆ.

ಪ್ರಕೃತಿ ಎಂದರೆ ತಾಯಿ. ನಮಗೆ ಜೀವವನ್ನು ಕೊಟ್ಟು, ನಮ್ಮ ಜೀವನವನ್ನು ಮುನ್ನಡೆಸುವವಳು ಅವಳು. ಹೀಗಾಗಿಯೇ ನಮ್ಮ ಸಂಸ್ಕೃತಿಯಲ್ಲಿ ಪ್ರಕೃತಿಯ ಆರಾಧನೆಗೂ ಮಾತೃಶಕ್ತಿಯ ಪೂಜನಕ್ಕೂ ವಿಶೇಷ ಮನ್ನಣೆ. ತಾಯಿಯನ್ನು ಪ್ರಕೃತಿಗೆ ಸಂಕೇತವಾಗಿಯೂ, ಪ್ರಕೃತಿಯನ್ನು ತಾಯ್ತನಕ್ಕೆ ಪ್ರತಿಮೆಯಾಗಿಯೂ ನಮ್ಮ ಪರಂಪರೆ ಕಾಣಿಸಿದೆ. ಮಾತೃತ್ವದ ಎಲ್ಲ ಆಯಾಮಗಳೂ ಲಕ್ಷ್ಮೀ, ಸರಸ್ವತೀ ಮತ್ತು ದುರ್ಗೆ – ಈ ಮೂರು ರೂಪಗಳಲ್ಲಿ ಕಂಡರಿಸಲ್ಪಟ್ಟಿದೆ.

ನಮ್ಮ ಜೀವನಕ್ಕೆ ಮುಖ್ಯವಾಗಿ ಏನು ಬೇಕು? ಮೊದಲಿಗೆ ಪ್ರಾಣ ಇರಬೇಕು; ಆ ಪ್ರಾಣಕ್ಕೆ ತ್ರಾಣ ಒದಗಬೇಕು. ಪ್ರಾಣ–ತ್ರಾಣಗಳ ಸಂಯೋಗವನ್ನೇ ಬಲ ಎನ್ನಬಹುದು. ಇದು ದೇಹಕ್ಕೆ ಅಸ್ತಿತ್ವವನ್ನು ಒದಗಿಸುವ ಮೊದಲ ಹಂತ. ಈ ಬಲವೊಂದೇ ಇದ್ದರೆ ನಮ್ಮ ಜೀವನಕ್ಕೆ ಸಾಕಾಗದು; ಹಲವು ಬಲಗಳ ಬೆಂಬಲ ನಮಗೆ ಬೇಕಾಗುತ್ತದೆ; ದೈಹಿಕ ಮಾನಸಿಕ ಬೌದ್ಧಿಕ ಬಲಗಳಲ್ಲದೆ, ಆರ್ಥಿಕ, ಸಾಮಾಜಿಕ, ಭಾವನಾತ್ಮಕ ಬಲಗಳೂ ಬೇಕಾಗುತ್ತವೆ. ಈ ಎಲ್ಲ ಬಗೆಯ ಬಲಗಳನ್ನೂ ಒಂದಾಗಿ ಸೇರಿಸಿ 'ಶಕ್ತಿ' ಎಂದು ಕರೆಯಬಹುದು. ಶಕ್ತಿಯ ವಿವಿಧ ಆಯಾಮಗಳ ಆರಾಧನೆಗೆ ಮೀಸಲಾಗಿರುವ ಹಬ್ಬವೇ ನವರಾತ್ರಿ. ಇದು ಶಕ್ತಿಶಾರದೆಯ ಉತ್ಸವ.

ಇಲ್ಲಿ ಲಕ್ಷ್ಮೀ ನಮಗೆ ಬೇಕಾದ ಎಲ್ಲ ವಿಧದ ಭೌತಿಕ ಶಕ್ತಿ, ಎಂದರೆ ಸಂಪತ್ತನ್ನು ಸಂಕೇತಿಸುತ್ತಾಳೆ; ಸರಸ್ವತಿಯು ನಮಗೆ ಬೇಕಾದ ಬೌದ್ಧಿಕ ಶಕ್ತಿಯನ್ನು, ಎಂದರೆ ವಿದ್ಯಾಬುದ್ಧಿಗಳನ್ನು ಸಂಕೇತಿಸುತ್ತಾಳೆ; ದುರ್ಗೆಯು ನಮಗೆ ಬೇಕಾದ ದೈಹಿಕ ಶಕ್ತಿಯನ್ನು, ಎಂದರೆ ಆರೋಗ್ಯ–ಧೈರ್ಯಗಳನ್ನು ಸಂಕೇತಿಸುತ್ತಾಳೆ. ಆಧಿಭೌತಿಕ, ಆಧಿದೈವಿಕ ಮತ್ತು ಆಧ್ಯಾತ್ಮಿಕ ಶಕ್ತಿಗಳನ್ನೂ ಈ ಮೂರು ತತ್ತ್ವಗಳು ಸಂಕೇತಿಸುತ್ತವೆ.

ಇಂದು ಜಗತ್ತು ಅನಾರೋಗ್ಯ, ಅವಿದ್ಯೆ, ದಾರಿದ್ರ್ಯಗಳಿಂದ ಬಳಲುತ್ತಿದೆ. ಇವು ಎಲ್ಲ ಕಾಲದ ಸಮಸ್ಯೆಗಳೂ ಹೌದು. ಈ ಕಷ್ಟಗಳಿಂದ ನಮ್ಮನ್ನು ಕಾಪಾಡಬಲ್ಲದ್ದು ಪ್ರಕೃತಿ. ಇದು ನಮ್ಮ ಒಳಗಿನ ಪ್ರಕೃತಿಯೂ ಹೌದು, ನಮ್ಮ ಹೊರಗಿನ ಪ್ರಕೃತಿಯೂ ಹೌದು. ಇದು ನಮ್ಮ ಅಂತರಂಗದ ಚೈತನ್ಯವೂ ಹೌದು, ಬಹಿರಂಗದ ಚೈತನ್ಯವೂ ಹೌದು. ಹೀಗೆ ನಮ್ಮನ್ನೂ ನಮ್ಮ ಪರಿಸರವನ್ನೂ ನಮ್ಮ ಏಳಿಗೆಗೆ ಒದಗುವಂತೆ, ನಮ್ಮ ಬದುಕನ್ನು ಹೊಸತನ್ನಾಗಿಸಿಕೊಳ್ಳುವಂತೆ ನಡೆಸುವ ಅಂತರಂಗ–ಬಹಿರಂಗದ ಶಕ್ತಿಪೂಜೆಯೇ 'ನವರಾತ್ರಿ'.

ಬಿಜೆಪಿಯವರು ಸತ್ತರೆ ₹1 ಕೋಟಿ ಪರಿಹಾರ: ಶಾಸಕ ಬಯ್ಯಾಪುರ

ಕುಷ್ಟಗಿ (ಕೊಪ್ಪಳ ಜಿಲ್ಲೆ): 'ಉತ್ತರ ಪ್ರದೇಶದ ಲಖಿಂಪುರ– ಖೇರಿ ಬಳಿ ಪ್ರತಿಭಟನೆ ವೇಳೆ ಕೇಂದ್ರ ಗೃಹ ಖಾತೆ ರಾಜ್ಯ ಸಚಿವರ ಪುತ್ರನ ಕಾರು ಹರಿದು ಮೃತರಾದ ರೈತ ಕುಟುಂಬಗಳಿಗೆ ಅಲ್ಲಿಯ ಬಿಜೆಪಿ ಸರ್ಕಾರ ಕೇವಲ ₹45 ಲಕ್ಷ ಪರಿಹಾರ ನೀಡುತ್ತಿದೆ. ಇಂತಹ ಘಟನೆಯಲ್ಲಿ ಬಿಜೆಪಿಯ ಯಾವುದೇ ಮುಖಂಡ ಸತ್ತರೂ ಕಾಂಗ್ರೆಸ್ ಪಕ್ಷದಿಂದ ₹1 ಕೋಟಿ ಪರಿಹಾರ ನೀಡುತ್ತೇವೆ' ಎಂದು ಶಾಸಕ ಅಮರೇಗೌಡ ಬಯ್ಯಾಪುರ ಹೇಳಿದರು.

ಲಖಿಂಪುರ ಘಟನೆ ಖಂಡಿಸಿ ಕಾಂಗ್ರೆಸ್‌ನಿಂದ ಇಲ್ಲಿ ನಡೆಸಿದ ಪ್ರತಿಭಟನೆಯಲ್ಲಿ ಶಾಸಕರು ಮಾತನಾಡಿದ ವಿಡಿಯೊ ವೈರಲ್ ಆಗಿದೆ.

ಇದಕ್ಕೆ ಪ್ರತಿಕ್ರಿಯಿಸಿದ ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷ ಬಸವರಾಜ ಹಳ್ಳೂರು, 'ಹೀಗೆ ಹೇಳುವ ಮೂಲಕ ಶಾಸಕರು ಬಿಜೆಪಿ ಮುಖಂಡರನ್ನು ಕೊಲೆಗೈಯುವುದಕ್ಕೆ ಪ್ರಚೋದನೆ ನೀಡಿದ್ದಾರೆ' ಎಂದು ಹರಿಹಾಯ್ದಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ದೆಹಲಿಯ ರೈತ ಚಳವಳಿ ದಿಕ್ಕು ತಪ್ಪುತ್ತಿದೆಯೇ?
ಭಾಗವಹಿಸುವವರು:
ಪುರುಷೋತ್ತಮ ಬಿಳಿಮಲೆ, ನಿವೃತ್ತ ಪ್ರಾಧ್ಯಾಪಕ, ಜೆಎನ್‌ಯು ದೆಹಲಿ. ಅಶ್ವತ್ಥನಾರಾಯಣ ಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ. ಬ್ರಿಜೇಶ್ ಕಾಳಪ್ಪ, ಎಐಸಿಸಿ ವಕ್ತಾರ. ಆಶಾ ಕೃಷ್ಣಸ್ವಾಮಿ, ಹಿರಿಯ ಪತ್ರಕರ್ತೆ
ಸಂವಾದ ಮಧ್ಯಾಹ್ನ 12 ರಿಂದ 1
ಮಿಸಳ್ ಹಾಪ್ಚಾ
ನಾನಾರಿಗಲ್ಲದವಳು ಬಿದಿರು
https://bit.ly/3FIUQr4
ಪಾಡ್‌ಕಾಸ್ಟ್: ಈದಿನದ ವಿಶೇಷ: ಸಂಜೆ 4 ಆಟನೋಟ, ಪ್ರತೀ ದಿನ: ಬೆಳಿಗ್ಗೆ 7 ವಚನವಾಣಿ, ಬೆ. 7.30 ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್, ಬೆಳಿಗ್ಗೆ 9.30 ಸಂಪಾದಕೀಯ, ಬೆಳಿಗ್ಗೆ 9 ಪ್ರಚಲಿತ
ಪ್ರಜಾವಾಣಿ ಕನ್ನಡ ಧ್ವನಿ

ವಿಪಕ್ಷಗಳಿಗೆ ಪುನಶ್ಚೇತನದ ಅವಕಾಶ

ಲಖಿಂಪುರ ಭೇಟಿಗೆ ರಾಜಕೀಯ ನಾಯಕರಿಗೆ ಅನುಮತಿ: ತಂಡದಲ್ಲಿ ಐದು ಜನರಿಗೆ ಅವಕಾಶ; ಉತ್ತರ ಪ್ರದೇಶ ಸರ್ಕಾರ ಸೂಚನೆ

ಪ್ರಜಾವಾಣಿ ವಾರ್ತೆ

ಲಖನೌ: ಲಖಿಂಪುರ–ಖೇರಿಯಲ್ಲಿ ನಾಲ್ವರು ರೈತರ ಹತ್ಯೆ ಪ್ರಕರಣವು ವಿರೋಧ ಪಕ್ಷಗಳಿಗೆ, ಅದರಲ್ಲೂ ಮುಖ್ಯವಾಗಿ ಕಾಂಗ್ರೆಸ್‌ಗೆ ಪುನಶ್ಚೇತನದ ಅವಕಾಶ ನೀಡಿದೆ. ಉತ್ತರ ಪ್ರದೇಶದಲ್ಲಿ ಮುಂದಿನ ವರ್ಷ ವಿಧಾನಸಭೆ ಚುನಾವಣೆ ನಡೆಯಲಿದೆ. ಹಾಗಾಗಿಯೇ, ವಿರೋಧ ಪಕ್ಷಗಳ ನಾಯಕರು ಲಖಿಂಪುರ–ಖೇರಿಯತ್ತ ಸಾಲುಗಟ್ಟಿ ಹೋಗುತ್ತಿದ್ದಾರೆ. ಹಿಂಸಾಚಾರ ಘಟನೆಯು ಚುನಾವಣೆಯಲ್ಲಿ ಹಿನ್ನಡೆಗೆ ಕಾರಣವಾಗಬಹುದು ಎಂಬ ಆತಂಕದಲ್ಲಿ ಆಡಳಿತಾರೂಢ ಬಿಜೆಪಿ ಇದೆ. ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬಹುದು ಎಂಬ ಕಾರ್ಯತಂತ್ರವನ್ನು ಹೆಣೆಯುತ್ತಿದೆ.

ಲಖಿಂಪುರ–ಖೇರಿಗೆ ವಿರೋಧ ಪಕ್ಷಗಳ ನಾಯಕರ ಭೇಟಿಯನ್ನು ಎರಡು ದಿನಗಳಿಂದ ಸರ್ಕಾರವು ತಡೆದಿದೆ. ಆದರೆ, ಇದು ಕೂಡ ತನ್ನ ವಿರುದ್ಧವೇ ತಿರುಗಬಹುದು ಎಂಬ ಕಾರಣಕ್ಕೆ ತನ್ನ ಕಾರ್ಯತಂತ್ರವನ್ನು ಬುಧವಾರ ಬದಲಿಸಿದೆ. ವಿರೋಧ ಪಕ್ಷಗಳ ನಾಯಕರು ಲಖಿಂಪುರ–ಖೇರಿಗೆ ಭೇಟಿ ನೀಡಲು ಅವಕಾಶ ಕೊಟ್ಟಿದೆ. ಆದರೆ, ಒಮ್ಮೆಗೆ ಕೇವಲ ಐದು ಜನರಿಗೆ ಮಾತ್ರ ಅವಕಾಶ ನೀಡಲಾಗಿದೆ ಎಂದು ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭೇಟಿಗೆ ಅನುಮತಿ ನೀಡುವುದರ ಜೊತೆಗೆ, ಬಂಧನದಲ್ಲಿದ್ದ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರನ್ನು ಬಿಡುಗಡೆ ಮಾಡಲಾಗಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಹಿಂಸಾಚಾರ ಪೀಡಿತ ಸ್ಥಳಕ್ಕೆ ಭೇಟಿ ನೀಡಲು ಬುಧವಾರ ಬೆಳಿಗ್ಗೆ ಅನುಮತಿ ನಿರಾಕರಿಸಲಾಗಿತ್ತು. ಅಲ್ಲಿ ಶಾಂತಿ ಕದಡುವ ಸಾಧ್ಯತೆಯಿದ್ದು, ಯಾರಿಗೂ ಅಲ್ಲಿಗೆ ಹೋಗಲು ಅವಕಾಶ ನೀಡುವುದಿಲ್ಲ ಎಂದು ವಕ್ತಾರರು ಹೇಳಿದ್ದರು. ಆದರೆ ಗೃಹಖಾತೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವನೀಶ್ ಕುಮಾರ್ ಅವಸ್ಥಿ ಅವರು ಅವಕಾಶ ನೀಡಲಾಗಿದೆ ಎಂದು ಬಳಿಕ ಮಾಹಿತಿ ನೀಡಿದರು.

ಭಾನುವಾರ ನಡೆದ ಹಿಂಸಾಚಾರದಲ್ಲಿ ಸಾವನ್ನಪ್ಪಿದ ರೈತರ ಕುಟುಂಬಗಳನ್ನು ಭೇಟಿಯಾಗಲು ಹೊರಟಿದ್ದ ಪ್ರಿಯಾಂಕಾ ಅವರನ್ನು ಬಂಧಿಸಿ ಅತಿಥಿಗೃಹದಲ್ಲಿ ಇರಿಸಲಾಗಿತ್ತು. ಅವರನ್ನು ಬುಧವಾರ ಬಿಡುಗಡೆ ಮಾಡಲಾಗಿದೆ. ಯಾರಿಗೂ ತಡೆ ನೀಡುವ ಉದ್ದೇಶ ಸರ್ಕಾರಕ್ಕಿಲ್ಲ ಎಂದು ಕಾನೂನು ಮತ್ತು ಸುವ್ಯವಸ್ಥೆ ಎಡಿಜಿ ಪ್ರಶಾಂತ್ ಕಿಶೋರ್ ಹೇಳಿದ್ದಾರೆ.

'ಶಾಂತಿ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಜನರ ಸಂಚಾರವನ್ನು ನಿರ್ಬಂಧಿಸಲಾಗಿತ್ತು. ಈಗ ಲಖೀಂಪುರಕ್ಕೆ ಭೇಟಿ ನೀಡಲು ಬಯಸುವವರು ಐದು ಜನರ ನಿಯೋಗದೊಂದಿಗೆ ತೆರಳಬಹುದು' ಎಂದು ಕುಮಾರ್ ಹೇಳಿದ್ದಾರೆ.

ಸಮಾಜವಾದಿ ಪಕ್ಷ, ಎಎಪಿ ಮತ್ತು ಬಿಎಸ್‌ಪಿ ನಾಯಕರಿಗೂ ಸಹ ಭೇಟಿಗೆ ಸರ್ಕಾರ ಅವಕಾಶ ನೀಡಿರಲಿಲ್ಲ. ಆದರೆ ಮಂಗಳವಾರ ತೃಣಮೂಲ ಕಾಂಗ್ರೆಸ್ ಸದಸ್ಯರು ಅಧಿಕಾರಿಗಳ ಜೊತೆ ವಾಗ್ವಾದ ನಡೆಸಿ, ಸಂತ್ರಸ್ತ ಕುಟುಂಬದವರನ್ನು ಭೇಟಿಯಾಗುವಲ್ಲಿ ಯಶಸ್ವಿಯಾಗಿದ್ದರು.

ಪ್ರಕರಣದ ತನಿಖೆ ಮತ್ತು ಸಂಭಾವ್ಯ ಬಂಧನಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, ಸ್ಥಳದಲ್ಲಿ ಶಾಂತಿ ಕಾಪಾಡಲಾಗಿದ್ದು, ತನಿಖೆ ಮುಂದುವರಿಯುತ್ತದೆ. ತಪ್ಪಿತಸ್ಥರನ್ನು ಸುಮ್ಮನೆ ಬಿಡುವುದಿಲ್ಲ ಎಂದರು. ಘಟನೆಗೆ ಸಂಬಂಧಿಸಿದ ಯಾವುದೇ ಸಾಕ್ಷ್ಯಾಧಾರವನ್ನು ನೀಡಬಯಸುವ ಜನರಿಗೆ ಸಹಾಯವಾಣಿ ಸಂಖ್ಯೆ ಹಾಗೂ ಇ–ಮೇಲ್ ಐಡಿಯನ್ನು ನೀಡಲಾಗಿದೆ.

ಲಖಿಂಪುರ ಘಟನೆ ಖಂಡಿಸಿ ಚಂಡೀಗಡದ ರಾಜಭವನದ ಎದುರು ಪ್ರತಿಭಟನೆ ನಡೆಸಿದ ಎಎಪಿ ಕಾರ್ಯಕರ್ತರನ್ನು ಪೊಲೀಸರು ತಡೆದರು ಪಿಟಿಐ ಚಿತ್ರ

ಬ್ರಿಟಿಷರು ಮಾಡಿದ ದೌರ್ಜನ್ಯವನ್ನು ಬಿಜೆಪಿ ಸರ್ಕಾರ ಮೀರಿಸಿದೆ. ಗೃಹ ಸಚಿವರು ರೈತರ ಧ್ವನಿಯನ್ನು ಹತ್ತಿಕ್ಕುವಂತೆ ಬೆದರಿಕೆ ಹಾಕುತ್ತಿದ್ದಾರೆ
ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ

ಜನರಲ್ಲಿ ಹಿಂಸೆಯನ್ನು ಪ್ರಚೋದಿಸಲು ಕಾಂಗ್ರೆಸ್ ಎಲ್ಲ ರೀತಿಯ ಯತ್ನ ಮಾಡುತ್ತಿದೆ. ರಾಜಕೀಯ ಲಾಭದ ಉದ್ದೇಶ ಇದರಲ್ಲಿದೆ
ಸಂಬಿತ್ ಪಾತ್ರಾ, ಬಿಜೆಪಿ ವಕ್ತಾರ

ಕೊಲೆಗಾರರನ್ನು ಏಕೆ ಬಂಧಿಸಲಾಗಿಲ್ಲ. ರಾಜ್ಯವು ಅಪರಾಧಿಗಳನ್ನು ಏಕೆ ರಕ್ಷಿಸುತ್ತಿದೆ. ಜೀವಕ್ಕೆ ಬೆಲೆ ಇಲ್ಲವೇ? ಮುಗ್ಧರ ಜೀವ ತೆಗೆದರೂ ಮೌನವೇಕೆ?
ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ಸಂಜಯ್ ಸಿಂಗ್, ರಾಘವ ಛಡ್ಡಾ ಮತ್ತು ಇತರರು ಇದ್ದ ಎಎಪಿ ನಿಯೋಗವು ಮೃತ ರೈತ ನಚ್ಚರ್ ಸಿಂಗ್ ಅವರ ನಿವಾಸಕ್ಕೆ ಬುಧವಾರ ಸಂಜೆ ಭೇಟಿ ಕೊಟ್ಟು, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿತು ಪಿಟಿಐ ಚಿತ್ರ

ಅಮಿತ್ ಶಾ ಭೇಟಿ ಮಾಡಿದ ಮಿಶ್ರಾ

ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಲಖಿಂಪುರ ಘಟನೆ ಬಳಿಕ ಮೊದಲ ಬಾರಿಗೆ ಬುಧವಾರ ಭೇಟಿ ಮಾಡಿದರು. ಅರ್ಧ ಗಂಟೆಯ ಭೇಟಿಯಲ್ಲಿ ಘಟನೆಯ ಬಗ್ಗೆ ಶಾ ಅವರಿಗೆ ಮಿಶ್ರಾ ವಿವರಣೆ ನೀಡಿದರು.

ಅಜಯ್ ಮಿಶ್ರಾ ಅವರನ್ನು ವಜಾಗೊಳಿಸುವ ಉದ್ದೇಶ ಇಲ್ಲ ಬಿಜೆಪಿಗೆ ಇಲ್ಲ ಎನ್ನಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಮಿಶ್ರಾ ಅವರನ್ನು ವಜಾಗೊಳಿಸುವಂತೆ ವಿರೋಧ ಪಕ್ಷಗಳು ಒತ್ತಾಯಿಸುತ್ತಿವೆ. ಆದರೆ ಪ್ರಕರಣದಲ್ಲಿ ತಮ್ಮ ಪುತ್ರ ಭಾಗಿಯಾಗಿದ್ದಾನೆ ಎಂಬ ಆರೋಪವನ್ನು ಸಚಿವರು ಅಲ್ಲಗಳೆದಿದ್ದಾರೆ.

ಗುರುವಾರ ನಿಗದಿಯಾಗಿದ್ದ ಕಾರ್ಯಕ್ರಮವೊಂದರಲ್ಲಿ ಮುಖ್ಯ ಅತಿಥಿಯಾಗಿ ಭಾಷಣ ಮಾಡಬೇಕಿದ್ದ ಮಿಶ್ರಾ ಅವರು ಅದನ್ನು ರದ್ದುಗೊಳಿಸಿದ್ದಾರೆ.

ಸಂತ್ರಸ್ತರ ಭೇಟಿಯಾದ ಎಎಪಿ ನಿಯೋಗ

ಎಎಪಿಯ ನಿಯೋಗವೊಂದು ಲಖಿಂಪುರ–ಖೇರಿಗೆ ಬುಧವಾರ ತಲುಪಿ, ಮೃತ ರೈತರ ಕುಟುಂಬ ಸದಸ್ಯರನ್ನು ಭೇಟಿಯಾಗಿದೆ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಮೃತಪಟ್ಟ ಒಬ್ಬ ರೈತನ ಕುಟುಂಬದ ಸದಸ್ಯರ ಜೊತೆ ದೂರವಾಣಿಯಲ್ಲಿ ಮಾತನಾಡಿ, ಸಾಂತ್ವನ ಹೇಳಿದ್ದಾರೆ.

'ಎಎಪಿ ನಿಯೋಗದಲ್ಲಿ ಸಂಸದ ಸಂಜಯ್ ಸಿಂಗ್, ಶಾಸಕರಾದ ಹರ್‌ಪಾಲ್ ಚೀಮಾ, ರಾಘವ ಛಡ್ಡಾ ಮತ್ತು ಇತರರು ಇದ್ದಾರೆ. ಅವರು ಮೃತ ರೈತರ ನಚ್ಚರ್ ಸಿಂಗ್ ಅವರ ಕುಟುಂಬವನ್ನು ಭೇಟಿಯಾಗಿದ್ದಾರೆ' ಎಂದು ಎಎಪಿ ಟ್ವೀಟ್ ಮಾಡಿದೆ. ಕೇಜ್ರಿವಾಲ್ ಅವರು ದೂರವಾಣಿಯಲ್ಲಿ ಮಾತನಾಡುವ ವಿಡಿಯೊವನ್ನು ಕೂಡ ಬಿಡುಗಡೆ ಮಾಡಲಾಗಿದೆ.

ತಮ್ಮನ್ನು 55 ತಾಸು ಕಸ್ಟಡಿಯಲ್ಲಿ ಇರಿಸಲಾಗಿತ್ತು, ಈಗ ಲಖಿಂಪುರಕ್ಕೆ ಹೋಗಲು ಅನುಮತಿ ಕೊಡಲಾಗಿದೆ ಎಂದು ಸಂಜಯ್ ಸಿಂಗ್ ಹೇಳಿದ್ದಾರೆ.

ಅಶಾಂತಿ ಸೃಷ್ಟಿಗೆ ರಾಹುಲ್ ಯತ್ನ: ಬಿಜೆಪಿ ಆರೋಪ

ನವದೆಹಲಿ (ಪಿಟಿಐ): ಲಖಿಂಪುರ–ಖೇರಿ ಘಟನೆಯನ್ನು ಇರಿಸಿಕೊಂಡು ಅಶಾಂತಿ ಸೃಷ್ಟಿಸಲು ರಾಹುಲ್ ಗಾಂಧಿ ಪ್ರಯತ್ನಿಸುತ್ತಿದ್ದಾರೆ. ದುರಂತವನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳುತ್ತಿದ್ದಾರೆ ಎಂದು ಬಿಜೆಪಿ ಬುಧವಾರ ಆರೋಪಿಸಿದೆ.

ದೇಶದಲ್ಲಿ ನಿರಂಕುಶಾಧಿಪತ್ಯ ಇದೆ ಎಂಬ ರಾಹುಲ್ ಆರೋಪಕ್ಕೆ ಬಿಜೆಪಿ ವಕ್ತಾರ ಸಂಬಿತ್ ಪಾತ್ರ ತಿರುಗೇಟು ನೀಡಿದ್ದಾರೆ. 'ಹೊಣೆಗೇಡಿತನ' ಎಂಬುದೇ ಅವರ ಎರಡನೇ ಹೆಸರಾಗಿಬಿಟ್ಟಿದೆ ಎಂದು ಹೇಳಿದ್ದಾರೆ.

ಹಿಂಸೆಗೆ ಇಳಿಯುವಂತೆ ಜನರಿಗೆ ಕಾಂಗ್ರೆಸ್ ಕುಮ್ಮಕ್ಕು ನೀಡುತ್ತಿದೆ. ಬಿಕ್ಕಟ್ಟಿನ ಮಧ್ಯೆಯೂ ಜನರ ಮತ ಸೆಳೆಯುವ ಕೃತ್ಯ ಎಸಗಬೇಡಿ ಎಂದು ಅವರು ಕಾಂಗ್ರೆಸ್ ಪಕ್ಷವನ್ನು ಕೋರಿದ್ದಾರೆ.

ಮಾಧ್ಯಮಗೋಷ್ಠಿಯಲ್ಲಿ ಹೇಳುವ ವಿಚಾರಗಳಿಗಾಗಿ ಬಿಜೆಪಿ ಕಾರ್ಯಕರ್ತರ ಪ್ರತಿಭಟನೆಯನ್ನು ರಾಹುಲ್ ಎದುರಿಸಿಲ್ಲ. ಆದರೆ, ಪಕ್ಷದ ಕಾರ್ಯನಿರ್ವಹಣೆ ಬಗ್ಗೆ ವಿಮರ್ಶಾತ್ಮಕ ಹೇಳಿಕೆ ನೀಡಿದ ಮುಖಂಡ ಕಪಿಲ್ ಸಿಬಲ್ ಅವರ ಮೇಲೆ ಕಾಂಗ್ರೆಸ್ ಸದಸ್ಯರು ಟೊಮೆಟೊ ಎಸೆದಿದ್ದಾರೆ ಎಂದು ಪಾತ್ರಾ ಹೇಳಿದ್ದಾರೆ. ದೇಶದಲ್ಲಿ ಪ್ರಜಾಪ್ರಭುತ್ವ ಇದೆ ಎಂಬ ಕಾರಣಕ್ಕೇ ರಾಹುಲ್ ಅವರಿಗೆ ಮಾಧ್ಯಮ ಗೋಷ್ಠಿ ನಡೆಸಲು ಸಾಧ್ಯವಾಗುತ್ತಿದೆ ಎಂದೂ ಹೇಳಿದ್ದಾರೆ.

ರೈತರ ಮೇಲಿನ ದಾಳಿಗೆ ಕೇಂದ್ರ ಕುಮ್ಮಕ್ಕು: ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಸಂಬಂಧಿ ಮೂರು ಕಾಯ್ದೆಗಳ ತಿದ್ದುಪಡಿ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ರೈತರ ಮೇಲೆ ದಾಳಿ ನಡೆಸುವಂತೆ ಉತ್ತರ ಪ್ರದೇಶ ಮತ್ತು ಹರ್ಯಾಣ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರವೇ ಕುಮ್ಮಕ್ಕು ನೀಡಿದೆ ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರೈತರು ಹತ್ತು ತಿಂಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಅವರ ನ್ಯಾಯಯುತ ಬೇಡಿಕೆಗೆ ಕೇಂದ್ರ ಸರ್ಕಾರ ಸ್ಪಂದಿಸಬೇಕಿತ್ತು. ಆದರೆ, ಕೇಂದ್ರ ಸರ್ಕಾರವೇ ಕುಮ್ಮಕ್ಕು ನೀಡಿ ದಾಳಿ ಮಾಡಿಸುತ್ತಿದೆ' ಎಂದರು.

'ಹೋರಾಟ ನಿಲ್ಲಿಸದಿದ್ದರೆ ರೈತರಿಗೆ ತಕ್ಕ ಪಾಠ ಕಲಿಸುತ್ತೇವೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಹರ್ಯಾಣ ಮುಖ್ಯಮಂತ್ರಿ ಮನೋಹರ ಲಾಲ್ ಖಟ್ಟರ್ ಹೇಳಿದ್ದರು. ಅದರಂತೆಯೇ ಈಗ ಉತ್ತರ ಪ್ರದೇಶದಲ್ಲಿ ವಾಹನ ಹರಿಸಿ ರೈತರ ಹತ್ಯೆ ಮಾಡಲಾಗಿದೆ. ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಮತ್ತು ಅವರ ಮಗ ಈ ಹತ್ಯೆಗೆ ಕಾರಣ. ಅಜಯ್ ಮಿಶ್ರಾ ಅವರನ್ನು ತಕ್ಷಣ ಬಂಧಿಸಬೇಕು' ಎಂದು ಆಗ್ರಹಿಸಿದರು.

ಮೃತ ರೈತರ ಕುಟುಂಬಗಳಿಗೆ ಸಾಂತ್ವನ ಹೇಳಲು ಹೊರಟವರನ್ನು ಬಂಧಿಸಲಾಗುತ್ತಿದೆ. ಆದರೆ, ರೈತರ ಮೇಲೆ ಹರಿದ ಕಾರಿನಲ್ಲಿ ಅಜಯ್ ಮಿಶ್ರಾ ಮಗ ಇದ್ದ ಎಂದು ಪ್ರತ್ಯಕ್ಷದರ್ಶಿಗಳು ಹೇಳಿಕೆ ನೀಡಿದ್ದಾರೆ. ಆತನನ್ನು ಈವರೆಗೂ ಏಕೆ ಬಂಧಿಸಿಲ್ಲ? ಕೇಂದ್ರ ಸಚಿವರ ಮಗನ ರಕ್ಷಣೆಗೆ ಪ್ರಯತ್ನ ನಡೆಯುತ್ತಿದೆ ಎಂದು ಖರ್ಗೆ ದೂರಿದರು.

ಅಜಯ್ ಮಿಶ್ರಾ ರೈತರ ವಿರುದ್ಧ ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ. ಸುಳ್ಳು ಹೇಳುವುದು ಮತ್ತು ಸಾಕ್ಷ್ಯಗಳನ್ನು ತಿರುಚುವ ಕೆಲಸ ಮಾಡುತ್ತಿದ್ದಾರೆ. ಅವರನ್ನು ಕೇಂದ್ರ ಸಂಪುಟದಿಂದ ತಕ್ಷಣ ವಜಾ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರಿಯಾಂಕಾ ಬಂಧನಕ್ಕೆ ಖಂಡನೆ: ಮೃತ ರೈತರ ಕುಟುಂಬದವರಿಗೆ ಸಾಂತ್ವನ ಹೇಳಲು ತೆರಳುತ್ತಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರನ್ನು ಬಂಧಿಸಿರುವುದು ಕಾನೂನುಬಾಹಿರ. ಹತ್ಯೆಗೀಡಾದ ರೈತರ ಕುಟುಂಬದವರಿಗೆ ಸಾಂತ್ವನ ಹೇಳುವುದು ಅಪರಾಧವೆ? ವಾರೆಂಟ್ ಇಲ್ಲದೆ, ಯಾವುದೇ ಕಾರಣ ನೀಡದೆ ಬಂಧಿಸಿರುವುದು ಖಂಡನೀಯ ಎಂದರು.

ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಲಖನೌನಲ್ಲೇ ಇದ್ದರು. ಮೃತ ರೈತರ ಕುಟುಂಬಕ್ಕೆ ಸಾಂತ್ವನ ಹೇಳುವ ಕೆಲಸವನ್ನು ಅವರು ಮಾಡಲಿಲ್ಲ. ಪ್ರಿಯಾಂಕಾ ಗಾಂಧಿ ಬಂಧನದ ಕುರಿತೂ ಮೌನ ಮುರಿದಿಲ್ಲ ಎಂದು ಟೀಕಿಸಿದರು.

ಮಿಶ್ರಾ ವಜಾಕ್ಕೆ ಟಿಕಾಯತ್ ಆಗ್ರಹ

ಲಖಿಂಪುರ ಖೇರಿ (ಪಿಟಿಐ): ಲಖಿಂಪುರ ಖೇರಿಯಲ್ಲಿನ ಹಿಂಸಾಚಾರ ಪ್ರಕರಣದಲ್ಲಿ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರನ್ನು ವಜಾ ಮಾಡಬೇಕು ಹಾಗೂ ಈ ಪ್ರಕರಣದ ಎಲ್ಲ ಆರೋಪಿಗಳನ್ನೂ ಬಂಧಿಸಬೇಕು ಎಂದು ಭಾರತೀಯ ಕಿಸಾನ್ ಯೂನಿಯನ್ ನಾಯಕ ರಾಕೇಶ್ ಟಿಕಾಯತ್ ಬುಧವಾರ ಆಗ್ರಹಿಸಿದ್ದಾರೆ.

ಅಲ್ಲದೇ, ಪ್ರಕರಣದ ತನಿಖೆ ಹಾಗೂ ಸಂತ್ರಸ್ತ ರೈತ ಕುಟುಂಬಗಳಿಗೆ ಪರಿಹಾರ ನೀಡುವ ವಿಚಾರವಾಗಿ ಆಗಿರುವ ಒಪ್ಪಂದವನ್ನು ವಾರದೊಳಗಾಗಿ ಅನುಷ್ಠಾನಕ್ಕೆ ತರದೇ ಹೋದಲ್ಲಿ, ದೇಶದಾದ್ಯಂತ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಕಾಂಗ್ರೆಸ್ ನಾಯಕ ಪೈಲಟ್ ಬಂಧನ

ನವದೆಹಲಿ (ಪಿಟಿಐ): 'ಲಖಿಂಪುರ– ಖೇರಿ ಹಿಂಸಾಚಾರದಲ್ಲಿ ಹತ್ಯೆಯಾದ ನಾಲ್ವರು ರೈತರ ಕುಟುಂಬಗಳನ್ನು ಭೇಟಿ ಮಾಡಲು ಹೋಗುತ್ತಿದ್ದ ಆಚಾರ್ಯ ಪ್ರಮೋದ್ ಕೃಷ್ಣಂ ಮತ್ತು ನನ್ನನ್ನು ಉತ್ತರ ಪ್ರದೇಶದ ಮೊರಾದಾಬಾದ್‌ನಲ್ಲಿ ಪೊಲೀಸರು ಬಂಧಿಸಿದ್ದಾರೆ' ಎಂದು ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಬುಧವಾರ ಹೇಳಿದ್ದಾರೆ.

'ದೆಹಲಿಯಿಂದ ರಸ್ತೆ ಮಾರ್ಗವಾಗಿ ಹೊರಟಿದ್ದ ತಮ್ಮನ್ನು ಪೊಲೀಸರು ಹಲವು ಚೆಕ್‌ಪೋಸ್ಟ್‌ಗಳಲ್ಲಿ ತಡೆದು ನಿಲ್ಲಿಸಿದರು. ಹಲವು ಪ್ರಶ್ನೆಗಳನ್ನು ಕೇಳಿ, ಅಂತಿಮವಾಗಿ ನನ್ನನ್ನು ಬಂಧಿಸಿ ಮೊರಾದಾಬಾದ್‌ನ ಅತಿಥಿ ಗೃಹಕ್ಕೆ ಕರೆದೊಯ್ದರು' ಎಂದು ಪೈಲಟ್ ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಉತ್ತರಪ್ರದೇಶ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳಿಂದ ನಮ್ಮನ್ನು ತಡೆದು ನಿಲ್ಲಿಸಲಾಗದು' ಎಂದು ಪೈಲಟ್ ಟ್ವೀಟ್ ಮಾಡಿದ್ದಾರೆ.

ಎಲ್ಲ ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ಸೂಚನೆ

ಪಟಾಕಿ ನಿಷೇಧ: ಆದೇಶ ಪಾಲಿಸಿ

ನವದೆಹಲಿ (ಪಿಟಿಐ): ಪಟಾಕಿ ಸರಗಳ ಮೇಲಿನ ನಿಷೇಧಕ್ಕೆ ಸಂಬಂಧಿಸಿದಂತೆ ಈ ಮೊದಲು ನೀಡಿರುವ ತನ್ನ ಆದೇಶವನ್ನು ಎಲ್ಲ ರಾಜ್ಯಗಳು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸುಪ್ರೀಂಕೋರ್ಟ್ ಬುಧವಾರ ಸೂಚಿಸಿದೆ.

'ಮತ್ತೊಬ್ಬರ ಜೀವಕ್ಕೆ ಅಪಾಯವೊಡ್ಡಿ ಸಂಭ್ರಮಾಚರಣೆ ಸೂಕ್ತವಲ್ಲ' ಎಂದು ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಹಾಗೂ ಎ.ಎಸ್. ಬೋಪಣ್ಣ ಅವರಿರುವ ನ್ಯಾಯಪೀಠ ಅಭಿಪ್ರಾಯಪಟ್ಟಿತು.

'ಹಬ್ಬ, ಸಂಭ್ರಮ ಆಚರಣೆ ಎಂದರೆ ಭಾರಿ ಶಬ್ದ ಮಾಡುವ ಪಟಾಕಿಗಳನ್ನು ಬಳಸುವುದೇ ಅಲ್ಲ. ಲಘು ತೀವ್ರತೆಯ ಹಾಗೂ ಕಡಿಮೆ ಶಬ್ದ ಹೊರಹೊಮ್ಮಿಸುವ ಪಟಾಕಿಗಳನ್ನು ಬಳಸಿ ಸಂಭ್ರಮಿಸಬಹುದು' ಎಂದೂ ನ್ಯಾಯಪೀಠ ಹೇಳಿತು.

ಪಟಾಕಿ ಸರಗಳ (ಸಂಯೋಜಿತ ಪಟಾಕಿ) ಬಳಕೆ ನಿಷೇಧಿಸಿ ಈ ಹಿಂದೆಯೇ ಆದೇಶಿಸಲಾಗಿದೆ. ಆದರೆ, ಯಾವುದೇ ರಾಜ್ಯ, ನಗರ ಅಥವಾ ಯಾವುದೇ ಸಂಭ್ರಮಾಚರಣೆ ಸ್ಥಳಕ್ಕೆ ಹೋದರೂ ನಿಮಗೆ ಪಟಾಕಿ ಸರಗಳ ಮುಕ್ತ ಮಾರಾಟ ಕಾಣಬಹುದು' ಎಂದು ನ್ಯಾಯಮೂರ್ತಿಗಳು ಹೇಳಿದರು.

'ಇಂಥ ಪಟಾಕಿಗಳ ಮೇಲೆ ನಿಷೇಧ ಹೇರಲಾಗಿದ್ದರೂ, ಅವುಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಹೇಗೆ ಮಾರಾಟ ಮಾಡಲಾಗುತ್ತದೆ' ಎಂದೂ ಪ್ರಶ್ನಿಸಿದರು.

ಪಟಾಕಿಗಳ ತಯಾರಕರ ಸಂಘದ ಪರ ವಾದ ಮಂಡಿಸಿದ ಹಿರಿಯ ವಕೀಲ ದುಷ್ಯಂತ್ ದವೆ, ' ಸರ್ಕಾರ ರೂಪಿಸಿರುವ ನಿಯಮಗಳ ಪ್ರಕಾರವೇ ಪಟಾಕಿ ಉದ್ಯಮಿ ಕಾರ್ಯ ನಿರ್ವಹಿಸಬೇಕು' ಎಂದರು.

'ಇದು ಸಂಘಟಿತ ಉದ್ಯಮ. ಐದು ಲಕ್ಷದಷ್ಟು ಕುಟುಂಬಗಳು ಈ ಉದ್ದಿಮೆಯನ್ನು ಅವಲಂಬಿಸಿವೆ. ಶಿವಕಾಶಿಯಲ್ಲಿರುವ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ಒಬ್ಬರು ಅಥವಾ ಇಬ್ಬರು ಪಟಾಕಿ ತಯಾರಕರು ಆದೇಶ ಉಲ್ಲಂಘನೆ ಮಾಡಿದ್ದರಿಂದಾಗಿ ಇಡೀ ಉದ್ಯಮವೇ ತೊಂದರೆ ಅನುಭವಿಸುವಂತಾಗಬಾರದು' ಎಂದು ಮತ್ತೊಬ್ಬ ವಕೀಲ ರಾಜೀವ್ ದತ್ತಾ ಹೇಳಿದರು.

ಸಿಬಿಐ ವರದಿಗೆ ಪ್ರತಿಕ್ರಿಯೆಯಾಗಿ ಸಲ್ಲಿಸಲಾದ ಪ್ರಮಾಣಪತ್ರಗಳ ಪ್ರತಿಗಳನ್ನು ಸಂಬಂಧಿಸಿದ ಕಕ್ಷಿದಾರರು ವಿನಿಮಯ ಮಾಡಿಕೊಳ್ಳುವಂತೆ ಸೂಚಿಸಿದ ಪೀಠವು, ವಿಚಾರಣೆಯನ್ನು ಅಕ್ಟೋಬರ್ 26ಕ್ಕೆ ಮುಂದೂಡಿತು.

ಪಟಾಕಿಗಳನ್ನು ತಯಾರಿಸುವ ಸಂದರ್ಭದಲ್ಲಿ ಬೇರಿಯಂ ಸೇರಿದಂತೆ ನಿಷೇಧಿತ ರಾಸಾಯನಿಕಗಳನ್ನು ಬಳಸಲಾಗುತ್ತದೆ ಎಂಬ ದೂರುಗಳ ಕುರಿತು ತನಿಖೆ ನಡೆಸಿ, ಆರು ವಾರಗಳ ಒಳಗಾಗಿ ವರದಿ ಸಲ್ಲಿಸುವಂತೆ ಸಿಬಿಐನ ಚೆನ್ನೈ ಕಚೇರಿಯ ಜಂಟಿ ನಿರ್ದೇಶಕರಿಗೆ ಸುಪ್ರೀಂಕೋರ್ಟ್ ಕಳೆದ ವರ್ಷ ಮಾರ್ಚ್ 3ರಂದು ನಿರ್ದೇಶನ ನೀಡಿತ್ತು.

ಬೇರಿಯಂ ಬಳಸುತ್ತಿರುವ ಬಗ್ಗೆ ಸಿಬಿಐ ತನ್ನ ವರದಿಯಲ್ಲಿ ಉಲ್ಲೇಖಿಸಿತ್ತು. ಪಟಾಕಿಗಳನ್ನು ತಯಾರಿಸುವ ಸಂದರ್ಭದಲ್ಲಿ ನಿಷೇಧಿತ ರಾಸಾಯನಿಕ ಬಳಕೆ ಹಾಗೂ ಕೋರ್ಟ್ ಆದೇಶಗಳ ಉಲ್ಲಂಘನೆಯಾಗುತ್ತಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಎಂದು ಸುಪ್ರೀಂಕೋರ್ಟ್ ಹೇಳಿತ್ತು.

ಮುಖ್ಯಾಂಶಗಳು
- ಮತ್ತೊಬ್ಬರ ಜೀವಕ್ಕೆ ಅಪಾಯವೊಡ್ಡಿ ಸಂಭ್ರಮಾಚರಣೆ ಸೂಕ್ತವಲ್ಲ
- ವಿಚಾರಣೆಯನ್ನು ಅಕ್ಟೋಬರ್ 26ಕ್ಕೆ ಮುಂದೂಡಿದ ಪೀಠ

'ರೈತರ ಮೇಲೆ ವ್ಯವಸ್ಥಿತ ದಾಳಿ: ರಾಹುಲ್ ಟೀಕೆ

ಮೃತ ಲವ್‌ಪ್ರೀತ್ ಸಿಂಗ್ ಅವರ ಚೌಖದಾ ತೋಟದ ನಿವಾಸಕ್ಕೆ ಪ್ರಿಯಾಂಕಾ, ರಾಹುಲ್ ಗಾಂಧಿ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ಒಂದನೇ ಪುಟದಿಂದ...

'ದೇಶದ ರೈತರ ಮೇಲೆ ವ್ಯವಸ್ಥಿತ ದಾಳಿ ನಡೆಯುತ್ತಿದೆ. ಭೂ ಸ್ವಾಧೀನ ಮಸೂದೆಯನ್ನು ತದ್ವಿರುದ್ಧಗೊಳಿಸಿದ್ದು ಮೊದಲ ದಾಳಿ. ಮೂರು ಕೃಷಿ ಕಾಯ್ದೆಗಳು ಎರಡನೇ ದಾಳಿ. ಈಗ, ರೈತರ ಹಕ್ಕುಗಳನ್ನು ವ್ಯವಸ್ಥಿತವಾಗಿ ಕಸಿದುಕೊಳ್ಳಲಾಗುತ್ತಿದೆ' ಎಂದು ಅವರು ಹೇಳಿದ್ದಾರೆ.

ಪ್ರಿಯಾಂಕಾ ಗಾಂಧಿ ಬಂಧನ ಮತ್ತು ಅವರನ್ನು ನಡೆಸಿಕೊಂಡ ಬಗ್ಗೆ ಕೇಳಲಾದ ಪ್ರಶ್ನೆಗೆ, ಇದು ಅವರನ್ನು ಕೇಂದ್ರೀಕರಿಸಿರುವ ವಿಚಾರ ಅಲ್ಲ, ಇದು ರೈತರಿಗೆ ಸಂಬಂಧಿಸಿದ ವಿಚಾರ ಎಂದರು.

'ಪ್ರಿಯಾಂಕಾ ಆಗಲಿ, ನಾನಾಗಲಿ ಅಥವಾ ನಮ್ಮ ಕುಟುಂಬದ ಯಾರೇ ಆಗಲಿ, ಕೆಟ್ಟದಾಗಿ ನಡೆಸಿಕೊಂಡರು ಎಂಬ ಕಾರಣಕ್ಕೆ ಹಿಮ್ಮೆಟ್ಟುವುದಿಲ್ಲ. ನಮ್ಮ ಮೇಲೆ ಕೈಮಾಡಿ, ನಮ್ಮನ್ನು ವಶಕ್ಕೆ ಪಡೆಯಿರಿ, ನಮಗೆ ಹೊಡೆಯಿರಿ ಅಥವಾ ನಮ್ಮನ್ನು ಹೂತು ಹಾಕಿ. ಅದರ ಬಗ್ಗೆ ನಮಗೆ ಚಿಂತೆ ಇಲ್ಲ. ಇಂತಹ ವಿಚಾರದಲ್ಲಿ ನಮ್ಮ ಕುಟುಂಬದಲ್ಲಿ ವರ್ಷಗಳ ತರಬೇತಿ ನೀಡಲಾಗುತ್ತದೆ' ಎಂದು ಅವರು ಹೇಳಿಕೊಂಡರು.

ಉತ್ತರ ಪ್ರದೇಶದಲ್ಲಿ ಹೊಸ ರೀತಿಯ ರಾಜಕೀಯ ನಡೆಯುತ್ತಿದೆ. ಅಪರಾಧಿಗಳು ತಮಗೆ ಏನು ಬೇಕೋ ಅದೆಲ್ಲವನ್ನೂ ಮಾಡಿ ಮುಕ್ತವಾಗಿ ತಿರುಗಾಡಿಕೊಂಡು ಇರಬಹುದು. ಆದರೆ, ಸಂತ್ರಸ್ತರಿಗೆ ನ್ಯಾಯ ಕೊಡಿ ಎಂದು ಕೇಳಿದವರನ್ನು ಬಂಧಿಸಲಾಗುತ್ತದೆ ಎಂದು ರಾಹುಲ್ ಹೇಳಿದರು.

'ಉತ್ತರ ಪ್ರದೇಶದಲ್ಲಿ ಈಗ ರೈತರ ಹತ್ಯೆ ಆಗುತ್ತಿದೆ. ಈ ಹಿಂದೆ ಕೂಡ, ಹಾಥರಸ್‌ನಲ್ಲಿ ಬಾಲಕಿಯ ಮೇಲೆ ಅತ್ಯಾಚಾರ ಆಯಿತು. ಅತ್ಯಾಚಾರ ಪ್ರಕರಣದಲ್ಲಿಯೂ ಬಿಜೆಪಿಯ ಶಾಸಕರೊಬ್ಬರ ಹೆಸರು ಕೇಳಿ ಬಂತು. ಇದು ಉತ್ತರ ಪ್ರದೇಶದ ಹೊಸ ರೀತಿಯ ರಾಜಕಾರಣ. ಅತ್ಯಾಚಾರ, ರೈತರ ಹತ್ಯೆ ಏನೇ ಇರಲಿ, ಅಪರಾಧಿಗಳು ತಮಗೆ ಬೇಕಾದ್ದನ್ನು ಮಾಡಬಹುದಾಗಿದೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಮೃತರ ಕುಟುಂಬಕ್ಕೆ ರಾಹುಲ್, ಪ್ರಿಯಾಂಕಾ ಸಾಂತ್ವನ

ಲಖನೌ (ಪಿಟಿಐ): ಉತ್ತರ ಪ್ರದೇಶದ ಲಖಿಂಪುರ–ಖೇರಿಯಲ್ಲಿ ಭಾನುವಾರ ಎಸ್‌ಯುವಿ ಹರಿದು ಮೃತಪಟ್ಟ ರೈತರ ಕುಟುಂಬದ ಸದಸ್ಯರನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಬುಧವಾರ ರಾತ್ರಿ ಭೇಟಿಯಾಗಿ ಸಾಂತ್ವನ ಹೇಳಿದರು. ಎಲ್ಲ ರೀತಿಯ ನೆರವು ನೀಡುವುದಾಗಿ ಸಂತ್ರಸ್ತರ ಕುಟುಂಬಗಳಿಗೆ ಭರವಸೆ ನೀಡಿದ್ದಾರೆ.

ಮೃತ ಲವ್‌ಪ್ರೀತ್ ಸಿಂಗ್ ಅವರ ಚೌಖದಾ ತೋಟದ ನಿವಾಸಕ್ಕೆ ಭೇಟಿ ನೀಡಿದ ಕಾಂಗ್ರೆಸ್ ನಾಯಕರು, ದುಃಖಿತ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು ಎಂದು ಪಕ್ಷದ ಮೂಲಗಳು ತಿಳಿಸಿವೆ.

ಕಾಂಗ್ರೆಸ್ ನಾಯಕರ ನಿಯೋಗವು ಹಿಂಸಾಚಾರದಲ್ಲಿ ಮೃತಪಟ್ಟಿರುವ ನಿಘಾಸನ್‌ನ ಸ್ಥಳೀಯ ಪತ್ರಕರ್ತ ರಮಣ್ ಕಶ್ಯಪ್ ಮತ್ತು ಲಖಿಂಪುರದ ಧೌರಾಹರದ ರೈತ ನಚತಾರ್ ಸಿಂಗ್ ಅವರ ಸಂಬಂಧಿಕರ ಮನೆಗೆ ಭೇಟಿ ನೀಡಲಿದೆ ಎಂದು ಮೂಲಗಳು ತಿಳಿಸಿವೆ.

ರಾಹುಲ್ ಮತ್ತು ಪ್ರಿಯಾಂಕಾ ಜತೆಗೆ ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಚನ್ನಿ, ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಸಂಸದ ದೀಪೇಂದರ್ ಹೂಡಾ ಇದ್ದರು.

ಭಾನುವಾರವೇ ಲಖಿಂಪುರ–ಖೇರಿಯತ್ತ ಹೊರಟಿದ್ದ ಪ್ರಿಯಾಂಕಾ ಅವರನ್ನು ಮಾರ್ಗಮಧ್ಯದಲ್ಲಿಯೇ ಬಂಧಿಸಿ, ಅತಿಥಿಗೃಹದಲ್ಲಿ ಇರಿಸಲಾಗಿತ್ತು. ರಾಜಕೀಯ ನಾಯಕರು ಹಿಂಸಾಚಾರ ನಡೆದ ಸ್ಥಳಕ್ಕೆ ಭೇಟಿ ನೀಡುವುದಕ್ಕೆ ಉತ್ತರ ಪ್ರದೇಶ ಸರ್ಕಾರವು ತಡೆ ಒಡ್ಡಿತ್ತು. ಆದರೆ, ಲಖಿಂಪುರಕ್ಕೆ ಹೋಗುವುದಕ್ಕಾಗಿ ಪ್ರಿಯಾಂಕಾ ಅವರನ್ನು ಬುಧವಾರ ಸಂಜೆ ಬಿಡುಗಡೆ ಮಾಡಲಾಯಿತು.

ಲಖಿಂಪುರ–ಖೇರಿಗೆ ಹೋಗುವುದಕ್ಕೆ ರಾಹುಲ್ ಅವರಿಗೆ ಬುಧವಾರ ಬೆಳಿಗ್ಗೆ ಅನುಮತಿ ನಿರಾಕರಿಸಲಾಗಿತ್ತು. ದೆಹಲಿ ವಿಮಾನ ನಿಲ್ದಾಣದಲ್ಲಿಯೇ ಅವರನ್ನು ತಡೆಯಲಾಗಿತ್ತು. ಬಳಿಕ ಲಖನೌಗೆ ತೆರಳಲು ಅವಕಾಶ ಕೊಡಲಾಯಿತು. ರಾಹುಲ್ ಅವರು ಲಖನೌದಲ್ಲಿ ಬಂದಿಳಿದ ಬಳಿಕವೂ ನಾಟಕೀಯ ಘಟನೆಗಳು ನಡೆದವು. ಲಖಿಂಪುರ–ಖೇರಿಗೆ ಹೋಗಲು ಅವಕಾಶ ನೀಡಲಾಗುವುದು, ಆದರೆ ಸರ್ಕಾರ ವ್ಯವಸ್ಥೆ ಮಾಡಿಕೊಡುವ ವಾಹನದಲ್ಲಿಯೇ ಹೋಗಬೇಕು ಎಂಬ ಷರತ್ತನ್ನು ಪೊಲೀಸರು ಮುಂದಿಟ್ಟರು.

ಈ ಷರತ್ತಿಗೆ ರಾಹುಲ್ ಅವರು ಒಪ್ಪಲಿಲ್ಲ. ತಮ್ಮ ಪ್ರಯಾಣ ಹೇಗಿರಬೇಕು ಎಂದು ಪೊಲೀಸರು ಹೇಗೆ ನಿರ್ಧರಿಸಲು ಸಾಧ್ಯ ಎಂದು ಪ್ರಶ್ನಿಸಿದರು. ಹಾಗಾಗಿ, ರಾಹುಲ್, ಚನ್ನಿ ಮತ್ತು ಬಘೇಲ್ ಅವರನ್ನು ವಿಮಾನ ನಿಲ್ದಾಣದಿಂದ ಹೊರಬರಲು ಪೊಲೀಸರು ಅವಕಾಶ ಕೊಡಲಿಲ್ಲ. ಮೂವರೂ ನಾಯಕರು ವಿಮಾನ ನಿಲ್ದಾಣದಲ್ಲಿಯೇ ಕುಳಿತರು. ಬಳಿಕ, ಸ್ವಂತ ವಾಹನದಲ್ಲಿ ಲಖಿಂಪುರ–ಖೇರಿಗೆ ಹೋಗಲು ರಾಹುಲ್ ಅವರಿಗೆ ಪೊಲೀಸರು ಅವಕಾಶ ಕೊಟ್ಟರು.

ಲಖನೌದಿಂದ ಹೊರಟ ರಾಹುಲ್ ಮತ್ತು ಇತರರು, ಸೀತಾಪುರದಲ್ಲಿ ಬಂಧನದಲ್ಲಿದ್ದ ಪ್ರಿಯಾಂಕಾ ಅವರನ್ನೂ ಜತೆಗೆ ಸೇರಿಸಿಕೊಂಡು ಲಖಿಂಪುರ–ಖೇರಿಗೆ ರಾತ್ರಿ ವೇಳೆ ತಲುಪಿದರು.

ಓದಿದ್ದನ್ನು ನಿಖರವಾಗಿ ಬರೆಯುವ ಕೌಶಲ ಮುಖ್ಯ...

ಸಂತೋಷ ಕಾಮಗೌಡ

ಕನ್ನಡ ಮಾಧ್ಯಮದಲ್ಲಿ ಓದಿದ ಸಂತೋಷ ಶಂಕರ ಕಾಮಗೌಡ ಅವರು ಬೆಳಗಾವಿ ಜಿಲ್ಲೆಯ ಕಬ್ಬೂರು ಗ್ರಾಮದವರು. 2011ರಲ್ಲೇ ಕೆಪಿಎಸ್‌ಸಿ ಪರೀಕ್ಷೆಯ ಮೂರು ಹಂತಗಳಲ್ಲಿಯೂ ಉತ್ತೀರ್ಣರಾಗಿ ತಹಶೀಲ್ದಾರ್ ಹುದ್ದೆಗೆ ಆಯ್ಕೆಯಾಗಿದ್ದರು. ಆದರೆ ಕಾರಣಾಂತರಗಳಿಂದ ಸರ್ಕಾರ ಆದೇಶವನ್ನು ರದ್ದುಪಡಿಸಿತು. ತಹಶೀಲ್ದಾರ್ ಹುದ್ದೆಯಿಂದ ವಂಚಿತರಾದರು. 2014ರಲ್ಲಿ ಕೇಂದ್ರ ಸರ್ಕಾರಿ ಉದ್ಯೋಗಿಯಾಗಿದ್ದುಕೊಂಡೇ ಕೆಪಿಎಸ್‌ಸಿ ನಡೆಸುವ ಪರೀಕ್ಷೆಗೆ ತಯಾರಿ ಮಾಡಿಕೊಂಡರು. ಆ ಪರೀಕ್ಷೆಯಲ್ಲಿ ರಾಜ್ಯಕ್ಕೆ 3ನೇ ರ‍್ಯಾಂಕ್ ಪಡೆಯುವುದರ ಮೂಲಕ ಕಂದಾಯ ಇಲಾಖೆಯಲ್ಲಿ ಎಸಿ ಹುದ್ದೆಗೆ ಆಯ್ಕೆಯಾದರು. ಸದ್ಯ ರಾಯಚೂರು ಜಿಲ್ಲೆಯಲ್ಲಿ ಉಪವಿಭಾಗಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜೊತೆಗೆ ಸ್ಪರ್ಧಾರ್ಥಿಗಳಿಗಾಗಿ ಸಾಮಾನ್ಯ ಅಧ್ಯಯನ ವಿಷಯದಲ್ಲಿ ನಾಲ್ಕು ಪುಸ್ತಕಗಳನ್ನು ಬರೆದಿದ್ದಾರೆ. ಅವರು ತಮ್ಮ ಪಯಣದ ಹಾದಿಯನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ.

ಸಂದರ್ಶನ: ಶಿ.ಗು. ಹಿರೇಮಠ

• ನಿಮ್ಮ ಶೈಕ್ಷಣಿಕ ಜೀವನದ ಬಗ್ಗೆ ವಿವರಿಸ್ತೀರಾ?

ಚಿಕ್ಕೋಡಿ ತಾಲ್ಲೂಕಿನ ಕಬ್ಬೂರು ತೋಟದ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ. ಮನೆಯಲ್ಲಿ ತಂದೆ– ತಾಯಿ ಬೇರೆಯವರ ಹೊಲದಲ್ಲಿ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದರಿಂದ ಮುಂದೆ ಓದಿಸುವುದು ದುಸ್ತರವಾಗಿತ್ತು. ಇದನ್ನರಿತ ನಮ್ಮ ಮಾವನವರು ನನ್ನನ್ನು ಬೆಲ್ಲದಬಾಗೇವಾಡಿಯ ಭರತೇಶ ವಿದ್ಯಾಲಯಕ್ಕೆ ಸೇರಿಸಿದರು. ಅದು ನನ್ನ ಜೀವನ ಮುಖ್ಯ ತಿರುವು. ಬೆಲ್ಲದಬಾಗೇವಾಡಿಯ ಭರತೇಶ ವಿದ್ಯಾಲಯದಲ್ಲಿಯೇ ನಾನು ಆರನೇ ತರಗತಿಯಿಂದ ಪಿಯುಸಿವರೆಗೂ ಅಧ್ಯಯನ ಮಾಡಿದೆ. ಪಿಯುಸಿಯಲ್ಲಿ ಶೇ 87 ಅಂಕ ಗಳಿಸಿದ್ದರಿಂದ ನನಗೆ ಅಂಚೆ ಇಲಾಖೆಯಲ್ಲಿ ನೌಕರಿ ದೊರೆಯಿತು.

• ಸ್ಪರ್ಧಾತ್ಮಕ ಪರೀಕ್ಷೆಯ ಬಗ್ಗೆ ಒಲವು ಮೂಡಿದ್ದು ಹೇಗೆ?

ಮನೆಯಲ್ಲಿ ತುಂಬಾ ಬಡತನ. ಒಂದು ಎಕರೆ ಭೂಮಿಯಲ್ಲೇ ಜೀವನ ನಡೆಸುವುದು ಕಷ್ಟವಾಗಿತ್ತು. ಯಾವುದೋ ಒಂದು ನೌಕರಿಯ ಅವಶ್ಯಕತೆಯಿತ್ತು. ನಮ್ಮ ತಂದೆ– ತಾಯಿ ಪಡುತ್ತಿರುವ ಕಷ್ಟವನ್ನು ನೋಡಿ ನನಗೆ ಯಾವುದಾದರೂ ಒಂದು ಉದ್ಯೋಗ ಮಾಡಬೇಕೆನಿಸಿತ್ತು. ಅದೇ ಸಮಯದಲ್ಲಿ ಅಂಚೆ ಇಲಾಖೆಯಲ್ಲಿ ಅರ್ಜಿ ಆಹ್ವಾನಿಸಲಾಗಿತ್ತು. ಅರ್ಜಿ ತರಲು 25 ರೂಪಾಯಿ ಕೂಡ ಇರಲಿಲ್ಲ. ಯಾರೋ ನೀಡಿದ ಅರ್ಜಿಯನ್ನು ಹಾಕಿದೆ. ಅಂಚೆ ಇಲಾಖೆಯಲ್ಲಿ ನೌಕರಿ ದೊರೆತಾಗ ನಿಟ್ಟುಸಿರುಬಿಟ್ಟೆ. ನಿತ್ಯ ನಾನು ನೌಕರಿಗಾಗಿ ಕಬ್ಬೂರಿಂದ ಚಿಕ್ಕೋಡಿಗೆ ಹೋಗಿ ಬರುತ್ತಿದ್ದೆ. ನಮ್ಮ ಗ್ರಾಮದಲ್ಲಿನ ರೈತರು, ಕೂಲಿಕಾರರು ಕಂದಾಯ ಇಲಾಖೆಯಲ್ಲಿನ ತಮ್ಮ ವೈಯಕ್ತಿಕ ಕೆಲಸಕ್ಕೆ ನನ್ನ ನೆರವು ಬಳಸಿಕೊಳ್ಳುತ್ತಿದ್ದರು. ತಾಲ್ಲೂಕು ಕಚೇರಿಗೆ ತೆರಳಿ ಪಹಣಿ ತರಲು ತುಂಬಾ ಕಷ್ಟಪಡುತ್ತಿದ್ದೆ. ರೈತರು ಪಹಣಿ ಮತ್ತು ಇತರೆ ಪತ್ರಗಳನ್ನು ಪಡೆಯಲು ಹರಸಾಹಸ ಪಡುವುದನ್ನು ಕಣ್ಣಾರೆ ಕಂಡೆ. ಮುಂದೆ ಕಂದಾಯ ಇಲಾಖೆಯಲ್ಲಿ ನೌಕರಿ ಪಡೆದು ರೈತರ ಕಷ್ಟಕ್ಕೆ ಪರಿಹಾರ ಕಂಡುಕೊಳ್ಳಬೇಕು ಎಂದು ನಿರ್ಧರಿಸಿದೆ.

ಸಂತೋಷ ಕಾಮಗೌಡ ಅವರು ತಾವು ಸಂಗ್ರಹಿಸಿದ ಅಧ್ಯಯನ ಸಾಮಗ್ರಿಯಲ್ಲಿ 'ಪ್ರಜಾವಾಣಿ'ಗೆ ಸಿಂಹಪಾಲು ನೀಡುತ್ತಾರೆ. ಅಷ್ಟೇ ಅಲ್ಲದೇ ಪತ್ರಿಕೆಯನ್ನು ಹೇಗೆ ಓದಬೇಕು, ಪತ್ರಿಕೆಯ ಸದುಪಯೋಗ ಹೇಗೆ ಎಂಬುದರ ಕುರಿತು ವಿಡಿಯೊ ಮಾಡಿ ಯೂಟ್ಯೂಬ್‌ನಲ್ಲಿ ಹರಿಯಬಿಟ್ಟಿದ್ದು ಸ್ಪರ್ಧಾತ್ಮಕ ದೃಷ್ಟಿಕೋನದಿಂದ ವಿವರಿಸಿದ್ದಾರೆ. ಅದು ಲಕ್ಷಕ್ಕಿಂತ ಹೆಚ್ಚಿನ ಜನರಿಗೆ ತಲುಪಿದೆ. ಸಂದರ್ಶನ ಎದುರಿಸುವ ಬಗೆ, ಒಂದೇ ಪ್ರಯತ್ನದಲ್ಲಿ ಕೆಎಎಸ್ ಹಾಗೂ ಐಎಎಸ್ ಪಾಸಾಗುವುದು, ಗುಣಮಟ್ಟದ ಅಧ್ಯಯನ, ಓದಿದ ವಿಷಯಗಳನ್ನು ನೆನಪಿಟ್ಟುಕೊಳ್ಳುವುದು ಮುಂತಾದ ವಿಷಯಗಳ ಕುರಿತು ಅವರು ತಮ್ಮ ಯೂಟ್ಯೂಬ್ ಚಾನೆಲ್ ಮೂಲಕ ಪರೀಕ್ಷೆ ಬರೆಯುವವರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಅವರ ಯೂಟ್ಯೂಬ್ ಚಾನೆಲ್‌ಗೆ 34 ಸಾವಿರ ಚಂದಾದಾರರಿದ್ದಾರೆ. ಇಮೇಲ್ (ksantoshshankar@gmail.com) ಮಾಡಿ ವಿನಂತಿಸಿಕೊಂಡರೆ ಉಚಿತವಾಗಿ ಅಧ್ಯಯನ ಸಾಮಗ್ರಿಗಳನ್ನು ಕಳಿಸಿಕೊಡುತ್ತಾರೆ.

• ಉದ್ಯೋಗ ಮಾಡುತ್ತಲೇ ಪರೀಕ್ಷೆ ತಯಾರಿ ಕಷ್ಟವೆನಿಸಲಿಲ್ಲವೇ?

ನೌಕರಿ ಮಾಡುತ್ತಲೇ ಮೈಸೂರು ಮುಕ್ತ ವಿಶ್ವವಿದ್ಯಾಲಯದಿಂದ ಬಿ.ಕಾಂ ಹಾಗೂ ಎಂ.ಎ, ಎಂಬಿಎ ದೂರಶಿಕ್ಷಣ ಪೂರೈಸಿದೆ. ದೊರೆತ ಸಮಯವನ್ನೇ ಅಧ್ಯಯನಕ್ಕೆ ಮೀಸಲಿಟ್ಟೆ. ವಾರಾಂತ್ಯ ಸಿಗುವ ಎರಡು ರಜೆಯನ್ನು ಪರೀಕ್ಷೆ ತಯಾರಿಗೆ ಬಳಸಿಕೊಂಡೆ. ನಾನು ಉದ್ಯೋಗದಲ್ಲಿರುವ ಚಿಕ್ಕೋಡಿಯಲ್ಲೇ ಬಾಡಿಗೆ ಕೊಠಡಿ ಮಾಡಿ ಓದಲು ಶುರು ಮಾಡಿದೆ. ಅದರಿಂದ ನಿತ್ಯ ಓಡಾಡುವ ತೊಂದರೆ ತಪ್ಪಿತಲ್ಲದೆ ಸಮಯದ ಉಳಿತಾಯವಾಯಿತು. ಬೆಳಗಿನ ಸಮಯ ಮತ್ತು ಸಂಜೆ ಹೊತ್ತು ಓದಿಗಾಗಿ ಸರಿಯಾಗಿ ನಿರ್ವಹಣೆ ಮಾಡಿದೆ. ನನ್ನ ನಾಲ್ಕು ಜನ ಆತ್ಮೀಯ ಸ್ನೇಹಿತರು ನನ್ನ ಜೊತೆ ಸೇರಿದರು. ಅಧ್ಯಯನ ಮುಗಿದಾದ ಮೇಲೆ ವಿಷಯದ ಕುರಿತು ಚರ್ಚಿಸುತ್ತಿದ್ದೆವು. ನಂತರ ಚರ್ಚಿಸಿದ ವಿಷಯವನ್ನು ಬರೆಯುತ್ತಿದ್ದೆವು. ಪತ್ರಿಕೆಗಳಲ್ಲಿ ಬರುವ ಕೆಎಎಸ್ ಮತ್ತು ಐಎಎಸ್ ಅಧಿಕಾರಿಗಳ ಸಂದರ್ಶನ ಓದಿದಾಗ ನನ್ನ ಮನಸ್ಸು ನಿರಾಳವಾಗುತ್ತಿತ್ತು. ನಿರಂತರ ಅಧ್ಯಯನಕ್ಕೆ ಹಾತೊರೆಯುತಿತ್ತು. ಪ್ರಚಲಿತ ವಿದ್ಯಮಾನಕ್ಕೆ ದಿನಪತ್ರಿಕೆಗಳು ತುಂಬಾ ಸಹಾಯಕ.

• ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳಲು ನಿಮ್ಮ ಮುಂದೆ ಇದ್ದ ಸವಾಲು..

ಬಡ ಕುಟುಂಬದಲ್ಲಿ ಹುಟ್ಟಿದೆನಾದರೂ ಎದೆಗುಂದಲಿಲ್ಲ. ಪಿಯುಸಿ ತರುವಾಯ ನನಗೆ ಅಂಚೆ ಇಲಾಖೆಯಲ್ಲಿ ಕೆಲಸ ದೊರೆತಿದ್ದರಿಂದ ಮುಂದಿನ ವಿದ್ಯಾಭ್ಯಾಸ ಮಾಡಲು ನನಗೆ ನೆರವಾಯಿತು. ಯಾವುದೇ ತರಬೇತಿ ಪಡೆಯಲು ಸಾಧ್ಯವಾಗದಿದ್ದರೂ ಕೆಎಎಸ್ ಪಾಸಾದವರ ಹತ್ತಿರ ತೆರಳಿ ಅವರ ಸಲಹೆ, ಸೂಚನೆಗಳನ್ನು ಪಡೆದುಕೊಳ್ಳುತ್ತಿದ್ದೆ. ಅದು ನನಗೆ ಹುಮ್ಮಸ್ಸು ತರುತ್ತಿತ್ತು. ಸತತ ಬೆಂಬಿಡದ ಪ್ರಯತ್ನದಿಂದ ಯಶಸ್ವಿಯಾದೆ.

• ಸ್ಪರ್ಧಾರ್ಥಿಗಳಿಗೆ ತಾವು ನೀಡುವ ಸಲಹೆ..

ವಿದ್ಯಾರ್ಥಿಗಳು ತಾವು ಆಯ್ದುಕೊಂಡ ಅಧ್ಯಯನದ ಜೊತೆಗೆ ನಿತ್ಯ ದಿನಪತ್ರಿಕೆ ಓದುವ ರೂಢಿ ಇಟ್ಟುಕೊಳ್ಳಬೇಕು. ಕೇವಲ ತಲೆಬರಹನ್ನಷ್ಟೇ ಓದದೇ ಪತ್ರಿಕೆಯನ್ನು ಇಡಿಯಾಗಿ ಓದುವ ಪರಿಪಾಠ ಬೆಳೆಸಿಕೊಳ್ಳಬೇಕು. ಇಂದಿನ ಸ್ಪರ್ಧಾರ್ಥಿಗಳು ನೂರಾರು ಪುಸ್ತಕಗಳನ್ನು ಓದಿಕೊಳ್ಳುತ್ತಾರೆ. ಹತ್ತು ಗಂಟೆಗಳ ಕಾಲ ಅಧ್ಯಯನ ಮಾಡುತ್ತಾರೆ. ಆದರೆ ಪ್ರಶ್ನೆಗಳಿಗೆ ಹೇಗೆ ಉತ್ತರಿಸಬೇಕು ಎಂಬ ಗೊಂದಲ ಅವರನ್ನು ಕಾಡುತ್ತದೆ. ಎಷ್ಟೇ ಅಧ್ಯಯನ ಮಾಡಿದರೂ ಉತ್ತರ ಬರೆಯುವ ಕೌಶಲ ಬೆಳೆಸಿಕೊಳ್ಳದಿದ್ದರೆ ಯಶಸ್ಸು ಕಷ್ಟ. ಓದಿದ್ದನ್ನು ಅಚ್ಚುಕಟ್ಟಾಗಿ ಮತ್ತು ನಿಖರವಾಗಿ ಬರೆಯುವ ಕೌಶಲ ಬಹಳ ಮುಖ್ಯ. ಅದು ಪರೀಕ್ಷೆ ತಯಾರಿಯ ಒಂದು ಭಾಗವಾಗಬೇಕು.

ಪ್ರಜಾವಾಣಿ ಉದ್ಯೋಗ ವಾರ್ತೆ

ಐಬಿಪಿಎಸ್‌ನಲ್ಲಿ ವಿವಿಧ ಹುದ್ದೆಗಳು

ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಪರ್ಸನಲ್ ಸೆಲೆಕ್ಷನ್ (ಐಬಿಪಿಎಸ್) ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆಗಳು: ಸಹಾಯಕ ಪ್ರಾಧ್ಯಾಪಕರು, ರಿಸರ್ಚ್ ಅಸೋಸಿಯೇಟ್, ಹಿಂದಿ ಆಫೀಸರ್, ಐಟಿ ಎಂಜಿನಿಯರ್, ಐಟಿ ಡೇಟಾಬೇಸ್ ಅಡ್ಮಿನಿಸ್ಟ್ರೇಟರ್ ಸೇರಿದಂತೆ ಇತರ ಹುದ್ದೆಗಳು.

ವಿದ್ಯಾರ್ಹತೆ: ವಿವಿಧ ಹುದ್ದೆಗಳಿಗೆ ಅನುಗುಣವಾಗಿ ವಿದ್ಯಾರ್ಹತೆಯನ್ನು ನಿಗದಿ ಮಾಡಲಾಗಿದೆ.

ವಯೋಮಿತಿ: ಹುದ್ದೆಗಳಿಗೆ ಅನುಗುಣವಾಗಿ ಕನಿಷ್ಠ 21 ಹಾಗೂ ಗರಿಷ್ಠ 45

ಆಯ್ಕೆ ಪ್ರಕ್ರಿಯೆ: ಆನ್‌ಲೈನ್ ಪರೀಕ್ಷೆ ಹಾಗೂ ಇತರ ಮಾನದಂಡಗಳು

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಅಕ್ಟೋಬರ್ 14, 2021

ಹೆಚ್ಚಿನ ಮಾಹಿತಿಗೆ: https://ibpsonline.ibps.in/ibpsrvpsep21/

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 72

986. ದ್ವಿದಳಧಾನ್ಯಗಳು ಯಾವ ಪೋಷಕಾಂಶಗಳ ಉತ್ತಮ ಆಕರವಾಗಿವೆ?
ಎ) ಶರ್ಕರಪಿಷ್ಟಗಳು ಬಿ) ಕೊಬ್ಬು
ಸಿ) ಜೀವಸತ್ವಗಳು ಡಿ) ಸಸಾರಜನಕಗಳು

987. ಯಾವ ರಾಜ್ಯದಲ್ಲಿ 'ಮೋಪ್ಲಾ' ಕ್ರಾಂತಿ ನಡೆಯಿತು?
ಎ) ಬಂಗಾಳ ಬಿ) ಕೇರಳ
ಸಿ) ಕಾಶ್ಮೀರ ಡಿ) ಅಸ್ಸಾಂ

988. 'ಅದ್ವೈತ' ಸಿದ್ಧಾಂತವನ್ನು ಪ್ರತಿಪಾದಿಸಿದವರು ಯಾರು?
ಎ) ಶಂಕರಾಚಾರ್ಯರು
ಬಿ) ರಾಮಾನುಜಾಚಾರ್ಯರು
ಸಿ) ಭಾಸ್ಕರಾಚಾರ್ಯರು
ಡಿ) ಮಧ್ವಾಚಾರ್ಯರು

989. ಮಗಧ ಸಾಮ್ರಾಜ್ಯದ ರಾಜಧಾನಿ ಯಾವುದಾಗಿತ್ತು?
ಎ) ಕಾಂಪಿಲ್ಯ ಬಿ) ಪಾಟಲೀಪುತ್ರ
ಸಿ) ಬನಾರಸ್ ಡಿ) ಕುರುಕ್ಷೇತ್ರ

990. ಕೆಳಗಿನ ಯಾವ ಸ್ಥಳದಲ್ಲಿ 1890 ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಲಾಯಿತು?
ಎ) ಬೆಳಗಾವಿ ಬಿ) ಧಾರವಾಡ
ಸಿ) ಕಾರವಾರ ಡಿ) ಶಿವಮೊಗ್ಗ

991. ಕರ್ನಾಟಕಕ್ಕೆ ಸಂಬಂಧಿಸಿದ ಕಲೆ ಯಾವುದು?
ಎ) ಕಥಕ್ಕಳಿ ಬಿ) ಕಥಕ್
ಸಿ) ಕುಚಿಪುಡಿ ಡಿ) ಯಕ್ಷಗಾನ

992. ಕೃಷ್ಣದೇವರಾಯ ಯಾವ ರಾಜವಂಶಕ್ಕೆ ಸೇರಿದವನು?
ಎ) ಸಂಗಮ ಬಿ) ಸಾಳುವ
ಸಿ) ತುಳುವ ಡಿ) ಅರವೀಡು

993. ಕರ್ನಾಟಕದ ಯಾವ ಜಿಲ್ಲೆಯು 1930ರ ಕಾನೂನುಭಂಗ ಚಳವಳಿಯಲ್ಲಿ ಮಹತ್ವದ ಪಾತ್ರ ವಹಿಸಿತ್ತು?
ಎ) ಬೆಂಗಳೂರು ಬಿ) ಮೈಸೂರು
ಸಿ) ಕೋಲಾರ ಡಿ) ಉತ್ತರ ಕನ್ನಡ

994. ಕೆಳಗಿನವುಗಳಲ್ಲಿ ಯಾವುದು ಕಬ್ಬಿಣದ ಅದಿರಲ್ಲ?
ಎ) ಹೆಮಟೈಟ್ ಬಿ) ಮ್ಯಾಗ್ನಟೈಟ್
ಸಿ) ಮ್ಯಾಲಚೈಟ್ ಡಿ) ಲಿಮೊನೈಟ್

995. ಕೆಳಗಿನ ಸರಣಿಯಲ್ಲಿ ಬಿಟ್ಟುಹೋದ ಸಂಖ್ಯೆಯನ್ನು ಕಂಡುಹಿಡಿಯಿರಿ.
7, 10, 8, 11, 9, 12 ?
ಎ) 7 ಬಿ) 10 ಸಿ) 12 ಡಿ) 13

996. ಯಾವ ಸ್ಥಳದಲ್ಲಿ 1906ರಲ್ಲಿ ಅಖಿಲ ಭಾರತ ಮುಸ್ಲಿಂ ಲೀಗ್ ಸ್ಥಾಪಿಸಲಾಯಿತು?
ಎ) ಢಾಕಾ ಬಿ) ಇಸ್ಲಾಮಾಬಾದ್
ಸಿ) ಲಾಹೋರ್ ಡಿ) ಮಸ್ಕತ್

997. 1924-25 ರಲ್ಲಿ ನಡೆದ 'ವೈಕೊಂ' ಸತ್ಯಾಗ್ರಹಕ್ಕೆ ಸಂಬಂಧಿಸಿದವರು ಯಾರು?
ಎ) ಟಿ.ಕೆ.ಮಾಧವನ್ ಬಿ) ನಾರಾಯಣಗುರು
ಸಿ) ಬಲರಾಮ ವರ್ಮಾ ಡಿ) ಕೆ.ಕೇಳಪ್ಪನ್

998. ಶರಾವತಿ ನದಿಯಿಂದ ಯಾವ ಜಲಪಾತ ಉಂಟಾಗಿದೆ?
ಎ) ಮಾಗೋಡು ಜಲಪಾತ
ಬಿ) ಜೋಗ ಜಲಪಾತ
ಸಿ) ಹೆಬ್ಬೆ ಜಲಪಾತ
ಡಿ) ಗೋಕಾಕ ಜಲಪಾತ

999. ಕೆಳಗಿನವುಗಳಲ್ಲಿ ಯಾವುದು ವಿಶ್ವಸಂಸ್ಥೆಯ ಪ್ರಮುಖ ಅಂಗವಲ್ಲ?
ಎ) ವಿಶ್ವಸಂಸ್ಥೆಯ ಸಚಿವಾಲಯ
ಬಿ) ಭದ್ರತಾ ಮಂಡಳಿ
ಸಿ) ಇಂಟರ್ ನ್ಯಾಷನಲ್ ಕೋರ್ಟ್ ಆಫ್ ಜಸ್ಟಿಸ್
ಡಿ) ಅಂತರರಾಷ್ಟ್ರೀಯ ಹಣಕಾಸು ನಿಧಿ

1000. ಕೆಳಗಿನವುಗಳಲ್ಲಿ ಯಾವ ದೇಶವು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಶಾಶ್ವತ ಸದಸ್ಯತ್ವ ಹೊಂದಿಲ್ಲ?
ಎ) ಚೀನಾ ಬಿ) ಜರ್ಮನಿ
ಸಿ) ಫ್ರಾನ್ಸ್ ಡಿ) ರಷ್ಯಾ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 71ರ ಉತ್ತರಗಳು: 971. ಬಿ, 972. ಎ, 973. ಡಿ, 974. ಎ, 975. ಸಿ, 976. ಎ, 977. ಡಿ, 978. ಎ, 979. ಡಿ, 980. ಬಿ, 981. ಸಿ, 982. ಸಿ, 983. ಎ, 984. ಬಿ, 985. ಡಿ

ಗ್ರೂಪ್ ಸಿ ತಾಂತ್ರಿಕೇತರ ಹುದ್ದೆ ಪ್ರಶ್ನೋತ್ತರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ



ಕರ್ನಾಟಕ ಲೋಕ ಸೇವಾ ಆಯೋಗವು ಕರೆದಿರುವ ಗ್ರೂಪ್ ಸಿ ವೃಂದದ ತಾಂತ್ರಿಕೇತರ ಹುದ್ದೆಗಳ ಪರೀಕ್ಷೆ ತಯಾರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಕುರಿತಾದ ಬಹು ಆಯ್ಕೆ ಪ್ರಶ್ನೋತ್ತರಗಳು.

1. 'ದಿ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತ್ ಸಮಿತಿಸ್, ಮಂಡಳ ಪಂಚಾಯತ್ ಆ್ಯಂಡ್ ನ್ಯಾಯ ಪಂಚಾಯತ್ಸ್ ಆ್ಯಕ್ಟ್ 1983' ಪ್ರಕಾರ ಕೊಡಗು ಜಿಲ್ಲೆಯಲ್ಲಿ ಎಷ್ಟು ಜನರಿಗೆ ಒಬ್ಬ ಜಿಲ್ಲಾ ಪರಿಷತ್ ಸದಸ್ಯ ಇರಲು ಸಾಧ್ಯವಿತ್ತು?
ಎ. 45 ಸಾವಿರ ಬಿ. 15 ಸಾವಿರ
ಸಿ. 30 ಸಾವಿರ ಡಿ. 25 ಸಾವಿರ
ಉತ್ತರ: ಬಿ. (ವಿವರಣೆ- 1995ರ ತಿದ್ದುಪಡಿ ಪ್ರಕಾರ ಪ್ರಸ್ತುತ 18 ಸಾವಿರ ಜನರಿಗೆ ಒಬ್ಬ ಸದಸ್ಯನಿರಲು ಅವಕಾಶ ನೀಡಲಾಗಿದೆ)

2. ರಾಜ್ಯದಲ್ಲಿ ಈ ಸಂಸ್ಥೆಗಳ ಉತ್ತಮ ಆಡಳಿತ ಹಾಗೂ ಕಾರ್ಯನಿರ್ವಹಣೆಗಾಗಿ ಸಲಹೆಗಳನ್ನು ನೀಡುವ ಉದ್ದೇಶದಿಂದ ಪಿ. ಆರ್. ನಾಯಕ್ ಅವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯೊಂದನ್ನು ರಚಿಸಲಾಗಿತ್ತು. ಅದು ನೀಡಿದ ವರದಿಯನ್ನು ರಾಜ್ಯಸರ್ಕಾರ .... ಮಾರ್ಚ್‌ನಲ್ಲಿ ಒಪ್ಪಿಕೊಂಡು ಜಾರಿಗೆ ತಂದಿತು.
ಎ. 1996 ಬಿ. 2002
ಸಿ. 1999 ಡಿ. 2017
ಉತ್ತರ: ಎ

3. 'ದಿ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತ್ ಸಮಿತಿಸ್, ಮಂಡಳ ಪಂಚಾಯತ್ಸ್ ಆ್ಯಂಡ್ ನ್ಯಾಯ ಪಂಚಾಯತ್ಸ್ ಆ್ಯಕ್ಟ್ 1983' ಪ್ರಕಾರ ಎಷ್ಟು ಜನರನ್ನು ಒಬ್ಬ ಜಿಲ್ಲಾ ಪರಿಷತ್ ಸದಸ್ಯ ಪ್ರತಿನಿಧಿಸುತ್ತಿದ್ದ?
ಎ. 35 ಸಾವಿರ ಬಿ. 15 ಸಾವಿರ
ಸಿ. 50 ಸಾವಿರ ಡಿ. 25 ಸಾವಿರ
ಉತ್ತರ: ಎ. (ವಿವರಣೆ- ಪ್ರಸ್ತುತ 35ರಿಂದ 40 ಸಾವಿರ ಜನಸಂಖ್ಯೆಗೆ ಒಬ್ಬ ಜಿಲ್ಲಾ ಪಂಚಾಯತಿ ಸದಸ್ಯನಿರಲು ಅವಕಾಶವಿದೆ. ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಪ್ರತಿ 35 ಸಾವಿರ ಜನರಿಗೆ ಒಬ್ಬ ಸದಸ್ಯ ಇರಲು ಅವಕಾಶವಿದೆ. ಅದೇ ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ಪ್ರತಿ 20 ಸಾವಿರ ಜನರಿಗೆ, ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಪ್ರತಿ 18 ಸಾವಿರ ಜನರಿಗೆ ಒಬ್ಬ ಸದಸ್ಯನಿರಲು ಅವಕಾಶವಿದೆ.)

4. 'ದಿ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತ್ ಸಮಿತಿಸ್, ಮಂಡಳ ಪಂಚಾಯತ್ಸ್ ಆ್ಯಂಡ್ ನ್ಯಾಯ ಪಂಚಾಯತ್ಸ್ ಆ್ಯಕ್ಟ್ 1983' ಪ್ರಕಾರ ಮಹಿಳೆಯರಿಗೆ ಎಷ್ಟು ಸ್ಥಾನಗಳನ್ನು ಮೀಸಲಾಗಿ ಇಟ್ಟಿದ್ದರು?
ಎ) ಶೇ 35 ಬಿ) ಶೇ 33 ಸಿ) ಶೇ. 22
ಡಿ) ಶೇ 25
ಉತ್ತರ: ಡಿ (ಪ್ರಸ್ತುತ ಶೇ 50ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿ ಇಡಲಾಗಿದೆ.)

5. ರಾಜೀವ್ ಗಾಂಧಿಯವರ ಕನಸಿನ ಕೂಸಾದ 73 ಮತ್ತು 74ನೇ ತಿದ್ದುಪಡಿಯು ಭಾರತ ಸಂವಿಧಾನಕ್ಕೆ ಆದ ಬಳಿಕ ಹೊಸ ಶಾಸನವೊಂದನ್ನು ಜಾರಿಗೆ ತರುವ ಮೂಲಕ ಪಂಚಾಯಿತಿ ರಾಜ್ ವ್ಯವಸ್ಥೆಗೆ ನಾಂದಿ ಹಾಡಿದ ಮೊದಲ ರಾಜ್ಯ ಯಾವುದು?
ಎ. ಮಧ್ಯ ಪ್ರದೇಶ
ಬಿ. ಪಶ್ಚಿಮ ಬಂಗಾಳ
ಸಿ. ಕರ್ನಾಟಕ
ಡಿ. ತಮಿಳುನಾಡು
ಉತ್ತರ: ಸಿ

6) 'ಕರ್ನಾಟಕ ಪಂಚಾಯತ್ ಆ್ಯಕ್ಟ್ 1993' ರ ಪ್ರಕಾರ ಯಾವೆಲ್ಲಾ ಅಂಶಗಳ ಆಧಾರದ ಮೇಲೆ ಜಿಲ್ಲಾ ಪಂಚಾಯತಿ ಸದಸ್ಯನನ್ನು ಅನರ್ಹಗೊಳಿಸಬಹುದು?
1) ಜಿಲ್ಲಾ ಪಂಚಾಯತಿ ಪರವಾಗಿ ವಕೀಲನಾಗಿ ನೇಮಕಗೊಂಡರೆ ಅಥವಾ ಜಿಲ್ಲಾ ಪಂಚಾಯತಿ ವಿರುದ್ಧ ಕೇಸುಗಳಿಗಾಗಿ ವಕೀಲನಾಗಿ ನೇಮಕವಾದರೆ
2) ಜಿಲ್ಲಾ ಪಂಚಾಯತಿ ಸದಸ್ಯನ ಮನೆಯಲ್ಲಿ ಕಕ್ಕಸ್ಸು (ಸ್ಯಾನಿಟರಿ ಲ್ಯಾಟರಿನ್) ಇಲ್ಲದಿದ್ದರೆ
3) ರಾಜ್ಯ ಅಥವಾ ಕೇಂದ್ರ ಸರಕಾರದ ಲಾಭದಾಯಕ ಹುದ್ದೆಯಲ್ಲಿ ಕುಳಿತರೆ
4)ಸದಸ್ಯನೊಬ್ಬ ವೈದ್ಯ/ವಕೀಲ/ ಚಾರ್ಟೆಡ್ ಅಕೌಂಟೆಂಟ್ ಆಗಿದ್ದು ತಮ್ಮ ವೃತ್ತಿಯನ್ನು ಸರಿಯಾಗಿ ನಿರ್ವಹಿಸದೇ ಆತನ ವೃತ್ತಿ ಪರವಾನಿಗೆಯನ್ನು ಸಂಬಂಧಿತ ಪ್ರಾಧಿಕಾರವು ಹಿಂದಕ್ಕೆ ಪಡೆದರೆ
ಉತ್ತರ ಸಂಕೇತಗಳು
ಎ) 3 ಮತ್ತು 4 ಬಳಸಿ ಅನರ್ಹಗೊಳಿಸಬಹುದು.
ಬಿ) 1, 3 ಮತ್ತು 4 ಬಳಸಿ ಅನರ್ಹಗೊಳಿಸಬಹುದು
ಸಿ) 1 ಮತ್ತು 4 ಬಳಸಿ ಅನರ್ಹಗೊಳಿಸಬಹುದು
ಡಿ) 1, 2, 3 ಮತ್ತು 4 ಬಳಸಿ ಅನರ್ಹಗೊಳಿಸಬಹುದು
ಉತ್ತರ: ಡಿ

7) 'ಕರ್ನಾಟಕ ಪಂಚಾಯತ್ ಆ್ಯಕ್ಟ್ 1993'ರ ಪ್ರಕಾರ ಜಿಲ್ಲಾ ಪಂಚಾಯತಿ ಸದಸ್ಯನಾಗಲು ಇರಬೇಕಾದ ಅರ್ಹತೆಗಳೇನು?
ಎ) ತಾನು ಚುನಾವಣೆಗೆ ಸ್ಪರ್ಧಿಸುವ ಜಿಲ್ಲಾ ಪಂಚಾಯತಿಯ ವ್ಯಾಪ್ತಿಯಲ್ಲಿರುವ ಮತದಾರರ ಪಟ್ಟಿಯಲ್ಲಿ ಹೆಸರಿರಬೇಕು.
ಬಿ) 21 ವರ್ಷ ತುಂಬಿರಬೇಕು.
ಸಿ) ರಾಜ್ಯ ಅಥವಾ ಕೇಂದ್ರ ಸರಕಾರದ ಲಾಭದಾಯಕ ಹುದ್ದೆಯಲ್ಲಿರಬಾರದು.
ಡಿ) ಮೇಲಿನ ಎಲ್ಲವೂ
ಉತ್ತರ: ಡಿ

8) ಈ ಕೆಳಗಿನ ಅಂಶಗಳನ್ನು ಗಮನವಿಟ್ಟು ಓದಿ
1) ಜಿಲ್ಲಾ ಪಂಚಾಯತಿ ಪ್ರಥಮ ಸಭೆ ಆರಂಭವಾದ ದಿನದಿಂದ 5 ವರ್ಷಗಳವರೆಗೆ ಸದಸ್ಯರು ತಮ್ಮ ಅಧಿಕಾರವನ್ನು ಹೊಂದಿರುತ್ತಾರೆ.
2) ಒಬ್ಬನೇ ಸದಸ್ಯ 2 ಕ್ಷೇತ್ರಗಳಲ್ಲಿ ಆಯ್ಕೆಯಾದರೆ ನಿಗದಿತ ಸಮಯದಲ್ಲಿ ತನಗಿಷ್ಟವಾದ ಒಂದು ಕ್ಷೇತ್ರವನ್ನು ಉಳಿಸಿಕೊಂಡು ಮತ್ತೊಂದು ಕ್ಷೇತ್ರಕ್ಕೆ ರಾಜೀನಾಮೆ ನೀಡಬೇಕು. ಹಾಗೆ ಮಾಡದಿದ್ದರೆ ಜಿಲ್ಲಾಧಿಕಾರಿ ಅಥವಾ ಸಂಬಂಧಿತ ಅಧಿಕಾರಿ ಲಾಟರಿ ಎತ್ತುವ ಮೂಲಕ ಒಂದು ಕ್ಷೇತ್ರಕ್ಕೆ ಮರು ಚುನಾವಣೆಯಾಗುವಂತೆ ನೋಡಿಕೊಳ್ಳುವರು.
3) ಸತತವಾಗಿ 4 ಜಿಲ್ಲಾ ಪಂಚಾಯತಿ ಸದಸ್ಯರ ಸಭೆಗಳಿಗೆ (ಮೀಟಿಂಗ್) ಸದಸ್ಯನೊಬ್ಬ ರಜೆಯನ್ನು ಹಾಕದೇ ಅನುಪಸ್ಥಿತ (ಗೈರು ಹಾಜರಾದರೆ) ನಾದರೆ ಅಂತಹ ಸದಸ್ಯನ ಸದಸ್ಯತ್ವ ರದ್ದಾಗುವುದು.
4) ತಾನು ಷೇರು ಮಾರುಕಟ್ಟೆಯಲ್ಲಿ ಹಾಕಿದ ಬಂಡವಾಳ ನಾಶವಾದರೆ ಜಿಲ್ಲಾ ಪಂಚಾಯತಿ ಸದಸ್ಯನೊಬ್ಬ ರಾಜಿನಾಮೆ ನೀಡಬೇಕಾಗುತ್ತದೆ
ಉತ್ತರ ಸಂಕೇತಗಳು
ಎ) 3 ಮತ್ತು 4 ತಪ್ಪಾಗಿದೆ, ಉಳಿದವು ಸರಿ.
ಬಿ) 1, 2 ಮತ್ತು 3 ಮಾತ್ರ ಸರಿಯಾಗಿವೆ
ಸಿ) 1 ಮತ್ತು 4 ತಪ್ಪು. 2 ಮತ್ತು 3 ಸರಿ.
ಡಿ) 1, 2, 3 ಮತ್ತು 4 ಎಲ್ಲವೂ ಸರಿಯಾಗಿವೆ
ಉತ್ತರ: ಬಿ

9) ಜಿಲ್ಲಾ ಪಂಚಾಯತಿಯು ಈ ಕೆಳಗಿನ ಯಾರನ್ನೆಲ್ಲಾ ಒಳಗೊಂಡಿದೆ ('ಕರ್ನಾಟಕ ಪಂಚಾಯತ್ ಆ್ಯಕ್ಟ್ 1993'ರ ಪ್ರಕಾರ) ?
ಎ) ಎಲ್ಲಾ ಜಿಲ್ಲಾ ಪಂಚಾಯತಿ ಸದಸ್ಯರು
ಬಿ) ಆಯಾ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕು ಪಂಚಾಯತ್ ಅಧ್ಯಕ್ಷರು
ಸಿ) ಆಯಾ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಶಾಸನ ಸಭೆಯ ಸದಸ್ಯರು(ಶಾಸಕರು)
ಡಿ) ಮೇಲಿನ ಎಲ್ಲರೂ
ಉತ್ತರ: ಡಿ

ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್

ALSTYLE Upto 80% OFF
Branded Garments & Under Garments Sale
Alstyle Panties Rs.60 | Alstyle Vest Rs.60 | Levis Men's Brief Rs.100 | Dixcy Bra Rs.100
Raymond, Colour Plus, Park Avenue, Parx Shirts MRP upto Rs.2499 Rs.800
Alstyle Men's Track Pant / Alstyle Ladies Track Pant, Alstyle Yoga Pant, Alstyle Capri Rs.600
Next Look Shirts by Raymond MRP upto Rs.1299 Rs.500
Men's T-Shirts, Ladies Payjama, Boys / Girls Tops & Bottoms Rs.200
Branded Shoes & Footwear Upto 50% OFF
Jackets, Sweat Shirts, Sweaters, Shirts, Trousers, Jeans, Rugs, Bedsheets, Towels, Boxers, Shorts etc. for Men's & Women
Banashankari : Nagalakshmi Kalyana Mantapa, No.5, II Stage, Near Post Office, Bangalore - 560 070
Infantry Road : Safina Plaza, No.84/85, Bangalore - 560 001
Rajajinagar : Raja Rajeshwari Kalyana Mantapa, 2nd Block, Dr. Rajkumar Road, Bangalore - 560 010
Org. by: Surya Agency Pvt. Ltd.

❦ ಸುಭಾಷಿತ ❦

ಚಾಂಪಿಯನ್‌ಗಳು ಎಂದಿಗೂ ದೂರುವುದಿಲ್ಲ
ಅವರು ಇನ್ನಷ್ಟು ಉತ್ತಮವಾದ ಕಾರ್ಯಗಳಲ್ಲಿ
ಮುಳುಗಿಹೋಗಿರುತ್ತಾರೆ.

-ಜಾನ್ ವುಡನ್

ರಸ್ತೆ ಗುಂಡಿ ಮುಚ್ಚಿ ಅಮೂಲ್ಯ ಜೀವ ಉಳಿಸಿ

ಮಳೆಗಾಲ ಬಂತೆಂದರೆ ಸಾಕು ಬೆಂಗಳೂರಿನ ರಸ್ತೆಗಳೆಲ್ಲ ಬಾಯ್ದೆರೆದುಕೊಳ್ಳುತ್ತವೆ. ಸೆಪ್ಟೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ದುರ್ಘಟನೆಗಳಲ್ಲಿ ದ್ವಿಚಕ್ರ ವಾಹನ ಸವಾರರಿಬ್ಬರು ರಸ್ತೆ ಗುಂಡಿಗಳಿಂದಾಗಿ ಪ್ರಾಣ ಕಳೆದುಕೊಂಡಿದ್ದಾರೆ. ಮಂಗನಹಳ್ಳಿ ಮುಖ್ಯರಸ್ತೆಯಲ್ಲಿ ಗುಂಡಿಯಿಂದಾಗಿ ದ್ವಿಚಕ್ರ ವಾಹನ ಉರುಳಿಬಿದ್ದು 65 ವರ್ಷ ವಯಸ್ಸಿನ ಅಂಗವಿಕಲರೊಬ್ಬರು ಸೆಪ್ಟೆಂಬರ್ 7ರಂದು ಮೃತಪಟ್ಟರು. ಇದಾಗಿ 10 ದಿನಗಳಲ್ಲಿ ಹೆಸರಘಟ್ಟ ಮುಖ್ಯ ರಸ್ತೆಯಲ್ಲಿ ಕಾಮಗಾರಿ ಸಲುವಾಗಿ ರಸ್ತೆಯಲ್ಲಿ ಅಗೆದ ಗುಂಡಿಯೊಂದು ದ್ವಿಚಕ್ರ ವಾಹನ ಸವಾರರೊಬ್ಬರನ್ನು ಬಲಿ ಪಡೆದಿದೆ. ಅಮೂಲ್ಯ ಎರಡು ಜೀವಗಳನ್ನು ಕಳೆದುಕೊಂಡ ಬಳಿಕವೂ ನಗರದಲ್ಲಿ ರಸ್ತೆಗುಂಡಿಗಳ ಸಮಸ್ಯೆ ನಿವಾರಣೆಯಾಗಿಲ್ಲ. ರಸ್ತೆ ಗುಂಡಿಗಳನ್ನು ಮುಚ್ಚುವ ವಿಚಾರದಲ್ಲಿ ಅಧಿಕಾರಸ್ಥರ ಸ್ಪಂದನ ಹೇಗಿದೆ ಎಂಬುದನ್ನು ಈ ಎರಡು ದುರಂತಗಳೇ ತೋರಿಸುತ್ತವೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಒಟ್ಟು 13,974 ಕಿಲೊ ಮೀಟರ್ ರಸ್ತೆ ಜಾಲ ಇದೆ. ಇವುಗಳಲ್ಲಿ ಮುಖ್ಯರಸ್ತೆಗಳು ಹಾಗೂ ಉಪಮುಖ್ಯ ರಸ್ತೆಗಳ ಉದ್ದ 1,344 ಕಿ.ಮೀ. ಮುಖ್ಯರಸ್ತೆ ಹಾಗೂ ಉಪಮುಖ್ಯ ರಸ್ತೆಗಳ ಗುಂಡಿಗಳನ್ನು ಸೆಪ್ಟೆಂಬರ್ 20ರ ಒಳಗೆ ಹಾಗೂ ಉಳಿದ ರಸ್ತೆಗಳ ಗುಂಡಿಗಳನ್ನು ಸೆ. 30ರ ಒಳಗೆ ಮುಚ್ಚುವಂತೆ ಕಂದಾಯ ಸಚಿವ ಆರ್.ಅಶೋಕ ಅವರು ಗಡುವು ನೀಡಿದ್ದರು. ಈ ಗಡುವುಗಳು ಮತ್ತೆ ಅ. 10ರವರೆಗೆ ವಿಸ್ತರಣೆಯಾದುವೇ ಹೊರತು ರಸ್ತೆ ಗುಂಡಿಗಳ ಸಮಸ್ಯೆ ಸಂಪೂರ್ಣ ಬಗೆಹರಿಯಲೇ ಇಲ್ಲ. ಬಿಬಿಎಂಪಿ ನೀಡಿರುವ ಅಂಕಿ-ಅಂಶಗಳ ಪ್ರಕಾರ ಬೆಂಗಳೂರಿನ ಮುಖ್ಯ ರಸ್ತೆಗಳು ಹಾಗೂ ಉಪಮುಖ್ಯ ರಸ್ತೆಗಳಲ್ಲಿ 895 ಕಿ.ಮೀ ರಸ್ತೆಗಳು ಸುಸ್ಥಿತಿಯಲ್ಲಿವೆ. ಇನ್ನುಳಿದ 449 ಕಿ.ಮೀ. ಉದ್ದದ ರಸ್ತೆಗಳು ಗುಂಡಿಗಳಿಂದ ಕೂಡಿದ್ದು, ಅವುಗಳಲ್ಲಿ 246 ಕಿ.ಮೀ. ಉದ್ದದ ರಸ್ತೆಗಳನ್ನು ಈಗಾಗಲೇ ದುರಸ್ತಿ ಮಾಡಲಾಗಿದೆ. ಆದರೆ, ನಗರ ಕೇಂದ್ರ ಪ್ರದೇಶದ ಮುಖ್ಯ ರಸ್ತೆಗಳಲ್ಲಿರುವ ಗುಂಡಿಗಳೇ ಬಿಬಿಎಂಪಿ ನೀಡಿದ ಅಂಕಿ-ಅಂಶಗಳನ್ನು ಅಣಕಿಸುವಂತಿವೆ. ರಸ್ತೆ ಗುಂಡಿಗಳು ಜೀವವನ್ನೇ ಬಲಿ ಪಡೆದ ದುರ್ಘಟನೆಗಳನ್ನಾಗಲೀ, ಸಚಿವರು ನೀಡಿದ ಗಡುವುಗಳನ್ನಾಗಲೀ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿದಂತೆ ತೋರುತ್ತಿಲ್ಲ. ರಸ್ತೆ ಗುಂಡಿ ಮುಚ್ಚಲು ಸಚಿವರು ಗಡುವು ವಿಧಿಸುವುದು ಪ್ರತಿವರ್ಷವೂ ನಡೆಯುತ್ತಿರುವ ಮಾಮೂಲಿ ಕಸರತ್ತಿನಂತಾಗಿದೆ.

ಬೆಂಗಳೂರು ಮಹಾನಗರದ ರಸ್ತೆಗಳ ಈ ದುಃಸ್ಥಿತಿಗೆ ಹೊಣೆ ಯಾರು? ಗುಂಡಿಗಳಿಂದ ಮುಕ್ತಿ ಎಂದು?

ಗುಂಡಿ ಕಾಣಿಸಿಕೊಂಡ ತಕ್ಷಣವೇ ಅವುಗಳನ್ನು ಮುಚ್ಚಿದರೆ ರಸ್ತೆಗಳು ಜೀವ ಬಲಿ ಪಡೆಯುವ ಸ್ಥಿತಿ ಎದುರಾಗದು. ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯ ವರ್ಷಪೂರ್ತಿ ಅಬಾಧಿತವಾಗಿ ನಡೆಯಬೇಕು ಎಂಬ ಉದ್ದೇಶದಿಂದಲೇ ಬಿಬಿಎಂಪಿಯು ಬೆಂಗಳೂರಿನ ಹೊರವಲಯದ ಕಣ್ಣೂರಿನಲ್ಲಿ ಡಾಂಬರು-ಜಲ್ಲಿ ಮಿಶ್ರಣ ಮಾಡುವ ಸ್ವಂತ ಘಟಕವನ್ನು ₹ 7.5 ಕೋಟಿ ವೆಚ್ಚದಲ್ಲಿ ಆರಂಭಿಸಿದೆ. ಎರಡು ವರ್ಷಗಳ ಹಿಂದೆ ಈ ಘಟಕ ಕಾರ್ಯಾರಂಭ ಮಾಡುವಾಗ ಬಿಬಿಎಂಪಿಯು, 'ನಗರದ ರಸ್ತೆಗುಂಡಿ ಸಮಸ್ಯೆಗಳಿಗೆ ಇನ್ನು ಶಾಶ್ವತ ಪರಿಹಾರ ಸಿಗಲಿದೆ' ಎಂದು ಭರವಸೆ ನೀಡಿತ್ತು. ಆ ಭರವಸೆ ಹುಸಿಯಾಗಿದೆ. ರಸ್ತೆಯನ್ನು ಜಲ್ಲಿ-ಡಾಂಬರು ಹಾಕಿ ಸಂಪೂರ್ಣ ಅಭಿವೃದ್ಧಿಪಡಿಸಿದರೆ, ಅದರ ದೋಷಮುಕ್ತ ಅವಧಿ ಮೂರು ವರ್ಷಗಳು. ರಸ್ತೆಯ ಮೇಲ್ಮೈಗೆ ಒಂದು ಪದರ ಡಾಂಬರೀಕರಣವನ್ನು ಮಾತ್ರ ನಡೆಸಿದರೆ, ಆ ಕಾಮಗಾರಿಯ ದೋಷಮುಕ್ತ ಅವಧಿ ಒಂದು ವರ್ಷ. ಈ ಅವಧಿಯಲ್ಲಿ ರಸ್ತೆಯಲ್ಲಿ ಮತ್ತೆ ಗುಂಡಿ ಕಾಣಿಸಿಕೊಂಡರೆ ಗುತ್ತಿಗೆದಾರರಿಂದಲೇ ಅದನ್ನು ದುರಸ್ತಿ ಮಾಡಿಸಬೇಕು. ಈ ಕಾರ್ಯವನ್ನಾದರೂ ಬಿಬಿಎಂಪಿ ಅಧಿಕಾರಿಗಳು ಸರಿಯಾಗಿ ಮಾಡಿರುತ್ತಿದ್ದರೆ ನಗರದ ರಸ್ತೆಗಳು ಈ ಪರಿ ಹದಗೆಡುತ್ತಿರಲಿಲ್ಲ. ರಸ್ತೆಯಲ್ಲಿ ಗುಂಡಿ ಬಿದ್ದರೆ ಸಂಬಂಧಪಟ್ಟ ಎಂಜಿನಿಯರ್‌ಗೆ ದಂಡ ವಿಧಿಸುವುದಕ್ಕೆ ಅವಕಾಶ ಇದೆ. ರಸ್ತೆಗಳು ತೀರಾ ಅಧ್ವಾನ ಸ್ಥಿತಿ ತಲುಪಿದಾಗಲೂ, ಅವುಗಳ ನಿರ್ವಹಣೆಗೆ ಸರಿಯಾಗಿ ನಿಗಾ ವಹಿಸದ ಅಧಿಕಾರಿಗಳಿಗೆ ಶಿಕ್ಷೆಯಾಗುತ್ತಿಲ್ಲ.

ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗಾಗಿ ಐದು ವರ್ಷಗಳಲ್ಲಿ ₹ 20,060 ಕೋಟಿ ವೆಚ್ಚ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಧಾನ ಪರಿಷತ್ತಿನಲ್ಲಿ ಇತ್ತೀಚೆಗೆ ಹೇಳಿದ್ದಾರೆ. ಅಂದರೆ, ಪ್ರತೀ ಕಿಲೊ ಮೀಟರ್ ರಸ್ತೆ ನಿರ್ವಹಣೆಗೆ ಐದು ವರ್ಷಗಳಲ್ಲಿ ₹ 1.44 ಕೋಟಿ ವೆಚ್ಚ ಮಾಡಿದಂತಾಗಿದೆ. ಇಷ್ಟೊಂದು ವೆಚ್ಚ ಮಾಡಿದ ಬಳಿಕವೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಬಿರುಕುರಹಿತ, ಗುಂಡಿಗಳಿಲ್ಲದ, ಉಬ್ಬು ಮತ್ತು ತಗ್ಗುಗಳಿಲ್ಲದ, ದೋಷರಹಿತವಾದ 1 ಕಿ.ಮೀ. ಉದ್ದದ ರಸ್ತೆಯೂ ಇಲ್ಲ ಎಂಬ ವಿಚಾರವನ್ನು ಮುಖ್ಯಮಂತ್ರಿ ಅವರೇ ವಿಧಾನ ಪರಿಷತ್ತಿನಲ್ಲಿ ಒಪ್ಪಿಕೊಂಡಿದ್ದಾರೆ. ₹ 20 ಸಾವಿರ ಕೋಟಿ ಸಣ್ಣ ಮೊತ್ತವೇನಲ್ಲ. ಇಷ್ಟೊಂದು ಪ್ರಮಾಣದಲ್ಲಿ ಸಾರ್ವಜನಿಕರ ಹಣವನ್ನು ವೆಚ್ಚ ಮಾಡಿದ ಬಳಿಕವೂ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಸಾಧ್ಯವಾಗದಿದ್ದರೆ, ಆಡಳಿತ ಯಂತ್ರದ ಕಾರ್ಯದಕ್ಷತೆಯೂ ಪುನರ್ ಪರಿಶೀಲನೆಗೆ ಒಳಗಾಗಬೇಕಾಗಿದೆ. 'ರಸ್ತೆಗಳ ಕಾಮಗಾರಿಗಳಲ್ಲಿ ದೋಷ ಮತ್ತು ದುಂದುವೆಚ್ಚ ತಡೆಯಲು ರಸ್ತೆಗಳ ಲೆಕ್ಕ ಪರಿಶೋಧನೆ ನಡೆಸಲಾಗುವುದು. ಎಲ್ಲ ರಸ್ತೆಗಳ ಇತಿಹಾಸ ಮತ್ತು ಕಾಮಗಾರಿಗಳ ವಿವರಗಳನ್ನು ದಾಖಲಿಸಲಾಗುವುದು. ರಸ್ತೆ ಕಾಮಗಾರಿಗಳಲ್ಲಿ ಆಗುವ ಲೋಪ ಹಾಗೂ ಅವ್ಯವಹಾರಗಳಿಗೆ ಅಧಿಕಾರಿಗಳನ್ನು ಹೊಣೆ ಮಾಡುವ ವ್ಯವಸ್ಥೆ ಜಾರಿಗೊಳಿಸಲಾಗುವುದು' ಎಂದು ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ರಸ್ತೆ ಗುಂಡಿಗಳಿಂದಾಗಿ ಜನ ಜೀವ ಕಳೆದುಕೊಳ್ಳುವ ಸ್ಥಿತಿ ಮರುಕಳಿಸಬಾರದು ಎಂದಾದರೆ ಈ ಕಾರ್ಯಗಳನ್ನಾದರೂ ಸರ್ಕಾರ ಕಟ್ಟುನಿಟ್ಟಾಗಿ ಮಾಡಬೇಕು. ರಸ್ತೆಯಲ್ಲಿ ಗುಂಡಿ ಬಿದ್ದರೆ, ಅದಕ್ಕೆ ನಿರ್ದಿಷ್ಟ ಅಧಿಕಾರಿಯನ್ನು ಹೊಣೆ ಮಾಡಿ, ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವ ವ್ಯವಸ್ಥೆ ಜಾರಿಗೊಳಿಸಬೇಕು. ಇಲ್ಲದಿದ್ದರೆ ರಸ್ತೆ ಗುಂಡಿಗಳ ಗೋಳು ಮರುಕಳಿಸುತ್ತಲೇ ಇರುತ್ತದೆ.

ದಿನದ ಟ್ವೀಟ್

ಬೆಲೆ ಏರಿಕೆಗಿರಲಿ ಕಡಿವಾಣ

ಎಲ್‌ಪಿಜಿ ಅಡುಗೆ ಅನಿಲದ ಬೆಲೆ ಪ್ರತೀ ಸಿಲಿಂಡರ್‌ಗೆ ₹ 15ರಂತೆ ಹೆಚ್ಚಳವಾಗಿದೆ. ಎರಡು ತಿಂಗಳಿಗಿಂತಲೂ ಕಡಿಮೆ ಅವಧಿಯಲ್ಲಿ ಸತತ ನಾಲ್ಕನೇ ಬಾರಿಗೆ ಈ ಬೆಲೆ ಏರಿಕೆ ಮಾಡಲಾಗಿದೆ. ಇಂಧನ ಮತ್ತು ಅಡುಗೆ ಅನಿಲಕ್ಕಾಗಿ ಬಿಜೆಪಿ ನೇತೃತ್ವದ ಸರ್ಕಾರವು ಸಾಲ ನೀಡಿಕೆ ಯೋಜನೆಯೊಂದನ್ನು ಪ್ರಾರಂಭಿಸಬೇಕು. ಏಕೆಂದರೆ, ಜನರು ತಮ್ಮ ಆದಾಯದ ಶೇ 50ರಿಂದ 60ರಷ್ಟನ್ನು ಇಂಧನ ಮತ್ತು ಅನಿಲಕ್ಕಾಗಿಯೇ ಖರ್ಚು ಮಾಡಬೇಕಾಗಿ ಬರುವ ದಿನ ದೂರವಿಲ್ಲ.

ಅನ್ಷುಲ್ ಸಕ್ಸೇನಾ, ಸುದ್ದಿ ವಿಶ್ಲೇಷಕ

ಕಿಡಿನುಡಿ



ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಬಾಯಲ್ಲಿ ರಾಮ, ಮಗ್ಗುಲಲ್ಲಿ ಚೂರಿ ಎಂಬ ಮಾತಿನಂತೆ ನಡೆದುಕೊಳ್ಳುತ್ತಿದ್ದಾರೆ. ಯಾವಾಗಲೂ ಅವರು ಕಾನೂನು-ಬಾಹಿರವಾಗಿ ನಡೆದುಕೊಳ್ಳುತ್ತಾರೆ. ಹತ್ರಾಸ್ ಅತ್ಯಾಚಾರ ಪ್ರಕರಣದಲ್ಲಿ ಸಂತ್ರಸ್ತೆಯ ಪೋಷಕರಿಗೆ ತಿಳಿಸದೆ ರಾತ್ರೋರಾತ್ರಿ ಆಕೆಯ ಪಾರ್ಥಿವ ಶರೀರವನ್ನು ಸುಟ್ಟಿದ್ದರು. ಇಂತಹ ಕೆಲಸಗಳಿಗೆ ಪ್ರಚೋದನೆ, ಪ್ರೋತ್ಸಾಹ ನೀಡುತ್ತಿರುವ ಅವರು ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಯಲು ಅರ್ಹರಲ್ಲ.

ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 7-10-1996

- **ಕಾಂಗ್ರೆಸ್ ಕಾರ್ಯಕಾರಿಣಿಗೆ ಮನಮೋಹನ ಸಿಂಗ್**

ನವದೆಹಲಿ, ಅ. 6 (ಪಿಟಿಐ)– ಮಾಜಿ ಹಣಕಾಸು ಸಚಿವ ಮನಮೋಹನ ಸಿಂಗ್ ಅವರನ್ನು ಇಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಪಿ.ವಿ.ನರಸಿಂಹ ರಾವ್ ಅವರು ಪಕ್ಷದ ಸಂಸದೀಯ ನಾಯಕನ ಸ್ಥಾನಕ್ಕೂ ರಾಜೀನಾಮೆ ನೀಡಲಿದ್ದು, ಆ ಸ್ಥಾನಕ್ಕೆ ಸಿಂಗ್ ಅವರನ್ನೇ ನೇಮಿಸಲಾಗುವುದು ಎಂಬ ದಟ್ಟ ಸುದ್ದಿ ಹಬ್ಬಿದೆ.

ಪಕ್ಷದಲ್ಲಿ ಅತ್ಯುನ್ನತ ಅಧಿಕಾರ ಹೊಂದಿರುವ ಕಾರ್ಯಕಾರಿ ಸಮಿತಿಗೆ ಮನಮೋಹನ ಸಿಂಗ್ ಅವರ ನೇಮಕದ ಮಹತ್ವದ ನಿರ್ಧಾರವನ್ನು ಇಂದು ಪಕ್ಷದ ಅಧ್ಯಕ್ಷ ಸೀತಾರಾಂ ಕೇಸರಿ ಅವರೇ ಪ್ರಕಟಿಸಿದರು.

50 ವರ್ಷಗಳ ಹಿಂದೆ

ಗುರುವಾರ, 7-10-1971

- **'ಜಾತಿಯಂಥ ಸಂಕುಚಿತ ದೃಷ್ಟಿಯ ವಿರುದ್ಧ ಪ್ರಜ್ಞೆ ಎಬ್ಬಿಸುವುದೇ ಉದ್ದೇಶ'**

ಬೆಂಗಳೂರು, ಅ. 6– ಜಾತಿ ಮುಂತಾದ ಸಂಕುಚಿತ ದೃಷ್ಟಿಯ ವಿರುದ್ಧ ಜನತೆಯ ಪ್ರಜ್ಞೆಯನ್ನು ಎಬ್ಬಿಸುವ ಉದ್ದೇಶದಿಂದ ತಾವು ಬೆಂಗಳೂರು ವಿಶ್ವವಿದ್ಯಾನಿಲಯದ ವ್ಯವಹಾರಗಳ ಬಗ್ಗೆ ಬಿಚ್ಚು ಮನಸ್ಸಿನಿಂದ ಮಾತನಾಡಿದುದಾಗಿ ರಾಜ್ಯಪಾಲ ಧರ್ಮವೀರ ವರದಿಗಾರರಿಗೆ ತಿಳಿಸಿದರು.

'ನಿರ್ವಿಕಾರ ದೃಷ್ಟಿಯಿಂದ ವ್ಯವಹರಿಸಿದಲ್ಲಿ ಮಾತ್ರ ವಿಶ್ವವಿದ್ಯಾನಿಲಯಗಳ ಸಮಸ್ಯೆಗಳ ಪರಿಹಾರ ಸಾಧ್ಯ. ಇದಾಗದಿದ್ದರೆ ಬ್ರಾಹ್ಮಣರ ವಿಶ್ವವಿದ್ಯಾನಿಲಯ, ಲಿಂಗಾಯತರ ವಿಶ್ವ-ವಿದ್ಯಾನಿಲಯ, ಜೈನರ ವಿಶ್ವವಿದ್ಯಾನಿಲಯ ಅಂತ ಇಟ್ಟುಕೊಳ್ಳಬಹುದು. ಎಲ್ಲರಿಗೂ ಒಂದೇ ವಿಶ್ವವಿದ್ಯಾನಿಲಯವಿದ್ದರೆ, ಎಲ್ಲವನ್ನೂ ನಿರ್ವಿಕಾರ ಮನೋಭಾವನೆಯಿಂದ ನೋಡುವುದಗತ್ಯ' ಎಂದು ಒತ್ತಿ ಹೇಳಿದರು.

ಸಂರಕ್ಷಿತ ಪ್ರದೇಶಗಳಿಂದ ಹೊರಬರುವ ವನ್ಯಜೀವಿಗಳ ಸಂರಕ್ಷಣೆ ಬಹು ದೊಡ್ಡ ಸವಾಲು

ಸುರಕ್ಷಿತ ಕವಚದಾಚೆಗೆ ವನ್ಯಜೀವಿ ಸಂರಕ್ಷಣೆ

ವಿಶ್ಲೇಷಣೆ

ಡಾ. ಎಚ್. ಆರ್. ಕೃಷ್ಣಮೂರ್ತಿ

ವನ್ಯಜೀವಿಗಳ ಸಂರಕ್ಷಣೆಯಲ್ಲಿ, ಕಾನೂನಾತ್ಮಕವಾಗಿ ಸ್ಥಾಪಿಸಲಾಗಿರುವ 'ಸಂರಕ್ಷಿತ ಪ್ರದೇಶ'ಗಳು (ಪ್ರೊಟೆಕ್ಟೆಡ್ ಏರಿಯಾಸ್) ಮುಖ್ಯಪಾತ್ರ ವಹಿಸುತ್ತವೆ. ನಮ್ಮ ದೇಶದಲ್ಲಿರುವ ಸಂರಕ್ಷಿತ ಪ್ರದೇಶಗಳ ವ್ಯಾಪಕವಾದ ಜಾಲದಡಿಯಲ್ಲಿ 101 ರಾಷ್ಟ್ರೀಯ ಉದ್ಯಾನಗಳು, 553 ವನ್ಯಜೀವಿ ಅಭಯಾರಣ್ಯಗಳು, 86 ಕಾಯ್ದಿಟ್ಟ ಸಂರಕ್ಷಣಾ ಪ್ರದೇಶಗಳು ಮತ್ತು 163 ಸಮುದಾಯ ಸಂರಕ್ಷಣಾ ಪ್ರದೇಶಗಳಿವೆ. ದೇಶದ ಒಟ್ಟು ಭೂಭಾಗದ ಶೇ 4.9ರಷ್ಟು ಪ್ರದೇಶದಲ್ಲಿ ಈ 903 ಸಂರಕ್ಷಣಾ ಪ್ರದೇಶಗಳು ಹರಡಿವೆ.

ರಾಷ್ಟ್ರೀಯ ಉದ್ಯಾನ, ಅಭಯಾರಣ್ಯ ಮುಂತಾದ ಸಂರಕ್ಷಿತ ಪ್ರದೇಶಗಳಲ್ಲಿ ವನ್ಯಜೀವಿಗಳ ಸಂರಕ್ಷಣೆಗೆ ಗರಿಷ್ಠ ಆದ್ಯತೆ. ಜನ, ಜಾನುವಾರುಗಳೊಡನೆ ವನ್ಯಜೀವಿಗಳು ಸಂಪರ್ಕಕ್ಕೆ ಬರುವ ಸಾಧ್ಯತೆ ಬಹಳ ಕಡಿಮೆಯಾದ್ದರಿಂದ ಅವು ಬಹುಮಟ್ಟಿಗೆ ಸುರಕ್ಷಿತ. ಆದರೆ ವನ್ಯಜೀವಿಗಳ ಆವಾಸ ಈ ಸಂರಕ್ಷಿತ ಪ್ರದೇಶಗಳ ಭೌಗೋಳಿಕ ಗಡಿಯ ಆಚೆಗೂ ವಿಸ್ತರಿಸುವುದರಿಂದ ಅವು ಸಂರಕ್ಷಿತ ಪ್ರದೇಶವನ್ನು ಬಿಟ್ಟು ಹೊರಗೂ ಸಂಚರಿಸುತ್ತವೆ. ಹೀಗೆ ಹೊರಗಿರುವ ಅರಣ್ಯ, ಕುರುಚಲು ಕಾಡು, ಬಯಲು ಭೂಮಿಯ ಹುಲ್ಲುಗಾವಲುಗಳಲ್ಲಿ ಹುಲಿ, ಚಿರತೆ, ಸೀಳುನಾಯಿ, ಕರಡಿ, ತೋಳ, ಗುಳ್ಳೆನರಿ, ಜಿಂಕೆ, ಕೃಷ್ಣಮೃಗ ಮುಂತಾದ ಜೀವಿಗಳಿವೆ. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಮಾಹಿತಿಯ ಅನುಸಾರ, ದೇಶದ ಒಟ್ಟು ಹುಲಿಗಳಲ್ಲಿ ಶೇ 30ರಷ್ಟು ಸಂರಕ್ಷಿತ ಪ್ರದೇಶಗಳ ಹೊರಗಡೆ ಇವೆ.

ಗಂಗಾ ನದಿಯ ಡಾಲ್ಫಿನ್ ನಮ್ಮ ದೇಶದ ರಾಷ್ಟ್ರೀಯ ಜಲಜೀವಿ. ಬಿಹಾರದ ಸುಲ್ತಾನ್‌ಗಂಜ್-ಕಹಲಗಾವ್ ನಡುವೆ, ಗಂಗಾ ನದಿಯ 50 ಕಿ.ಮೀ. ಉದ್ದವನ್ನು ವಿಕ್ರಮ್‌ಶಿಲಾ ಡಾಲ್ಫಿನ್ ಅಭಯಾರಣ್ಯ ಎಂದು ಘೋಷಿಸಲಾಗಿದೆ. ಆದರೆ ಈ ಅಭಯಾರಣ್ಯದ ಹೊರಗೆ ನದಿಯಲ್ಲಿರುವ ಡಾಲ್ಫಿನ್‌ಗಳು ಕಳ್ಳಬೇಟೆಗೆ ಒಳಗಾಗುತ್ತಿವೆ. ಹದಿನೈದು ಕಿಲೊ ಗ್ರಾಮ್‌ಗಳಷ್ಟು ತೂಕದ ಗ್ರೇಟ್ ಇಂಡಿಯನ್ ಬಸ್ಟರ್ಡ್ ಅಥವಾ ಎರ್ಲಡ್ಡು ಹಕ್ಕಿಗೆ ನಮ್ಮ ದೇಶದಲ್ಲಿ 12 ಅಭಯಾರಣ್ಯಗಳಿದ್ದರೂ ಇಂದು ಅವುಗಳ ಸಂಖ್ಯೆ 150ಕ್ಕಿಂತ ಹೆಚ್ಚಿಲ್ಲ. ಅಭಯಾರಣ್ಯಗಳ ಹೊರಗೆ ಅವು ಬೇಟೆಗೀಡಾಗಿ ಸಾಯುತ್ತಿವೆ.

ದೇಶದ ಸಂರಕ್ಷಿತ ಪ್ರದೇಶಗಳ ವಿಸ್ತೀರ್ಣ ಬಹಳ ಹೆಚ್ಚೇನಿಲ್ಲ. ಸರಾಸರಿ ವಿಸ್ತೀರ್ಣ ಸುಮಾರು 270 ಚದರ ಕಿ.ಮೀ.ಗಳು. ಶೇ 31 ಸಂರಕ್ಷಣಾ ಪ್ರದೇಶಗಳ ವಿಸ್ತೀರ್ಣ 10 ಚದರ ಕಿ.ಮೀ.ಗಳಿಗಿಂತ ಕಡಿಮೆ. ಮಹಾರಾಷ್ಟ್ರದ ವಾರ್ಧಾ ಜಿಲ್ಲೆಯಲ್ಲಿರುವ ಬೋರ್ ಹುಲಿ ಸಂರಕ್ಷಣಾ ಪ್ರದೇಶದ ವಿಸ್ತೀರ್ಣ 138.12 ಚದರ ಕಿ.ಮೀ.ಗಳು. ತನ್ನದೇ ಆದ ಸರಹದ್ದನ್ನು ಸ್ಥಾಪಿಸಿ, ಕಾಯ್ದುಕೊಳ್ಳುವ ಗಂಡು ಹುಲಿಗೆ 60ರಿಂದ 100 ಚದರ ಕಿ.ಮೀ ಪ್ರದೇಶ ಬೇಕು. ಹೀಗಾಗಿ ಒಂದು ಹುಲಿ ಸಂರಕ್ಷಣಾ ಪ್ರದೇಶ ಎರಡೇ ಹುಲಿಗಳಿಗೆ ಸಾಕಾಗಬಹುದು. ಇದೇ ರೀತಿ ದಿನವೊಂದಕ್ಕೆ 10-12 ಕಿ.ಮೀ. ಸಂಚರಿಸುವ ಆನೆಗಳನ್ನು ನೂರಿನ್ನೂರು ಚದರ ಕಿ.ಮೀ.ಗಳ ವ್ಯಾಪ್ತಿಯಲ್ಲಿ ಹಿಡಿದಿಡುವುದು ಬಹು ಕಷ್ಟ.

ಕಟ್ಟುನಿಟ್ಟಿನ ಕಾನೂನು ಕ್ರಮಗಳು ಜಾರಿಯಲ್ಲಿರುವ ಸಂರಕ್ಷಿತ ಪ್ರದೇಶಗಳಲ್ಲಿ ವನ್ಯಜೀವಿಗಳ ಸಂಖ್ಯೆ, ದಟ್ಟಣೆ ಹೆಚ್ಚುವುದು ಸ್ವಾಭಾವಿಕ. ವನ್ಯಜೀವಿಗಳ ಸಂಖ್ಯೆ, ಆ ಆವಾಸ ಪೋಷಿಸಬಹುದಾದ ಗರಿಷ್ಠ ಸಂಖ್ಯೆಯನ್ನು ಮೀರಿದಾಗ ವನ್ಯಜೀವಿಗಳು ಅಲ್ಲಿಂದ ಚದುರಿ ಹೊರಬರುತ್ತವೆ. ಇತ್ತೀಚಿನ ಹುಲಿ ಗಣತಿಯ ವರದಿಯಂತೆ, ದೇಶದ 50 ಹುಲಿ ಸಂರಕ್ಷಣಾ ಯೋಜನಾ ಪ್ರದೇಶಗಳ ಪೈಕಿ 17ರಲ್ಲಿ ಹುಲಿಗಳ ಸಂಖ್ಯೆ, ಆ ಪ್ರದೇಶದ ಧಾರಣಾ ಸಾಮರ್ಥ್ಯವನ್ನು ಮೀರಿರುವುದು ಗೋಚರಿಸುತ್ತದೆ. ನಮ್ಮ ಬಹುತೇಕ ಸಂರಕ್ಷಿತ ಪ್ರದೇಶಗಳು ಜನವಸತಿ, ರೈಲು, ರಸ್ತೆ, ಕೃಷಿಭೂಮಿ, ಕೈಗಾರಿಕೆ, ಗಣಿಗಾರಿಕೆ ಮುಂತಾದವುಗಳಿಂದ ಆವೃತವಾಗಿರುವ ಸಣ್ಣ ಸಣ್ಣ, ಪ್ರತ್ಯೇಕ ದ್ವೀಪಗಳಂತಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಸಂರಕ್ಷಿತ ಪ್ರದೇಶಗಳಿಂದ ಹೊರಗೆ ಬರುವ ಜೀವಿಗಳನ್ನು ವಿಶೇಷ ಕಾಳಜಿಯಿಂದ ರಕ್ಷಿಸದಿದ್ದರೆ, ಮಾನವ ಪ್ರಾಬಲ್ಯವಿರುವ ಪರಿಸರದಲ್ಲಿ ಅವು ತ್ವರಿತಗತಿಯಲ್ಲಿ ಅಳಿವಿನಂಚಿನತ್ತ ಸಾಗಲಿವೆ ಎಂಬುದು ತಜ್ಞರ ಅಭಿಪ್ರಾಯ.

ಸಂರಕ್ಷಿತ ಪ್ರದೇಶಗಳ ಹೊರಗಿರುವ ವನ್ಯಜೀವಿಗಳ ಸಂರಕ್ಷಣೆಯ ದೃಷ್ಟಿಯಿಂದ ಸರ್ಕಾರ ಕೈಗೊಂಡ ಅತಿ ಮಹತ್ವದ ಮೊದಲ ನಿರ್ಧಾರವೆಂದರೆ 'ಇಕೊ ಸೆನ್ಸಿಟಿವ್ ಜೋನ್'ಗಳ ಸ್ಥಾಪನೆ. ರಾಷ್ಟ್ರೀಯ ಉದ್ಯಾನಗಳು ಮತ್ತು ಅಭಯಾರಣ್ಯಗಳ ಸುತ್ತಲಿನ 10 ಕಿ.ಮೀ. ವ್ಯಾಪ್ತಿಯ ಪ್ರದೇಶವನ್ನು ಜೀವಿ ಪರಿಸ್ಥಿತಿ ಸೂಕ್ಷ್ಮವಲಯವನ್ನಾಗಿ ಘೋಷಿಸುವ ನಿರ್ಧಾರವನ್ನು 2002ರ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸಭೆಯಲ್ಲಿ ಕೈಗೊಳ್ಳಲಾಯಿತು. ಈ ವಲಯ, ಸಂರಕ್ಷಿತ ಪ್ರದೇಶ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಬೇರ್ಪಡಿಸಿ, ಆ ಎರಡರ ನಡುವೆ ಕಾಪು ವಲಯ ಅಥವಾ ಬಫರ್ ವಲಯವಾಗಿ ವನ್ಯಜೀವಿಗಳನ್ನು ರಕ್ಷಿಸುವ ಕೆಲಸ ಮಾಡುತ್ತದೆ.

ವನ್ಯಜೀವಿಗಳು ವಲಸೆ ಹೋಗುವ, ಪ್ರತ್ಯೇಕಗೊಂಡ ಆವಾಸಗಳ ನಡುವೆ ಸಂಚರಿಸುವ ಹಾದಿ ಅಥವಾ ಕಾರಿಡಾರ್‌ಗಳನ್ನು ಈ ಸೂಕ್ಷ್ಮವಲಯ ಒಳಗೊಂಡಿರುವುದು ಸಾಮಾನ್ಯ. ಈ ಕಾನೂನು ಜಾರಿಗೆ ಬರುವ ಮುಂಚೆ, ಈ ವಲಯದಲ್ಲಿ ಅಭಿವೃದ್ಧಿ ಯೋಜನೆಗಳಿಗೆ ದೊರೆತಿದ್ದ ಎಲ್ಲ ಅನುಮೋದನೆಗಳನ್ನೂ ಮತ್ತೊಮ್ಮೆ ಪರಿಶೀಲಿಸುವಂತೆ ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತು. ಇಲ್ಲಿಯವರೆಗೆ 303 ಸಂರಕ್ಷಿತ ಪ್ರದೇಶಗಳ ಸುತ್ತ ಈ ರೀತಿಯ ಸೂಕ್ಷ್ಮ ವಲಯಗಳನ್ನು ಕಾನೂನು ರೀತ್ಯಾ ಸ್ಥಾಪಿಸಲಾಗಿದೆ.

'ವನ್ಯಜೀವಿ ಆವಾಸಗಳ ಸಮಗ್ರ ಅಭಿವೃದ್ಧಿ' (ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ವೈಲ್ಡ್‌ಲೈಫ್ ಹ್ಯಾಬಿಟಾಟ್) ಕೇಂದ್ರ ಪರಿಸರ, ಅರಣ್ಯ ಮತ್ತು ವಾಯುಗುಣ ಬದಲಾವಣೆ ಸಚಿವಾಲಯ ಪ್ರಾಯೋಜಿತ ಯೋಜನೆ. ಸಂರಕ್ಷಿತ ಪ್ರದೇಶಗಳ ಹೊರಗಿರುವ ವನ್ಯಜೀವಿ ಆವಾಸಗಳು, ವನ್ಯಜೀವಿಗಳು ಸಂಚರಿಸುವ ಕಾರಿಡಾರ್‌ಗಳು, ಜೈವಿಕ ವೈವಿಧ್ಯದ ಮಹತ್ವದ ತಾಣಗಳು ಮುಂತಾದವುಗಳನ್ನು ಸಂರಕ್ಷಿಸಿ, ವನ್ಯಜೀವಿಗಳಿಗೆ ನೆರವಾಗಲು ಅವುಗಳನ್ನು ಅಭಿವೃದ್ಧಿಪಡಿಸುವ, ಭೂಬಳಕೆಯ ಪದ್ಧತಿಗಳಲ್ಲಿ ಬದಲಾವಣೆಗಳನ್ನು ತರುವ ಕೆಲಸಗಳಿಗೆ ಈ ಯೋಜನೆಯಡಿಯಲ್ಲಿ ಧನಸಹಾಯ ಹಾಗೂ ಮಾರ್ಗದರ್ಶನಗಳು ದೊರೆಯುತ್ತಿವೆ.

ಹಿಮಾಲಯ, ಪಶ್ಚಿಮ ಘಟ್ಟಗಳು, ಕರಾವಳಿ, ದೇಶದ ಮಧ್ಯಭಾಗದಲ್ಲಿನ ಬಯಲುಭೂಮಿ ಮುಂತಾದ ವಿವಿಧ ಆವಾಸಗಳಲ್ಲಿರುವ ಸುಮಾರು 1.5 ಲಕ್ಷ ಪವಿತ್ರವನಗಳೂ ಸಂರಕ್ಷಿತ ಪ್ರದೇಶಗಳ ಹೊರಗಿರುವ ವನ್ಯಜೀವಿಗಳನ್ನು ಸಂರಕ್ಷಿಸುವಲ್ಲಿ ಮಹತ್ವದ ಪಾತ್ರ ವಹಿಸಬಹುದೆಂಬುದು ತಜ್ಞರ ಅಭಿಪ್ರಾಯ. ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ ಮತ್ತು ಬರ್ಡ್ ಲೈಫ್ ಇಂಟರ್‌ನ್ಯಾಷನಲ್ ಸಂಸ್ಥೆಯು ಜೊತೆಗೂಡಿ, ಸಂರಕ್ಷಿತ ಪಕ್ಷಿಧಾಮಗಳ ಹೊರಗೆ, 1,212 ಪ್ರಭೇದಗಳಿಗೆ ಸೇರಿದ ಸಾವಿರಾರು ಹಕ್ಕಿಗಳಿಗೆ ಆಶ್ರಯ ನೀಡಿರುವ 544 ತಾಣಗಳನ್ನು ದೇಶದ ವಿವಿಧ ಭಾಗಗಳಲ್ಲಿ ಗುರುತಿಸಿವೆ. ಸಂರಕ್ಷಿತ ಪ್ರದೇಶಗಳಿಂದ ಹೊರಗಿರುವ ವನ್ಯಜೀವಿಗಳ ಸಂರಕ್ಷಣೆಗೆ ಸ್ಥಳೀಯ ರೈತರು, ಅರಣ್ಯ ಉತ್ಪನ್ನಗಳ ಸಂಗ್ರಹಕಾರರು, ಭೂಮಾಲೀಕರು ಮುಂತಾದವರ ಸಹಭಾಗಿತ್ವ ಮತ್ತು ಸಹಕಾರ ತೀರಾ ಅಗತ್ಯ.

ಈ ಪ್ರದೇಶಗಳಲ್ಲಿ ವನ್ಯಜೀವಿಗಳ ಹಿತದೃಷ್ಟಿಯಿಂದ ಭೂಬಳಕೆಯಲ್ಲಿ ತರುವ ಯಾವುದೇ ಬದಲಾವಣೆ, ಸುಧಾರಣೆಗಳಿಂದ ಸ್ಥಳೀಯರಿಗೆ ಉಪಯೋಗವಾಗಿ, ಆರ್ಥಿಕ ಪ್ರಯೋಜನ ದೊರೆತರೆ ಮಾತ್ರ ಅವರ ಸಹಕಾರ ದೊರೆಯುತ್ತದೆ. ಸತ್ತ ವನ್ಯಜೀವಿಗಳಿಗಿಂತ ಬದುಕಿರುವ ಜೀವಿಗಳಿಂದಲೇ ನಮಗೆ ಹೆಚ್ಚು ಪ್ರಯೋಜನ ಎಂಬ ಸತ್ಯವನ್ನು ಮನಗಾಣಿಸುವಂತಹ ಯೋಜನೆಗಳು ಕಾರ್ಯಗತಗೊಂಡು ಯಶಸ್ವಿಯಾದರೆ ಆ ಮಟ್ಟಿಗೆ ಸಂರಕ್ಷಣೆ ಸುಲಭವಾಗುತ್ತದೆ. ನಾಗರಹೊಳೆ, ಬಂಡೀಪುರ ರಾಷ್ಟ್ರೀಯ ಉದ್ಯಾನಗಳ ಸುತ್ತಲಿನ 287 ಹಳ್ಳಿಗಳಲ್ಲಿ ಬೆಂಗಳೂರಿನ ವೈಲ್ಡ್‌ಲೈಫ್ ಕನ್ಸರ್ವೇಶನ್ ಸೊಸೈಟಿಯ ವಿಜ್ಞಾನಿಗಳು ನಡೆಸಿರುವ ಅಧ್ಯಯನ ಈ ಅಭಿಪ್ರಾಯವನ್ನೇ ಪುರಸ್ಕರಿಸಿದೆ.

ಸಂರಕ್ಷಿತ ಪ್ರದೇಶಗಳ ಹೊರಗಿರುವ ವನ್ಯಜೀವಿಗಳನ್ನು ಉಳಿಸುವ ಪ್ರಯತ್ನಗಳು ನಡೆಯುತ್ತಿರುವ ಸಮಯದಲ್ಲೇ, ಅಂತಹ ಪ್ರದೇಶಗಳ ಸ್ವಲ್ಪ ಭಾಗವನ್ನು ಅಭಿವೃದ್ಧಿಯ ಹೆಸರಿನಲ್ಲಿ ಕೈಬಿಡುವ ಪ್ರಕರಣಗಳೂ ನಡೆದಿವೆ. ಡೆಹ್ರಾಡೂನ್ ವಿಮಾನ ನಿಲ್ದಾಣದ ವಿಸ್ತರಣೆಗಾಗಿ, ತಾಂತ್ರಿಕ ತೊಡಕುಗಳು ಇಲ್ಲದೇ ಭೂಮಿಯನ್ನು ನೀಡುವ ಸಲುವಾಗಿ, ಇಡೀ ಶಿವಾಲಿಕ್ ಆನೆ ಸಂರಕ್ಷಣಾ ಯೋಜನೆಯ ಪ್ರದೇಶವನ್ನೇ ಡಿನೋಟಿಫೈ ಮಾಡುವ ನಿರ್ಧಾರವನ್ನು ಉತ್ತರಾಖಂಡ ರಾಜ್ಯದ ವನ್ಯಜೀವಿ ಸಲಹಾ ಮಂಡಳಿ ಕೈಗೊಂಡಿತ್ತು. ಈ ನಿರ್ಧಾರವನ್ನು ಉತ್ತರಾಖಂಡ ಹೈಕೋರ್ಟ್ ಈ ವರ್ಷದ ಜನವರಿಯಲ್ಲಿ ತಡೆಹಿಡಿಯಿತು. ದೇಶದ ವಿವಿಧ ಭಾಗಗಳಲ್ಲಿ ವನ್ಯಜೀವಿ ಆಸಕ್ತ ನಾಗರಿಕ ಸಂಘಟನೆಗಳು ಈ ದಿಕ್ಕಿನಲ್ಲಿ ಮಾಡುತ್ತಿರುವ ಕೆಲಸ ಶ್ಲಾಘನೀಯ.

ಚುರುಮುರಿ

ಪಂಡೋರಾ ಪ್ರವರ!

• ಎಸ್.ಬಿ.ರಂಗನಾಥ್

'**ಹಿಂದೆ** ಪ್ಯಾರಡೈಸ್ ಪೇಪರ್ಸ್, ಪನಾಮ ಪೇಪರ್ಸ್ ಬಗ್ಗೆ ಕೇಳಿದ್ವಿ. ಇದೇನ್ರೀ ಈಗ ಈ ಪಂಡೋರಾ ಪೇಪರ್ಸ್?!' ಶ್ರೀಮತಿ ಆತಂಕದಿಂದ ಕೇಳಿದಳು.

'ಎಲ್ಲಾ ಮಹಿಳಾ ಮಹಾತ್ಮೆ, ಲಕ್ಷ್ಮಿ ವ್ಯಾಮೋಹ' ಎಂದೆ.

'ನಿಮಗೆ ನಮ್ಮನ್ನು ಬೈಯದಿದ್ರೆ ಉಂಡ ಅನ್ನ ಅರಗೋಲ್ಲ ಅಲ್ವೇ? ಅದೇನು ಬಿಡ್ಸಿಹೇಳ್ರೀ' ಧಮಕಿ ಹಾಕಿದಳು.

'ನಿಂಗೆ ಪಂಡೋರಾ ಕಥೆ ಗೊತ್ತಾ? ಜಗತ್ತಿನ ಎಷ್ಟೋ ಸಮಸ್ಯೆಗಳು ಹುಟ್ಟಿಕೊಂಡದ್ದೇ ಈಕೆಯಿಂದ...!'

'ನೋಡಿ, ಮತ್ತೆ ತೆಗೆದ್ರಲ್ಲಾ ನಿಮ್ಮ ಬುದ್ಧೀನ...'

'ಪೂರ್ತಿ ಹೇಳೋವರೆಗೂ ಕೇಳು- ಗ್ರೀಕ್ ಪುರಾಣದ ಪ್ರಕಾರ, ಜಗತ್ತಿನ ಅಪ್ರತಿಮ ಸುಂದರಿ ಪಂಡೋರಾ. ಆಕೆಗಿಂತ ಮೊದಲು ಭೂಮಿ ಮೇಲೆ ಬರೀ ಪುರುಷರೇ ಇದ್ರಂತೆ. ಆಗ ಎಲ್ಲಾ ಕಡೆ ಶಾಂತಿ, ಸುಭಿಕ್ಷತೆ, ಶಿಷ್ಟ ಶಕ್ತಿಗಳು ನೆಲೆಸಿದ್ವು... ದೇವರು ಆನಂತ್ರ ಅವಳನ್ನ ಸೃಷ್ಟಿಸಿ, ಕೈಗೆ ದೊಡ್ಡ ಭರಣಿಯೊಂದನ್ನು ಕೊಟ್ಟು, ಮುಚ್ಚಳ ತೆಗಿಬೇಡಾಂತ ಹೇಳಿದ. ಆದ್ರೆ ಅವಳು ಮುಚ್ಚಳ ತೆಗೆದುಬಿಡೋದೇ?! ಒಳಗಿದ್ದ ಎಲ್ಲಾ ದುಷ್ಟ ಶಕ್ತಿಗಳೂ ಒಮ್ಮೆಲೇ ಹೊರನುಗ್ಗಿ ಜಗತ್ತನ್ನೆಲ್ಲಾ ಕಷ್ಟ ಕೋಟಲೆಗಳು, ಅರಿಷಡ್ವರ್ಗ ಆವರಿಸಿಕೊಂಡವು!'

'ಆದ್ರೆ ಅದಕ್ಕೂ ಈ ಪಂಡೋರಾ ಪೇಪರ್ಸ್‌ಗೂ ಏನ್ರೀ ಸಂಬಂಧ?'

'ಇದೆ, ಈ ಪೇಪರ್‌ಗಳು ಜಗತ್ತಿನ ಪ್ರಭಾವಿ ರಾಜಕಾರಣಿಗಳು ಮತ್ತು ಶ್ರೀಮಂತರ ಕಳ್ಳ ಬಂಡವಾಳಗಳ ಮಾಹಿತಿಯನ್ನು, ಪಂಡೋರಾಳ ಪೆಟ್ಟಿಗೆಯಿಂದ ಹೊರಬಿದ್ದ ದುಷ್ಟ ಶಕ್ತಿಗಳಂತೆ ಬಯಲು ಮಾಡಿವೆ. ನಮ್ಮ ದೇಶದಲ್ಲಿ ದಿವಾಳಿ ಅಂತ ಘೋಷಿಸಿಕೊಂಡಿರುವ ಕೆಲವರೂ ಸೇರಿದಂತೆ ಮುನ್ನೂರು ಜನರ ಸಾವಿರಾರು ಕೋಟಿ ರೂಪಾಯಿ ಆಸ್ತಿಪಾಸ್ತಿ ತೆರಿಗೆರಹಿತ ದೇಶಗಳಲ್ಲಿದೆಯಂತೆ!'

'ಭಾರತ ಸರ್ಕಾರ ಈ ಬಗ್ಗೆ ಸಮಗ್ರ ತನಿಖೆ ಮಾಡುತ್ತಂತಲ್ವೇ?'

'ಆದ್ರೆ, ನಮ್ಮ ದೇಶದಲ್ಲಿ ತನಿಖಾ ವರದಿಗಳ ಗತಿ ಏನಾಗುತ್ತೆ ಅನ್ನೋದು ಗೊತ್ತೇ ಇದೆ!'

ಅರ್ಥವಾಗದೆ, ಮಡದಿ ನನ್ನತ್ತ ಪಿಳಿಪಿಳಿ ನೋಡಿದಳು!

ಸಂಗತ

ಗುಂಪು ಅಧ್ಯಯನದಿಂದ ಗಮನಾರ್ಹ ಉನ್ನತಿ

ಸಂಪೂರ್ಣ ಕಲಿಕಾಕೇಂದ್ರಿತವಾದ ಗುಂಪು ಅಧ್ಯಯನ ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸುತ್ತದೆ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಮಾನವ ಮೂಲತಃ ಸಂಘಜೀವಿ. ಕುಟುಂಬವಾಸಿಯಾಗಿ ವೈಯಕ್ತಿಕ ಹಿತಾಸಕ್ತಿಯೊಂದಿಗೆ ಸಮೂಹದ ಏಳ್ಗೆಯನ್ನು ಬಯಸುವ ಸದಸ್ಯರ ತಂಡವನ್ನು ಕಟ್ಟಿಕೊಂಡು ಗುಂಪಿನಲ್ಲಿ ಒಟ್ಟಿಗೆ ಬದುಕುವುದು ಅವನ ಎಲ್ಲಾ ಕಾಲದ ಆದ್ಯತೆ. ಗುಂಪಿನ ಸದಸ್ಯರುಗಳಲ್ಲಿನ ಪರಸ್ಪರ ಒಮ್ಮತ, ಪ್ರೀತಿ, ಕಕ್ಕುಲಾತಿ, ಸಹಕಾರ, ಸೌಹಾರ್ದ, ಶಿಸ್ತು-ಶ್ರದ್ಧೆಯಂತಹ ಗುಣಗಳ ಕಾರಣಕ್ಕೆ ಅಲ್ಲೊಂದು 'ಗುಂಪಿನ ಮನಸು' ಕಾಣಸಿಗುತ್ತದೆ. ಕುಟುಂಬ, ಸಮಾಜ, ಶಾಲೆ ಮತ್ತು ಸಂಘ-ಸಂಸ್ಥೆಗಳಲ್ಲಿನ ಕಾರ್ಯಚಟುವಟಿಕೆಗಳಲ್ಲಿ ಗುಂಪಿನ ಮಾನಸಿಕತೆಯ ಪ್ರಾಮುಖ್ಯ ಢಾಳಾಗಿ ಪ್ರತಿಫಲಿಸುತ್ತದೆ.

ಔಪಚಾರಿಕ ಕಲಿಕೆಯಲ್ಲಿ ಶಾಲಾ ಕಾಲೇಜುಗಳದ್ದು ಮಹತ್ವದ ಪಾತ್ರ. ಆದರೂ ತರಗತಿಯ ಪಾಠದಲ್ಲಿ ಕೆಲವಷ್ಟು ಸಂಗತಿಗಳು ಮಕ್ಕಳ ಗ್ರಹಿಕೆಗೆ ನಿಲುಕದೇ ಹೋಗಬಹುದು. ಮಕ್ಕಳಲ್ಲಿನ ವೈಯಕಿಕ ಭಿನ್ನತೆ, ಮುಖ್ಯವಾಗಿ ಅವರ ಆಸಕ್ತಿ-ಕುತೂಹಲ, ಮಾನಸಿಕ ಸಿದ್ಧತೆ, ಆರೋಗ್ಯ ಇವೆಲ್ಲಾ ಕಲಿಕೆಯಲ್ಲಿ ಪ್ರಭಾವ ಬೀರುವ ಅಂಶಗಳು. ಕೆಲವು ವಿದ್ಯಾರ್ಥಿಗಳು, ಶಿಕ್ಷಕರು ನೀಡುವ ಒಂದೇ ವಿವರಣೆಯಲ್ಲಿ ಅರ್ಥೈಸಿಕೊಂಡರೆ, ಕೆಲವರಿಗೆ ಪುನರಾವರ್ತನೆ ಬೇಕು. ಮತ್ತೆ ಕೆಲವರಿಗೆ ಬರೆದು ಕಲಿತ ಮೇಲೆಯೇ ಪರಿಕಲ್ಪನೆ ಸ್ಪಷ್ಟಗೊಳ್ಳುತ್ತದೆ. ಇನ್ನು ಕೆಲವರಿಗಂತೂ ಅರ್ಥವಾಗದೇ ಉಳಿದ ಅರ್ಧಂಬರ್ಧ ಭಾಗವು ಪೂರ್ಣಗೊಳ್ಳುವುದು ಮನೆಯ ಓದಿನಲ್ಲಿ ಮಾತ್ರ. ಹಾಗಾಗಿ, ಅಂದಿನ ಪಾಠವನ್ನು ಅಂದೇ ಮನನ ಮಾಡಿಕೊಂಡಲ್ಲಿ ಕಲಿಕಾಂಶಗಳು ಸ್ಮೃತಿಪಟಲದಲ್ಲಿ ಗಟ್ಟಿಗೊಳ್ಳುತ್ತವೆ.

ಪಾಠದಲ್ಲಿಯ ಅರ್ಥವಾಗದ ಮತ್ತು ಅಸ್ಪಷ್ಟ ಸಂಗತಿಗಳು ಮಕ್ಕಳಿಗೆ ಯಾವಾಗಲೂ ಕಲಿಕೆಯಿಂದ ದೂರವೇ ಉಳಿದುಬಿಡುತ್ತವೆ. ಆಗೆಲ್ಲಾ ವಿದ್ಯಾರ್ಥಿಗಳು ತಮ್ಮ ಶಿಕ್ಷಕರನ್ನು ಸಂಪರ್ಕಿಸಿ, ಚರ್ಚಿಸಿ ಅರ್ಥವಾಗದ ವಿವರಣೆ, ಪರಿಕಲ್ಪನೆಗಳನ್ನು ಪರಿಹರಿಸಿಕೊಳ್ಳಬೇಕಾಗುತ್ತದೆ. ಕೆಲವೊಮ್ಮೆ ಶಿಕ್ಷಕರನ್ನು ಪದೇಪದೇ ಭೇಟಿ ಮಾಡಲು ವಿದ್ಯಾರ್ಥಿಗಳು ಹಿಂಜರಿಯುವುದಿದೆ. ಅಂತಹ ಸಂದರ್ಭದಲ್ಲಿ ವಿಷಯವನ್ನು ಅರ್ಥೈಸಿಕೊಳ್ಳಲು ತೋರುವ ಅತ್ಯುತ್ತಮ ಮಾದರಿಯೆಂದರೆ 'ಗುಂಪು ಅಧ್ಯಯನ'.

ಜವಾಬ್ದಾರಿ ಹಂಚಿಕೆಯಾಗುವ ದೃಷ್ಟಿಯಿಂದ ಕೂಡಿ ಬಾಳುವುದು ಉತ್ತಮವೆನಿಸುವಂತೆ ಕೂಡಿ ಕಲಿಯುವುದು ಕೂಡ ಸರಾಗ ಕಲಿಕಾಮಾರ್ಗವಾಗಿ ಪ್ರಮುಖವಾಗುತ್ತದೆ. ಆದರೆ ಭಾಗಿಯಾಗುವ ಗುಂಪಿಗೊಂದು ಚೌಕಟ್ಟು, ಸ್ವರೂಪಗಳು ಇರಬೇಕು. ಸಮಾನಮನಸ್ಕ ಗುಂಪು ಮುಖ್ಯವಾಗಿ ವಿವಿಧ ಹಂತದ ಕಲಿಕಾ ಸಾಮರ್ಥ್ಯವುಳ್ಳ ಮಕ್ಕಳನ್ನು ಒಳಗೊಂಡಿರಬೇಕು. ಒಂದು ಉದ್ದೇಶ ಸಾಧನೆಗಾಗಿ ತುಡಿಯುವ ಮನಸ್ಸುಳ್ಳವರು ಅಲ್ಲಿರಬೇಕು. ಭೇದಭಾವ ಮೀರಿ ಯಾವುದೇ ಹೆಚ್ಚುಗಾರಿಕೆಗೆ ಅವಕಾಶವಿಲ್ಲದಂತೆ ಸಮಾನ ಅವಕಾಶ, ಹೊಣೆಗಾರಿಕೆಯ ಆಧಾರದಲ್ಲಿ ನಿರ್ದಿಷ್ಟ ಸಂಖ್ಯೆಯ ತಂಡವನ್ನು ರಚಿಸಬೇಕು.

ಯಾರೋ ಒಬ್ಬ ಗುಂಪಿನ ನಾಯಕನಾದರೂ ಸಾಮೂಹಿಕ ಜವಾಬ್ದಾರಿ ಅಪೇಕ್ಷಣೀಯ. ಗುಂಪು ಅಧ್ಯಯನ ಮತ್ತು ಗುಂಪು ಚರ್ಚೆಗಳು ಕೇವಲ ಶಾಲಾ ಹಂತಕ್ಕೆ ಸೀಮಿತವಲ್ಲ. ವೃತ್ತಿಶಿಕ್ಷಣ ಮತ್ತು ತರಬೇತಿ ಶಾಖೆಗಳಲ್ಲಿಯೂ ನಿಗದಿತ ಸಮಸ್ಯೆ, ಸವಾಲು, ಸಂಕಷ್ಟಗಳಿಗೊಂದು ಪರಿಹಾರವನ್ನು 'ಗುಂಪು ಚರ್ಚೆ'ಯಲ್ಲಿ ಕಂಡುಕೊಳ್ಳಬಹುದು. ಸಮುದಾಯದ ಸವಾಲುಗಳಿಗೂ ವಿಸ್ತೃತ ಸಮಾಲೋಚನೆ ಮತ್ತು ಚರ್ಚೆಗಳ ತರುವಾಯ ಒಮ್ಮತದ ಅಭಿಪ್ರಾಯ ಪಡೆದು ವಿಚಾರ ಮಂಡನೆ ನಿರ್ವಹಿಸುವುದು ಹೆಚ್ಚು ಫಲದಾಯಕ. ಈಗಿನ ಕೊರೊನೋತ್ತರ ಕಾಲಘಟ್ಟವಂತೂ ಅಂತಹ ಹತ್ತಾರು ಆನ್‌ಲೈನ್ ಗುಂಪು ಸಂವಾದಗಳಿಗೆ ಬಗೆಬಗೆಯ ಆ್ಯಪ್‌ಗಳನ್ನು ಪರಿಚಯಿಸಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದೆ.

ಗುಂಪು ಅಧ್ಯಯನದಲ್ಲಿ ಅವ್ಯಕ್ತ ಸ್ವಾತಂತ್ರ್ಯವಿರುತ್ತದೆ. ಆತ್ಮೀಯ ಪರಿಸರದಲ್ಲಿ ಹಿತಕರ ಕಲಿಕಾನುಭವ ಸುಲಭ ಸಾಧ್ಯವಾಗುತ್ತದೆ. ಮಕ್ಕಳಲ್ಲಿ ಆತ್ಮವಿಶ್ವಾಸ, ಆಲಿಸುವ, ಆಲೋಚಿಸುವ, ಚಿಂತಿಸುವ ಸಾಮರ್ಥ್ಯ ವೃದ್ಧಿಸುತ್ತದೆ. ಸಂವಹನಾ ಕೌಶಲ ಬೆಳೆಯುತ್ತದೆ. ಗುಂಪಿನಲ್ಲಿ ಹಿಂಜರಿಕೆ, ಅಂಜಿಕೆ, ಅಳುಕುಗಳು ದೂರವಾಗಿ ಒತ್ತಡರಹಿತ ಸ್ಥಿತಿಯಲ್ಲಿ ಕಲಿಯುವುದು ಸಾಧ್ಯವಾಗುತ್ತದೆ. ನಿರ್ದಿಷ್ಟ ಗುರಿ, ಯೋಜನೆಗಳೊಂದಿಗೆ ರೂಪುಗೊಂಡ ಗುಂಪುಗಳಲ್ಲಿ ನಿತ್ಯದ ಪಾಠದಲ್ಲಿನ ಬಹುತೇಕ ಗೊಂದಲಗಳು ಬಗೆಹರಿಯುತ್ತವೆ.

ಎಲ್ಲರೊಟ್ಟಿಗಿನ ಚರ್ಚೆಯಲ್ಲಿ ಪಠ್ಯವಸ್ತುವಿಗೆ ಸಂಬಂಧಿಸಿದಂತೆ ಪ್ರತಿಯೊಬ್ಬರಿಗೆ ಗೊತ್ತಿರುವ ಅಂಶಗಳನ್ನು ಚರ್ಚಿಸುತ್ತಾ, ಅರ್ಥೈಸಿಕೊಳ್ಳುವ ಸುಲಭ ಮಾರ್ಗವನ್ನು ವಿನಿಮಯ ಮಾಡುತ್ತಾ, ತಾವೂ ಸ್ಪಷ್ಟಗೊಳ್ಳುತ್ತಾ, ಬೇರೆಯವರಿಗೂ ತಮ್ಮ ಅರಿವನ್ನು ಸುಲಭವಾಗಿ ದಾಟಿಸುತ್ತಾರೆ. ಕಲಿಕೆಯಲ್ಲಿ ಹಿಂದಿರುವ ವಿದ್ಯಾರ್ಥಿಗಳಿಗೆ ತಮ್ಮ ಇತಿಮಿತಿಗಳನ್ನು ಬಲ್ಲ ಆಪ್ತ ಸಹಪಾಠಿಗಳಿಂದ ಹೇಳಿಸಿಕೊಂಡು ಕಲಿಯುವುದು ಬಲುಸುಲಭ ಮತ್ತು ಅದು ಹೆಚ್ಚು ಪರಿಣಾಮಕಾರಿ. ಹೇಳಿಕೊಡುವ ವಿದ್ಯಾರ್ಥಿಗೂ ಗಮನಾರ್ಹ ಉನ್ನತಿ ಸಾಧ್ಯವಾಗುತ್ತದೆ.

ಹಾಗಿದ್ದೂ, ಗುಂಪಿನ ಕಾರ್ಯವೈಖರಿಯ ಬಗ್ಗೆ ಸದಾ ಜಾಗರೂಕರಾಗಿರಬೇಕು. ಸದಸ್ಯರಲ್ಲಿ ಸ್ಪಷ್ಟ ಗುರಿ, ಬದ್ಧತೆ ಮತ್ತು ಕ್ರಿಯಾಶೀಲತೆ ಇರದಿದ್ದಲ್ಲಿ ಗುಂಪಿನ ಚಟುವಟಿಕೆಗಳು ಅಪಾರ್ಥಗೊಳ್ಳುವುದು ಮಾತ್ರವಲ್ಲ ಗುಂಪು ರಚನೆಯ ಉದ್ದೇಶವೇ ಈಡೇರದೆ ಕೇವಲ ಗದ್ದಲ, ಕಾಲಹರಣಕ್ಕೆ ಮಿತಿಗೊಳ್ಳುವ ಅಪಾಯವಿದೆ. ಶಿವರಾಮ ಕಾರಂತರು ಹೇಳಿದಂತೆ 'ಮನಸು ಅರಳುವುದು ಏಕಾಂತದಲ್ಲಿಯೇ ಹೊರತು ಸಂತೆಯಲ್ಲಲ್ಲ...' ಹಾಗೆಯೇ ಅರಳಿದ ಮನಸಿನ ಅನಾವರಣವು ಸಮಾನ ಮನಸುಗಳ ಸಮ್ಮುಖದಲ್ಲಿ ನೆರವೇರುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ, ಒಗ್ಗಟ್ಟಿನಲ್ಲಿ ಒಲವಿದೆ, ಬಲವಿದೆ. ಜಯಿಸುವ ಛಲವೊಂದು ಇರಬೇಕಷ್ಟೇ.

ವಾಚಕರ ವಾಣಿ

ಐಪಿಎಲ್ ಬೆಟ್ಟಿಂಗ್ ದಂಧೆಗಿರಲಿ ಕಡಿವಾಣ

ಐಪಿಎಲ್ ಕ್ರಿಕೆಟ್ ಪಂದ್ಯಗಳು ಇದೀಗ ನಡೆಯುತ್ತಿವೆ. ಇತ್ತೀಚೆಗೆ ಗ್ರಾಮೀಣ ಭಾಗದ ಯುವಕರು, ವಿದ್ಯಾರ್ಥಿಗಳನ್ನು ಇವು ಹೆಚ್ಚಿಗೆ ಆಕರ್ಷಿಸುತ್ತಿವೆ. ಜೊತೆಗೆ ಬೆಟ್ಟಿಂಗ್ ದಂಧೆಗೂ ಕಾರಣವಾಗಿವೆ. ಅನೇಕರು ಈ ದಂಧೆಯಲ್ಲಿ ಸಿಲುಕುತ್ತಿದ್ದಾರೆ. ಸಂಜೆಯಾಗುತ್ತಿದ್ದಂತೆ ಆನ್‌ಲೈನ್ ಕ್ಲಾಸ್ ನೆಪ ಹೇಳಿಕೊಂಡು ಮೊಬೈಲ್‌ನಲ್ಲಿ ಕ್ರಿಕೆಟ್ ವೀಕ್ಷಿಸುತ್ತಾ ಬೆಟ್ಟಿಂಗ್ ದಂಧೆಯಲ್ಲಿ ತೊಡಗುತ್ತಿದ್ದಾರೆ. ಇವರಲ್ಲಿ ಕಾಲೇಜು ವಿದ್ಯಾರ್ಥಿಗಳು, ಯುವಕರು, ಕೂಲಿ ಕಾರ್ಮಿಕರೇ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಹಲವು ಯುವಕರು ಇದಕ್ಕಾಗಿ ಸಾಲ ಮಾಡಿ ಮೊಬೈಲ್, ಬೈಕ್ ಅಡಮಾನ ಮಾಡಿ ಕೈ ಸುಟ್ಟುಕೊಂಡಿದ್ದಾರೆ.

ಇದರಲ್ಲಿ ತೊಡಗಿದ ವಿದ್ಯಾರ್ಥಿಗಳು, ಯುವಕರು ಗೆದ್ದ ಖುಷಿಗೆ, ಸೋತ ದುಃಖಕ್ಕೆ ಮದ್ಯದ ಅಮಲಲ್ಲಿ ತೇಲಿದ ನಿದರ್ಶನಗಳು ಇವೆ. ಸಾಲ ತೀರಿಸಲಾಗದೆ ಊರು ಬಿಟ್ಟು ಹೋದ, ಆತ್ಮಹತ್ಯೆಗೆ ಶರಣಾದ ಪ್ರಕರಣಗಳೂ ಅಲ್ಲಲ್ಲಿ ವರದಿಯಾಗಿವೆ. ಇನ್ನಷ್ಟು ಜನ ಇಂತಹ ಸಂಕಷ್ಟಕ್ಕೆ ಸಿಲುಕದಂತೆ ಇದಕ್ಕೆಲ್ಲ ಕಡಿವಾಣ ಹಾಕಬೇಕಾಗಿದೆ.

ಶಿವಕುಮಾರ್ ಯರಗಟ್ಟಿಹಳ್ಳಿ, ಚನ್ನಗಿರಿ

ಅಥಣಿ ಜನರ ಹಕ್ಕೊತ್ತಾಯ ಈಡೇರಲಿ

'ಚಿಕ್ಕೋಡಿ ಜಿಲ್ಲೆಯಾಗುವುದು ಎಂದು?' ಎಂದು ವೆಂಕಟೇಶ ಮಾಚಕನೂರ ಕೇಳಿದ್ದಾರೆ (ವಾ.ವಾ., ಅ. 4). ಈ ಬೇಡಿಕೆ ಅಲ್ಲಗಳೆಯುವಂಥದ್ದಲ್ಲ. ಆದರೆ ಚಿಕ್ಕೋಡಿಯು ಜಿಲ್ಲಾ ಕೇಂದ್ರ ಬೆಳಗಾವಿಯಿಂದ ಕೇವಲ 70 ಕಿ.ಮೀ. ಅಂತರದಲ್ಲಿದೆ. ಆದರೆ ಅಥಣಿ ಗಡಿ ಭಾಗದ ಕೇಂದ್ರವಾಗಿದ್ದು, ಜಿಲ್ಲಾ ಕೇಂದ್ರದಿಂದ 150 ಕಿ.ಮೀ.ಗಿಂತಲೂ ಹೆಚ್ಚು ದೂರದಲ್ಲಿದೆ ಎಂಬುದು ಗಮನಾರ್ಹ. ಅಥಣಿಯು ರಾಜ್ಯದ ಅತಿ ದೊಡ್ಡ ತಾಲ್ಲೂಕುಗಳಲ್ಲಿ ಒಂದು. ಇಲ್ಲಿ ಎರಡು ವಿಧಾನಸಭಾ- ಅಥಣಿ ಮತ್ತು ಕಾಗವಾಡ- ಕ್ಷೇತ್ರಗಳಿವೆ. ಈ ಕಾರಣಕ್ಕಾಗಿ ಜಿಲ್ಲೆಯಾಗುವ ಎಲ್ಲ ಅರ್ಹತೆ ಪಡೆದಿದೆ. ಗಡಿಭಾಗದ ಅನಂತಪೂರ, ತೆಲಸಂಗ, ಸಾವಳಗಿ, ಸತ್ತಿ ಮತ್ತು ಹಾರೂಗೇರಿ ಹೋಬಳಿಗಳು ನೂತನ ತಾಲ್ಲೂಕುಗಳಾಗಬೇಕೆಂಬ ಬೇಡಿಕೆ ಇದೆ. ಇವು ರಚನೆಯಾದರೆ ಮತ್ತು ಅಥಣಿಗೆ ಹೊಸ ಜಿಲ್ಲೆಯಾಗುವ ಅವಕಾಶ ದೊರೆತರೆ 45 ಕಿ.ಮೀ. ಅಂತರದಲ್ಲಿ 8 ತಾಲ್ಲೂಕುಗಳು ಈ ನೂತನ ಜಿಲ್ಲೆಗೆ ಸೇರ್ಪಡೆಯಾಗಬಹುದು. ಸರ್ಕಾರ ಈ ಕುರಿತು ಗಂಭೀರ ಚಿಂತನೆ ನಡೆಸಲಿ.

ಯಾವುದೇ ಜಿಲ್ಲಾ ಕೇಂದ್ರದಿಂದ ತಾಲ್ಲೂಕು ಕೇಂದ್ರಗಳು ನಿಗದಿತ ಅಂತರದಲ್ಲಿ ಇರಬೇಕಾದುದು ಆಡಳಿತದ ಹಿತದೃಷ್ಟಿಯಿಂದ ಅಗತ್ಯ. ಆದರೆ ಸ್ವಾತಂತ್ರ್ಯ ದೊರೆತು ಏಳು ದಶಕಗಳು ಉರುಳಿದರೂ ಈ ಭಾಗದ ಜನ ನಿತ್ಯ ಕಚೇರಿ ಕೆಲಸಗಳಿಗಾಗಿ ಬೆಳಗಾವಿ ಕೇಂದ್ರಕ್ಕೆ 300ರಿಂದ 350 ಕಿ.ಮೀ. ಪ್ರಯಾಸದ ಪ್ರಯಾಣ ಮಾಡುವುದು ತಪ್ಪಿಲ್ಲ. ಈ ಪ್ರಯಾಸ ಇನ್ನೂ ಎಷ್ಟು ದಿನ? ಪ್ರಾದೇಶಿಕ ಅಸಮಾನತೆಯನ್ನು ತಕ್ಕಮಟ್ಟಿಗಾದರೂ ಕಡಿಮೆ ಮಾಡಬೇಕಾದರೆ ಅಥಣಿಯನ್ನು ರಾಜ್ಯದ 32ನೇ ಜಿಲ್ಲೆಯನ್ನಾಗಿ ಘೋಷಣೆ ಮಾಡಬೇಕು. ಇದು, ಈ ಭಾಗದ ಜನರ ಆಶಯ ಮತ್ತು ಹಕ್ಕೊತ್ತಾಯ.

ದೇವೇಂದ್ರ ಬಿಸ್ವಾಗರ, ಅಥಣಿ

ಮರೆತ ಮಾನವೀಯತೆ

ಮಹಾಲಯ ಅಮಾವಾಸ್ಯೆಯಂದು
ಎರಡು ಕಾಗೆಗಳ ಸಂಭಾಷಣೆ...
ಏ ಪಾಪ ಕಣೋ... ಆಗ್ಲಿಂದ ಕರೀತಾ ಇದ್ದಾರೆ
ಬೇಗ ಹೋಗಿ ಒಂದು ಚೂರು
ತಿಂದ ಶಾಸ್ತ್ರ ಮಾಡೋಣ
ಅವರೆಲ್ಲಾ ಊಟ ಮಾಡಲಿ, ಹಸಿದಿರುತ್ತಾರೆ...!
ಇನ್ನೊಂದು ಹೇಳಿತು...
ಏ ಇರಲಿ ಬಿಡೋ, ನಿನ್ನೆ ದಿನ ನಮ್ಮನ್ನು
ತಾರಸಿ ಮೇಲಿಟ್ಟ ಸಂಡಿಗೆ ತಿಂದುಬಿಡ್ತೀವಿ ಅಂತ
ಕೋಲಿಂದ ಹೊಡೆದು ಓಡಿಸಿದ್ದು ಮರೆತುಹೋಯ್ತಾ...?

ವಿ.ವಿಜಯೇಂದ್ರ ರಾವ್, ಬೆಂಗಳೂರು

ಈ ಬಗೆಯ ಟೀಕೆ ಸರಿಯಲ್ಲ

ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಆರ್‌ಎಸ್‌ಎಸ್ ನಿರ್ದೇಶನದಂತೆ ಕೆಲಸ ಮಾಡುತ್ತಿವೆ ಎಂದು ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರು ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಅ. 6). 'ಕಳೆದ ಹಲವು ದಿನಗಳಿಂದ ಆರ್‌ಎಸ್‌ಎಸ್ ಬಗ್ಗೆ ಅಧ್ಯಯನ ಮಾಡುತ್ತಿದ್ದೇನೆ. ಈ ಸಂಘಟನೆ ಹೇಗೆ ಕೆಲಸ ಮಾಡುತ್ತದೆ ಮತ್ತು ಚುನಾಯಿತ ಸರ್ಕಾರಗಳನ್ನು ಹೇಗೆ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳುತ್ತದೆ ಎಂಬುದನ್ನು ತಿಳಿದು ಆಘಾತವಾಯಿತು. ದೇಶದ ನಾಗರಿಕ ಸೇವಾ ಅಧಿಕಾರಿಗಳೂ ಸೇರಿದಂತೆ ನಾಲ್ಕು ಸಾವಿರಕ್ಕೂ ಹೆಚ್ಚು ಅಧಿಕಾರಿಗಳು ಸಂಘದ ತರಬೇತಿ ಪಡೆದು ಕೆಲಸ ಮಾಡುತ್ತಿದ್ದಾರೆ' ಎನ್ನುವ ಮಾಹಿತಿಯನ್ನೂ ಅವರು ಜನತೆಗೆ ನೀಡಿದ್ದಾರೆ! ಆದರೆ ಟ್ವೀಟ್ ಮೂಲಕ 'ಯಾವುದೇ ಸಂಘ, ಪಕ್ಷದ ವಿರುದ್ಧ ನಾನು ಟೀಕೆ ಮಾಡಿಲ್ಲ. ಆರ್‌ಎಸ್‌ಎಸ್ ಕುರಿತು ಕೆಲವು ಲೇಖಕರು ಬರೆದ ಪುಸ್ತಕಗಳನ್ನು ಓದಿದ್ದು, ಆ ಅಂಶಗಳನ್ನಷ್ಟೇ ಹೇಳಿದ್ದೇನೆ' ಎಂದಿದ್ದಾರೆ. ಕುಮಾರಸ್ವಾಮಿಯವರು ಆಡಿದರೆನ್ನಲಾದ ಮಾತುಗಳಿಗೂ ಅವರ ಟ್ವೀಟಿಗೂ ಇರುವ ವೈರುಧ್ಯ ಗಮನಾರ್ಹ! ಕುಮಾರಸ್ವಾಮಿ ಅವರಿಗೆ ಆರ್‌ಎಸ್‌ಎಸ್‌ನ ಪ್ರಭಾವದ ಬಗ್ಗೆ ಪರಿಚಯವಾದುದು ತಾವು 'ಅಧ್ಯಯನ' ಮಾಡಿದ ಪುಸ್ತಕಗಳ ಮೂಲಕ, ಅಂದರೆ ಸ್ವಾನುಭವದ ಮೂಲಕವಲ್ಲ! ಆ ಪುಸ್ತಕಗಳು ಯಾವುವು ಎಂದು ಅವರು ತಿಳಿಸಿದರೆ ಒಳ್ಳೆಯದು.

ಅವರು ಹೇಳಿರುವಂತೆ, ಸಂಘದ ತರಬೇತಿ ಪಡೆದು ಕೆಲಸ ಮಾಡುತ್ತಿರುವ ಅಧಿಕಾರಿಗಳು ಯಾವ ಪಕ್ಷ ಅಧಿಕಾರದಲ್ಲಿದ್ದಾಗ ನೇಮಕಗೊಂಡರು? 95 ವರ್ಷಗಳ ಹಿಂದೆ ರೂಪುಗೊಂಡ ಸಂಘದ ವರ್ಚಸ್ಸು ಕುಂದಿಲ್ಲ. ಪ್ರಕೃತಿ ವಿಕೋಪದಂತಹ ಸಂಕಷ್ಟದ ಸಮಯದಲ್ಲಿ ಅದು ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ಜೆಡಿಎಸ್ ಒಳಗೊಂಡು ಯಾವುದೇ ವಿರೋಧ ಪಕ್ಷವಾದರೂ ಇಂಥ ಒಂದು ಶಿಸ್ತಿನ ಸೇವಾ ತಂಡವನ್ನು ಕಟ್ಟಿದೆಯೇ? ಆರ್‌ಎಸ್‌ಎಸ್‌ನ ಸಿದ್ಧಾಂತ ಮತ್ತು ಧೋರಣೆಗಳು ಕುಮಾರಸ್ವಾಮಿ ಅವರಿಗೆ ಸಮ್ಮತ ಅಲ್ಲ, ಸರಿಯೆ. ಆದರೆ ಅದೊಂದು ವಿನಾಶಕಾರಿ ಸಂಘಟನೆ ಎಂದು ಟೀಕಿಸುವುದು, ನಿರ್ಲಿಪ್ತ ಭಾವದಿಂದ ಇರಬೇಕಾದ ರಾಜಕಾರಣಿಗೆ ಸಲ್ಲದು. ಯಾರೋ ಬರೆದುದು ನಮ್ಮ ತೀರ್ಮಾನಗಳಿಗೆ ಆಧಾರವಾಗಬೇಕೆ? ಸ್ವಂತಿಕೆಗೆ ಆಗ ಏನು ಅರ್ಥ?

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಜೆಪಿಗೆ ಲಾಭ; ಕಾಂಗ್ರೆಸ್ ಕಳೆದುಕೊಂಡಿದ್ದು ಹೆಚ್ಚು; ನಂತರದ ಸ್ಥಾನದಲ್ಲಿ ಬಿಎಸ್‌ಪಿ–ಎಡಿಆರ್ ವಿಶ್ಲೇಷಣೆ

ರಾಜಕಾರಣಿಗಳ ಪಕ್ಷಾಂತರ ಪ್ರಹಸನ

2014ರಲ್ಲಿ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕದ ಏಳು ವರ್ಷಗಳಲ್ಲಿ ಪಕ್ಷಾಂತರ ವಿಪರೀತ ಎನಿಸುವಷ್ಟು ನಡೆದಿದೆ. ಎಲ್ಲ ಪಕ್ಷಗಳನ್ನೂ ಇದು ಬಾಧಿಸಿದೆ. ಆದರೆ ಅತಿಹೆಚ್ಚು ಕಳೆದುಕೊಂಡಿರುವುದು ಕಾಂಗ್ರೆಸ್ ಪಕ್ಷ. ಬಿಜೆಪಿಗೆ ಅತಿಹೆಚ್ಚಿನ ಜನರು ವಲಸೆ ಬಂದಿದ್ದಾರೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ತಿಳಿಸಿದೆ

ಕಾಂಗ್ರೆಸ್

ಏಳು ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷದ ಹಲವು ಚುನಾವಣಾ ಅಭ್ಯರ್ಥಿಗಳು, ಸಂಸದರು ಮತ್ತು ಶಾಸಕರು ಇತರ ಪಕ್ಷಗಳ ಪಾಲಾಗಿದ್ದಾರೆ. 222 ಮಂದಿ ಅಭ್ಯರ್ಥಿಗಳು, 177 ಸಂಸದರು/ಶಾಸಕರು ಪಕ್ಷವನ್ನು ತೊರೆದು ಹೊರನಡೆದಿದ್ದಾರೆ. ಮಧ್ಯಪ್ರದೇಶದ ಪ್ರಮುಖ ನಾಯಕ ಜ್ಯೋತಿರಾದಿತ್ಯ ಸಿಂಧಿಯಾ ಮತ್ತವರ ಬಣದ ಹಲವು ಶಾಸಕರು ಪಕ್ಷದ ವಿರುದ್ಧ ಬಂಡಾಯವೆದ್ದು, ಬಿಜೆಪಿಗೆ ಹೋಗಿದ್ದಾರೆ.

ಒಟ್ಟಾರೆ 399 ರಾಜಕಾರಣಿಗಳು ಕಾಂಗ್ರೆಸ್‌ಗೆ ವಿದಾಯ ಹೇಳಿದ್ದಾರೆ. ಇದೇ ಅವಧಿಯಲ್ಲಿ 115 ಅಭ್ಯರ್ಥಿಗಳು ಹಾಗೂ 61 ಮಂದಿ ಸಂಸದರು/ಶಾಸಕರು ಕಾಂಗ್ರೆಸ್ ತೆಕ್ಕೆಗೆ ಸೇರಿದ್ದಾರೆ.

ಬಿಜೆಪಿ

ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಕಳೆದುಕೊಂಡಿದ್ದಕ್ಕಿಂತ ಗಳಿಸಿದ್ದು ಹೆಚ್ಚು. ಬಿಜೆಪಿಯು 111 ಅಭ್ಯರ್ಥಿಗಳು ಹಾಗೂ 33 ಸಂಸದರು/ಶಾಸಕರನ್ನು ಕಳೆದುಕೊಂಡಿದೆ. 2014ರಿಂದ ಇಲ್ಲಿಯವರೆಗೆ 253 ಅಭ್ಯರ್ಥಿಗಳು ಹಾಗೂ 173 ಸಂಸದರು/ಶಾಸಕರು ಕಮಲ ಪಾಳಯವನ್ನು ಸೇರ್ಪಡೆಯಾಗಿದ್ದಾರೆ. ಪಂಜಾಬ್‌ನಲ್ಲಿ ನವಜೋತ್ ಸಿಂಗ್ ಸಿಧು ಅವರಂತಹ ಮುಖಂಡರು ಕಾಂಗ್ರೆಸ್‌ಗೆ ಹೋದರು.

ಬಿಎಸ್‌ಪಿ

ಕಾಂಗ್ರೆಸ್ ಬಳಿಕ ಅತಿಹೆಚ್ಚು ಜನಪ್ರತಿನಿಧಿಗಳನ್ನು ಕಳೆದುಕೊಂಡಿರುವುದು ಮಾಯಾವತಿ ನೇತೃತ್ವದ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ). 153 ಅಭ್ಯರ್ಥಿಗಳು ಹಾಗೂ 20 ಸಂಸದರು/ಶಾಸಕರು ಚುನಾವಣೆಗಳ ವೇಳೆ ಬಿಎಸ್‌ಪಿಯನ್ನು ತೊರೆದಿದ್ದಾರೆ. ಆದರೆ, 65 ಅಭ್ಯರ್ಥಿಗಳು ಹಾಗೂ 12 ಸಂಸದರು/ಶಾಸಕರು ಪಕ್ಷಕ್ಕೆ ಹೊಸದಾಗಿ ಪ್ರವೇಶ ಪಡೆದಿದ್ದಾರೆ.

ರಾಜಸ್ಥಾನದಲ್ಲಿ ಅಶೋಕ್ ಗೆಹಲೋತ್ ಸರ್ಕಾರವನ್ನು ಉಳಿಸಲು ಬಿಎಸ್‌ಪಿ ಶಾಸಕರು ಅವರ ಬೆನ್ನಿಗೆ ನಿಂತರು. ಬಿಜೆಪಿಯ ರಾಜ್ಯ ಘಟಕವನ್ನೇ ಕಾಂಗ್ರೆಸ್ ಜೊತೆ ವಿಲೀನ ಮಾಡಿರುವುದಾಗಿ ಶಾಸಕರು ಪತ್ರ ನೀಡಿದ್ದರು.

ಟಿಆರ್‌ಎಸ್

ಕೆ.ಚಂದ್ರಶೇಖರ್ ರಾವ್ ಅವರ ಟಿಆರ್‌ಎಸ್ ಪಕ್ಷವು ನಾಲ್ವರು ಚುನಾವಣಾ ಅಭ್ಯರ್ಥಿಗಳನ್ನು ಹಾಗೂ ನಾಲ್ವರು ಶಾಸಕರನ್ನು ಕಳೆದುಕೊಂಡಿದ್ದರೆ, ಇದೇ ಅವಧಿಯಲ್ಲಿ ಬೇರೆ ಪಕ್ಷಗಳಿಂದ ಅವರ ಪಕ್ಷಕ್ಕೆ 12 ಅಭ್ಯರ್ಥಿಗಳು ಹಾಗೂ 30 ಶಾಸಕರು ಸೇರ್ಪಡೆಯಾಗಿದ್ದಾರೆ.

ಬಿಜು ಜನತಾ ದಳ (ಬಿಜೆಡಿ)

ನವೀನ್ ಪಟ್ನಾಯಕ್ ನೇತೃತ್ವದ ಬಿಜೆಡಿಯ ಮೂವರು ಚುನಾವಣಾ ಅಭ್ಯರ್ಥಿಗಳು ಹಾಗೂ ಆರು ಶಾಸಕರು ಬೇರೆ ಪಕ್ಷಗಳಿಗೆ ಸೇರ್ಪಡೆಯಾಗಿದ್ದರೆ, ಬೇರೆ ಬೇರೆ ಪಕ್ಷಗಳಿಂದ 16 ಅಭ್ಯರ್ಥಿಗಳು ಮತ್ತು ಮೂವರು ಶಾಸಕರು ಬಿಜೆಡಿ ಸೇರಿದ್ದಾರೆ.

ಎಐಎಡಿಎಂಕೆ

ಎಐಎಡಿಎಂಕೆಯ ಐವರು ಅಭ್ಯರ್ಥಿಗಳು ಹಾಗೂ ಎಂಟು ಜನ ಶಾಸಕರು ಬೇರೆ ಪಕ್ಷಗಳಿಗೆ ಸೇರಿದ್ದಾರೆ. ಅದೇ ವೇಳೆಗೆ 6 ಜನ ಅಭ್ಯರ್ಥಿಗಳು ಹಾಗೂ ಇಬ್ಬರು ಶಾಸಕರು ಇತರ ಪಕ್ಷಗಳಿಂದ ಬಂದಿದ್ದಾರೆ.

ಡಿಎಂಕೆ

ಕಳೆದ ಏಳು ವರ್ಷಗಳಲ್ಲಿ ಬೇರೆ ಪಕ್ಷಗಳ ಐವರು ಅಭ್ಯರ್ಥಿಗಳು ಹಾಗೂ ಮೂವರು ಶಾಸಕರು ಡಿಎಂಕೆ ಪಕ್ಷ ಸೇರಿದ್ದಾರೆ. ಇಲ್ಲಿನ ನಾಲ್ವರು ಚುನಾವಣಾ ಅಭ್ಯರ್ಥಿಗಳು ಹಾಗೂ ಇಬ್ಬರು ಶಾಸಕರು ಬೇರೆ ಪಕ್ಷಗಳಿಗೆ ಸೇರ್ಪಡೆಯಾಗಿದ್ದಾರೆ.

ತೃಣಮೂಲ ಕಾಂಗ್ರೆಸ್

ಕಳೆದ ಏಳು ವರ್ಷಗಳಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದಿಂದ 26 ಶಾಸಕರು ಹಾಗೂ 31 ಜನ ಅಭ್ಯರ್ಥಿಗಳು ಬೇರೆ ಪಕ್ಷಕ್ಕೆ ಹೋಗಿದ್ದಾರೆ. ಅದೇ ವೇಳೆಗೆ ಬೇರೆ ಪಕ್ಷದಿಂದ 31 ಶಾಸಕರು ಹಾಗೂ 23 ಅಭ್ಯರ್ಥಿಗಳು ಟಿಎಂಸಿ ಸೇರ್ಪಡೆಯಾಗಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಆಡಳಿತಾರೂಢ ಟಿಎಂಸಿ ಪಕ್ಷದಿಂದ ಶಾಸಕರ ದೊಡ್ಡ ದಂಡೇ ಬಿಜೆಪಿ ಸೇರಿತು. ಅವರಲ್ಲಿ ಸುವೇಂದು ಅಧಿಕಾರಿ, ಮುಕುಲ್ ರಾಯ್ ಅವರಂಥ ಪ್ರಮುಖ ನಾಯಕರು ಬಿಜೆಪಿ ಸೇರಿದರು.

ಆದರೆ, ಜೂನ್‌ನಲ್ಲಿ ಬಿಜೆಪಿಯ ಶಾಸಕರಾಗಿದ್ದ ಹಾಗೂ ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷ ಸ್ಥಾನದಲ್ಲಿದ್ದ ಮುಕುಲ್ ರಾಯ್ ಮತ್ತೆ ಟಿಎಂಸಿಗೆ ಮರಳಿದ್ದಾರೆ. ಅವರೊಂದಿಗೆ, ಅವರ ಆಪ್ತರಾದ ಬಿಜೆಪಿ ಶಾಸಕರಾದ ಸುಮನ್ ರಾಯ್, ವಿಶ್ವಜಿತ್ ದಾಸ್, ತನ್ಮಯ್ ಘೋಷ್ ಕೂಡ ಟಿಎಂಸಿಗೆ ವಾಪಸಾಗಿದ್ದಾರೆ. ಬಿಜೆಪಿ ನಾಯಕ, ಕೇಂದ್ರದ ಮಾಜಿ ಸಚಿವ ಬಾಬುಲ್ ಸುಪ್ರಿಯೊ ಕಳೆದ ತಿಂಗಳು ಟಿಎಂಸಿಗೆ ಸೇರ್ಪಡೆಯಾದ ಪ್ರಮುಖರಲ್ಲಿ ಒಬ್ಬರು.

ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ ಜ್ಯೋತಿರಾದಿತ್ಯ ಸಿಂಧಿಯಾಗೆ ಭೋಪಾಲ್‌ನಲ್ಲಿ ಅದ್ದೂರಿ ಸ್ವಾಗತ –ಸಂಗ್ರಹ ಚಿತ್ರ

ಎಸ್‌ಪಿ

ಉತ್ತರ ಪ್ರದೇಶದ ಪ್ರಮುಖ ರಾಜಕೀಯ ಪಕ್ಷವಾಗಿರುವ ಸಮಾಜವಾದಿ ಪಕ್ಷದಿಂದ (ಎಸ್‌ಪಿ) ಈ ಏಳು ವರ್ಷಗಳ ಅವಧಿಯಲ್ಲಿ 60 ಅಭ್ಯರ್ಥಿಗಳು, 18 ಸಂಸದರು/ಶಾಸಕರು ಹೊರಬಂದಿದ್ದಾರೆ. ಈ ಸಮಯದಲ್ಲಿ 29 ಅಭ್ಯರ್ಥಿಗಳು ಹಾಗೂ 13 ಮಂದಿ ಸಂಸದರು/ಶಾಸಕರು ಪಕ್ಷವನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ಜೆಡಿಯು

ಜೆಡಿಯು ಪಕ್ಷದಿಂದ 59 ಅಭ್ಯರ್ಥಿಗಳು ಹಾಗೂ 12 ಮಂದಿ ಸಂಸದರು/ಶಾಸಕರು ಬೇರೆ ಪಕ್ಷಕ್ಕೆ ಹೋಗಿದ್ದರೆ, ಇತರ ಪಕ್ಷದಿಂದ 23 ಅಭ್ಯರ್ಥಿಗಳು ಹಾಗೂ 12 ಮಂದಿ ಶಾಸಕರು ಸೇರ್ಪಡೆಯಾಗಿದ್ದಾರೆ.

ಎನ್‌ಸಿಪಿ

ಎನ್‌ಸಿಪಿಯ 52 ಅಭ್ಯರ್ಥಿಗಳು ಹಾಗೂ 25 ಶಾಸಕರು ಬೇರೆ ಪಕ್ಷಗಳಿಗೆ ಸೇರ್ಪಡೆಯಾಗಿದ್ದರೆ, ಇದೇ ಅವಧಿಯಲ್ಲಿ ಇತರ ಪಕ್ಷಗಳ 41 ಅಭ್ಯರ್ಥಿಗಳು ಹಾಗೂ 8 ಶಾಸಕರು ಎನ್‌ಸಿಪಿ ಸೇರಿದ್ದಾರೆ.

ಸಿಪಿಐ– ಸಿಪಿಎಂ

ಸಿಪಿಐನ 13 ಅಭ್ಯರ್ಥಿಗಳು ಹಾಗೂ ಇಬ್ಬರು ಶಾಸಕರು ಬೇರೆ ಪಕ್ಷಕ್ಕೆ ಸೇರಿದ್ದರೆ, ಕೇವಲ ಐವರು ಅಭ್ಯರ್ಥಿಗಳು ಇತರ ಪಕ್ಷಗಳಿಂದ ಬಂದಿದ್ದಾರೆ. ಸಿಪಿಎಂನ 13 ಅಭ್ಯರ್ಥಿಗಳು ಹಾಗೂ ಆರು ಜನ ಶಾಸಕರು ಬೇರೆ ಪಕ್ಷಗಳಿಗೆ ಹೋಗಿದ್ದರೆ, ಬೇರೆ ಪಕ್ಷದಿಂದ ಒಬ್ಬ ಅಭ್ಯರ್ಥಿ ಮಾತ್ರ ಈ ಪಕ್ಷ ಸೇರಿದ್ದಾರೆ.

ಸ್ವಹಿತಾಸಕ್ತಿಯ ಮೇಲುಗೈ

ರಾಜಕಾರಣಿಗಳ ಸತತ ಪಕ್ಷಾಂತರದ ಹಿಂದಿನ ಅತ್ಯಂತ ಸಮರ್ಥನೀಯ ಕಾರಣಗಳನ್ನು ಎಡಿಆರ್ ಮುಂದಿಟ್ಟಿದೆ. ಮೌಲ್ಯಾಧಾರಿತ ರಾಜಕೀಯದ ಅನುಪಸ್ಥಿತಿ, ಹಣ ಮತ್ತು ಅಧಿಕಾರದ ಬಗೆಗಿನ ಅದಮ್ಯ ಹಂಬಲ, ಹಣ ಮತ್ತು ತೋಳ್ಬಲಗಳ ನಡುವಿನ ನಿಕಟ ನಂಟು, ದಕ್ಷ, ಪ್ರಾಮಾಣಿಕ ಮತ್ತು ವಿಶ್ವಾಸಾರ್ಹ ನಾಯಕರ ಕೊರತೆಯು ಪಕ್ಷ ಬದಲಾವಣೆಗೆ ಪ್ರೇರೇಪಿಸುತ್ತವೆ ಎಂದು ಎಡಿಆರ್ ವಿಶ್ಲೇಷಿಸಿದೆ.

ರಾಜಕೀಯ ಪಕ್ಷವು ಹೇಗೆ ಕಾರ್ಯನಿರ್ವಹಿಸಬೇಕು ಎಂಬುದರ ಕುರಿತ ಕಾನೂನಿನ ಅನುಪಸ್ಥಿತಿಯೂ ಮುಖ್ಯವಾದ ಕಾರಣವಾಗಿದೆ. ಜೊತೆಗೆ ಕ್ರಿಮಿನಲ್ ಹಿನ್ನೆಲೆಯವರು ರಾಜಕೀಯ ಪ್ರವೇಶಿಸಲು ಯಾವುದೇ ಅಡೆತಡೆ ಇಲ್ಲದಿರುವುದೂ ಒಂದು ಕಾರಣ ಎಂದಿದೆ.

ಜನರಿಂದ ಮತ್ತು ಜನರಿಗಾಗಿ ಎಂಬ ಪ್ರಜಾಪ್ರಭುತ್ವದ ತತ್ವಕ್ಕಿಂತ ರಾಜಕಾರಣಿಗಳ ಸ್ವಂತ ಹಿತಾಸಕ್ತಿ ಮುಖ್ಯವಾಗಿದೆ. ಈ ಪ್ರವೃತ್ತಿಗಳನ್ನು ನಿಯಂತ್ರಿಸದ ಹೊರತು, ನಮ್ಮ ಪ್ರಸ್ತುತ ಚುನಾವಣಾ ಮತ್ತು ರಾಜಕೀಯ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ ಎಂದು ವರದಿ ಎಚ್ಚರಿಸಿದೆ.

ವಿಶ್ಲೇಷಣೆ ಹೇಗೆ?

1,133 ಅಭ್ಯರ್ಥಿಗಳು ಮತ್ತು 500 ಸಂಸದರು/ ಶಾಸಕರು ಚುನಾವಣೆ ವೇಳೆ ಸಲ್ಲಿಸಿದ ಪ್ರಮಾಣಪತ್ರಗಳನ್ನು ಆಧರಿಸಿ ಎಡಿಆರ್ ವಿಶ್ಲೇಷಣೆ ನಡೆಸಿದೆ. 2014ರಿಂದ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಆಗಿರುವ ಪಕ್ಷಾಂತರಗಳು ಹಾಗೂ ಉಪ ಚುನಾವಣೆಗಳನ್ನು ಇದು ಒಳಗೊಂಡಿದೆ. ಕರ್ನಾಟಕ, ಮಧ್ಯಪ್ರದೇಶ, ಅರುಣಾಚಲ ಪ್ರದೇಶ, ಗೋವಾ, ಮಣಿಪುರ ಸರ್ಕಾರಗಳು ಪತನವಾದ ವೇಳೆ ಶಾಸಕರು ಪಕ್ಷಾಂತರದ ಮೊರೆ ಹೋಗಿದ್ದಾರೆ.

ಟಿಡಿಪಿ

ತೆಲುಗು ದೇಶಂ ಪಕ್ಷ (ಟಿಡಿಪಿ) ಯಿಂದ ಕಳೆದ ಏಳು ವರ್ಷಗಳಲ್ಲಿ 32 ಅಭ್ಯರ್ಥಿಗಳು ಹಾಗೂ 26 ಶಾಸಕರು ಹೊರ ನಡೆದಿದ್ದಾರೆ. ಅದೇ ವೇಳೆಗೆ, ಬೇರೆ ಪಕ್ಷಗಳ 11 ಜನ ಚುನಾವಣಾ ಅಭ್ಯರ್ಥಿಗಳು ಹಾಗೂ 16 ಶಾಸಕರು ಟಿಡಿಪಿ ಸೇರಿದ್ದಾರೆ.

ಆಧಾರ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ವರದಿ

ಎನ್‌ಸಿಬಿ ತಂಡದಲ್ಲಿ ಹೊರಗಿನವರು: ಎನ್‌ಸಿಪಿ

ಪ್ರಜಾವಾಣಿ ವಾರ್ತೆ

ಮುಂಬೈ: ಐಷಾರಾಮಿ ಹಡಗಿನ ಮೇಲೆ ದಾಳಿ ನಡೆಸಿ, ಡ್ರಗ್ಸ್ ಸೇವನೆ ಆರೋಪದ ಮೇಲೆ ಬಾಲಿವುಡ್ ನಟ ಶಾರುಖ್ ಖಾನ್ ಪುತ್ರ ಆರ್ಯನ್ ಖಾನ್ ಮತ್ತು ಆತನ ಸ್ನೇಹಿತ ಅರ್ಬಾಜ್ ಮರ್ಚೆಂಟ್‌ನನ್ನು ವಶಕ್ಕೆ ತೆಗೆದುಕೊಂಡು ಕರೆದೊಯ್ದವರು ರಾಷ್ಟ್ರೀಯ ಮಾದಕ ದ್ರವ್ಯ ನಿಯಂತ್ರಣ ಸಂಸ್ಥೆಗೆ (ಎನ್‌ಸಿಬಿ) ಸೇರಿದವರೇ ಅಲ್ಲ ಎಂದು ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷ (ಎನ್‌ಸಿಪಿ) ಬುಧವಾರ ಆರೋಪಿಸಿದೆ.

ಎನ್‌ಸಿಪಿ ವಕ್ತಾರ ಮತ್ತು ಮಹಾರಾಷ್ಟ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ನವಾಬ್ ಮಲಿಕ್ ಈ ಆರೋಪ ಮಾಡಿದ್ದಾರೆ. ಅವರಿಬ್ಬರನ್ನು ಹಡಗಿನಿಂದ ಎನ್‌ಸಿಬಿ ಕಚೇರಿಗೆ ಕರೆದೊಯ್ದವರನ್ನು ಕೆ. ಪಿ. ಗೋಸವಿ ಮತ್ತು ಮನೀಶ್ ಭಾನುಶಾಹಿ ಎಂದು ಮಲಿಕ್ ಗುರುತಿಸಿದ್ದಾರೆ. ಆರ್ಯನ್ ಖಾನ್‌ನನ್ನು ಕರೆದುಕೊಂಡು ಹೋದವರು ಮತ್ತು ಎನ್‌ಸಿಬಿ ಕಚೇರಿಯಲ್ಲಿ ಆರ್ಯನ್ ಜೊತೆ ಸೆಲ್ಫಿ ತೆಗೆದುಕೊಂಡವರು ಗೋಸವಿ. ಮರ್ಚೆಂಟ್‌ನನ್ನು ಕರೆದುಕೊಂಡು ಹೋದವರು ಭಾನುಶಾಹಿ ಎಂದು ಅವರು ಹೇಳಿದ್ದಾರೆ.

ಗೋಸವಿ ಅವರು ಕೌಲಾಲಂಪುರದ ಖಾಸಗಿ ಪತ್ತೇದಾರಿ ಸಂಸ್ಥೆಯ ಉದ್ಯೋಗಿ. ಭಾನುಶಾಹಿಗೆ ಬಿಜೆಪಿ ಜೊತೆ ಸಂಪರ್ಕವಿದೆ ಎಂದು ಅವರು ಆರೋಪಿಸಿದ್ದಾರೆ. ಜೊತೆಗೆ, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ, ಮಹಾರಾಷ್ಟ್ರ ಬಿಜೆಪಿ ನಾಯಕ ದೇವೇಂದ್ರ ಫಡಣವೀಸ್ ಅವರ ಜೊತೆಗೆ ಭಾನುಶಾಹಿ ಇರುವ ಹಲವಾರು ಫೋಟೊಗಳನ್ನೂ ಅವರು ಬಿಡುಗಡೆ ಮಾಡಿದ್ದಾರೆ.

ಆರ್ಯನ್ ಖಾನ್ ಎನ್‌ಸಿಬಿ ವಶದಲ್ಲಿ –ಪಿಟಿಐ ಚಿತ್ರ

ಆ ಇಬ್ಬರು ವ್ಯಕ್ತಿಗಳು ಯಾರು ಮತ್ತು ಹಡಗಿನ ಮೇಲಿನ ದಾಳಿ ವೇಳೆ ಅವರು ಏಕೆ ಇದ್ದರು? ಅವರಿಬ್ಬರ ಜೊತೆ ಬಿಜೆಪಿಗೆ ಇರುವ ಸಂಪರ್ಕ ಯಾವ ರೀತಿಯದ್ದು ಎಂದು ಬಿಜೆಪಿ ಮತ್ತು ಎನ್‌ಸಿಬಿ ಸ್ಪಷ್ಟಪಡಿಸಲಿ. ಇದೊಂದು ದುರುದ್ದೇಶಪೂರ್ವಕ ದಾಳಿ. ಇದೊಂದು ನಕಲಿ ಕಾರ್ಯಾಚರಣೆ ಎಂದು ಅವರು ಹೇಳಿದ್ದಾರೆ.

ಈ ಆರೋಪಗಳಿಗೆ ಎನ್‌ಸಿಬಿ ಮುಂಬೈ ವಲಯ ನಿರ್ದೇಶಕರಾದ ಸಮೀರ್ ವಾಂಖೆಡೆ ಇನ್ನೂ ಪ್ರತಿಕ್ರಿಯೆ ನೀಡಿಲ್ಲ.

ಮುಂದ್ರಾ ಪ್ರಕರಣ ಮರೆಮಾಚುವ ಯತ್ನ? ಕಾಂಗ್ರೆಸ್ ಆರೋಪ

ಮುಂದ್ರಾ ಬಂದರಿನಲ್ಲಿ ಭಾರಿ ಪ್ರಮಾಣದ ಡ್ರಗ್ಸ್ ವಶಪಡಿಸಿಕೊಂಡ ಪ್ರಕರಣದಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ಕಾರ್ಡೀಲಿಯಾ ಐಷಾರಾಮಿ ಹಡಗಿನ ಮೇಲೆ ದಾಳಿ ನಡೆಸಲಾಗಿದೆಯೇ ಎಂಬ ಕುರಿತು ತಿಳಿದುಕೊಳ್ಳಬೇಕಿದೆ. ಇದಕ್ಕಾಗಿ ಉನ್ನತ ಮಟ್ಟದ ತನಿಖೆ ನಡೆಸುವಂತೆ ಮಹಾರಾಷ್ಟ್ರದ ಮಹಾ ವಿಕಾಸ ಅಗಾಡಿ ನೇತೃತ್ವದ ಸರ್ಕಾರವನ್ನು ಕಾಂಗ್ರೆಸ್ ಒತ್ತಾಯಿಸಿದೆ.

ಡ್ರಗ್ಸ್ ಜಾಲದ ಜತೆಗೆ ಬಿಜೆಪಿಯ ಸಂಪರ್ಕವನ್ನು ಈ ಮೊದಲೂ ಗೋವಾದಲ್ಲಿ, ಸ್ಯಾಂಡಲ್‌ವುಡ್ ಡ್ರಗ್ ರಾಕೆಟ್‌ನಲ್ಲಿ ಮತ್ತು ಸುಶಾಂತ್ ಸಿಂಗ್ ರಜಪೂತ್ ಕೊಲೆ ಪ್ರಕರಣಗಳಲ್ಲಿ ನೋಡಿದ್ದೇವೆ. ಹಾಗಾಗಿ ಮುಂದ್ರಾ ಪ್ರಕರಣವನ್ನು ಮರೆ ಮಾಚಲು ಬಿಜೆಪಿ ಪ್ರಯತ್ನಿಸುತ್ತಿದೆಯೇ ಎಂದು ತಿಳಿಯಬೇಕು. ಇದು ದೇಶದ ವಿರುದ್ಧ ಮಾಡುತ್ತಿರುವ ಗಂಭೀರ ಸಂಚು ಎಂದು ಮಹಾರಾಷ್ಟ್ರ ಕಾಂಗ್ರೆಸ್ ವಕ್ತಾರ ಸಚಿನ್ ಸಾವಂತ್ ಹೇಳಿದ್ದಾರೆ. ಜೊತೆಗೆ, ಸಚಿವ ನವಾಬ್ ಮಲಿಕ್ ಅವರು ಮಾಡಿರುವ ಆರೋಪಗಳ ಕುರಿತೂ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

ಎನ್‌ಸಿಬಿಯ ದಾಳಿಯಲ್ಲಿ ಹೊರಗಿನ ವ್ಯಕ್ತಿಗಳು ಹೇಗೆ ಪಾಲ್ಗೊಂಡರು. ಅವರಿಗೆ ಯಾವ ಅಧಿಕಾರ ಇದೆ. ಬಿಜೆಪಿಯ ಜತೆ ನಂಟು ಇರುವ ವ್ಯಕ್ತಿ ಮತ್ತು ಎನ್‌ಸಿಬಿ ಉದ್ಯೋಗಿ ಅಲ್ಲದ ಇನ್ನೊಬ್ಬ ವ್ಯಕ್ತಿ ಆರೋಪಿಗಳನ್ನು ವಶಕ್ಕೆ ತೆಗೆದುಕೊಂಡಿದ್ದು ಹೇಗೆ? ಅವರ ವಾಹನದ ಮೇಲೆ 'ಪೊಲೀಸ್' ಎಂದು ಏಕೆ ಬರೆದಿತ್ತು. ಈ ಎಲ್ಲಾ ಪ್ರಶ್ನೆಗಳಿಗೆ ಬಿಜೆಪಿ ಮತ್ತು ಎನ್‌ಸಿಬಿಯಿಂದ ನಮಗೆ ಉತ್ತರ ಬೇಕು ಎಂದು ಅವರು ಹೇಳಿದ್ದಾರೆ.

ಕಳೆದ ತಿಂಗಳು, ಗುಜರಾತ್‌ನ ಮುಂದ್ರಾ ಬಂದರಿನಲ್ಲಿ ಕಂದಾಯ ಗುಪ್ತಚರ ನಿರ್ದೇಶನಾಲಯವು 3,000 ಕೇಜಿ ಅಫ್ಗನ್ ಹೆರಾಯಿನ್‌ಅನ್ನು ವಶಪಡಿಸಿಕೊಂಡಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಿಜೆಪಿ ಸಂಸದ ವರುಣ್ ಗಾಂಧಿ ಅವರು ತಮ್ಮ ಟ್ವಿಟರ್ 'ಬಯೊ'ದಲ್ಲಿ 'ಬಿಜೆಪಿ' ಪದವನ್ನು ತೆಗೆದುಹಾಕಿದ್ದಾರೆ ಎಂಬ ವದಂತಿ ಎಲ್ಲೆಡೆ ಹರಡಿದೆ. ಲಖಿಂಪುರ-ಖೇರಿ ಹಿಂಸಾಚಾರದ ಬಳಿಕ ಈ ವಿದ್ಯಮಾನ ಜರುಗಿದೆ ಎನ್ನಲಾಗಿದೆ. ಘಟನೆಯಲ್ಲಿ ಮೃತಪಟ್ಟ ರೈತರಿಗೆ ಶ್ರದ್ಧಾಂಜಲಿ ಸಲ್ಲಿಸಿರುವ ಅವರು ಸಿಬಿಐ ತನಿಖೆಗೆ ಆಗ್ರಹಿಸಿದ್ದಾರೆ. ತಮ್ಮ ಟ್ವಿಟರ್ ಖಾತೆಯಲ್ಲಿ ಪಕ್ಷದ ಹೆಸರನ್ನು ತೆಗೆದುಹಾಕಿರುವ ಅವರು ಬಿಜೆಪಿ ತೊರೆಯುವ ಮುನ್ಸೂಚನೆ ಎಂಬ ಅರ್ಥದಲ್ಲಿ ಚರ್ಚೆಯಾಗುತ್ತಿದೆ.

ವರುಣ್ ಗಾಂಧಿ ಅವರ ಟ್ವಿಟರ್ ಖಾತೆಯ 'ಬಯೊ'ದಲ್ಲಿ ಬಿಜೆಪಿ ಪದ ಅಳಿಸಿದ್ದಾರೆ ಎಂಬುದು ಸರಿಯಾದ ಮಾಹಿತಿ ಅಲ್ಲ ಎಂದು ಇಂಡಿಯಾ ಟುಡೇ ವರದಿ ಮಾಡಿದೆ. ಅವರು 2014ಕ್ಕಿಂತ ಮೊದಲು ತಮ್ಮ ಬಯೊದಲ್ಲಿ ಬಿಜೆಪಿ ಪದ ಉಲ್ಲೇಖಿಸಿದ್ದರು. ಆ ಬಳಿಕ ಅದರ ಉಲ್ಲೇಖವಿರಲಿಲ್ಲ. 2019ರಲ್ಲಿ ಚುನಾವಣೆಯಲ್ಲಿ ಗೆದ್ದ ಬಳಿಕ ತಮ್ಮ ಕ್ಷೇತ್ರ 'ಪಿಲಿಭಿತ್' ಹೆಸರನ್ನು ಸೇರಿಸಿದ್ದನ್ನು ಹೊರತುಪಡಿಸಿದರೆ, ಬೇರೇನನ್ನೂ ಅವರು ಸೇರಿಸಿಲ್ಲ ಅಥವಾ ತೆಗೆದಿಲ್ಲ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಸೌಂದರ್ಯಕಾರಕರು

ಮಂದಿರದ ಶಿಲ್ಪಿ ಯಂತ್ರಗಳ ಯೋಜಕ ರಾಜ್ಯ|
ಸಂಧಾನಿ ವಿಜ್ಞಾನಿಯುದ್ಯೋಗದಾನಿ||
ಮಂದಿಮುಂದಾಳು ಜನಬಾಂಧವ್ಯಪೋಷಕನು|
ಸೌಂದರ್ಯಕರರಿವರು – ಮಂಕುತಿಮ್ಮ ||471||

ಪದ-ಅರ್ಥ: ಯೋಜಕ = ಯೋಜಿಸುವವ, ವಿಜ್ಞಾನಿಯುದ್ಯೋಗದಾನಿ = ವಿಜ್ಞಾನಿ + ಉದ್ಯೋಗದಾನಿ, ಮಂದಿಮುಂದಾಳು = ಜನನಾಯಕ, ಸೌಂದರ್ಯಕರರಿವರು = ಸೌಂದರ್ಯಕರು + ಇವರು

ವಾಚ್ಯಾರ್ಥ: ಮಂದಿರದ ಶಿಲ್ಪಿ, ಯಂತ್ರಗಳ ಯೋಜಕ, ರಾಜಕಾರಣಿ, ವಿಜ್ಞಾನಿ, ಉದ್ಯೋಗಪತಿ, ಜನನಾಯಕ, ಸಮಾಜಸೇವಕರು, ಪೋಷಕರು ಇವರೆಲ್ಲರೂ ಪ್ರಪಂಚದ ಸೌಂದರ್ಯವನ್ನು ನಮ್ಮೆದುರಿಗೆ ತರುವವರು.

ವಿವರಣೆ: ಜಗತ್ತು ಸುಂದರವಾದದ್ದು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಈ ಸುಂದರತೆ ಬಂದದ್ದು ಎಲ್ಲಿಂದ, ಯಾರಿಂದ? ಪ್ರಪಂಚದಲ್ಲಿ ವ್ಯಕ್ತಿ ಮುಖ್ಯವೆ ಅಥವಾ ಸಮಾಜ ಮುಖ್ಯವೆ? ಈ ಪ್ರಶ್ನೆ ಅವೆರಡೂ ಬೇರೆಯಾದವುಗಳು ಎಂಬಂತೆ ಬಿಂಬಿಸುತ್ತದೆ. ಲೋಕಾನುಭವವುಳ್ಳವರಿಗೆ ಆ ಭೇದಭಾವ ಆಧಾರವಿಲ್ಲದ್ದೆಂದು ತಿಳಿಯುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಪರಿವಾರದ, ಕುಲದ, ಉದ್ಯೋಗದ, ರಾಜ್ಯವ್ಯವಸ್ಥೆಯ ಪ್ರಭಾವ ಬಿದ್ದು ಅವನನ್ನು ಬದಲಿಸುತ್ತದೆ. ಅಂತೆಯೇ ವ್ಯಕ್ತಿಯೂ ತನಗಿರುವ ಅವಕಾಶಗಳಲ್ಲಿ, ತನ್ನ ಕರ್ತವ್ಯದ ಪರಿಧಿಯಲ್ಲಿ, ಅವುಗಳ ಮೇಲೆ ಪ್ರಭಾವವನ್ನು ಬೀರುತ್ತಲೇ ಬರುತ್ತಾನೆ. ಹೀಗೆ ವ್ಯಷ್ಟಿ ಸಮಷ್ಟಿಗಳ ಅನ್ಯೋನ್ಯ ಪರಿಣಾಮವೇ ಪ್ರಪಂಚದ ಸುಂದರತೆ. ಮನುಷ್ಯ ಹರಿಯುವ ನದಿಯನ್ನು ನೋಡಿದ. ಮಳೆಗಾಲದಲ್ಲಿ ತುಂಬಿ ಹರಿಯುತ್ತಿದ್ದ ನದಿ ಬೇಸಿಗೆಯಲ್ಲಿ ಒಣಗಿ ಹೋಗಿತ್ತು, ತನಗೆ ಮತ್ತು ತನ್ನ ಮರಗಿಡಗಳಿಗೆ ಆಗ ಕೊರತೆಯಾಗಬಾರದೆಂದು ನೀರಿಗೆ ಅಡ್ಡಲಾಗಿ ಕಟ್ಟೆ ಕಟ್ಟಿದ. ಕಾಡನ್ನು ಕಡಿದು ವಸತಿಯನ್ನು ನಿರ್ಮಿಸಿಕೊಂಡ. ತನಗೆ ಬೇಕಾದ ಆಹಾರವನ್ನು ಬೆಳೆಯಲು ಕೃಷಿಯನ್ನು ಮಾಡಿದ. ಹೆಚ್ಚು ಉತ್ಪಾದಿಸಲು ಯಂತ್ರಗಳನ್ನು ಬಳಸಿದ. ವಿರಾಮವಾಗಿ ಬದುಕಲು ಆಕರ್ಷಕ ಕಟ್ಟಡಗಳನ್ನು ಕಟ್ಟಿದ. ಒಂಟಿಯಾಗಿರುವುದು ಸುಖವಲ್ಲವೆಂದು ಸಮಾಜವನ್ನು ಕಟ್ಟಿಕೊಂಡ. ಅದಕ್ಕೊಂದು ರಾಜಕೀಯ ವ್ಯವಸ್ಥೆ ಮಾಡಿದ. ತನ್ನ ಅವಶ್ಯಕತೆಗೆ ಬೇಕಾದಂತೆ ಹೊಸ ಹೊಸ ಆವಿಷ್ಕಾರಗಳನ್ನು ಮಾಡಲು ಸಂಶೋಧನೆ ಮಾಡತೊಡಗಿದ. ಮತ್ತೊಬ್ಬ, ಜನರಿಗೆ ಬೇಕಾದ ವಸ್ತುಗಳನ್ನು ಪೂರೈಸಲು ಉದ್ಯೋಗ ತೆರೆದ, ಜನರಿಗೆ ಕೆಲಸ ಕೊಟ್ಟ. ಬದುಕು ಶಾಶ್ವತವಲ್ಲವೆಂದು ತಿಳಿದು ತನ್ನನ್ನು ಮೀರಿದ, ಶಾಶ್ವತ ಸತ್ಯದ ಕಡೆಗೆ ಮುಖಮಾಡಿ ಧರ್ಮಪರನಾದ. ಅದಕ್ಕೊಂದು ಪರಿಸರ ನಿರ್ಮಿಸಲು ದೇವಸ್ಥಾನ ಕಟ್ಟಿದ.

ಹೀಗೆ ಒಂದರಿಂದ ಮತ್ತೊಂದು ಬೆಳೆಯುತ್ತ ಬಂದು ಪ್ರಪಂಚದ ಲಕ್ಷಣವೇ ಬೇರೆಯಾಯಿತು. ಈ ಎಲ್ಲ ತರಹದ ಜನರು ಜಗತ್ತಿನ ಸೌಂದರ್ಯವನ್ನು ಹೆಚ್ಚಿಸಲು ಕಾರಣರಾದರು. ಅವರನ್ನೆಲ್ಲ ನಾವು ನೆನೆಯುತ್ತೇವೆ. ನಾವು ಇಂದು ಸಂತೋಷವಾಗಿದ್ದರೆ ಇದು ಅವರೆಲ್ಲರ ಪರಿಶ್ರಮದ, ಬುದ್ಧಿಯ ಮತ್ತು ಪರೋಪಕಾರ ಮನೋಭಾವದ ಫಲ. ಹೀಗಾಗಿಯೇ ಸುಂದರ ದೇವಾಲಯ ಕಟ್ಟಿದ ಜಕ್ಕಣಾಚಾರ್ಯ, ಆಣೆಕಟ್ಟು ಕಟ್ಟಿದ ವಿಶ್ವೇಶ್ವರಯ್ಯ, ಟಾಟಾರಂಥ ಉದ್ಯೋಗಪತಿಗಳು, ಹೋಮಿ ಭಾಭಾ, ಸಾರಾಭಾಯಿಯಂಥ ವಿಜ್ಞಾನಿಗಳು, ಗಾಂಧೀಜಿಯಂಥ ನಾಯಕರು, ವಿವೇಕಾನಂದರಂಥ ದಾರ್ಶನಿಕರು, ಮದರ್ ತೆರೆಸಾರಂಥ ಸಮಾಜಸೇವಕರು, ಕಲಾವಿದರು, ಸಂಗೀತಗಾರರು, ಕ್ರೀಡಾಪಟುಗಳು, ಕೃಷಿಕರು, ಆಡಳಿತ ತಜ್ಞರು ನಮ್ಮ ಇಂದಿನ ಜಗತ್ತಿನ ಸುಂದರತೆಗೆ ಕಾರಣರಾಗಿದ್ದಾರೆ. ❖

ದಿನ ಭವಿಷ್ಯ

ಗುರುವಾರ ಅಕ್ಟೋಬರ್ 7, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಹಸ್ತೆ ಪ್ರತಿಪದೆ ಗಂ. 22-11 (ಹ. 3-08) ಗುರುವಾರ ನಿತ್ಯ ನಕ್ಷತ್ರ ಚಿತ್ತೆ ಗಂ. 44-5 (ರಾ. 11-53) ಐಂದ್ರ ನಾಮ ಯೋಗ ಗಂ. 4-23 ಉಪರಿ ವೈಧೃತಿ ನಾಮ ಯೋಗ ಗಂ. 53-12 ಬವ ಕರಣ ಗಂ. 22-11 ವಿಷ ಗಂ. 5-45 ಪುನರ್ವಿಷ ಗಂ. 57-22 ಅಮೃತ ಗಂ 28-32 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-12 ಸೂರ್ಯಾಸ್ತ: 6-04 ಅದೃಷ್ಟ ಸಂಖ್ಯೆ 5

ಮೇಷ: ಉದ್ಯೋಗದಲ್ಲಿರುವವರಿಗೆ ಮೇಲಾಧಿಕಾರಿಗಳಿಂದ ಪ್ರೋತ್ಸಾಹದೊಂದಿಗೆ ಪ್ರಶಂಸೆ. ಮಹಿಳೆಯರ ಇಷ್ಟಾರ್ಥಗಳು ಈಡೇರಿ ಸಂತಸ. ಆರ್ಥಿಕ ಸಂಪನ್ಮೂಲಗಳು ಅಭಿವೃದ್ಧಿಯಾಗಿ ಹೊಸ ಬದುಕಿಗೆ ನಾಂದಿಯಾಗಲಿದೆ.

ವೃಷಭ: ಮಕ್ಕಳೊಂದಿಗೆ ವಾದ ವಿವಾದ ಮಾಡದಿರುವುದು ಉತ್ತಮ. ಮಿತ್ರರಿಂದ ಸಹಕಾರ ಸಲಹೆಗಳು ಲಭ್ಯವಾಗಲಿವೆ. ವಾಹನ ಚಾಲನೆ, ಸ್ತ್ರೀಯರೊಂದಿಗೆ ವ್ಯವಹರಿಸುವಾಗ ಎಚ್ಚರಿಕೆ ಅಗತ್ಯ.

ಮಿಥುನ: ಮಕ್ಕಳ ಆರೋಗ್ಯದ ಕಡೆ ಹೆಚ್ಚಿನ ಗಮನ ಅಗತ್ಯ. ಜಂಟಿ ವ್ಯವಹಾರಗಳಿಗೆ ಕೈ ಹಾಕದಿರುವುದು ಉತ್ತಮ. ಬಂಧು ಮಿತ್ರರೊಂದಿಗೆ ಶುಭಸಮಾರಂಭದಲ್ಲಿ ಭಾಗವಹಿಸುವ ಸಾಧ್ಯತೆ.

ಕರ್ಕಾಟಕ: ದೈನಂದಿನ ಕಾರ್ಯಗಳಲ್ಲಿ ಆಸಕ್ತಿ ವಹಿಸಲಿದ್ದೀರಿ. ಆಸ್ತಿ ವಿಷಯದಲ್ಲಿ ಕಲಹ ಎದುರಾಗುವ ಸಾಧ್ಯತೆ. ನೌಕರಿಯಲ್ಲಿರುವವರಿಗೆ ವರ್ಗಾವಣೆಯಿಂದ ಸ್ಥಾನಪಲ್ಲಟವಾಗುವ ಸಾಧ್ಯತೆ. ಅಮೂಲ್ಯ ವಸ್ತುಗಳ ಸಂಗ್ರಹಣೆ ಮಾಡಲಿದ್ದೀರಿ.

ಸಿಂಹ: ವಿವಾಹಾಕಾಂಕ್ಷಿಗಳಿಗೆ ಸಂಬಂಧಗಳು ಕೂಡಿಬರುವ ಸಾಧ್ಯತೆ. ಹಲವಾರು ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಿರಿ. ನೂತನ ವಾಹನ ಖರೀದಿ ಮಾಡಲಿದ್ದೀರಿ. ಪಿತ್ರಾರ್ಜಿತ ಆಸ್ತಿಗಾಗಿ ಹೋರಾಟದಲ್ಲಿ ಜಯ.

ಕನ್ಯಾ: ಸಂತೃಪ್ತಿಕರ ಸಾಂಸಾರಿಕ ಜೀವನ ನಿಮ್ಮದಾಗಲಿದೆ. ಮಹಿಳೆಯರು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳಲಿದ್ದೀರಿ. ಕುಟುಂಬದ ಸದಸ್ಯರೊಂದಿಗೆ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ.

ತುಲಾ: ದೂರಾಲೋಚನೆಯಿಂದ ಮಾಡಿದ ಕಾರ್ಯಗಳಲ್ಲಿ ಯಶಸ್ಸು. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಗಮನ ಹರಿಸಬೇಕಾದುದು ಅನಿವಾರ್ಯ. ಕುಟುಂಬದಲ್ಲಿ ನೆಮ್ಮದಿಯ ವಾತಾವರಣ ಮೂಡಲಿದೆ.

ವೃಶ್ಚಿಕ: ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆ. ಗೃಹ ನಿರ್ಮಾಣ ಅಥವಾ ಖರೀದಿ ಸಾಧ್ಯತೆ. ಮಹಿಳೆಯರಿಗೆ ಸಾಮಾಜಿಕ ಗೌರವಾದರಗಳು ದೊರಕಲಿವೆ. ರಾಜಕೀಯದಲ್ಲಿ ಯಶಸ್ಸಿನ ಹೆಜ್ಜೆ ತುಳಿಯಲಿದ್ದೀರಿ.

ಧನು: ಆರ್ಥಿಕ ಅನುಕೂಲತೆಗಳು ಕೂಡಿಬರಲಿವೆ. ಮಕ್ಕಳಿಂದ ನೆಮ್ಮದಿ ಉಂಟಾಗಲಿದೆ. ವಿದೇಶಪ್ರಯಾಣ ಯೋಗವೂ ಕಂಡುಬರುತ್ತಿದೆ. ದಿನನಿತ್ಯದ ಕೆಲಸಗಳಲ್ಲಿ ಉತ್ಸಾಹ ಮೂಡಿಬರಲಿದೆ.

ಮಕರ: ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ತುರುಸಿನಿಂದ ತೊಡಗಿಕೊಳ್ಳುವಿರಿ. ಹಣಕಾಸಿನ ವಿಚಾರದಲ್ಲಿ ಅತ್ಯಂತ ಜಾಗರೂಕತೆ ಅವಶ್ಯ. ಮಕ್ಕಳ ಆರೋಗ್ಯದ ಕಡೆ ತುಸು ಗಮನ ವಹಿಸಿ. ಮಾನಸಿಕ ನೆಮ್ಮದಿಗಾಗಿ ದೇವಾಲಯ ದರ್ಶನ.

ಕುಂಭ: ತಾಳ್ಮೆಯಿಂದ ಕಾರ್ಯಸಿದ್ಧಿ. ಕೃಷಿ ಕ್ಷೇತ್ರದಲ್ಲಿ ಕೆಲಸಮಾಡುವಾಗ ಎಚ್ಚರಿಕೆ ವಹಿಸುವುದು ಉತ್ತಮ. ತಾಯಿಯ ಆರೋಗ್ಯದ ಬಗ್ಗೆ ಕಾಳಜಿ ಅಗತ್ಯ. ವ್ಯವಹಾರದಲ್ಲಿ ಹೆಚ್ಚಿನ ಶ್ರಮ ವಹಿಸಬೇಕಾದೀತು.

ಮೀನ: ಬಹುಕಾಲದ ಬಯಕೆಗಳು ಈಡೇರಲಿವೆ. ಋಣಪರಿಹಾರದಿಂದಾಗಿ ಸಂತೃಪ್ತಿಯನ್ನು ಅನುಭವಿಸಲಿದ್ದೀರಿ. ವೈಯಕ್ತಿಕ ವಿಚಾರಗಳನ್ನು ಬಹಿರಂಗ ಪಡಿಸದೇ ಗುಪ್ತವಾಗಿರುಸುವುದು ಕ್ಷೇಮ.

ನಿಮ್ಮ ಜನ್ಮದಿನ 7-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಕೂಡು ವ್ಯವಹಾರದಿಂದಾಗಿ ಹೆಚ್ಚಿನ ಲಾಭವನ್ನು ಗಳಿಸಲಿದ್ದೀರಿ. ರಾಜಕೀಯದಲ್ಲಿ ಇರುವವರಿಗೆ ಉತ್ತಮ ಯಶಸ್ಸು ದೊರಕುವುದರ ಜೊತೆಗೆ ಮೇಲ್ತರದ ಹುದ್ದೆಯೊಂದನ್ನು ಅಲಂಕರಿಸುವ ಸಾಧ್ಯತೆ ಕಂಡುಬರುತ್ತಿದೆ. ಪುತ್ರ ವ್ಯಾಮೋಹದಿಂದಾಗಿ ಕಳಂಕವನ್ನು ಎದುರಿಸಬೇಕಾದೀತು.

ಪದಬಂಧ 4741

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅನಿರೀಕ್ಷಿತವಾಗಿ ಬಂದವ ಆತಂಕ ಹುಟ್ಟಿಸಿಹನಲ್ಲಾ? (4)
3.ಶ್ರೇಷ್ಠ ನೆಲೆ ಅಥವಾ ಸ್ವರ್ಗ ಎಂದರೂ ಸರಿ (4)
5.ಸತಿಯ ಹತ್ತಿರವೇ ಇದ್ದಾಳೆ ಉಪಪತ್ನಿ! (3)
6.ವನದ ಕೊನೆಗೆ ಮಾಡಿದ ಹೋಮ (3)
8.ಅತ್ತಿಂದಿತ್ತ ತೂಗಾಡುವ ವಸ್ತು (3)
9.ತಾಪತ್ರಯದಲ್ಲಿ ಬಂದಿರುವ ಓಲೆ! (2)
10.ಪಕ್ಷಿಯ ಕೊಕ್ಕು (2)
11.ಧಾನ್ಯ ಶೇಖರಿಸುವ ಸ್ಥಳ (3)
12.ಹೆಚ್ಚು ಪದದ ವಿರುದ್ಧ ಪದ (3)
14.ವರನಲ್ಲಿರುವ ವಾಗ್ಮಿ (3)
16.ಹೂಳಿಟ್ಟ ನಿಧಿಯು ಕರದಲ್ಲಿದೆ (4)
17.ಮಧ್ಯರಾತ್ರಿಯನ್ನು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ
1.ಆ ಗ್ರಹವನ್ನು ನೋಡುತ್ತಲೇ ಮಾಡಿದ ಹಟ! (3)
2.ಕನಸಲ್ಲಿರುವ ಕೊಳೆ! (2)
3.ಪದಾತಿ ಜೊತೆಯಿರುವ ಗಂಡ (2)
4.ಕರುವಿಗೆ ತೋರಿದ ದಯೆ (3)
7. ತಾರೆಗಳ ಗುಂಪು (5)
8.ಅಯಸ್ಕಾಂತವನ್ನು ಹೀಗೂ ಕರೆವರು (5)
11.ತಿರುಗಿಸಿದರೂ ಇದು ಚಿನ್ನ (3)
13.ಮೆದು ಮಾತಿನವನ ಮಸ್ತಿಷ್ಕ (3)
14.ವಠಾರದಲ್ಲಿರುವ ಮದುವೆಯ ಗಂಡು (2)
15.ನಗರದಲ್ಲಿರುವ ಮನುಷ್ಯ ತಿರುಗಿದ್ದಾನಲ್ಲಾ? (2)



4740ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪಲ್ಲವಿ 3.ವಸನ 5.ವನಸಂಚಾರ 6.ಶರ 8.ನಾಕ 9.ಅಂಕೆ 10.ಕದ 14.ಗಾಳಿಗೋಪುರ 15.ಕಮರಿ 16.ಒನಕೆ

ಮೇಲಿಂದ ಕೆಳಕ್ಕೆ: 1.ಪರವಶ 2.ವಿವಶ 3.ವರಹ 4.ನಕ್ಷತ್ರಕ 7.ರಸಿಕೆ 8.ನಾಸಿಕ 9.ಅಂಗಾರಕ 11.ದಬ್ಬಾಳಿಕೆ 12.ನಗಾರಿ 13.ತೆರಚ

ಸುಡೊಕು 5127

	6			2		5		
5		4			7			3
	2		5			6		
8		1		3				9
			9		8			
9		2		5		3		6
7		3		9				
	8		7		5		3	
		9		8			7	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5126 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ಷೇರುಪೇಟೆ ವಹಿವಾಟು 555



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	17,822
ಇಂದಿನ ಅಂತ್ಯ	17,646
▼	176
ದಿನದ ಕನಿಷ್ಠ	17,613

ವಿನಿಮಯ ದರ

$ ಡಾಲರ್	74.98
£ ಪೌಂಡ್	101.48
€ ಯುರೊ	86.50
¥ ಯೆನ್ (100ಕ್ಕೆ)	67

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹430
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹445

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1475 (1445)
ಸೋಯಾ (ರಿಫೈನ್ಡ್)	₹1375 (1340)
ಸೂರ್ಯಕಾಂತಿ (ರಿಫೈನ್ಡ್)	₹1400(1385)
ಪಾಮೋಲಿನ್	₹1250 (1225)

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹255-498
ದ್ವಿತಳಿ (ಬಿ.ವಿ)	₹218-540

ಪೆಟ್ರೋಲ್ ಬೆಲೆ 30 ಪೈಸೆ, ಡೀಸೆಲ್ 35 ಪೈಸೆ ಏರಿಕೆ

ಎಲ್‌ಪಿಜಿ ದರ ₹15 ಹೆಚ್ಚಳ

ನವದೆಹಲಿ (ಪಿಟಿಐ): ಸಬ್ಸಿಡಿ ಇರುವ ಮತ್ತು ಸಬ್ಸಿಡಿ ಇಲ್ಲದ ಅಡುಗೆ ಅನಿಲ (ಎಲ್‌ಪಿಜಿ) ದರವನ್ನು 14.2 ಕೆ.ಜಿ.ಯ ಸಿಲಿಂಡರ್‌ಗೆ ₹ 15ರಷ್ಟು ಹೆಚ್ಚಿಸಲಾಗಿದೆ. ಇದರಿಂದಾಗಿ ಬೆಂಗಳೂರಿನಲ್ಲಿ 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆ ₹ 902ಕ್ಕೆ ಏರಿಕೆ ಆಗಿದೆ.

ಜುಲೈನಿಂದ ಈಚೆಗೆ ನಾಲ್ಕು ಬಾರಿ ಎಲ್‌ಪಿಜಿ ದರ ಏರಿಕೆ ಮಾಡಿದಂತಾಗಿದೆ. ಜುಲೈನಲ್ಲಿ ಪ್ರತಿ ಸಿಲಿಂಡರ್‌ಗೆ ₹ 25ರಷ್ಟು, ಆಗಸ್ಟ್‌ನಲ್ಲಿ ₹ 25 ಮತ್ತು ಸೆಪ್ಟೆಂಬರ್‌ನಲ್ಲಿ ₹ 25ರಷ್ಟು ಹೆಚ್ಚಿಸಲಾಗಿತ್ತು. ಈಗ ಆಗಿರುವ ದರ ಹೆಚ್ಚಳವನ್ನೂ ಪರಿಗಣಿಸಿದರೆ, ಜುಲೈ ನಂತರ ಒಟ್ಟು ₹ 90ರಷ್ಟು ಏರಿಕೆ ಆದಂತಾಗಿದೆ.

ಪೆಟ್ರೋಲ್, ಡೀಸೆಲ್ ದರ ಏರಿಕೆ: ಸರ್ಕಾರಿ ಸ್ವಾಮ್ಯ ತೈಲ ಮಾರಾಟ ಕಂಪನಿಗಳು ಬುಧವಾರ ಪೆಟ್ರೋಲ್ ದರ 30 ಪೈಸೆ ಮತ್ತು ಡೀಸೆಲ್ ದರ 35 ಪೈಸೆ ಹೆಚ್ಚಿಸಿವೆ. ಈಚಿನ ವಾರಗಳಲ್ಲಿ ಗರಿಷ್ಠ ಮಟ್ಟದ ದರ ಏರಿಕೆ ಇದಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆಗೆ ಅನುಗುಣವಾಗಿ ಕಂಪನಿಗಳು ದೇಶದಲ್ಲಿ ತೈಲೋತ್ಪನ್ನಗಳ ದರದಲ್ಲಿ ಹೆಚ್ಚಳ ಮಾಡಿವೆ.

ಬುಧವಾರ ದರ ಹೆಚ್ಚಳದಿಂದಾಗಿ ಬೆಂಗಳೂರಿನಲ್ಲಿ ಪೆಟ್ರೋಲ್ ದರ ₹ 106.47 ಮತ್ತು ಡೀಸೆಲ್ ದರ ₹ 96.97ಕ್ಕೆ ಏರಿಕೆ ಆಗಿದೆ. ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 102.94 ಮತ್ತು ಡೀಸೆಲ್ ದರ ₹ 91.42ಕ್ಕೆ ತಲುಪಿದೆ. ಸ್ಥಳೀಯ ಮಾರಾಟ ತೆರಿಗೆಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ದರದಲ್ಲಿ ವ್ಯತ್ಯಾಸ ಆಗಲಿದೆ.

ಲಸಿಕೆ: ಕಡಿಮೆಯಾದ ಹಿಂಜರಿಕೆ

ನವದೆಹಲಿ (ಪಿಟಿಐ): ಕೋವಿಡ್–19 ಲಸಿಕೆ ಪಡೆದುಕೊಳ್ಳುವುದಕ್ಕೆ ಸಂಬಂಧಿಸಿ ದೇಶದ ವಯಸ್ಕರಲ್ಲಿದ್ದ ಹಿಂಜರಿಕೆ ಕಡಿಮೆಯಾಗಿದೆ ಎಂದು ಹೊಸ ಸಮೀಕ್ಷೆಯೊಂದು ಹೇಳಿದೆ.

ಕೇವಲ ಶೇ 7ರಷ್ಟು ವಯಸ್ಕರು ಮಾತ್ರ ಲಸಿಕೆ ಪಡೆದುಕೊಳ್ಳಲು ಹಿಂಜರಿಯುತ್ತಿದ್ದಾರೆ. ಇದು ಈ ವರೆಗಿನ ಅತ್ಯಂತ ಕಡಿಮೆ ಹಿಂಜರಿಕೆ ಮಟ್ಟವಾಗಿದೆ ಎಂದು ಇದೇ ಸಮೀಕ್ಷೆ ಹೇಳಿದೆ.

‘ಲೋಕಲ್ ಸರ್ಕಲ್ಸ್’ ಎಂಬ ಆನ್‌ಲೈನ್ ವೇದಿಕೆ ಈ ಸಮೀಕ್ಷೆ

ನಡೆಸಿದೆ. ಶೇ 67ರಷ್ಟು ಪುರುಷರು ಹಾಗೂ ಶೇ 33ರಷ್ಟು ಮಹಿಳೆಯರಿದ್ದ 301 ಜಿಲ್ಲೆಗಳ 12,810 ಜನರನ್ನು ಈ ಸಮೀಕ್ಷೆಗೆ ಒಳಪಡಿಸಲಾಗಿತ್ತು.

ಶೇ 27ರಷ್ಟು ವಯಸ್ಕರು ಲಸಿಕೆ ತೆಗೆದುಕೊಳ್ಳುವ ಬಗ್ಗೆ ನಿರ್ಧಾರವನ್ನೇ ಕೈಗೊಂಡಿಲ್ಲ. ಸದ್ಯ ಲಭ್ಯವಿರುವ ಲಸಿಕೆಗಳು ಕೊರೊನಾ ವೈರಸ್ ಸೋಂಕಿನ ವಿರುದ್ಧ ಪರಿಣಾಮಕಾರಿ ರಕ್ಷಣೆ ನೀಡುವ ಕುರಿತು ಮನವರಿಕೆ ಆಗದಿರುವುದೇ ಇದಕ್ಕೆ ಕಾರಣ. ಇವರನ್ನು ಲಸಿಕೆ ಪಡೆಯಲು ಹಿಂಜರಿಯುವವರು ಎಂಬುದಾಗಿ ವರ್ಗೀಕರಿಸಬಹುದು ಎಂದು ಸಮೀಕ್ಷೆ ಹೇಳಿದೆ.

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೆಲಸದ ಹೊಸ ಸಂಸ್ಕೃತಿ ಭವಿಷ್ಯದ ಮಾದರಿ: ರಾಜನ್

ಸ್ಲೈಸ್: ವಾರದಲ್ಲಿ ಮೂರೇ ದಿನ ಕೆಲಸ!

• ವಿಜಯ್ ಜೋಷಿ

ಬೆಂಗಳೂರು: ಹಣಕಾಸು ಪಾವತಿ ಹಾಗೂ ಕ್ರೆಡಿಟ್ ಕಾರ್ಡ್ ಸೇವೆಗಳನ್ನು ಒದಗಿಸುತ್ತಿರುವ ಬೆಂಗಳೂರು ಮೂಲದ ಸ್ಲೈಸ್ ಕಂಪನಿಯು ಹೊಸ ಕೆಲಸದ ಸಂಸ್ಕೃತಿಯನ್ನು ರೂಪಿಸಿದೆ. ವಾರದಲ್ಲಿ ಮೂರು ದಿನ ಮಾತ್ರ ಕೆಲಸ, ಇನ್ನುಳಿದ ನಾಲ್ಕು ದಿನ ನೌಕರರಿಗೆ ತಮ್ಮ ಆಸಕ್ತಿಗಳನ್ನು ಪೋಷಿಸಿಕೊಳ್ಳಲು ಮೀಸಲು ಎಂದು ಕಂಪನಿ ಹೇಳಿದೆ.

ವಾರದಲ್ಲಿ ಮೂರು ದಿನ ಮಾತ್ರ ಕೆಲಸ ಮಾಡಿದರೆ ಸಾಕು ಎಂಬ ವಿಚಾರವನ್ನು ಕಂಪನಿಯ ಸಂಸ್ಥಾಪಕ ಮತ್ತು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ರಾಜನ್ ಬಜಾಜ್ ಅವರು ಟ್ವೀಟ್ ಮಾಡಿ ಹೇಳಿದ್ದಾರೆ. ‘ಹಲವರು ಒಂದು ಕಡೆ ಸ್ಥಿರವಾಗಿ ನಿಂತು ಕೆಲಸ ಮಾಡುತ್ತಲೇ, ಪರ್ಯಾಯವಾಗಿ ಇತರ ಕೆಲವು ಕೆಲಸಗಳನ್ನು ಮಾಡಲು ಕೂಡ ಬಯಸುತ್ತಾರೆ. ಅಂಥವರಿಗಾಗಿ ಈ ಬಗೆಯ ಕೆಲಸದ ಮಾದರಿ’ ಎಂದು ಬಜಾಜ್ ಅವರು ಹೇಳಿದ್ದಾರೆ.

ಕೆಲಸದ ಹೊಸ ಸಂಸ್ಕೃತಿ ವಿಚಾರವಾಗಿಅವರುಬಹಳಭರವಸೆಯನ್ನುಇಟ್ಟುಕೊಂಡಿದ್ದಾರೆ. ಇದು ಭವಿಷ್ಯದ ಮಾದರಿ ಎಂದೂ ಹೇಳಿದ್ದಾರೆ. ನೌಕರರು ಕೆಲಸವನ್ನು ಕಚೇರಿಗೇ ಬಂದು ಮಾಡಬೇಕು

ರಾಜನ್ ಬಜಾಜ್ (ಚಿತ್ರ: ರಾಜನ್ ಅವರ ಟ್ವಿಟರ್ ಖಾತೆ)

ಎಂಬ ನಿಯಮವಿಲ್ಲ; ಎಲ್ಲಿಂದಲಾದರೂ ಅವರು ಕೆಲಸ ಮಾಡಬಹುದು.

‘ಕಂಪನಿಗಳು ಪ್ರತಿಭಾನ್ವಿತರನ್ನು ತಮ್ಮಲ್ಲೇ ಉಳಿಸಿಕೊಳ್ಳಲು ಹಲವು ಕೊಡುಗೆಗಳನ್ನು ನೀಡುತ್ತವೆ. ನಾವು, ಅವರಿಗೆ ಬಹಳ ಮುಖ್ಯವಾದ ‘ಸಮಯ’ವನ್ನು ಕೊಡಲು ಬಯಸಿದೆವು. ಕೆಲಸದ ಹೊರತಾಗಿ ತಮ್ಮ ಆಸಕ್ತಿಯ ಯೋಜನೆಗಳ ಮೇಲೆ ಕೆಲಸ ಮಾಡಲು ಬಯಸುವವರಿಗೆ ಸಮಯ ಕೊಡುವ ಆಲೋಚನೆ ನಮ್ಮದು. ಹಲವು ಸುತ್ತುಗಳ ಚರ್ಚೆ ನಡೆಸಿದ ನಂತರ ನಾವು ಈ ಯೋಜನೆ ರೂಪಿಸಿದ್ದೇವೆ’ ಎಂದು ರಾಜನ್ ಬಜಾಜ್ ಅವರು ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿದರು.

ಕಂಪನಿಯು ಮುಂದಿನ ಒಂದು ವರ್ಷದಲ್ಲಿ ಒಟ್ಟು ನೂರು ಜನರನ್ನು ನೇಮಕ ಮಾಡಿಕೊಳ್ಳಲಿದೆ. ಮುಂದಿನ ಐದು ವರ್ಷಗಳಲ್ಲಿ ಒಟ್ಟು ಒಂದು ಸಾವಿರ ಜನರಿಗೆ ಉದ್ಯೋಗ ಕಲ್ಪಿಸಲಿದೆ. ವಾರದಲ್ಲಿ ಮೂರು ದಿನ ಮಾತ್ರ ಕೆಲಸ ಎನ್ನುವ ವ್ಯವಸ್ಥೆಯನ್ನು ಹಲವು ದೊಡ್ಡ ಕಂಪನಿಗಳೂ ಒದಗಿಸಲಾರವು ಎಂದು ಸ್ಲೈಸ್ ಹೇಳಿಕೊಂಡಿದೆ. ವಾರದಲ್ಲಿ ಐದು ದಿನ ಕೆಲಸ ಮಾಡುವ ವ್ಯವಸ್ಥೆ ಕೂಡ ಕಂಪನಿಯಲ್ಲಿ ಮುಂದುವರಿಯಲಿದೆ.

ವಾರದಲ್ಲಿ ಮೂರು ದಿನ ಮಾತ್ರ ಕೆಲಸ ಮಾಡುವವರು, ಒಂದು ವಾರದಲ್ಲಿ ಒಟ್ಟು 20ರಿಂದ 25 ತಾಸು ಕೆಲಸ ಮಾಡಬೇಕಾಗುತ್ತದೆ. ಇವರಿಗೆ ಸಿಗುವ ಭತ್ಯೆಗಳಲ್ಲಿ ಕಡಿತ ಇರುವುದಿಲ್ಲ ಎಂದು ಕಂಪನಿ ಹೇಳಿದೆ. ಕಂಪನಿಯಲ್ಲಿ ಈಗ 450 ಜನ ಕೆಲಸ ಮಾಡುತ್ತಿದ್ದಾರೆ. ತಾನು ಪ್ರತಿ ತಿಂಗಳು 1 ಲಕ್ಷಕ್ಕೂ ಹೆಚ್ಚು ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸುತ್ತಿರುವುದಾಗಿ ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಮುಖ್ಯಾಂಶಗಳು

- ಉಳಿದ ನಾಲ್ಕು ದಿನ ನೌಕರರ ಆಸಕ್ತಿ ಪೋಷಣೆಗೆ ಮೀಸಲು
- ಒಂದು ವರ್ಷದಲ್ಲಿ ನೂರು ಜನರ ನೇಮಕ

ಸುದ್ದಿ 2 ನಿಮಿಷ

ಹೂಡಿಕೆದಾರರ ಸಂಪತ್ತು ₹ 2.57 ಲಕ್ಷ ಕೋಟಿ ಇಳಿಕೆ

ನವದೆಹಲಿ (ಪಿಟಿಐ): ಜಾಗತಿಕ ಷೇರುಪೇಟೆಗಳಲ್ಲಿ ಕಂಡುಬಂದ ಮಾರಾಟದ ಒತ್ತಡಕ್ಕೆ ಒಳಗಾಗಿ ದೇಶಿ ಷೇರುಪೇಟೆಗಳಲ್ಲಿ ಬುಧವಾರ ನಕಾರಾತ್ಮಕ ವಹಿವಾಟು ನಡೆಯಿತು.

ಕಚ್ಚಾತೈಲ ದರ ಏರಿಕೆ ಮತ್ತು ಪೂರೈಕೆ ವ್ಯವಸ್ಥೆಯಲ್ಲಿನ ಅಡಚಣೆಯಿಂದಾಗಿ ಹಣದುಬ್ಬರ ಏರಿಕೆ ಆಗುವ ಆತಂಕ ಎದುರಾಗಿದೆ. ಇದು ಜಾಗತಿಕ ಮಟ್ಟದಲ್ಲಿ ಆರ್ಥಿಕ ಚೇತರಿಕೆಯ ಮೇಲೆ ಪರಿಣಾಮ ಉಂಟುಮಾಡಿದೆ ಎಂದು ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 555 ಅಂಶ ಇಳಿಕೆಯಾಗಿ 59,189 ಅಂಶಗಳಿಗೆ ತಲುಪಿತು. ಹೂಡಿಕೆದಾರರ ಸಂಪತ್ತು ಮೌಲ್ಯವು ₹ 2.57 ಲಕ್ಷ ಕೋಟಿಯಷ್ಟು ಕರಗಿದ್ದು, ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ₹ 262 ಲಕ್ಷ ಕೋಟಿಗೆ ಇಳಿಕೆ ಆಗಿದೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 176 ಅಂಶ ಇಳಿಕೆ ಕಂಡು 17,646 ಅಂಶಗಳಿಗೆ ತಲುಪಿತು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 54 ಪೈಸೆ ಇಳಿಕೆ ಆಗಿದ್ದು ಸಹ ದೇಶಿ ಷೇರುಪೇಟೆಗಳ ಮೇಲೆ ಪರಿಣಾಮ ಉಂಟುಮಾಡಿದೆ ಎಂದು ವಹಿವಾಟುದಾರರು ಹೇಳಿದ್ದಾರೆ. ದಿನದ ವಹಿವಾಟಿನಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ ₹ 74.98ರಂತೆ ವಿನಿಮಯಗೊಂಡಿತು.

ದೂರಸಂಪರ್ಕ: ಶೇ 100ರಷ್ಟು ಎಫ್‌ಡಿಐಗೆ ಅಧಿಸೂಚನೆ

ನವದೆಹಲಿ (ಪಿಟಿಐ): ದೇಶದ ದೂರಸಂಪರ್ಕ ವಲಯದಲ್ಲಿ ಶೇಕಡ 100ರಷ್ಟು ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸುವ ಅಧಿಸೂಚನೆಯನ್ನು ಕೇಂದ್ರ ಸರ್ಕಾರವು ಬುಧವಾರ ಪ್ರಕಟಿಸಿದೆ.

ಈ ನೀತಿಯ ಅನ್ವಯ, ವಿದೇಶಿ ಹೂಡಿಕೆದಾರರು ಸರ್ಕಾರದ ಪೂರ್ವಾನುಮತಿ ಇಲ್ಲದೆಯೇ ದೇಶದ ದೂರಸಂಪರ್ಕ ವಲಯದಲ್ಲಿ ಶೇಕಡ 100ರಷ್ಟು ಹೂಡಿಕೆ ಮಾಡಬಹುದು.

ಆದರೆ, ಭಾರತದ ಜೊತೆ ಗಡಿ ಹಂಚಿಕೊಂಡಿರುವ ದೇಶಗಳಲ್ಲಿನ ಕಂಪನಿಗಳು ಅಥವಾ ವ್ಯಕ್ತಿಗಳು ಹೂಡಿಕೆ ಮಾಡುವ ಮೊದಲು ಕೇಂದ್ರ ಸರ್ಕಾರದ ಅನುಮತಿ ಪಡೆಯಬೇಕಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮುಂಬೈ ಧಾರಣೆ

ಶೇಂಗಾ

6-10-2021

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	10550-10600
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1485 (1455)
ಒಂದು ವಾರದ ಡೆಲಿವರಿ	1480 (1450)
ಸೋಯಾ ಕಚ್ಚಾ	1237 (1295)
ಪಾಮ್ ವಾರದ ಡೆಲಿವರಿ	1248 (1220)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1315)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,600 (46,400)
ಬೆಳ್ಳಿ ಕೆ.ಜಿ 60,600 (60,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪೌಷ್ಟಿಕ ಆಹಾರ ಸೇವಿಸಿ

₹4,445 ಕೋಟಿ ವೆಚ್ಚದ ಯೋಜನೆ: 21 ಲಕ್ಷ ಉದ್ಯೋಗ ಸೃಷ್ಟಿ ನಿರೀಕ್ಷೆ

ಏಳು ಜವಳಿ ಪಾರ್ಕ್ ಸ್ಥಾಪನೆಗೆ ಒಪ್ಪಿಗೆ

ನವದೆಹಲಿ: ಮುಂದಿನ ಐದು ವರ್ಷಗಳಲ್ಲಿ, ₹ 4,445 ಕೋಟಿ ವೆಚ್ಚದಲ್ಲಿ ಏಳು ಬೃಹತ್ ಜವಳಿ (ಪಿಎಂ ಮಿತ್ರ) ಪಾರ್ಕ್ ಸ್ಥಾಪಿಸಲು ಬುಧವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡಿದೆ.

ಇದರಿಂದ ನೇರವಾಗಿ ಏಳು ಲಕ್ಷ ಹಾಗೂ ಪರೋಕ್ಷವಾಗಿ 14 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿದ್ದು, ಈ ಪಾರ್ಕ್‌ಗಳನ್ನು ಸ್ಥಾಪಿಸುವುದಾಗಿ 2021–22ರ ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾಗಿತ್ತು.

ಹೊಲದಿಂದ ನೂಲು (ಫಾರ್ಮ್ ಟು ಫೈಬರ್), ನೂಲಿನಿಂದ ಕಾರ್ಖಾನೆ, (ಫೈಬರ್ ಟು ಫ್ಯಾಕ್ಟರಿ), ಕಾರ್ಖಾನೆಯಿಂದ ಫ್ಯಾಶನ್ (ಫ್ಯಾಕ್ಟರಿಯಿಂದ ಫ್ಯಾಶನ್) ಹಾಗೂ ಫ್ಯಾಶನ್ ಟು ಫಾರಿನ್ ಎಂಬ ಐದು ‘ಎಫ್’ ಸೂತ್ರದ ಆಧಾರದಲ್ಲಿ ಈ ಪಾರ್ಕ್‌ಗಳ ನಿರ್ಮಾಣ ಆಗಲಿದೆ. ಇವು ಜವಳಿ ಉದ್ಯಮದ ಹೆಚ್ಚಿನ ಅಭಿವೃದ್ಧಿಗೆ ನೆರವಾಗಲಿದೆ ಎಂದು ನಿರೀಕ್ಷಿಸಲಾಗಿದೆ.

ಆಸಕ್ತ ರಾಜ್ಯಗಳಲ್ಲಿನ ಅಭಿವೃದ್ಧಿಪಡಿಸಿಲ್ಲದ ಹಾಗೂ ಅಭಿವೃದ್ಧಿಪಡಿಸಿದ ಭೂಮಿಯಲ್ಲಿ (ಗ್ರೀನ್‌ಫೀಲ್ಡ್ ಹಾಗೂ ಬ್ರೌನ್‌ಫೀಲ್ಡ್) ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.

ಈಗಾಗಲೇ ಹತ್ತು ರಾಜ್ಯಗಳು ಪಾರ್ಕ್ ಸ್ಥಾಪನೆಗೆ ಆಸಕ್ತಿ ವ್ಯಕ್ತಪಡಿಸಿದ್ದು, ವಸ್ತುನಿಷ್ಠ ಮಾನದಂಡ ಅನುಸರಿಸಿ ಆಯ್ಕೆಮಾಡಲಾಗುವುದು. ‘ಹೊಲದಿಂದ ವಿದೇಶಕ್ಕೆ’– ತಯಾರಿಕೆಯಿಂದ ರಫ್ತು ಮಾಡುವವರೆಗಿನ ಸರಪಳಿಯು ಒಂದೇ ಕಡೆ ಇರುವುದರಿಂದ, ಜವಳಿ ಉದ್ಯಮದ ಸಾಗಾಟ ವೆಚ್ಚವೂ ಕಡಿಮೆಯಾಗಲಿದೆ ಎಂದು ಹೇಳಿದರು.

ರೈಲ್ವೆ ನೌಕರರಿಗೆ ಬೋನಸ್

ನವದೆಹಲಿ: ರೈಲ್ವೆ ನೌಕರರಿಗೆ ಉತ್ಪಾದನೆ ಆಧಾರಿತ ಬೋನಸ್ ನೀಡಲು ಕೇಂದ್ರ ಸಂಪುಟ ಸಭೆಯು ಒಪ್ಪಿಗೆ ನೀಡಿದೆ.

ರೈಲ್ವೆ ಇಲಾಖೆಯ ಸುಮಾರು 11.56 ಲಕ್ಷ ಗಜೆಟೆಡ್ ಅಲ್ಲದ (ಆರ್‌ಪಿಎಫ್/ಆರ್‌ಪಿಎಸ್‌ಎಫ್ ಸಿಬ್ಬಂದಿ ಹೊರತುಪಡಿಸಿ) ಸಿಬ್ಬಂದಿಯು 2020–21ನೇ ಸಾಲಿನ ಬೋನಸ್ ಪ್ರಯೋಜನ ಪಡೆಯಲಿದ್ದಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ₹1,985 ಕೋಟಿ ಹೊರೆ ಬೀಳಲಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ತಿಳಿಸಿದರು.

ಪ್ರತಿಯೊಬ್ಬ ನೌಕರ ಪಡೆಯಬಹುದಾದ ಗರಿಷ್ಠ ಮೊತ್ತ ₹17,951.

ದಸರಾ ಹಬ್ಬದ ಮೊದಲೇ ಈ ಬೋನಸ್ ವಿತರಿಸಲಾಗುವುದು ಎಂದು ರೈಲ್ವೆ ಮಂಡಳಿ ಅಧ್ಯಕ್ಷ ಸುನೀತ್ ಶರ್ಮಾ ತಿಳಿಸಿದ್ದಾರೆ.

ಕೋವಿಡ್–19 ಸಾಂಕ್ರಾಮಿಕದ ಕಠಿಣ ಸಂದರ್ಭದಲ್ಲಿ, ತಮ್ಮ ಸುರಕ್ಷೆಯ ಬಗ್ಗೆ ಆತಂಕವಿದ್ದರೂ ರೈಲ್ವೆ ಸಿಬ್ಬಂದಿ ಕೆಲಸಕ್ಕೆ ಹಾಜರಾಗಿದ್ದಾರೆ. ಕೊರೊನಾ ವೈರಾಣುವಿನೊಂದಿಗೆ ಹೋರಾಡುತ್ತಲೇ ಕರ್ತವ್ಯ ನಿರ್ವಹಿಸಿದ ಅವರಿಗೆ, ಈ ಬೋನಸ್ ಮತ್ತಷ್ಟು ಕೆಲಸ ಮಾಡುವಂತೆ ಹುರಿದುಂಬಿಸಲಿದೆ ಎಂದು ಅವರು ಅಭಿಪ್ರಾಯಪಟ್ಟದ್ದಾರೆ.

ಸೆಮಿಕಂಡಕ್ಟರ್ ಕೊರತೆ: ವಾಹನ, ಎಲೆಕ್ಟ್ರಾನಿಕ್ಸ್ ಉದ್ಯಮಕ್ಕೆ ಪೆಟ್ಟು

ನವದೆಹಲಿ (ಪಿಟಿಐ): ಜಾಗತಿಕ ಮಟ್ಟದಲ್ಲಿ ಸೆಮಿಕಂಡಕ್ಟರ್‌ಗಳಿಗೆ ಉಂಟಾಗಿರುವ ಕೊರತೆಯು ದೇಶದ ಮೊಬೈಲ್, ಗ್ರಾಹಕ ಬಳಕೆ ಎಲೆಕ್ಟ್ರಾನಿಕ್ಸ್ ಉಪಕರಣಗಳು, ವಾಹನ ಉದ್ಯಮದ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡಿದೆ.

ಹಬ್ಬಗಳ ಸಂದರ್ಭದಲ್ಲಿ ಗ್ರಾಹಕರಿಗೆ ಇಂತಹ ಉತ್ಪನ್ನಗಳ ಮೇಲೆ ಕೊಡುಗೆಗಳು, ರಿಯಾಯಿತಿಗಳು ದೊರೆಯುತ್ತವೆ. ಆದರೆ, ಈ ಬಾರಿ ಸೆಮಿಕಂಡಕ್ಟರ್ ಕೊರತೆಯ ಕಾರಣದಿಂದಾಗಿ ಗ್ರಾಹಕರು ಮೊಬೈಲ್, ಟಿ.ವಿ. ಹಾಗೂ ಕಾರುಗಳಿಗೆ ಹೆಚ್ಚಿನ ಮೊತ್ತ ಪಾವತಿಸುತ್ತಿದ್ದಾರೆ.

‘ಬೇಡಿಕೆ ಬಹಳ ಉತ್ತಮವಾಗಿದೆ. ಆದರೆ, ಸೆಮಿಕಂಡಕ್ಟರ್ ಕೊರತೆಯ ಕಾರಣದಿಂದಾಗಿ ಪೂರೈಕೆ ತುಸು ಮಂದವಾಗಿದೆ. ಹೀಗಾಗಿ, ಬುಕಿಂಗ್ ಸಂಖ್ಯೆಗಳು ಜಾಸ್ತಿ ಆಗಿದ್ದರೂ ಪೂರೈಕೆ ಆ ಪ್ರಮಾಣದಲ್ಲಿ ಆಗುತ್ತಿಲ್ಲ’ ಎಂದು ಮಾರುತಿ ಸುಜುಕಿ ಕಂಪನಿಯ ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ತಿಳಿಸಿದರು.

ಮಾರುತಿ ಸುಜುಕಿ ಕಂಪನಿಯಲ್ಲಿ 2.15 ಲಕ್ಷದಿಂದ 2.2 ಲಕ್ಷದಷ್ಟು ವಾಹನಗಳ ಬುಕಿಂಗ್ ಬಾಕಿ ಇದೆ. ಇಡೀ ಆಟೊಮೊಬೈಲ್ ಉದ್ದಿಮೆಯಲ್ಲಿ ಅಂದಾಜು 4.5 ಲಕ್ಷದಿಂದ 5 ಲಕ್ಷದಷ್ಟು ಬುಕಿಂಗ್‌ಗಳು ಬಾಕಿ ಇವೆ ಎಂದು ಅವರು ಹೇಳಿದರು. ಪೂರೈಕೆಯಲ್ಲಿನ ಸಮಸ್ಯೆಯ ಕಾರಣದಿಂದಾಗಿ ದೊಡ್ಡ ಪ್ರಮಾಣದ ರಿಯಾಯಿತಿಗಳು ಈ ಬಾರಿ ಇರಲಿಕ್ಕಿಲ್ಲ ಎಂದರು.

‘ನಮ್ಮ ಉದ್ಯಮದ ಮುಂದಿರುವ ಅತಿದೊಡ್ಡ ಸವಾಲು ಸೆಮಿಕಂಡಕ್ಟರ್ ಕೊರತೆ’ ಎಂದು ಗ್ರಾಹಕ ಬಳಕೆಯ ಎಲೆಕ್ಟ್ರಾನಿಕ್ಸ್ ಮತ್ತು ಉಪಕರಣಗಳ ತಯಾರಕರ ಸಂಘದ (ಸಿಇಎಎಂಎ) ಅಧ್ಯಕ್ಷ ಎರಿಕ್ ಬ್ರಗ್ಯಾಂಜಾ ತಿಳಿಸಿದರು. ಆದರೆ, ಸದ್ಯಕ್ಕೆ ಉತ್ಪನ್ನಗಳ ಪೂರೈಕೆಯಲ್ಲಿ ಸಮಸ್ಯೆ ಎದುರಾಗಿಲ್ಲ ಎಂದರು. 2022ರಲ್ಲಿ ಉತ್ಪನ್ನಗಳ ಪೂರೈಕೆಯಲ್ಲಿ ತೊಂದರೆ ಆಗುವ ಸಾಧ್ಯತೆ ಇದೆ, ಆಗ ಉತ್ಪನ್ನಗಳ ಬೆಲೆ ಹೆಚ್ಚಳ ಕೂಡ ಆಗಬಹುದು ಎಂದು ಹೇಳಿದರು.

ಸೆಮಿಕಂಡಕ್ಟರ್ ಕೊರತೆಯಿಂದಾಗಿ 4ಕೆ ಟಿ.ವಿ.ಗಳ ಬೆಲೆಯಲ್ಲಿ ಶೇಕಡ 50ರಷ್ಟು ಏರಿಕೆ ಆಗಿದೆ ಎಂದು ಸೂಪರ್ ಪ್ಲಾಸ್ಟ್ರಾನಿಕ್ಸ್ ಪ್ರೈ.ಲಿ. ಕಂಪನಿಯ ಸಿಇಒ ಅವನೀತ್ ಸಿಂಗ್ ಮಾರ್ವಾ ತಿಳಿಸಿದರು. ಉತ್ಪಾದನೆಯಲ್ಲಿ ಆಗಿರುವ ಅಡಚಣೆಯು 2022ರ ಕೊನೆಯವರೆಗೂ ಮುಂದುವರಿಯಬಹುದು ಎಂದು ಅವರು ಹೇಳಿದರು.

ರಸಾಯನವಿಜ್ಞಾನ: ಇಬ್ಬರು ವಿಜ್ಞಾನಿಗಳಿಗೆ ನೊಬೆಲ್

ಸ್ಟಾಕ್‌ಹೋಮ್ (ಎಪಿ): 2021ನೇ ಸಾಲಿನ ರಸಾಯನವಿಜ್ಞಾನ ವಿಭಾಗದ ನೊಬೆಲ್ ಪ್ರಶಸ್ತಿಗೆ ವಿಜ್ಞಾನಿಗಳಾದ ಬೆಂಜಮಿನ್ ಲಿಸ್ಟ್ ಹಾಗೂ ಡೇವಿಡ್ ಮ್ಯಾಕ್‌ಮಿಲನ್ ಆಯ್ಕೆಯಾಗಿದ್ದಾರೆ.

ಡೇವಿಡ್ ಮ್ಯಾಕ್‌ಮಿಲನ್

ಬೆಂಜಮಿನ್ ಲಿಸ್ಟ್

ರಾಸಾಯನಿಕ ಪ್ರಕ್ರಿಯೆಗಳ ವೇಗವರ್ಧನೆಗೆ ಸಂಬಂಧಿಸಿ ನಡೆಸಿದ ಸಂಶೋಧನೆಯನ್ನು ಗುರುತಿಸಿ ಈ ಇಬ್ಬರು ವಿಜ್ಞಾನಿಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ನೊಬೆಲ್ ಪ್ರಶಸ್ತಿ ಸಮಿತಿ ಬುಧವಾರ ತಿಳಿಸಿದೆ.

ಬೆಂಜಮಿನ್ ಲಿಸ್ಟ್ ಅವರು ಜರ್ಮನಿಯ ಮ್ಯಾಕ್ಸ್ ಪ್ಲ್ಯಾಂಕ್ ಇನ್‌ಸ್ಟಿಟ್ಯೂಟ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಡೇವಿಡ್ ಮ್ಯಾಕ್‌ಮಿಲನ್ ಅವರು ಅಮೆರಿಕದ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

‘ಲಿಸ್ಟ್ ಹಾಗೂ ಮ್ಯಾಕ್‌ಮಿಲನ್ ಅವರು ಸ್ವತಂತ್ರವಾಗಿ ಈ ಮಹತ್ವದ ಸಂಶೋಧನೆ ನಡೆಸಿದ್ದಾರೆ. ಜನರು ಇವರ ಸಂಶೋಧನೆಯ ಲಾಭವನ್ನು ಪಡೆಯುತ್ತಿದ್ದಾರೆ’ ಎಂದೂ ಸಮಿತಿ ತಿಳಿಸಿದೆ.

‘ಸ್ವಾಮಿತ್ವ ಯೋಜನೆ ಶೀಘ್ರ ದೇಶದಾದ್ಯಂತ ಜಾರಿ’

ಭೋಪಾಲ್ (ಪಿಟಿಐ): ಗ್ರಾಮೀಣ ಭಾಗದ ಜನರಿಗೆ ಆಸ್ತಿ ಹಕ್ಕು ಕಾರ್ಡ್ ವಿತರಿಸುವ ಮಹತ್ವಾಕಾಂಕ್ಷಿ ‘ಸ್ವಾಮಿತ್ವ ಯೋಜನೆ’ಯನ್ನು ಶೀಘ್ರವೇ ರಾಷ್ಟ್ರದಾದ್ಯಂತ ಜಾರಿಗೊಳಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದರು.

ಹರ್ದಾ ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಉದ್ದೇಶಿಸಿ ವರ್ಚುವಲ್ ಮೂಲಕ ಅವರು ಮಾತನಾಡಿದರು.

‘ಸರ್ವೆ ಆಫ್ ವಿಲೇಜಸ್ ಆಬಾದಿ ಆ್ಯಂಡ್ ಮ್ಯಾಪಿಂಗ್ ವಿಥ್ ಇಂಪ್ರೂವೈಸ್ಡ್ ಟೆಕ್ನಾಲಜಿ ಇನ್ ವಿಲೇಜ್ ಏರಿಯಾಸ್’ ಎಂಬುದರ ಸಂಕ್ಷಿಪ್ತ ರೂಪವೇ ‘ಸ್ವಾಮಿತ್ವ’. ‘ಯೋಜನೆಯಿಂದ ಗ್ರಾಮೀಣ ಪ್ರದೇಶದ ಆರ್ಥಿಕತೆ ಮತ್ತಷ್ಟು ಸದೃಢಗೊಂಡಿದೆ. ದೇಶದ ಗ್ರಾಮಗಳ ಅಭಿವೃದ್ಧಿಯಲ್ಲಿ ಈ ಯೋಜನೆಯಿಂದ ಹೊಸ ಅಧ್ಯಾಯವೇ ಆರಂಭವಾಗಲಿದೆ’ ಎಂದೂ ವಿಶ್ವಾಸ ವ್ಯಕ್ತಪಡಿಸಿದರು.

ಇಂದು 35 ಆಮ್ಲಜನಕ ಘಟಕಗಳ ಉದ್ಘಾಟನೆ

ನವದೆಹಲಿ (ಪಿಟಿಐ): ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸ್ಥಾಪಿಸಲಾಗಿರುವ 35 ವೈದ್ಯಕೀಯ ಆಮ್ಲಜನಕ ಘಟಕಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ (ಅ.7) ಉದ್ಘಾಟಿಸುವರು.

ಉತ್ತರಾಖಂಡದ ಹೃಷಿಕೇಶದಲ್ಲಿರುವ ಅಖಿಲ ಭಾರತ ವೈದ್ಯ ವಿಜ್ಞಾನಗಳ ಸಂಸ್ಥೆ (ಏಐಐಎಂಎಸ್) ಶಾಖೆಯಲ್ಲಿ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಧಾನಮಂತ್ರಿ ಕಚೇರಿ (ಪಿಎಂಒ) ಪ್ರಕಟಣೆ ತಿಳಿಸಿದೆ.

‘ಈ ಘಟಕಗಳ ಉದ್ಘಾಟನೆಯೊಂದಿಗೆ ದೇಶದ ಎಲ್ಲಾ ಜಿಲ್ಲಾ ಆಸ್ಪತ್ರೆಗಳು ಆಮ್ಲಜನಕ ಘಟಕಗಳನ್ನು ಹೊಂದಿದಂತಾಗಲಿದೆ’ ಎಂದು ಪಿಎಂಒ ತಿಳಿಸಿದೆ.

‘ಕೋವಿಡ್ ಪಿಡುಗು ಕಾಣಿಸಿಕೊಂಡ ನಂತರ, ದೇಶದ ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕ ಲಭ್ಯತೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದೆ. ಈ ಘಟಕಗಳ ನಿರ್ವಹಣೆ ಹಾಗೂ ಕಾರ್ಯಾಚರಣೆಗಾಗಿ 7 ಸಾವಿರಕ್ಕೂ ಅಧಿಕ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ’ ಎಂದೂ ಪ್ರಕಟಣೆ ತಿಳಿಸಿದೆ.

ಪಾಕ್: ಐಎಸ್‌ಐ ಮುಖ್ಯಸ್ಥ ಹಮೀದ್ ದಿಢೀರ್ ವರ್ಗ

ಇಸ್ಲಾಮಾಬಾದ್: ಪಾಕಿಸ್ತಾನದ ಪ್ರಬಲ ಗೂಢಾಚಾರಿ ಸಂಸ್ಥೆ ಇಂಟರ್ ಸರ್ವೀಸಸ್ ಇಂಟೆಲಿಜೆನ್ಸ್‌ನ (ಐಎಸ್‌ಐ) ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಫೈಜ್ ಹಮೀದ್ ಅವರನ್ನು ಸೇನೆಯು ಬುಧವಾರ ದಿಢೀರ್ ವರ್ಗಾವಣೆ ಮಾಡಿ ಪೇಶಾವರ ಕಾರ್ಪ್ಸ್ ಕಮಾಂಡರ್ ಆಗಿ ನೇಮಕ ಮಾಡಿದೆ.

ಅಫ್ಗಾನಿಸ್ತಾನವನ್ನು ತಾಲಿಬಾನ್ ವಶಪಡಿಸಿಕೊಂಡ ಬೆಳವಣಿಗೆಯ ಕಾರಣಕ್ಕಾಗಿ ಈ ವರ್ಗಾವಣೆ ಮಾಡಲಾಗಿದೆ ಎನ್ನಲಾಗಿದೆ. ಐಎಸ್‌ಐ ಹೊಸ ಡೈರೆಕ್ಟರ್ ಜನರಲ್ ಆಗಿ ಲೆಫ್ಟಿನೆಂಟ್ ಜನರಲ್ ನದೀಮ್ ಅಂಜುಮ್ ಅವರನ್ನು ನೇಮಕ ಮಾಡಲಾಗಿದೆ ಎಂದು ಪಾಕಿಸ್ತಾನ ಸೇನೆಯ ಐಎಸ್‌ಐನ ಮಾಧ್ಯಮ ವಿಭಾಗದ ಪ್ರಕಟಣೆಯು ತಿಳಿಸಿದೆ.

‘ನೀಟ್–ಎಸ್‌ಎಸ್’: ಪರೀಕ್ಷಾ ಮಾದರಿ ಪರಿಷ್ಕರಣೆ– ಮುಂದಿನ ವರ್ಷಕ್ಕೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು 2022–23ನೇ ಶೈಕ್ಷಣಿಕ ವರ್ಷದಿಂದ ನೀಟ್ –‘ಸೂಪರ್ ಸ್ಪೆಷಾಲಿಟಿ’ ಪರೀಕ್ಷೆಯಲ್ಲಿ ಬದಲಾವಣೆಗಳನ್ನು ಜಾರಿಗೆ ತರಲು ನಿರ್ಧರಿಸಿದೆ ಎಂದು ಸುಪ್ರೀಂ ಕೋರ್ಟ್‌ಗೆ ಬುಧವಾರ ತಿಳಿಸಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಸರ್ಕಾರ ತಿಳಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ವಿಕ್ರಮ್ ನಾಥ್ ಮತ್ತು ಬಿ.ವಿ.ನಾಗರತ್ನ ಅವರ ಪೀಠವು, ಈ ಸಂಬಂಧ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರ ಹೇಳಿಕೆಯನ್ನು ದಾಖಲಿಸಿತು. ಅಲ್ಲದೆ ಈ ವರ್ಷದಿಂದಲೇ ನೀಟ್-ಸೂಪರ್ ಸ್ಪೆಷಾಲಿಟಿಯ ಪರೀಕ್ಷಾ ಮಾದರಿಯಲ್ಲಿ ಬದಲಾವಣೆಗಳನ್ನು ಜಾರಿಗೆ ತರುವ ಕೇಂದ್ರದ ಹಿಂದಿನ ನಿರ್ಧಾರವನ್ನು ಪ್ರಶ್ನಿಸಿದ್ದ ವಿದ್ಯಾರ್ಥಿಗಳ ಅರ್ಜಿಗಳನ್ನು ಇತ್ಯರ್ಥಪಡಿಸಿತು.

ಆದಾಗ್ಯೂ, ಪರೀಕ್ಷಾ ಮಾದರಿಯಲ್ಲಿ ಮಾಡಿದ ಬದಲಾವಣೆಗಳ ಸಿಂಧುತ್ವದ ಕುರಿತ ಪ್ರಶ್ನೆಯನ್ನು ಮುಕ್ತವಾಗಿ ಬಿಡಲಾಗುವುದು ಎಂದು ಪೀಠ ಹೇಳಿತು.

‘ವೈದ್ಯಕೀಯ ವೃತ್ತಿ ಮತ್ತು ಶಿಕ್ಷಣವು ಒಂದು ವ್ಯಾಪಾರವಾಗಿ ಮಾರ್ಪಟ್ಟಿದೆ’ ಎಂದು ಬೇಸರ ವ್ಯಕ್ತಪಡಿಸಿದ ಪೀಠವು, ‘ಈಗ ವೈದ್ಯಕೀಯ ಶಿಕ್ಷಣದ ನಿಯಂತ್ರಣ ವ್ಯವಸ್ಥೆಯೂ ಅದೇ ಹಾದಿಯಲ್ಲಿ ಸಾಗಿದೆ. ಇದು ದೇಶದ ದುರಂತವಾಗಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿತು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ

Astrology

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ,ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs.999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

ಶ್ರೀಚಕ್ರ ಜ್ಯೋತಿಷ್ಯ ಪೀಠಂ ಕಠಿಣ ನಿಗೂಢ ಗುಪ್ತ ಸಮಸ್ಯೆಗಳಿಗೆ ಸಲಹೆ ಪಡೆಯಿರಿ. ಯಾವುದೇ ವಶೀಕರಣಗಳಿಗೆ 2865/-. 50 ವರ್ಷದ ಅನುಭವ 9845899127.

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಕೊಳ್ಳೇಗಾಲದ ಪ್ರಸಿದ್ಧ ತಾಂತ್ರಿಕರು ನುಡಿದಂತೆ ನಡೆಯುವುದು, ಅಸಾಧ್ಯವಾದದ್ದು ಇಲ್ಲಿ ಸಾಧ್ಯ, ದಾಂಪತ್ಯ ಕಲಹ, ಶತ್ರುಗಳ ಕಾಟ, ಮಾಟಮಂತ್ರ, ವಾಮಾಚಾರ, ಸ್ತ್ರೀಪುರುಷ ವಶೀಕರಣ, ಚೌಡಿಮಂತ್ರ ಶಕ್ತಿಯಿಂದ ಸಶ್ಮಾನ ಕಾಳಿಯ ಬಲಿಷ್ಠ ಪ್ರಯೋಗಗಳಿಂದ 3ದಿನದಲ್ಲಿ ಶಾಶ್ವತ ಪರಿಹಾರ ಗ್ಯಾರಂಟಿ ಪ್ರಧಾನ ತಾಂತ್ರಿಕ ವೆಂಕಟೇಶ ಮೂರ್ತಿ: ಉತ್ತರಹಳ್ಳಿ ಬೆಂಗಳೂರು: 9686748656

★||ಶ್ರೀಚಾಮುಂಡೇಶ್ವರಿದೇವಿ ಜ್ಯೋತಿಷ್ಯರು||★ ಸ್ತ್ರೀಪುರುಷ_ವಶೀಕರಣ, ಸಂಭೋಗ_ವಶೀಕರಣ ಇನ್ನೂ ಯಾವುದೇ ಸಮಸ್ಯೆಗಳಿಗೆ 15 ನಿಮಿಷಗಳಲ್ಲಿ ಪರಿಹಾರ. ರಾಘವೇಂದ್ರ_ಗುರೂಜಿ. 8050061378

||ಉಚಿತ ಭವಿಷ್ಯ|| ಅಷ್ಟಮಂಗಳ ಪ್ರಶ್ನೆಯಿಂದ ನಿಮ್ಮ ಜೀವನದ ಸಕಲಸಂಕಷ್ಟಗಳು ನಿವಾರಣೆ, ಸ್ತ್ರೀಪುರುಷ ವಶೀಕರಣ ಕೇವಲ 1ಗಂಟೆಯಲ್ಲಿ 101% ಮಾಡಿಕೊಡುತ್ತಾರೆ. ಕರೆಮಾಡಿ.9538486472

“ವಶೀಕರಣಯಂತ್ರ” ಜನವಶೀಕರಣ, ಲಕ್ಷ್ಮಿವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರು ವಶೀಕರಣ, ಕೇವಲ 2001 ರೂಪಾಯಿ ಗುರೂಜಿ ಮಹೇಶ್9686999517

DH ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
condition apply*
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE · JOB · NOTICE · NAME CHANGE · ANY OTHER CATEGORY
WWW.DHCLASSIFIEDS.COM
9880856233
9886213331
E-mail: dhclassifieds@deccanherald.co.in

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

✓ TOYOTA, ಟಾಟಾಮೋಟರ್ಸ್, ಬಿಗ್ ಬಜಾರ್ಸ್ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

✓ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಐಟಿಐ, ಡಿಪ್ಲೊಮಾದವರು 16,600-62000/-. ವಸತಿಯೂಟದೊಂದಿಗೆ 8123884588, 8123884788

✓ ಕರ್ನಾಟಕದಾದ್ಯಂತ ಹೆಸರಾಂತ 450 ಕಂಪನಿ ಹಾಗೂ Office ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ ನೇರನೇಮಕಾತಿ, ವಸತಿಯೂಟದೊಂದಿಗೆ 16,200-65,000/- 7022366461, 8904049301

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Part-Time Jobs

✓ ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಸಿನಿಮಾ ಧಾರವಾಹಿಗಾಗಿ ನಟ, ನಟಿಯರ ಮಕ್ಕಳ ಪೋಷಕ ಪಾತ್ರಗಳ ಆಯ್ಕೆ ನಡೆಯುತ್ತಿದ್ದು, ಭಾವಚಿತ್ರದೊಂದಿಗೆ ತಕ್ಷಣ ಸಂಪರ್ಕಿಸಿ : 9741496310 .

ವೈವಾಹಿಕ

Brides Wanted

Hindu

ವಧು ಬೇಕಾಗಿದೆ. ಒಕ್ಕಲಿಗ (ಗಂಗಟಿಕರ್) ಜನಾಂಗದ ಡಿಪ್ಲೊಮಾ 25 ವರ್ಷ ಸುಂದರವಾದ ಹುಡುಗನಿಗೆ ಹೈಯರ್ ಮಿಡಲ್ ಕ್ಲಾಸ್ ಕುಟುಂಬದಲ್ಲಿ ಸುಸಂಸ್ಕೃತ ವಧು ಬೇಕಾಗಿದೆ. ಮಧ್ಯವರ್ತಿಗಳು ಸಂಪರ್ಕಿಸಬಹುದು: 8073194478

ಪ್ರವಾಸ

Travel

10.11.2021, 4 ದಿನಗಳ ಗೋವಾ, ದೂದ್- ಸಾಗರ್. 24.11.2021, 12 ದಿನಗಳ ಗುಜರಾತ್, ಮಧ್ಯಪ್ರದೇಶ. 18.11.2021, 12 ದಿನಗಳ ಕಾಶಿ, ನೇಪಾಳ, ಮುಕ್ತಿನಾಥ. 11.11.2021, 12 ದಿನಗಳ ಸಂಪೂರ್ಣ ರಾಜಸ್ಥಾನ್. 11.11.2021 11 ದಿನಗಳ ಪುರಿ, ಕೊಲ್ಕತಾ, ಡಾರ್ಜಿಲಿಂಗ್. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು. 9880847001, 9342848791

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಜೇಸನ್, ಕೇನ್ ಉತ್ತಮ ಜೊತೆಯಾಟ; ದೇವದತ್ತ, ಮ್ಯಾಕ್ಸ್‌ವೆಲ್ ಹೋರಾಟಕ್ಕೆ ಒಲಿಯದ ಗೆಲುವು

ಸನ್‌ರೈಸರ್ಸ್‌ಗೆ ಮಣಿದ ಆರ್‌ಸಿಬಿ

ಅಬುಧಾಬಿ: ಕೊನೆಯ ಎಸೆತದ ವರೆಗೂ ಕುತೂಹಲ ಮೂಡಿಸಿದ್ದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮಣಿಯಿತು. ಶೇಕ್ ಜಯೇದ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ ಸನ್‌ರೈಸರ್ಸ್ ನಾಲ್ಕು ರನ್‌ಗಳ ರೋಚಕ ಜಯ ಸಾಧಿಸಿತು. ಇದು, ತಂಡಕ್ಕೆ 13 ಪಂದ್ಯಗಳಲ್ಲಿ ಒಲಿದ ಮೂರನೇ ಜಯವಾಗಿದೆ.

142 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಬೆಂಗಳೂರು 20 ಓವರ್‌ಗಳಲ್ಲಿ ಆರು ವಿಕೆಟ್‌ಗಳನ್ನು ಕಳೆದುಕೊಂಡು 137 ರನ್ ಗಳಿಸಿತು. ದೇವದತ್ತ ಪಡಿಕ್ಕಲ್ ಜೊತೆ ಇನಿಂಗ್ಸ್ ಆರಂಭಿಸಿದ ನಾಯಕ ವಿರಾಟ್ ಕೊಹ್ಲಿ ಮಧ್ಯಮ ವೇಗಿ ಭುವನೇಶ್ವರ್ ಕುಮಾರ್‌ಗೆ ಮೊದಲ ಓವರ್‌ನಲ್ಲೇ ವಿಕೆಟ್ ಒಪ್ಪಿಸಿದರು. ನಾಲ್ಕನೇ ಓವರ್‌ನಲ್ಲಿ ಡ್ಯಾನಿಯಲ್ ಕ್ರಿಸ್ಟಿಯನ್ ಕೂಡ ಔಟಾದರು. ಶ್ರೀಕರ್ ಭರತ್ ಕೂಡ ಮರಳಿದಾಗ ತಂಡ ಮೂರು ವಿಕೆಟ್‌ಗಳಿಗೆ 38 ರನ್ ಗಳಿಸಿ ಸಂಕಷ್ಟಕ್ಕೆ ಸಿಲುಕಿತು.

ಈ ಸಂದರ್ಭದಲ್ಲಿ ಪಡಿಕ್ಕಲ್ ಜೊತೆಗೂಡಿದ ಗ್ಲೆನ್ ಮ್ಯಾಕ್ಸ್‌ವೆಲ್ ಇನಿಂಗ್ಸ್ ಕಟ್ಟಿದರು. ಇಬ್ಬರೂ ಅರ್ಧಶತಕದ ಜೊತೆಯಾಟವಾಡಿದರು. ಹ್ಯಾಟ್ರಿಕ್ ಅರ್ಧಶತಕ ಗಳಿಸಿ ಬೆಂಗಳೂರು ತಂಡವನ್ನು ಪ್ಲೇ ಆಫ್ ಹಂತಕ್ಕೇರಿಸಿದ್ದ ಮ್ಯಾಕ್ಸ್‌ವೆಲ್ ಮತ್ತೊಮ್ಮೆ ತಂಡಕ್ಕೆ ಆಸರೆಯಾಗುವ ಭರವಸೆ ಮೂಡಿಸಿದರು. ಆದರೆ ಕೇನ್ ವಿಲಿಯಮ್ಸನ್ ಅವರ ಮಿಂಚಿನ ಫೀಲ್ಡಿಂಗ್‌ನಿಂದಾಗಿ ಮ್ಯಾಕ್ಸ್‌ವೆಲ್ ರನೌಟ್ ಆದರು. ಈ ಹಂತದಲ್ಲಿ ಒತ್ತಡ ಹೇರಲು ಆರಂಭಿಸಿದ ಸನ್‌ರೈಸರ್ಸ್ ಭರವಸೆ ಕೈಚೆಲ್ಲಲಿಲ್ಲ. ದೇವದತ್ತ ಔಟಾದ ನಂತರ ಎಬಿ ಡಿವಿಲಿಯರ್ಸ್ ಮತ್ತು ಶಹಬಾಜ್ ನಡೆಸಿದ ಪ್ರಯತ್ನಕ್ಕೆ ಫಲ ಸಿಗಲಿಲ್ಲ. ಕೊನೆಯ ಓವರ್‌ನಲ್ಲಿ ಒಂದು ಸಿಕ್ಸರ್ ಸಿಡಿಸಿ ನಿರೀಕ್ಷೆ ಮೂಡಿಸಿದ್ದ ಡಿವಿಲಿಯರ್ಸ್ ಕೊನೆಯ ಎಸೆತದಲ್ಲಿ ಬೇಕಾಗಿದ್ದ 'ಸಿಕ್ಸರ್' ಸಿಡಿಸಲು ವಿಫಲರಾದರು.

ಸನ್‌ರೈಸರ್ಸ್ ಹೈದರಾಬಾದ್ ತಂಡದ ಜೇಸನ್ ರಾಯ್ ಬ್ಯಾಟಿಂಗ್ ಶೈಲಿ –ಪಿಟಿಐ ಚಿತ್ರ

ಹೈದರಾಬಾದ್‌ಗೆ ಜೇಸನ್, ಕೇನ್ ಆಸರೆ: ಟಾಸ್ ಸೋತು ಬ್ಯಾಟಿಂಗ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು 141 ರನ್‌ಗಳಿಗೆ ನಿಯಂತ್ರಿಸುವಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಬೌಲರ್‌ಗಳು ಯಶಸ್ವಿಯಾದರು. ಜೇಸನ್ ರಾಯ್ ಜೊತೆ ಇನಿಂಗ್ಸ್ ಆರಂಭಿಸಿದ ಅಭಿಷೇಕ್ ಶರ್ಮಾ ತಲಾ ಒಂದು ಸಿಕ್ಸರ್ ಮತ್ತು ಒಂದು ಬೌಂಡರಿ ಸಿಡಿಸಿದರು. ಆದರೆ ತಂಡದ ಮೊತ್ತ 14 ರನ್ ಆಗುವಷ್ಟರಲ್ಲಿ ಅವರು ಔಟಾದರು. ಜೇಸನ್ ರಾಯ್ ಮತ್ತು ನಾಯಕ ಕೇನ್ ವಿಲಿಯಮ್ಸನ್ ಭರ್ಜರಿ ಜೊತೆಯಾಟ ಆಡಿ ಎರಡನೇ ವಿಕೆಟ್‌ಗೆ 70 ರನ್ ಸೇರಿಸಿದರು.

ಕೇನ್ ಔಟಾದ ನಂತರ ತಂಡ ದಿಢೀರ್ ಕುಸಿತ ಕಂಡಿತು. 15ನೇ ಓವರ್‌ನಲ್ಲಿ ಜೇಸನ್ ರಾಯ್ ಅವರ ಪ್ರತಿರೋಧವೂ ಅಂತ್ಯಗೊಂಡಿತು. ಅರ್ಧಶತಕದತ್ತ ಹೆಜ್ಜೆ ಹಾಕಿದ್ದ ಅವರು ಡ್ಯಾನಿಯಲ್ ಕ್ರಿಸ್ಟಿಯನ್‌ಗೆ ರಿಟರ್ನ್ ಕ್ಯಾಚ್ ನೀಡಿ ಮರಳಿದರು. ನಂತರ ಯಾರಿಗೂ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯಲು ಆಗಲಿಲ್ಲ.

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್ 7ಕ್ಕೆ 141 (20 ಓವರ್)
ಜೇಸನ್ ಸಿ ಮತ್ತು ಬಿ ಕ್ರಿಸ್ಟಿಯನ್ 44 (38ಎ, 4X5), ಅಭಿಷೇಕ್ ಸಿ ಮ್ಯಾಕ್ಸ್‌ವೆಲ್ ಬಿ ಗಾರ್ಟನ್ 13 (10ಎ, 4X1, 6X1), ವಿಲಿಯಮ್ಸನ್ ಬಿ ಹರ್ಷಲ್ 31 (29ಎ, 4X4), ಪ್ರಿಯಂ ಸಿ ಡಿವಿಲಿಯರ್ಸ್ ಬಿ ಕ್ರಿಸ್ಟಿಯನ್ 15 (11ಎ, 6X1), ಸಮದ್ ಎಲ್‌ಬಿಡಬ್ಲ್ಯು ಚಾಹಲ್ 1 (3ಎ), ವೃದ್ಧಿಮಾನ್ ಸಿ ಡಿವಿಲಿಯರ್ಸ್ ಬಿ ಹರ್ಷಲ್ 10 (8ಎ, 4X1), ಹೋಲ್ಡರ್ ಸಿ ಕ್ರಿಸ್ಟಿಯನ್ ಬಿ ಹರ್ಷಲ್ 16 (13ಎ, 4X2), ರಶೀದ್ ಔಟಾಗದೆ 7 (9ಎ, 4X1)
ಇತರೆ :(ನೋಬಾಲ್ 1, ವೈಡ್ 3) 4
ವಿಕೆಟ್ ಪತನ: 1–14 (ಅಭಿಷೇಕ್ ಶರ್ಮಾ, 1.5), 2–84 (ಕೇನ್ ವಿಲಿಯಮ್ಸನ್, 11.3), 3–105 (ಪ್ರಿಯಂ ಗರ್ಗ್, 14.1), 4–107 (ಜೇಸನ್ ರಾಯ್, 14.6), 5–107 (ಅಬ್ದುಲ್ ಸಮದ್, 15.1), 6–124 (ವೃದ್ಧಿಮಾನ್ ಸಹಾ, 17.2), 7–141 (ಜೇಸನ್ ಹೋಲ್ಡರ್, 19.6)
ಬೌಲಿಂಗ್: ಮೊಹಮ್ಮದ್ ಸಿರಾಜ್ 3–0–17–0, ಜಾರ್ಜ್ ಗಾರ್ಟನ್ 2–0–29–1, ಶಹಬಾಜ್ ಅಹಮ್ಮದ್ 4–0–21–0, ಹರ್ಷಲ್ ಪಟೇಲ್ 4–0–33–2, ಯಜುವೇಂದ್ರ ಚಾಹಲ್ 4–0–27–1, ಡ್ಯಾನ್ ಕ್ರಿಸ್ಟಿಯನ್ 3–0–14–2

ರಾಯಲ್ ಚಾಲೆಂಜರ್ಸ್ ಬೆಂಗಳೂರು 6ಕ್ಕೆ 137 (20 ಓವರ್)
ವಿರಾಟ್ ಎಲ್‌ಬಿಡಬ್ಲ್ಯು ಬಿ ಭುವನೇಶ್ವರ್ 5 (4ಎ, 4X1), ದೇವದತ್ತ ಸಿ ಸಮದ್ ಬಿ ರಶೀದ್ 41 (52ಎ, 4X4), ಕ್ರಿಸ್ಟಿಯನ್ ಸಿ ವಿಲಿಯಮ್ಸನ್ ಬಿ ಕೌಲ್ 1 (4ಎ), ಭರತ್ ಸಿ ವೃದ್ಧಿಮಾನ್ ಬಿ ಉಮ್ರಾನ್ 12 (10ಎ, 4X1, 6X1), ಮ್ಯಾಕ್ಸ್‌ವೆಲ್ ರನೌಟ್ (ವಿಲಿಯಮ್ಸನ್) 40 (25ಎ, 4X3, 6X2), ಡಿವಿಲಿಯರ್ಸ್ ಔಟಾಗದೆ 19 (13ಎ, 4X1, 6X1), ಶಹಬಾಜ್ ಸಿ ವಿಲಿಯಮ್ಸನ್ ಬಿ ಹೋಲ್ಡರ್ 14 (9ಎ, 4X2) ಗಾರ್ಟನ್ ಔಟಾಗದೆ 2 (3ಎ).
ಇತರೆ : (ಲೆಗ್‌ಬೈ 1, ವೈಡ್ 2) 3
ವಿಕೆಟ್ ಪತನ: 1–6 (ವಿರಾಟ್ ಕೊಹ್ಲಿ, 0.6), 2–18 (ಡ್ಯಾನ್ ಕ್ರಿಸ್ಟಿಯನ್, 3.2), 3–38 (ಶ್ರೀಕರ್ ಭರತ್, 6.5), 4–92 (ಗ್ಲೆನ್ ಮ್ಯಾಕ್ಸ್‌ವೆಲ್, 14.1), 5–109 (ದೇವದತ್ತ ಪಡಿಕ್ಕಲ್, 16.5), 6–128 (ಶಹಬಾಜ್ ಅಹಮದ್, 18.4)
ಬೌಲಿಂಗ್: ಭುವನೇಶ್ವರ್ ಕುಮಾರ್ 4–0–25–1, ಜೇಸನ್ ಹೋಲ್ಡರ್ 4–0–27–1, ಸಿದ್ಧಾರ್ಥ್ ಕೌಲ್ 4–1–24–1, ಉಮ್ರಾನ್ ಮಲಿಕ್ 4–0–21–1, ರಶೀದ್ ಖಾನ್ 4–0–39–1

ಫಲಿತಾಂಶ: ಸನ್‌ರೈಸರ್ಸ್ ಹೈದರಾಬಾದ್‌ಗೆ 4 ರನ್‌ಗಳ ಜಯ

ದೇವದತ್ತ ಪಡಿಕ್ಕಲ್ ಬ್ಯಾಟಿಂಗ್

ಚೆನ್ನೈಗೆ ಅಗ್ರ ಸ್ಥಾನದ ಮೇಲೆ ಕಣ್ಣು

ದುಬೈ (ಪಿಟಿಐ): ಈಗಾಗಲೇ ಪ್ಲೇ ಆಫ್ ಹಂತಕ್ಕೇರಿರುವ ಚೆನ್ನೈ ಸೂಪರ್ ಕಿಂಗ್ಸ್ ಅಗ್ರ ಸ್ಥಾನದ ಮೇಲೆ ಕಣ್ಣಿಟ್ಟು ಪಂಜಾಬ್ ಕಿಂಗ್ಸ್ ವಿರುದ್ಧ ಗುರುವಾರ ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಸೆಣಸಲಿದೆ.

ಹಿಂದಿನ ಎರಡು ಪಂದ್ಯಗಳಲ್ಲಿ ಸೋತಿರುವ ಮಹೇಂದ್ರ ಸಿಂಗ್ ಧೋನಿ ನೇತೃತ್ವದ ಚೆನ್ನೈ ಸೂಪರ್ ಕಿಂಗ್ಸ್ ಎಲ್ಲ ವಿಭಾಗಗಳಲ್ಲೂ ಬಲಿಷ್ಠವಾಗಿದ್ದು ಯಾವುದೇ ತಂಡವನ್ನು ಮಣಿಸುವ ಸಾಮರ್ಥ್ಯ ತನಗಿದೆ ಎಂಬುದನ್ನು ಈಗಾಗಲೇ ಸಾಬೀತು ಮಾಡಿದೆ. ಪಂಜಾಬ್ ಈಗಾಗಲೇ ಪ್ಲೇ ಆಫ್ ಭರವಸೆಯನ್ನು ಕಳೆದುಕೊಂಡಿದೆ.

ಋತುರಾಜ್ ಗಾಯಕವಾಡ್ ಮತ್ತು ಫಫ್ ಡು ಪ್ಲೆಸಿ ಜೋಡಿ ಚೆನ್ನೈಗೆ ಉತ್ತಮ ಆರಂಭ ಒದಗಿಸುತ್ತಿದ್ದಾರೆ. ಮಧ್ಯಮ ಕ್ರಮಾಂಕಕ್ಕೆ ಅಂಬಟಿ ರಾಯುಡು ಬಲ ತುಂಬಿದ್ದಾರೆ. ಮೋಯಿನ್ ಅಲಿ ಕೂಡ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಆದರೆ ಸುರೇಶ್ ರೈನಾ ಮತ್ತು ಮಹೇಂದ್ರ ಸಿಂಗ್ ಧೋನಿ ಅವರು ಫಾರ್ಮ್‌ನಲ್ಲಿಲ್ಲದೇ ಇರುವುದು ತಂಡದ ಆತಂಕಕ್ಕೆ ಕಾರಣವಾಗಿದೆ. ಆಲ್‌ರೌಂಡರ್ ರವೀಂದ್ರ ಜಡೇಜ ತಮ್ಮ ಪಾತ್ರವನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ.

ಬೌಲಿಂಗ್ ವಿಭಾಗದದಲ್ಲಿ ದೀಪಕ್ ಚಾಹರ್ ಮಿಂಚುತ್ತಿದ್ದು ಶಾರ್ದೂಲ್ ಠಾಕೂರ್, ಜೋಶ್ ಹ್ಯಾಜಲ್‌ವುಡ್, ಡ್ವೇನ್ ಬ್ರಾವೊ ಅವರಿಂದಲೂ ಉತ್ತಮ ಕಾಣಿಕೆ ಸಿಗುತ್ತಿದೆ.

ಕೆ.ಎಲ್.ರಾಹುಲ್ ನೇತೃತ್ವದ ಪಂಜಾಬ್ ಕಿಂಗ್ಸ್ ಸ್ಥಿರತೆಯ ಸಮಸ್ಯೆ ಎದುರಿಸುತ್ತಿದೆ. ರಾಹುಲ್ ಮತ್ತು ಮಯಂಕ್ ಅಗರವಾಲ್ ಬ್ಯಾಟಿಂಗ್‌ನಲ್ಲಿ ಮಿಂಚುತ್ತಿದ್ದರೆ. ಬೌಲಿಂಗ್‌ನಲ್ಲಿ ಮೊಹಮ್ಮದ್ ಶಮಿ, ಅರ್ಷದೀಪ್ ಸಿಂಗ್ ಮತ್ತು ರವಿ ಬಿಷ್ಣೋಯಿ ಅವರ ಮೇಲೆ ಭರವಸೆ ಇದೆ.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ರವೀಂದ್ರ ಜಡೇಜ (ಎಡ) ಮತ್ತು ಋತುರಾಜ್ ಗಾಯಕವಾಡ್ –ಪಿಟಿಐ ಚಿತ್ರ

ಆರೆಂಜ್ ಕ್ಯಾಪ್
(ಹೆಚ್ಚು ರನ್‌ಗಳಿಸಿದವರು)

ಆಟಗಾರ	ತಂಡ	ರನ್
ಕೆ.ಎಲ್.ರಾಹುಲ್	ಪಂಜಾಬ್	528
ಋತುರಾಜ್	ಚೆನ್ನೈ	521
ಶಿಖರ್ ಧವನ್	ಡೆಲ್ಲಿ	501

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್‌ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	29
ಆವೇಶ್ ಖಾನ್	ಡೆಲ್ಲಿ	22
ಬೂಮ್ರಾ	ಮುಂಬೈ	19

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಡೆಲ್ಲಿ ಕ್ಯಾಪಿಟಲ್ಸ್	13	10	3	00	00	20
ಚೆನ್ನೈ ಸೂಪರ್ ಕಿಂಗ್ಸ್	13	9	4	00	00	18
ಬೆಂಗಳೂರು	13	8	5	00	00	16
ಕೋಲ್ಕತ್ತ ನೈಟ್‌ರೈಡರ್ಸ್	13	6	7	00	00	12
ಮುಂಬೈ ಇಂಡಿಯನ್ಸ್	13	6	7	00	00	12
ಪಂಜಾಬ್	13	5	8	00	00	10
ರಾಜಸ್ಥಾನ	13	5	8	00	00	10
ಹೈದರಾಬಾದ್	13	3	10	00	00	6

* ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಶೂಟಿಂಗ್: ಚಿನ್ನ ಗೆದ್ದ ಭಾರತ ತಂಡ

ಮನು ಭಾಕರ್

ಲಿಮಾ (ಪಿಟಿಐ): ಭಾರತ ಮನು ಭಾಕರ್, ನಾಮ್ಯಾ ಕಪೂರ್ ಮತ್ತು ರೈದಮ್ ಸಂಗ್ವಾನ್ ಅವರಿದ್ದ ತಂಡವು ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಷಿಪ್‌ನ 25 ಮೀಟರ್ಸ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನಕ್ಕೆ ಗುರಿಯಿಟ್ಟಿತು.

ಭಾರತ ತಂಡವು ಬುಧವಾರ ನಡೆದ ಫೈನಲ್‌ನಲ್ಲಿ 16-4ರಿಂದ ಅಮೆರಿಕದ ಅಬ್ಬಿ ರಸೆಲ್ ಲೆವರೆಟ್, ಕೆಟಲಿನ್ ಮಾರ್ಗನ್ ಅಬೆಲ್ ಮತ್ತು ಅಡಾ ಕ್ಲಾಡಿಯಾ ಕೋರ್ಕಿನ್ ಅವರನ್ನು ಸೋಲಿಸಿತು.

ಬೆಂಗಳೂರು–ಆರ್‌ಯುಎಫ್‌ಸಿ ಪಂದ್ಯ ಡ್ರಾ

ಬೆಂಗಳೂರು: ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡ ಐ–ಲೀಗ್ ಅರ್ಹತಾ ಸುತ್ತಿನ ಗುಂಪು ಹಂತದ ಪಂದ್ಯದಲ್ಲಿ ಡ್ರಾಗೆ ಸಮಾಧಾನಪಟ್ಟುಕೊಂಡಿತು. ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ರಾಜಸ್ಥಾನ್ ಯುನೈಟೆಡ್ ಎಫ್‌ಸಿ ಎದುರಿನ ಪಂದ್ಯ 1–1ರಲ್ಲಿ ಸಮ ಆಯಿತು.

41ನೇ ನಿಮಿಷದಲ್ಲಿ ಪೆಡ್ರೊ ಮಾನ್ಜಿ ಗೋಲು ಗಳಿಸಿ ಬೆಂಗಳೂರಿಗೆ ಮುನ್ನಡೆ ತಂದುಕೊಟ್ಟರು. ಫ್ರೀ ಕಿಕ್‌ನಲ್ಲಿ ಚೆಂಡನ್ನು ಲೂಕಾ ಜೇಸನ್ ಅವರತ್ತ ಸಂಜು ಪ್ರಧಾನ್ ಒದ್ದರು. ಲೂಕಾ ಅವರಿಂದ ಲಭಿಸಿದ ಚೆಂಡನ್ನು ವಿಶಾಲ್ ಜೂನ್ ಅವರು ಗುರಿಯತ್ತ ಒದ್ದಿದ್ದರು. ಆದರೆ ಅದು ಕಂಬಕ್ಕೆ ತಾಗಿ ವಾಪಸ್ ಬಂದಿತು. ಈ ವೇಳೆ ಚೆಂಡನ್ನು ಪೆಡ್ರೊ ಗೋಲುಪೆಟ್ಟಿಗೆಯತ್ತ ಒದ್ದರು.

78ನೇ ನಿಮಿಷದಲ್ಲಿ ಸುಖಜೀತ್ ಸಿಂಗ್ ಗಳಿಸಿದ ಗೋಲಿನ ಮೂಲಕ ರಾಜಸ್ಥಾನ್ ತಂಡ ಸಮಬಲ ಸಾಧಿಸಿತು.

ರಾಜಸ್ಥಾನ್ ಎದುರು ಹಣಾಹಣಿ; ವೆಂಕಟೇಶ್, ವರುಣ್ ಮೇಲೆ ನಿರೀಕ್ಷೆ

ಕೋಲ್ಕತ್ತಕ್ಕೆ ಪ್ಲೇ ಆಫ್ ಬಯಕೆ

ಶಾರ್ಜಾ (ಪಿಟಿಐ): ಎರಡು ಬಾರಿಯ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪ್ಲೇ ಆಫ್ ಕನಸು ಹೊತ್ತುಕೊಂಡು ಗುರುವಾರ ಕಣಕ್ಕೆ ಇಳಿಯಲಿದೆ. ಟೂರ್ನಿಯಿಂದ ಈಗಾಗಲೇ ಹೊರಬಿದ್ದಿರುವ ರಾಜಸ್ಥಾನ್ ರಾಯಲ್ಸ್ ವಿರುದ್ಧ ತಂಡ ಕೊನೆಯ ಲೀಗ್ ಪಂದ್ಯದಲ್ಲಿ ಸೆಣಸಲಿದೆ.

13 ಪಂದ್ಯಗಳಿಂದ 12 ಪಾಯಿಂಟ್ ಕಲೆ ಹಾಕಿರುವ ಕೋಲ್ಕತ್ತ ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಉತ್ತಮ ರನ್ ರೇಟ್ ಹೊಂದಿರುವುದರಿಂದ ತಂಡ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್‌ಗಿಂತ ಒಂದು ಹೆಜ್ಜೆ ಮುಂದೆ ಇದೆ. ಮುಂಬೈ ಕೂಡ 13 ಪಂದ್ಯಗಳಿಂದ 12 ಪಾಯಿಂಟ್ ಗಳಿಸಿದೆ. ಈ ತಂಡ ಕೊನೆಯ ಪಂದ್ಯವನ್ನು ಶುಕ್ರವಾರ ಸನ್‌ರೈಸರ್ಸ್ ಹೈದರಾಬಾದ್ ಎದುರು ಆಡಲಿದೆ.

ಕೋಲ್ಕತ್ತ ಮತ್ತು ಮುಂಬೈ ಇಂಡಿಯನ್ಸ್ ತಮ್ಮ ಕೊನೆಯ ಪಂದ್ಯಗಳನ್ನು ಗೆದ್ದುಕೊಂಡರೆ ರನ್‌ರೇಟ್‌ನಲ್ಲಿ ಮುಂಬೈಗಿಂತ ಮೇಲೆಯೇ ಉಳಿಯಲಿದೆ. ಆದರೆ ಸೋತರೆ ಸಂಕಷ್ಟಕ್ಕೆ ಸಿಲುಕಲಿದೆ. ಮಂಗಳವಾರ ನಡೆದ ಪಂದ್ಯದಲ್ಲಿ ಮುಂಬೈ ಭಾರಿ ಅಂತರದಿಂದ ಜಯಿಸಿತ್ತು.

ಟೂರ್ನಿಯ ಎರಡನೇ ಹಂತದ ಆರಂಭದಲ್ಲಿ ಸತತ ಎರಡು ಜಯದೊಂದಿಗೆ ಕೋಲ್ಕತ್ತ ಉತ್ತಮ ಆರಂಭ ಕಂಡಿತ್ತು. ನಂತರ ಸೋಲು ಮತ್ತು ಗೆಲುವಿನ ಮಿಶ್ರ ಫಲಿತಾಂಶದೊಂದಿಗೆ ಮುಂದೆ ಸಾಗಿತ್ತು. ವೆಂಕಟೇಶ ಅಯ್ಯರ್ ಇತ್ತೀಚಿನ ಕೆಲವು ಪಂದ್ಯಗಳಲ್ಲಿ ಅಮೋಘ ಬ್ಯಾಟಿಂಗ್ ಮಾಡುತ್ತಿದ್ದು ತಂಡಕ್ಕೆ ಬಲ ತುಂಬಿದ್ದಾರೆ. ರಾಹುಲ್ ತ್ರಿಪಾಠಿ, ಶುಭಮನ್ ಗಿಲ್, ನಿತೀಶ್ ರಾಣಾ ಅವರಿಂದಲೂ ಉತ್ತಮ ಕಾಣಿಕೆ ಸಿಗುತ್ತಿದೆ. ಆದರೆ ನಾಯಕ ಏಯಾನ್ ಮಾರ್ಗನ್ ಇನ್ನೂ ಲಯ ಕಂಡುಕೊಂಡಿಲ್ಲ.

ಬೌಲಿಂಗ್ ವಿಭಾಗದಲ್ಲಿ ಸ್ಪಿನ್ನರ್‌ಗಳಾದ ವರುಣ್ ಚಕ್ರವರ್ತಿ ಮತ್ತು ಸುನಿಲ್ ನಾರಾಯಣ್ ಯಾವುದೇ ಬ್ಯಾಟರ್‌ಗಳಿಗೆ ಸವಾಲೊಡ್ಡಬಲ್ಲರು. ಟಿಮ್ ಸೌಥಿ ಮತ್ತು ಶಿವಂ ಮಾವಿ ಕೂಡ ಬೌಲಿಂಗ್ ವಿಭಾಗಕ್ಕೆ ಬಲ ತುಂಬಿದ್ದಾರೆ. ಪ್ರಸಿದ್ಧ ಕೃಷ್ಣ ಉತ್ತಮ ದಾಳಿ ಸಂಘಟಿಸುತ್ತಿದ್ದರು. ಆದರೆ ಚೆನ್ನೈ ವಿರುದ್ಧದ ಪಂದ್ಯದಲ್ಲಿ 22 ರನ್ ಬಿಟ್ಟುಕೊಟ್ಟ ನಂತರ ತಂಡದಿಂದ ಕೈಬಿಡಲಾಗಿತ್ತು.

ಜಯದೊಂದಿಗೆ ಅಭಿಯಾನ ಮುಕ್ತಾಯಕ್ಕೆ ಪ್ರಯತ್ನ: ಟೂರ್ನಿಯಿಂದ ಹೊರಬಿದ್ದಿರುವ ರಾಜಸ್ಥಾನ್ ರಾಯಲ್ಸ್ ಕೊನೆಯ ಪಂದ್ಯದಲ್ಲಿ ಜಯ ಗಳಿಸಿ ಅಭಿಯಾನಕ್ಕೆ ಅಂತ್ಯಹಾಡಲು ಪ್ರಯತ್ನಿಸಲಿದೆ. ಯಶಸ್ವಿಯ ಜೈಸ್ವಾಲ್ ಮತ್ತು ಸಂಜು ಸ್ಯಾಮ್ಸನ್ ಅವರನ್ನು ಹೊರತುಪಡಿಸಿದರೆ ತಂಡದಲ್ಲಿರುವ ಭಾರತದ ಬ್ಯಾಟ್ಸ್‌ಮನ್‌ಗಳು ಈ ಬಾರಿ ಮಿಂಚಲಿಲ್ಲ. ಬೌಲಿಂಗ್ ವಿಭಾಗದಲ್ಲಿ ಮುಸ್ತಫಿಜುರ್ ರಹಿಮಾನ್ ಮತ್ತು ಚೇತನ್ ಸಕಾರಿಯ ಭರವಸೆ ತುಂಬಿದ್ದಾರೆ.

ಪಂದ್ಯ ಆರಂಭ ರಾತ್ರಿ 7.30
ಲೈವ್ ಸ್ಟಾರ್ ಸ್ಪೋರ್ಟ್ಸ್



ಚೇತನ್ ಸಕಾರಿಯ –ಪಿಟಿಐ ಚಿತ್ರ

ವೆಂಕಟೇಶ್ ಅಯ್ಯರ್ –ಪಿಟಿಐ ಚಿತ್ರ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಸ್ಯಾಫ್ ಫುಟ್‌ಬಾಲ್: ಮೊದಲ ಗೆಲುವಿಗೆ ಭಾರತದ ಛಲ

ಮಾಲೆ, ಮಾಲ್ಡಿವ್ಸ್ (ಪಿಟಿಐ): ಈ ಬಾರಿಯ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಗೆಲುವಿನ ನಿರೀಕ್ಷೆಯಲ್ಲಿರುವ ಭಾರತ ತಂಡವು ಗುರುವಾರ ಶ್ರೀಲಂಕಾ ತಂಡಕ್ಕೆ ಮುಖಾಮುಖಿಯಾಗಲಿದೆ.

ಏಳು ಬಾರಿ ಸ್ಯಾಫ್ ಚಾಂಪಿಯನ್ ಆಗಿರುವ ಭಾರತಕ್ಕೆ, ಈಗ ಎದುರಾಗಲಿರುವ ಶ್ರೀಲಂಕಾ ಕೂಡ ಟೂರ್ನಿಯಲ್ಲಿ ಆಡಿದ ಎರಡೂ ಪಂದ್ಯಗಳಲ್ಲೂ ನಿರಾಸೆ ಅನುಭವಿಸಿದೆ. ಎದುರಾಳಿಗಳಿಗೆ ನಾಲ್ಕು ಗೋಲು ಬಿಟ್ಟುಕೊಟ್ಟಿದ್ದು, ಎರಡು ಗೋಲು ಗಳಿಸಿದೆ.

ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ 76 ಗೋಲು ಗಳಿಸಿರುವ ಚೆಟ್ರಿ ಅವರಿಗೆ ಫುಟ್‌ಬಾಲ್ ದಂತಕತೆ, ಬ್ರೆಜಿಲ್‌ನ ಪೆಲೆ ಅವರ ಸಾಧನೆ (77) ಸಮಗಟ್ಟಲು ಇನ್ನು ಒಂದು ಗೋಲು ಬೇಕಾಗಿದೆ.

ಪಂದ್ಯ ಆರಂಭ: ಸಂಜೆ 4.30
ನೇರ ಪ್ರಸಾರ: ಯೂರೊ ಸ್ಪೋರ್ಟ್



ಮೆಗ್‌ಲ್ಯಾನಿಂಗ್ ಪಡೆಯ ಎದುರು ಹರ್ಮನ್‌ಪ್ರೀತ್ ಕೌರ್ ಬಳಗದ ಮುಖಾಮುಖಿ

ಭಾರತ–ಆಸ್ಟ್ರೇಲಿಯಾ ಟಿ20 ಸರಣಿಗೆ ಇಂದು ನಾಂದಿ

ಗೋಲ್ಡ್ ಕೋಸ್ಟ್ (ಪಿಟಿಐ): ಗಾಯದಿಂದ ಗುಣಮುಖರಾಗಿ ಮರಳಿರುವ ಹರ್ಮನ್‌ಪ್ರೀತ್ ಕೌರ್ ಅವರು ಆಸ್ಟ್ರೇಲಿಯಾ ಎದುರು ಗುರುವಾರ ಆರಂಭವಾಗಲಿರುವ ಮೂರು ಪಂದ್ಯಗಳ ಟಿ20 ಕ್ರಿಕೆಟ್ ಸರಣಿಯಲ್ಲಿ ಭಾರತವನ್ನು ಮುನ್ನಡೆಸಲಿದ್ದಾರೆ. ಗೆಲುವಿನೊಂದಿಗೆ ಆಸ್ಟ್ರೇಲಿಯಾ ಪ್ರವಾಸಕ್ಕೆ ತೆರೆ ಎಳೆಯುವ ಗುರಿಯೊಂದಿಗೆ ಭಾರತ ಕಣಕ್ಕೆ ಇಳಿಯಲಿದೆ.

ಏಕದಿನ ಸರಣಿಯಲ್ಲಿ 1–2ರಿಂದ ಸೋತಿರುವ ಭಾರತ ಏಕೈಕ ಟೆಸ್ಟ್ ಪಂದ್ಯದಲ್ಲಿ ಅಮೋಘ ಆಟವಾಡಿತ್ತು. ಚೊಚ್ಚಲ ಹಗಲು ರಾತ್ರಿ ಟೆಸ್ಟ್ ಪಂದ್ಯವನ್ನು ಡ್ರಾ ಮಾಡಿಕೊಂಡಿತ್ತು. 32 ವರ್ಷದ ಹರ್ಮನ್‌ಪ್ರೀತ್ ಕೌರ್ ಅವರು ಮಿಥಾಲಿ ರಾಜ್ ಮುನ್ನಡೆಸಿದ್ದ ಏಕದಿನ ಮತ್ತು ಟೆಸ್ಟ್‌ನಲ್ಲಿ ಹೆಬ್ಬೆರಳಿನ ಗಾಯದಿಂದಾಗಿ ಆಡಿರಲಿಲ್ಲ. ಅವರು ಮರಳಿರುವುದರಿಂದ ತಂಡದ ಬ್ಯಾಟಿಂಗ್ ವಿಭಾಗಕ್ಕೆ ಬಲ ಬಂದಿದೆ. ಸ್ಫೋಟಕ ಶೈಲಿಯ ಬ್ಯಾಟರ್‌ಗಳಾದ ಶಫಾಲಿ ವರ್ಮಾ ಮತ್ತು ಸ್ಮೃತಿ ಮಂದಾನ ಅವರನ್ನು ಒಳಗೊಂಡಿರುವ ಅಗ್ರ ಕ್ರಮಾಂಕ ಈಗ ನಿರಾಳವಾಗಿದೆ.

ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಶತಕ ಸಿಡಿಸಿ ಆಸ್ಟ್ರೇಲಿಯಾ ನೆಲದಲ್ಲಿ ಮೂರಂಕಿ ದಾಟಿದ ಭಾರತದ ಮೊದಲ ಆಟಗಾರ್ತಿ ಎನಿಸಿಕೊಂಡಿರುವ ಮಂದಾನ ಟಿ20 ಸರಣಿಯಲ್ಲಿ ಭರವಸೆಯೊಂದಿಗೆ ಕಣಕ್ಕೆಇಳಿಯಲಿದ್ದಾರೆ. ಜೆಮಿಮಾ ರಾಡ್ರಿಗಸ್ ಕೂಡ ಟಿ20 ತಂಡದ ಆಸ್ತಿಯಾಗಿದ್ದಾರೆ. ಮೇಘನಾ ಸಿಂಗ್, ಪೂಜಾ ವಸ್ತ್ರಕಾರ್ ಮತ್ತು ಶಿಖಾ ಪಾಂಡೆ ಅವರು ಬೌಲಿಂಗ್ ವಿಭಾಗದ ಚುಕ್ಕಾಣಿ ಹಿಡಿಯುವರು.

ಆಸ್ಟ್ರೇಲಿಯಾ ತಂಡ ಆಲ್‌ರೌಂಡ್ ಆಟವಾಡುವ ನಿರೀಕ್ಷೆಯಲ್ಲಿದೆ. ಏಕದಿನ ಮತ್ತು ಟೆಸ್ಟ್‌ನಲ್ಲಿ ಅತ್ಯುತ್ತಮ ಆಟದ ಮೂಲಕ ಮಿಂಚಿರುವ ತಹಲಿಯಾ ಮೆಗ್ರಾ ಅವರು ಟಿ20 ಕ್ರಿಕೆಟ್‌ಗೆ ಪದಾರ್ಪಣೆ ಮಾಡುವ ನಿರೀಕ್ಷೆಯಲ್ಲಿದ್ದಾರೆ.

ಹರ್ಮನ್‌ಪ್ರೀತ್ ಕೌರ್ –ರಾಯಿಟರ್ಸ್ ಚಿತ್ರ

ತಂಡಗಳು: ಭಾರತ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್, ದೀಪ್ತಿ ಶರ್ಮಾ, ಸ್ನೇಹ್ ರಾಣಾ, ಯಷ್ತಿಕಾ ಭಾಟಿಯ, ಶಿಖಾ ಪಾಂಡೆ, ಮೇಘನಾ ಸಿಂಗ್, ಪೂಜಾ ವಸ್ತ್ರಕಾರ್, ರಾಜೇಶ್ವರಿ ಗಾಯಕವಾಡ್, ಪೂನಂ ಯಾದವ್, ರಿಚಾ ಘೋಷ್ (ವಿಕೆಟ್ ಕೀಪರ್), ಹರ್ಲೀನ್ ಡಿಯೋಲ್, ಅರುಂಧತಿ ರೆಡ್ಡಿ, ರಾಧಾ ಯಾದವ್, ರೇಣುಕಾ ಸಿಂಗ್.

ಆಸ್ಟ್ರೇಲಿಯಾ: ಮೆಗ್ ಲ್ಯಾನಿಂಗ್ (ನಾಯಕಿ), ಡಾರ್ಸಿ ಬ್ರೌನ್, ಮೈಟ್ಲಾನ್ ಬ್ರೌನ್, ಸ್ಟೆಲ್ಲಾ ಕ್ಯಾಂಪ್‌ಬೆಲ್, ನಿಕೋಲಾ ಕ್ಯಾರಿ, ಹನಾ ಡಾರ್ಲಿಂಗ್ಟನ್, ಆ್ಯಶ್ಲಿ ಗಾರ್ಡನರ್, ಅಲಿಸಾ ಹೀಲಿ, ತಹಲಿಯಾ ಮೆಗ್ರಾ, ಸೋಫಿ ಮೋಲಿನೆಕ್ಸ್, ಬೇಥ್ ಮೂನಿ, ಎಲಿಸ್ ಪೆರಿ, ಜಾರ್ಜಿಯಾ ರೆಡ್‌ಮೇಯ್ನೆ, ಮೋಲಿ ಸ್ಟ್ರಾನೊ, ಅನಾಬೆಲ್ ಸೂಥರ್ಲೆಂಡ್, ಟೈಲಾ ವೆಲ್ಮೆನಿಕ್, ಜಾರ್ಜಿಯಾ ವಾರೆಹಂ.

ಆರಂಭ: ಮಧ್ಯಾಹ್ನ 2.10 (ಭಾರತೀಯ ಕಾಲಮಾನ)
ನೇರ ಪ್ರಸಾರ: ಸೋನಿ ಸಿಕ್ಸ್, ಸೋನಿ ಟೆನ್

ಎಫ್‌ಐಎಚ್ ವಾರ್ಷಿಕ ಪ್ರಶಸ್ತಿ ಘೋಷಣೆ: ಶ್ರೀಜೇಶ್, ಸವಿತಾ ಉತ್ತಮ ಗೋಲ್‌ಕೀಪರ್‌ಗಳು

ಹರ್ಮನ್‌ಪ್ರೀತ್, ಗುರ್ಜೀತ್ ಶ್ರೇಷ್ಠ ಹಾಕಿಪಟುಗಳು

ಲಾಸೇನ್ (ಪಿಟಿಐ): ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ವಾರ್ಷಿಕ ಪ್ರಶಸ್ತಿಗಳನ್ನು ಘೋಷಿಸಿದ್ದು ಪ್ರಮುಖ ಪ್ರಶಸ್ತಿಗಳು ಭಾರತದ ಪುರುಷ ಮತ್ತು ಮಹಿಳಾ ತಂಡದ ಹಾಕಿಪಟುಗಳಿಗೆ ಲಭಿಸಿವೆ. ಮತದಾನದ ಮೂಲಕ ಪ್ರಶಸ್ತಿಗೆ ಆಯ್ಕೆ ನಡೆದಿದೆ. ಪುರುಷ ಮತ್ತು ಮಹಿಳಾ ತಂಡದ ಆರು ಹಾಕಿಪಟುಗಳು ಹಾಗೂ ಒಲಿಂಪಿಕ್ಸ್‌ನಲ್ಲಿ ಎರಡೂ ತಂಡಗಳ ಕೋಚ್‌ಗಳಿಗೆ ಗೌರವ ಸಂದಿದೆ.

ಆದರೆ, ಪುರುಷರ ವಿಭಾಗದಲ್ಲಿ ಒಲಿಂಪಿಕ್ ಚಾಂಪಿಯನ್ ಆಗಿರುವ ಬೆಲ್ಜಿಯಂ ಪ್ರಶಸ್ತಿ ವಿಷಯದಲ್ಲಿ ತಕರಾರು ಎತ್ತಿದ್ದು ಮತದಾನದಲ್ಲಿ ಎಫ್‌ಐಎಚ್ ವೈಫಲ್ಯ ಕಂಡಿದೆ ಎಂದು ಆರೋಪಿಸಿದೆ.

ಹರ್ಮನ್‌ಪ್ರೀತ್ ಸಿಂಗ್ ವರ್ಷದ ಶ್ರೇಷ್ಠ ಆಟಗಾರ ಪ್ರಶಸ್ತಿ ಗಳಿಸಿದ್ದು ಗುರ್ಜೀತ್ ಕೌರ್ ವರ್ಷದ ಉತ್ತಮ ಆಟಗಾರ್ತಿ ಎನಿಸಿಕೊಂಡಿದ್ದಾರೆ. ಪಿ.ಆರ್.ಶ್ರೀಜೇಶ್ ಮತ್ತು ಸವಿತಾ ಪೂನಿಯಾ ಅತ್ಯುತ್ತಮ ಗೋಲ್‌ಕೀಪರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಶರ್ಮಿಳಾ ದೇವಿ ಮತ್ತು ವಿವೇಕ್ ಸಾಗರ್ ಪ್ರಸಾದ್ ಅತ್ಯುತ್ತಮ ಉದಯೋನ್ಮುಖ ಹಾಕಿಪಟುಗಳು ಪ್ರಶಸ್ತಿಯನ್ನು ಗೆದ್ದು-

ಗುರ್ಜೀತ್ ಕೌರ್– ಎಎಫ್‌ಪಿ ಚಿತ್ರ

ಕೊಂಡಿದ್ದಾರೆ.

ಡ್ರ್ಯಾಗ್ ಫ್ಲಿಕ್ ಪರಿಣಿತರಾದ ಹರ್ಮನ್‌ಪ್ರೀತ್ ಸಿಂಗ್ ಮತ್ತು ಗುರ್ಜೀತ್ ಕೌರ್ ಅವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ತಂಡಗಳ ಪರವಾಗಿ ಅತಿಹೆಚ್ಚು ಗೋಲು ಗಳಿಸಿದ ಸಾಧನೆ ಮಾಡಿದ್ದರು. ಪುರುಷರ ತಂಡದ ಕೋಚ್ ಗ್ರಹಾಂ ರೀಡ್ ಮತ್ತು ಮಹಿಳಾ ತಂಡದ ಕೋಚ್ ಆಗಿದ್ದ ಶೊರ್ಡ್ ಮ್ಯಾರಿಜ್ ಉತ್ತಮ ಕೋಚ್ ಪ್ರಶಸ್ತಿ ಗಳಿಸಿದ್ದಾರೆ. ಗ್ರಹಾಂ ರೀಡ್ ಈಗ ತಂಡದ ಜೊತೆ ಇದ್ದಾರೆ. ಮ್ಯಾರಿಜ್ ಅವರ ಅವಧಿ ಒಲಿಂಪಿಕ್ಸ್ ನಂತರ ಮುಕ್ತಾಯಗೊಂಡಿತ್ತು.

ರಾಷ್ಟ್ರೀಯ ತಂಡಗಳ ನಾಯಕರು

ದಾಖಲಾದ ಮತಗಳ ವಿವರ		
ಪ್ರದೇಶ	ಸದಸ್ಯರು	ಮತಗಳು
ಆಫ್ರಿಕಾ	25	11
ಏಷ್ಯಾ	33	29
ಯೂರೋಪ್	42	19
ಓಷಿನಿಯಾ	8	3
ಪ್ಯಾನ್ ಅಮೆರಿಕ	30	17

ಮತ್ತು ಕೋಚ್‌ಗಳ ಮತಗಳು ಒಟ್ಟಾರೆ ಮತಗಳ 50 ಶೇಕಡಾ ಪಾಲು ಹೊಂದಿದ್ದು ಆಟಗಾರರು ಮತ್ತು ಅಭಿಮಾನಿಗಳ ಮತಗಳು 25 ಶೇಕಡಾ ಮತ್ತು ಮಾಧ್ಯಮಗಳ ಮತಗಳು 25 ಶೇಕಡಾ ಇದ್ದವು. ವಿವಿಧ ರಾಷ್ಟ್ರೀಯ ಪ್ರತಿನಿಧಿಗಳ ಒಟ್ಟು 79 ಮತಗಳು ದಾಖಲಾಗಿದ್ದವು.

ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ಅತ್ಯುತ್ತಮ ಹಾಕಿಪಟುಗಳ ಆಯ್ಕೆಗೆ ಬೆಲ್ಜಿಯಂನಿಂದ ಹೆಸರು ಶಿಫಾರಸು ಆಗಿತ್ತು. ಆದರೆ ಮತಗಳ ಎಣಿಕೆಯಾದಾಗ ಭಾರತ ಮೇಲುಗೈ ಸಾಧಿಸಿತ್ತು. ಬೆಲ್ಜಿಯಂ 2020-21ರ ಎಫ್‌ಐಎಚ್ ಹಾಕಿ ಪ್ರೊ ಲೀಗ್‌ನ ಪ್ರಶಸ್ತಿಯನ್ನೂ ಗೆದ್ದುಕೊಂಡಿತ್ತು. ಅಲೆಕ್ಸಾಂಡರ್ ಹೆನ್ರಿಕ್ಸ್ ಮತ್ತು ಆರ್ಥರ್ ವ್ಯಾನ್ ಡೊರೆನ್ ಉತ್ತಮ ಆಟಗಾರರಿಗಾಗಿ ನಡೆದ ಮತದಾನದಲ್ಲಿ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು. ಬೆಲ್ಜಿಯಂನ ವಿನ್ಸೆಂಟ್ ವನಶ್ ಎರಡನೇ ಅತ್ಯುತ್ತಮ ಗೋಲ್‌ಕೀಪರ್ ಮತ್ತು ನ್ಯೂಜಿಲೆಂಡ್‌ನ ಶೇನ್ ಮೆಕ್‌ಲೀಡ್ ಮೂರನೇ ಉತ್ತಮ ಗೋಲ್ ಕೀಪರ್ ಎನಿಸಿಕೊಂಡರು.

ಅತ್ಯುತ್ತಮ ಆಟಗಾರ್ತಿಯರ ಪ್ರಶಸ್ತಿಯ ಎರಡು ಮತ್ತು ಮೂರನೇ ಸ್ಥಾನ ಕ್ರಮವಾಗಿ ನೆದರ್ಲೆಂಡ್ಸ್‌ನ ಇವಾ ಡಿ ಜೋಡ್ ಮತ್ತು ಫ್ರೆಡ್ರಿಕ್ ಮಟ್ಲಾ ಅವರ ಪಾಲಾಯಿತು.

ಹರ್ಮನ್‌ಪ್ರೀತ್ ಸಿಂಗ್ —ಎಫ್‌ಐಎಚ್ ಚಿತ್ರ

ಟೆನಿಸ್: ರಿತಿಕ್, ತನುಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಆಟವಾಡಿದ ರಿತಿಕ್ ಜಯಂತ್ ಹಾಗೂ ತನು ವಿಶ್ವಾಸ, ಇಲ್ಲಿ ನಡೆದ ಎಐಟಿಎ ಸಿಎಸ್3 12 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗಗಳಲ್ಲಿ ಪ್ರಶಸ್ತಿ ಗಳಿಸಿದರು.

ರಾಜ್ಯ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ನಡೆದ ಟೂರ್ನಿಯ ಬಾಲಕರ ವಿಭಾಗದ ಫೈನಲ್‌ನಲ್ಲಿ ಬುಧವಾರ ತಮಿಳುನಾಡಿನ ರಿತಿಕ್ 6-2, 6-4ರಿಂದ ಕರ್ನಾಟಕದ ಲಖಿತ್ ಗೌಡ ಎದುರು ಜಯ ಸಾಧಿಸಿದರು. ಮೊದಲ ಸೆಟ್ ಸುಲಭವಾಗಿ ಗೆದ್ದ ರಿತಿಕ್, ಎರಡನೇ ಸೆಟ್‌ನಲ್ಲಿ ಪ್ರತಿರೋಧ ಎದುರಿಸಿದರು.

ಪ್ರಶಸ್ತಿಗಳೊಂದಿಗೆ ರಿತಿಕ್ ಜಯಂತ್ ಮತ್ತು ತನು ವಿಶ್ವಾಸ್

ಕರ್ನಾಟಕದವರೇ ಇದ್ದ ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ತನು 6-4, 6-4ರಿಂದ ಸೃಷ್ಟಿ ಕಿರಣ್ ಸವಾಲು ಮೀರಿದರು.

ವಿಶ್ವ ಕುಸ್ತಿ: ಫೈನಲ್‌ಗೆ ಅನ್ಶು

ಓಸ್ಲೊ, ನಾರ್ವೆ (ಪಿಟಿಐ): ಭಾರತದ ಅನ್ಶು ಮಲಿಕ್ ಅವರು ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನ ಫೈನಲ್ ಪ್ರವೇಶಿಸಿ ಈ ಸಾಧನೆ ಮಾಡಿದ ಭಾರತದ ಮೊದಲ ಮಹಿಳೆ ಎನಿಸಿಕೊಂಡರು.

ಬುಧವಾರ ನಡೆದ 57 ಕೆಜಿ ವಿಭಾಗದ ಸೆಮಿಫೈನಲ್ ಬೌಟ್‌ನಲ್ಲಿ ಅವರು ಜೂನಿಯರ್ ಯುರೋಪಿಯನ್ ಚಾಂಪಿಯನ್ ಸೊಲೊಮಿಯಾ ವೈನಿಕ್ ವಿರುದ್ಧ ಜಯ ಗಳಿಸಿದರು.

19 ವರ್ಷದ ಅನ್ಶು ಮಲಿಕ್ ಆರಂಭದಿಂದಲೇ ಆಧಿಪತ್ಯ ಸ್ಥಾಪಿಸಿ ಏಕಪಕ್ಷೀಯವಾಗಿ ಗೆಲುವು ಸಾಧಿಸಿದರು. ಸರಿತಾ ಮೋರ್ ಸೆಮಿಫೈನಲ್‌ನಲ್ಲಿ ಸೋತು ನಿರಾಸೆಗೊಂಡರು.



ಅನ್ಶು ಮಲಿಕ್ —ಫೇಸ್‌ಬುಕ್ ಚಿತ್ರ

59 ಕೆಜಿ ವಿಭಾಗದ ಬೌಟ್‌ನಲ್ಲಿ ಸರಿತಾ ಹಾಲಿ ಚಾಂಪಿಯನ್ ಲಿಂಡಾ ಮೊರಾಯಿಸ್ ಅವರನ್ನು ಚಿತ್ ಮಾಡಿ ಸೆಮಿಫೈನಲ್ ಪ್ರವೇಶಿಸಿದ್ದರು. ಅವರಿಗೆ ಮೊದಲ ಸುತ್ತಿನಲ್ಲಿ ಕೆನಡಾದ, ಮಾಜಿ ವಿಶ್ವ ಚಾಂಪಿಯನ್ ಲಿಂಡಾ ಸವಾಲು ಎದುರಾಯಿತು. ಈ ಹಣಾಹಣಿಯಲ್ಲಿ ಸರಿತಾ 8-2ರಿಂದ ಗೆದ್ದರು. ಕ್ವಾರ್ಟರ್ ಫೈನಲ್‌ನ ಸೆಣಸಾಟದಲ್ಲಿ ಸರಿತಾ ಅವರು 3-1ರಿಂದ ಜರ್ಮನಿಯ ಸ್ಯಾಂಡ್ರಾ ಪರುಸೆವಸ್ಕಿ ಅವರನ್ನು ಮಣಿಸಿದರು.

ಅನ್ಶು ಕ್ವಾರ್ಟರ್‌ಫೈನಲ್‌ನಲ್ಲಿ 5-1ರಿಂದ ಮಂಗೋಲಿಯಾದ ದವಾಚಿಮೆಗ್ ಎರ್ಕೆಂಬಯರ್ ಅವರನ್ನು ಸೋಲಿಸಿದ್ದರು.

72 ಕೆಜಿ ವಿಭಾಗದ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ದಿವ್ಯಾ ಕಾಕ್ರನ್ ಜಪಾನ್‌ನ ಮಾಸಕೊಗೆ ಮಣಿದರು.